₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಶನಿವಾರ 08.06.2024** **ಸಂಪುಟ: 9 ಸಂಚಿಕೆ:166 ಪುಟಗಳು: 12** ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಚಂದನ್ ನಿವೇದಿತಾ ವಿಚ್ಛೇದನ

ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್ ಸಂಸದರೊಂದಿಗೆ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಸಭೆ ನಡೆಸಿದರು.

ದಾರಿದೀಪೋಕ್ತಿ

ಬೇರೆಯವರಲ್ಲಿ ಇರುವ ಒಳ್ಳೆಯ ಗುಣಗಳನ್ನು ಹುಡುಕಲು ಆಗದಿದ್ದರೆ, ನಿಮ್ಮಲ್ಲಿರುವ ಕೆಟ್ಟ ಗುಣಗಳನ್ನಾದರೂ ಹುಡುಕಲು ಸಾಧ್ಯವಾಗಬೇಕು. ಇವೆರಡೂ ಸಾಧ್ಯವಾಗದಿದ್ದರೆ ನಿಮ್ಮಲ್ಲಿಯೇ ದೋಷವಿದೆಯೆಂದರ್ಥ.

ವಕ್ರತುಂಡೋಕ್ತಿ

ತಾಳಿ ಮತ್ತು ತಾಯತಕ್ಕೆ ವ್ಯತ್ಯಾಸವೇನೆಂದರೆ, ತಾಯತ ಕಟ್ಟಿದರೆ ದೆವ್ವ ಹೋಗುತ್ತದೆ, ತಾಳಿ ಕಟ್ಟಿದರೆ ದೆವ್ವ ಬರುತ್ತದೆ.

ಪುಟ ತೆರೆದಂತೆ...

ದಕ್ಷಿಣದಲ್ಲಿ ಬಿಜೆಪಿ ಕಮಾಲ್
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

ಸಂ.ಪುಟ | 6

ಮಳೆಗಾಲದಲ್ಲಿ ಹೇಗಿರಬೇಕು ಆಹಾರ-ವಿಹಾರ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ. ಸಾಧನಶ್ರೀ

ಸಂ.ಗಮ | 7

ಮಾತಂದ್ರೆ ಮಾತು

ಪಕ್ಷದಲ್ಲಿ ಇದ್ದುಕೊಂಡೇ ಪಕ್ಷ ವಿರೋಧ ಚಟುವಟಿಕೆ ಮಾಡಿದ್ದನ್ನು ಜನರ ಮುಂದೆ ಇಟ್ಟಿದ್ದೇನೆ ಅಷ್ಟೇ. ನಾನು ಯಾರ ವಿರುದ್ಧವೂ ಹೈಕಮಾಂಡ್‌ಗೆ ದೂರು ನೀಡುತ್ತಿಲ್ಲ. ಹೈಕಮಾಂಡ್‌ಗೆ ದೂರು ನೀಡಿದರೂ ನಮ್ಮಲ್ಲಿ ಪ್ರಯೋಜನವಿಲ್ಲ. ಯಾರ ಮೇಲೂ ಕ್ರಮ ಆಗುವುದಿಲ್ಲ. ದೂರು ನೀಡುವುದು ವ್ಯರ್ಥ.

-ಸತೀಶ್ ಜಾರಕಿಹೊಳಿ
ಸಚಿವ

ತಮಾಂಗ್ ಪ್ರಮಾಣ 10ಕ್ಕೆ

ಗ್ಯಾಂಗ್ಟಕ್: ಜೂನ್ 10ರಂದು ಸಿಕ್ಕಿಂನ ಸಿಎಂ ಆಗಿ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾದ (ಎಸ್‌ಕೆಎಂ) ಮುಖ್ಯಸ್ಥ ಪ್ರೇಮ್ ಸಿಂಗ್ ತಮಾಂಗ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದು, ಆ ಮೂಲಕ ಸತತ 2ನೇ ಬಾರಿಗೆ ಅವರು ಸಿಎಂ ಆಗಿ ಪದಗ್ರಹಣ ಮಾಡಲಿದ್ದಾರೆ.

ಏರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ

ಮುಂಬೈ: ಲೋಕ ಚುನಾವಣೆ ಫಲಿತಾಂಶದ ದಿನ ಭಾರಿ ಕುಸಿತ ಕಂಡಿದ್ದ ಷೇರು ಮಾರುಕಟ್ಟೆ ಚೇತರಿಕೆ ಕಂಡಿದ್ದು, ಶುಕ್ರವಾರ ಸೆನ್ಸೆಕ್ಸ್, ನಿಫ್ಟಿ ಷೇರು ಬೆಲೆಗಳು ಗಗನಕ್ಕೇರಿವೆ. ಕೋಟ್ಯಂತರ ರು. ನಷ್ಟ ಅನುಭವಿಸಿದ್ದವರಿಗೆ ಹಣ ವಾಪಸ್ ಪಡೆದುಕೊಳ್ಳಲು ನೆರವಾಗಿದೆ.

ಇನ್ಮುಂದೆ ಭವಿಷ್ಯ ಹೇಳಲ್ಲ

ದೆಹಲಿ : ಲೋಕ ಚುನಾವಣೆಯಲ್ಲಿ ಬಿಜೆಪಿ 300ರ ಗಡಿದಾಟಿ, ಇಂಡಿಯ ಕೂಟ ಕಳಪೆ ಸಾಧನೆ ಮಾಡಲಿದೆ ಎಂದು ಭವಿಷ್ಯ ನುಡಿದಿದ್ದ ಪ್ರಶಾಂತ ಕಿಶೋರ್, ತಮ್ಮ ಲೆಕ್ಕಾಚಾರ ತಲೆಕೆಳಗಾಗಿದ್ದನ್ನು ಒಪ್ಪಿಕೊಂಡಿದ್ದು, ಇನ್ಮುಂದೆ ಚುನಾವಣಾ ಭವಿಷ್ಯ ಹೇಳಲ್ಲ ಎಂದು ಹೇಳಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸುದ್ದಿ: ಕಂಗನಾ ಕಪಾಳಕ್ಕೆ ಬಾರಿಸಿದ್ದ ಸಿಐಎಸ್‌ಎಫ್ ಸಿಬ್ಬಂದಿ

ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರಾಗಿ ಮೋದಿ ಆಯ್ಕೆ | ನಾಳೆ ಸಂಜೆ 6 ಗಂಟೆಗೆ ಪ್ರತಿಜ್ಞಾವಿಧಿ ಸ್ವೀಕಾರ | ಬೆಂಬಲ ಅಚಲ: ನಾಯ್ಡು, ನಿತೀಶ್

ಸರಕಾರ ರಚನೆಗೆ ಹಕ್ಕು ಮಂಡನೆ

ದೆಹಲಿ: ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು 292 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ನಡೆದ ಎನ್‌ಡಿಎ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ. ಜೂನ್ 9ರಂದು ಸತತ ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಹಾಗಾಗಿ, ಶುಕ್ರವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದ ಮೋದಿ, ಸರಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಇದೇ ವೇಳೆ, ನರೇಂದ್ರ ಮೋದಿ ಅವರನ್ನು ಹಂಗಾಮಿ ಪ್ರಧಾನಿಯನ್ನಾಗಿ ದ್ರೌಪದಿ ಮುರ್ಮು ಅವರು ನೇಮಿಸಿದ್ದಾರೆ.

- ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಮೋದಿ ಹೆಸರು ಸೂಚಿಸಿದ ರಾಜನಾಥ್ ಸಿಂಗ್
- ಎನ್‌ಡಿಎ ಮೈತ್ರಿಕೂಟದ ಎಲ್ಲ ಸದಸ್ಯರಿಂದ ಚಪ್ಪಾಳೆ ತಟ್ಟಿ ಬೆಂಬಲ
- ಬಳಿಕ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿಯಾದ ಮೋದಿ, ಸರಕಾರ ರಚನೆಗೆ ಹಕ್ಕು ಮಂಡನೆ
- ನರೇಂದ್ರ ಮೋದಿ ಅವರನ್ನು ಹಂಗಾಮಿ ಪ್ರಧಾನಿಯನ್ನಾಗಿ ನೇಮಿಸಿದ ದ್ರೌಪದಿ ಮುರ್ಮು

ದ್ರೌಪದಿ ಮುರ್ಮು ಅವರನ್ನು ಭೇಟಿಯಾದ ಬಳಿಕ ಮಾತನಾಡಿದ ಮೋದಿ, ರಾಷ್ಟ್ರಪತಿ ಅವರನ್ನು ಭೇಟಿಯಾಗಿ ಸರಕಾರ ರಚನೆಗೆ ಹಕ್ಕು ಮಂಡಿಸಿದ್ದೇನೆ. ಜೂನ್ 9ರಂದು ಪ್ರಮಾಣವಚನ ಸ್ವೀಕರಿಸಲು ಮನವಿ ಮಾಡಲಾಗಿದೆ ಎಂದರು. ಇದಕ್ಕೂ ಮುನ್ನ ಅವರು ಹಿರಿಯ ನಾಯಕರಾದ ಎಲ್.ಕೆ. ಆಡ್ವಾಣಿ ಮತ್ತು ಮನೋಹರ ಜೋಷಿಯವರನ್ನು ಭೇಟಿ ಮಾಡಿದರು.

ದಕ್ಷಿಣ ಭಾರತದಲ್ಲಿ ಎನ್‌ಡಿಎ ಬುನಾದಿ ಭದ್ರವಾಗಿದ್ದು, ಹೊಸ ರಾಜಕೀಯಕ್ಕೆ ಇದು ನಾಂದಿಯಾಗಿದೆ. ಕರ್ನಾಟಕ ಹಾಗೂ ತೆಲಂಗಾಣವನ್ನೇ ತೆಗೆದುಕೊಳ್ಳಿ, ಇತ್ತೀಚೆಗೆ ಬೇರೆ ಪಕ್ಷಗಳ ಸರಕಾರಗಳು ಅಲ್ಲಿ ಆಡಳಿತಕ್ಕೆ ಬಂದಿವೆ. ಆದರೆ, ಜನರು ಭ್ರಮೆಯಿಂದ ಹೊರಬಂದು ಎನ್‌ಡಿಎ ಮೈತ್ರಿಕೂಟವನ್ನು ಬೆಂಬಲಿಸಿದ್ದಾರೆ. ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಜನ ಎನ್‌ಡಿಎ ಮೈತ್ರಿಕೂಟವನ್ನು ಸ್ವೀಕರಿಸಿದ್ದಾರೆ. ಇದು ಎನ್‌ಡಿಎ ಮೇಲೆ ಜನ ಇಟ್ಟಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಸಂಸದೀಯ ಪಕ್ಷದ ಸಭೆಯಲ್ಲಿ ರಾಜನಾಥ್ ಸಿಂಗ್ ಅವರು ನರೇಂದ್ರ ಮೋದಿ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕ ಎಂದು ಪ್ರಸ್ತಾಪಿಸಿದರು. ಇದಕ್ಕೆ, ಎನ್‌ಡಿಎ ಮೈತ್ರಿಕೂಟದ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟಿ ಬೆಂಬಲ ವ್ಯಕ್ತಪಡಿಸಿದರು.

ಎನ್‌ಡಿಎ ಸದಸ್ಯರ ಸಭೆಯಲ್ಲಿ ಜೆ.ಪಿ.ನಡ್ಡಾ, ರಾಜನಾಥ ಸಿಂಗ್, ಅಮಿತ್ ಶಾ, ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್, ಜನಸೇನಾ ನಾಯಕ ಪವನ್ ಕಲ್ಯಾಣ್, ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, ಅಜಿತ್ ಪವಾರ್(ಎನ್‌ಸಿಪಿ), ಲೋಕ ಜನಶಕ್ತಿ, ರಾಷ್ಟ್ರೀಯ ಲೋಕದಳ, ಶಿವಸೇನೆ (ಶಿಂದೆ), ಅಸ್ಸಾಂ ಗಣ ಪರಿಷತ್, ಯುನೈಟೆಡ್ ಪೀಪಲ್ಸ್ ಪಾರ್ಟಿ ಸೇರಿ ಹಲವು ಪಕ್ಷದ ನಾಯಕರು ಭಾಗಿಯಾಗಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ನಂತರ ಬಿಜೆಪಿ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರನ್ನು ಭೇಟಿಯಾಗಿ ಹೂಗುಚ್ಛ ನೀಡಿ ಆಶೀರ್ವಾದ ಪಡೆದರು.

ಸಾಮಾನ್ಯ ಜನರ ಕನಸು ಪೂರ್ತಿಗೊಳಿಸಲು ನಾವು ನಿರಂತರವಾಗಿ ಕೆಲಸ ಮಾಡುತ್ತೇವೆ. ಇನ್ನಷ್ಟು ವೇಗದೊಂದಿಗೆ ಕೆಲಸ ಮುಂದುವರಿಸೋಣ. 2014ರಲ್ಲಿ ನಾನು ಹೊಸಬನಾಗಿದ್ದೆ. ಈಗ ನನಗೆ ಅನುಭವ ಸಿಕ್ಕಿದೆ, ಈ ಅನುಭವ ದೇಶದ ಸೇವೆಗೆ ಸಿಗಲಿದೆ.

- ನರೇಂದ್ರ ಮೋದಿ ಹಂಗಾಮಿ ಪ್ರಧಾನಿ



ಈ ಬಾರಿ ಏನಾದರೂ ಆಗಲಿ ಮೋದಿಜೀ ನಾನು ನಿಮ್ಮ ಜತೆ ಇರುತ್ತೇನೆ. ಈ ಬಾರಿ ಅಲ್ಲಿ, ಇಲ್ಲಿ ಗೆದ್ದವರೆಲ್ಲ ಮುಂದಿನ ಬಾರಿ ಸೋಲುತ್ತಾರೆ ಎಂಬ ವಿಶ್ವಾಸವಿದೆ. ಏನೂ ಕೆಲಸ ಮಾಡದೇ, ಇಂಡಿಯ ಒಕ್ಕೂಟ ದೇಶಕ್ಕೆ ಯಾವ ಕೊಡುಗೆ ನೀಡದೆ ಸುಮ್ಮನೆ ಕಾಲಹರಣ ಮಾಡಿದೆ.

-ನಿತೀಶ್ ಕುಮಾರ್ ಬಿಹಾರ ಸಿಎಂ



ಮೋದಿ ಸೂಕ್ತ ಸಮಯದಲ್ಲಿ ಸೂಕ್ತ ನಾಯಕರಾಗಿದ್ದಾರೆ. ದೇಶಕ್ಕಾಗಿ ಯಾವ ಅವಕಾಶವನ್ನೂ ತಪ್ಪಿಸದೇ ಅಭಿವೃದ್ಧಿಗಾಗಿ ಪಣತೊಟ್ಟಿದ್ದಾರೆ. ಸಬ್ ಕಾ ಸಾಥ್-ಸಬ್ ಕಾ ವಿಕಾಸ್, ವಿಕಸಿತ್ ಭಾರತ್ ಯೋಜನೆಗಳು ದೂರದೃಷ್ಟಿಯವು. ಭಾರತಕ್ಕೆ ಇದು ದೊಡ್ಡ ಅವಕಾಶ, ಈಗ ತಪ್ಪಿದರೆ ಮುಂದೆ ಸಿಗಲ್ಲ.

- ಚಂದ್ರಬಾಬು ನಾಯ್ಡು ಟಿಡಿಪಿ ನಾಯಕ

ಪಕ್ಷದ ಸೋಲಿಗೆ ಕಾರಣ ಕೊಡಿ

ರಾಜ್ಯ ನಾಯಕರಿಗೆ ರಾಹುಲ್ ಗಾಂಧಿ ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಡಬಲ್ ಡಿಜಿಟ್ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ ಕೇವಲ ಒಂಬತ್ತು ಸ್ಥಾನಕ್ಕೆ ಸೀಮಿತವಾಗಿರುವುದಕ್ಕೆ ಕಾರಣ ನೀಡುವಂತೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯ 'ಟ್ರೆಂಡ್'ನಲ್ಲಿ ಈ ಬಾರಿ ಕನಿಷ್ಠ 15 ಲೋಕಸಭಾ ಕ್ಷೇತ್ರಗಳ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ ಹೈಕಮಾಂಡ್‌ಗೆ ಒಂಬತ್ತು ಸೀಟುಗಳು ಬಂದಿರುವುದಕ್ಕೆ ಬೇಸರವಿದೆ. ಇನ್ನು ಕೆಲವೊಂದಿಷ್ಟು ಕ್ಷೇತ್ರದಲ್ಲಿ ಗೆಲ್ಲುವ ಸಾಧ್ಯತೆಯಿದ್ದರೂ, ಸ್ಥಳೀಯ ರಾಜಕಾರಣಕ್ಕಾಗಿ ಸೋಲನುಭವಿಸಬೇಕಾಗಿದೆ. ಆದ್ದರಿಂದ ಈ ರೀತಿಯಾಗಲು ಕಾರಣವೇನು ಎನ್ನುವ ಬಗ್ಗೆ ಉಸ್ತುವಾರಿ ಸಚಿವರೇ ವರದಿ ನೀಡಬೇಕು ಎಂದು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಚಿವ ಸಂಪುಟ ಸದಸ್ಯರು, ವಿಜೇತ ಹಾಗೂ ಪರಾಜಿತ ಅಭ್ಯರ್ಥಿಗಳು ಭಾಗವಹಿಸಿದ್ದರು. ಈ ವೇಳೆ ಮಾತನಾಡಿದ ರಾಹುಲ್ ಗಾಂಧಿ ಅವರು, ಕರ್ನಾಟಕದಲ್ಲಿ ಹೈಕಮಾಂಡ್ ನಿರೀಕ್ಷಿಸಿದ ಫಲಿತಾಂಶ ಬಂದಿಲ್ಲ. ಈ ಕುರಿತು ಆತ್ಮಾವಲೋಕನ ನಡೆಸಿ, ಈಗಿನಿಂದಲೇ ಪಕ್ಷ ಸಂಘಟನೆ ಮಾಡಿ ಬಲಗೊಳಿಸುವ ಮೂಲಕ ಮುಂದಿನ ಗೆಲುವಿಗೆ ಸಿದ್ಧತೆ ನಡೆಸಬೇಕು ಎಂದು ಸಲಹೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

→ 4

ಸೂಚನೆಗಳೇನು?

- ಸಂಸದರಾಗಿ ಆಯ್ಕೆ ಆದವರು ರಾಜ್ಯದ ಪರ ದೆಹಲಿಯಲ್ಲಿ ಧ್ವನಿ ಎತ್ತಿ
- ಅನವಶ್ಯಕವಾಗಿ ಬೆಂಗಳೂರು, ದೆಹಲಿಯಲ್ಲಿ ಉಳಿಯದೇ ಕ್ಷೇತ್ರದಲ್ಲಿರಿ
- ಪರಾಜಿತ ಅಭ್ಯರ್ಥಿಗಳೂ ಮತದಾರರಿಂದ ದೂರಾಗದೇ ಜನರೊಂದಿಗೆ ಇರಿ
- ಸೋತಿರುವುದಕ್ಕೆ ಕಾರಣಗಳನ್ನು ಆಯಾ ಉಸ್ತುವಾರಿ ಸಚಿವರೇ ನೀಡಬೇಕು

ನಮ್ಮ ನಿರೀಕ್ಷೆಗಿಂತ ಕಡಿಮೆ ಫಲಿತಾಂಶ ಬಂದಿದೆ. ಆದರೂ, ನಮ್ಮ ವೋಟ್ ಶೇರ್ ಹೆಚ್ಚಿದೆ. ಇದರೊಂದಿಗೆ ಮೋದಿ ಅವರ ಗೆಲುವಿನ ಓಟಕ್ಕೆ ತಡೆ ಹಾಕಿದ್ದೇವೆ. ಸಂವಿಧಾನದ ರಕ್ಷಣೆ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಕೆಲಸ ಮಾಡುವ ಅಗತ್ಯ ಇದೆ. ಹಾಗಾಗಿ ಸೋಲಿನಿಂದ ಧೃತಿಗೆಡಬೇಡಿ. ಉತ್ತಮವಾಗಿ ಕಾರ್ಯ ನಿರ್ವಹಿಸಿ.

- ರಾಹುಲ್ ಗಾಂಧಿ ಕಾಂಗ್ರೆಸ್ ವರಿಷ್ಠ

ರಾಹುಲ್‌ಗೆ ಜಾಮೀನು

ಬೆಂಗಳೂರು: ಬಿಜೆಪಿ ವಿರುದ್ಧ ಸುಳ್ಳು ಜಹೀರಾತು ಪ್ರಕಟಿಸಿದ್ದಾರೆಂದು ದಾಖಲಾಗಿರುವ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ಜಾಮೀನು ಮಂಜೂರಾಗಿದೆ. ಕೆಲ ದಿನಗಳ ಹಿಂದೆ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಜರಾಗಿ ಜಾಮೀನು ಪಡೆದಿದ್ದರು. ಚುನಾವಣಾ ಕಾರಣ ನೀಡಿ, ರಾಹುಲ್ ಗಾಂಧಿ ಅವರಿಗೆ ಜೂನ್ 7ರವರೆಗೆ ವಿನಾಯಿತಿ ನೀಡುವಂತೆ ಮನವಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಶುಕ್ರವಾರ ಖುದ್ದು ಹಾಜರಾದ ರಾಹುಲ್ ಜಾಮೀನು ಪಡೆದಿದ್ದಾರೆ.

ದೆಹಲಿಗೆ ಸಿಎಂ, ಡಿಸಿಎಂ ಇಂದು

ಬೆಂಗಳೂರು: ಶನಿವಾರ ನಡೆಯಲಿರುವ ಎಐಸಿಸಿ ಮುಖಂಡರ ಸಭೆಯಲ್ಲಿ ಭಾಗವಹಿಸಲು ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮರ್ ದೆಹಲಿಗೆ ತೆರಳಲಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಶತಕದ ಸಾಧನೆ ಮಾಡಿರುವ ಕಾಂಗ್ರೆಸ್, ಶನಿವಾರ ಎಐಸಿಸಿ ಕಚೇರಿಯಲ್ಲಿ ಆಡಳಿತಾರೂಢ ರಾಜ್ಯಗಳ ಮುಖ್ಯಮಂತ್ರಿ, ಪಿಸಿಸಿ ಅಧ್ಯಕ್ಷರ ಹಾಗೂ ಮುಖಂಡರ ಸಭೆ ಹಮ್ಮಿಕೊಂಡಿದೆ. ಈ ವೇಳೆ ಪ್ರತಿಪಕ್ಷ ನಾಯಕನ ಆಯ್ಕೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ.

8ನೇ ಬಾರಿ ರೆಪೋ ದರ ಯಥಾಸ್ಥಿತಿ

ಮುಂಬೈ: ಕ್ರೆಡಿಟ್ ರೇಟಿಂಗ್ಸ್ ಸಂಸ್ಥೆಗಳು ಮತ್ತು ಆರ್ಥಿಕ ತಜ್ಞರ ನಿರೀಕ್ಷೆಯಂತೆ ಭಾರತೀಯ ರಿಸರ್ವ್ ಬ್ಯಾಂಕ್, ಸತತ ಎಂಟನೇ ಬಾರಿಗೆ ರೆಪೋ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಶುಕ್ರವಾರ ಮುಕ್ತಾಯಗೊಂಡ ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ಆರು ಸದಸ್ಯರ ಪೈಕಿ ನಾಲ್ವರು, ರೆಪೋ ದರವನ್ನು ಶೇ.6.5ರಲ್ಲಿಯೇ ಕಾಯ್ದುಕೊಳ್ಳಲು ಒಪ್ಪಿಗೆ ನೀಡಿದ್ದಾರೆ. ಸಮಿತಿಯ ಬಾಹ್ಯ ಸದಸ್ಯರಾದ ಅಶಿಮಾ ಗೋಯಲ್ ಮತ್ತು ಜಯಂತ್ ವರ್ಮಾ ಬಡ್ಡಿದರ ಕಡಿತದ ಪರವಾಗಿ ಮತ ಚಲಾಯಿಸಿದ್ದಾರೆ.

ನೀಟ್ ರ‍್ಯಾಂಕ್ ಬಗ್ಗೆ ಅನುಮಾನ

ಮರುಪರೀಕ್ಷೆಗೆ ಆಕಾಂಕ್ಷಿಗಳ ಆಗ್ರಹ | ಅಕ್ರಮ ನಡೆದಿಲ್ಲ ಎಂದ ಎನ್‌ಟಿಎ

ದೆಹಲಿ: ವೈದ್ಯಕೀಯ ಕೋರ್ಸ್‌ನ ಪ್ರವೇಶಕ್ಕೆ ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಹರಿಯಾಣದ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿ ದೇಶಾದ್ಯಂತ 67 ಅಭ್ಯರ್ಥಿಗಳು ಮೊದಲ ರ‍್ಯಾಂಕ್ ಪಡೆದಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದ್ದು, ಮರು ಪರೀಕ್ಷೆಗೆ ಆಕಾಂಕ್ಷಿಗಳು ಆಗ್ರಹಿಸಿದ್ದಾರೆ.

- ಒಂದೇ ಪರೀಕ್ಷೆ ಕೇಂದ್ರದಲ್ಲಿದ್ದ 6 ಅಭ್ಯರ್ಥಿಗಳು ರ‍್ಯಾಂಕ್
- ಒಟ್ಟು ದೇಶಾದ್ಯಂತ 67 ಅಭ್ಯರ್ಥಿಗಳಿಗೆ ಮೊದಲ ರ‍್ಯಾಂಕ್
- ಪರೀಕ್ಷೆ ಪ್ರಕ್ರಿಯೆ ಕುರಿತು ತನಿಖೆಗೆ ಕಾಂಗ್ರೆಸ್ ನಾಯಕರ ಆಗ್ರಹ

ಆದರೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಈ ಕುರಿತ ಯಾವುದೇ ಅಕ್ರಮಗಳನ್ನು ನಿರಾಕರಿಸಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ಬದಲಾವಣೆ ಆಗಿರುವುದು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಸಮಯ ನಷ್ಟವಾದವರಿಗೆ ಕೃಪಾಂಕ ದೊರೆತಿರುವುದರಿಂದ ಕೆಲವರ ಅಂಕಗಳು ಹೆಚ್ಚಾಗಿವೆ ಎಂದು ಹೇಳಿದೆ. ಈ ಕುರಿತು ಪ್ರಿಯಾಂಕಾ ಗಾಂಧಿ ವಾದ್ರಾ, ಸಿಎಂ ಸಿದ್ದರಾಮಯ್ಯ, ರಾಜಸ್ಥಾನ ಸಿಎಂ ಅಶೋಕ ಗೆಹಲೋತ್, ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಸೇರಿ ಹಲವರು ಪ್ರತಿಕ್ರಿಯಿಸಿದ್ದು, ತನಿಖೆಗೆ ಆಗ್ರಹಿಸಿದ್ದಾರೆ.

ಕಾಂಗ್ರೆಸ್ ಟೀಕೆ

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್, 'ನೀಟ್ ಪರೀಕ್ಷೆಯ ಬಳಿಕ ಫಲಿತಾಂಶವೂ ವಿವಾದಕ್ಕೆ ಸಿಲುಕಿದೆ. ಒಂದೇ ಕೇಂದ್ರದ ಆರು ಅಭ್ಯರ್ಥಿಗಳು 720ಕ್ಕೆ 720 ಅಂಕಗಳನ್ನು ಪಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಅಲ್ಲದೆ, ಈ ಪರೀಕ್ಷೆಯಲ್ಲಿ ಇನ್ನೂ ಹಲವು ಅಕ್ರಮಗಳು ನಡೆದಿವೆ' ಎಂದು ಹೇಳಿದೆ.

ನೀಟ್ ಫಲಿತಾಂಶದಲ್ಲಿ ಭಾರಿ ಅಕ್ರಮದ ಬಗ್ಗೆ ದೇಶಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿದೆ. ಪರೀಕ್ಷೆ ಬರೆದಿರುವ 24 ಲಕ್ಷ ವಿದ್ಯಾರ್ಥಿಗಳು, ಪೋಷಕರಲ್ಲಿ ಮೂಡಿರುವ ಆತಂಕಕ್ಕೆ, ಪರೀಕ್ಷೆಯ ವಿಶ್ವಾಸಾರ್ಹತೆ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಎನ್‌ಟಿಎ ಆಗಲಿ, ಕೇಂದ್ರ ಸರಕಾರವಾಗಲಿ ಉತ್ತರಿಸದೇ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಮಣ್ಣುಪಾಲು ಮಾಡಲು ಹೊರಟಿದೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

9 ಮೃತದೇಹಗಳ ಹಸ್ತಾಂತರ

ಉತ್ತರಾಖಂಡದ ದುರಂತದಲ್ಲಿ ಮೃತಪಟ್ಟಿದ್ದ ಕರ್ನಾಟಕದ ಚಾರಣಿಗರು

ವರದಿ ಪುಟ → 5

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರತಿಕ್ರಿಯೆ

ತಪ್ಪು ಅಭ್ಯರ್ಥಿ ಆಯ್ಕೆ ನಿರ್ಧಾರ ಅಯೋಧ್ಯೆಯಲ್ಲಿ ಬಿಜೆಪಿಗೆ ಸೋಲು

ವರದಿ ಪುಟ → 5

ಪದವೀಧರ- ಶಿಕ್ಷಕರ ಚುನಾವಣೆ

ಸಮಬಲ ಸಾಧನೆ

3 ಕ್ಷೇತ್ರ ಕಾಂಗ್ರೆಸ್ ತೆಕ್ಕೆಗೆ, 3 ಕಡೆ ಮೈತ್ರಿ ಅಭ್ಯರ್ಥಿಗಳಿಗೆ ಗೆಲುವು

ಬೆಂಗಳೂರು: ವಿಧಾನ ಪರಿಷತ್‌ನ ಮೂರು ಶಿಕ್ಷಕರ ಕ್ಷೇತ್ರ ಹಾಗೂ ಮೂರು ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಮತ್ತು ಕಾಂಗ್ರೆಸ್‌ನ ತಲಾ ಮೂವರು ಅಭ್ಯರ್ಥಿಗಳು ಗೆಲುವು ದಾಖಲಿಸಿ ಸಮಬಲ ಸಾಧಿಸಿದ್ದಾರೆ.

ಬೆಂಗಳೂರು, ಮೈಸೂರು ಹಾಗೂ ಕಲಬುರಗಿಯಲ್ಲಿ ನಡೆದ ಎಣಿಕೆ ಕಾರ್ಯ ಅಂತ್ಯಗೊಂಡಿದ್ದು ಮೈಸೂರು ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಜಯಭೇರಿ ಬಾರಿಸಿದರೆ, ಬೆಂಗಳೂರು ವ್ಯಾಪ್ತಿಯ ತಲಾ ಒಂದು ಪದವೀಧರ, ಶಿಕ್ಷಕರ ಕ್ಷೇತ್ರ ಹಾಗೂ ಈಶಾನ್ಯ ಪದವೀಧರ ಕ್ಷೇತ್ರಗಳನ್ನು ಕಾಂಗ್ರೆಸ್ ಗೆದ್ದುಕೊಂಡಿದೆ.

ಬೆಂಗಳೂರಿನ ಆರ್ಟ್ಸ್ ಕಾಲೇಜು ಮತ ಎಣಿಕೆ ಕೇಂದ್ರದಲ್ಲಿ ನಡೆದ ಪದವೀಧರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರಗಳ ಮತ ಎಣಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾದ ರಾಮೋಜಿಗೌಡ ಹಾಗೂ ಶ್ರೀನಿವಾಸ್ ಜಯಶಾಲಿಗಳಾಗಿದ್ದಾರೆ.

→ 4

ಕುಲಗೆಟ್ಟ ಮತಗಳು

ಶಿಕ್ಷಕರು ಹಾಗೂ ಪದವೀಧರರಿಗೆ ಸರಿಯಾಗಿ ಮತದಾನ ಮಾಡುವ ಬಗ್ಗೆ ಜಾಗೃತಿ ಮೂಡಿಸಿದ್ದರೂ ಕುಲಗೆಟ್ಟ ಮತಗಳು ಸಹ ಹೆಚ್ಚಾಗಿ ಚಲಾವಣೆಯಾಗಿವೆ. ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 1,049, ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ 821 ಹಾಗೂ ನೈರುತ್ಯ ಪದವೀಧರ ಕ್ಷೇತ್ರದಲ್ಲಿ 5,115 ಕುಲಗೆಟ್ಟ ಮತಗಳು ಕಂಡುಬಂದಿವೆ.

ಸಂತೋಷ್‌ಜಿ ಮರಳಿ ಸಂಘಕ್ಕೆ?

ಸಂಜಯ ಜೋಶಿಗೆ ಪಕ್ಷ ಜವಾಬ್ದಾರಿ, ಬಿಎಲ್‌ಎಸ್‌ಗೆ ಆರೆಸ್ಸೆಸ್ ಸಂಘಟನೆ ಹೊಣೆ ಸಂಭವ

ಬೆಂಗಳೂರು: ದೇಶದಲ್ಲಿ ಎನ್‌ಡಿಎ ಸರಕಾರ ರಚನೆಯಾಗಲು ಮುಹೂರ್ತ ಫಿಕ್ಸ್ ಆಗುತ್ತಿರುವ ಬೆನ್ನಲ್ಲೇ, ತೆರೆಮರೆಯಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯನ್ನು ಬದಲಾಯಿಸಲು ಪಕ್ಷ ಹಾಗೂ ಸಂಘ ಪರಿವಾರದಲ್ಲಿ ಚಿಂತನೆ ನಡೆದಿದೆ.

ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿರುವ ಬಿ.ಎಲ್. ಸಂತೋಷ್ ಅವರನ್ನು ಆರ್‌ಎಸ್‌ಎಸ್‌ನ ಇತರೆ ಸಂಘಟನಾತ್ಮಕ ಜವಾಬ್ದಾರಿ ನೀಡಲು ತೀರ್ಮಾನಿಸಿದ್ದು, ಅವರ ಜಾಗಕ್ಕೆ ಈ ಹಿಂದೆ ಬಿಜೆಪಿ ಸಂಘಟನಾ ಕಾರ್ಯದರ್ಶಿಯಾಗಿದ್ದ ಸಂಜಯ ಜೋಶಿ ನೇಮಕವಾಗುವುದು ಬಹುತೇಕ ನಿಶ್ಚಿತವಾಗಿದೆ.

ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಮೂರನೇ ಬಾರಿಗೆ ಎನ್‌ಡಿಎ ಅಧಿಕಾರಕ್ಕೆ ಬರಲು ಸಜ್ಜಾಗಿದೆ. ಆದರೆ ಕಳೆದ ಎರಡು ಬಾರಿ ಬಿಜೆಪಿಗಿದ್ದ ಸ್ಪಷ್ಟ ಬಹುಮತ ಈ ಬಾರಿ ಇಲ್ಲದೇ ಇರುವುದರಿಂದ, ಎನ್‌ಡಿಎ ಮೈತ್ರಿಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೋಗಬೇಕಿದೆ. ಇದರೊಂದಿಗೆ ಯಾವುದೇ ಕ್ಷಣದಲ್ಲಿ ಮೈತ್ರಿ ಪಕ್ಷಗಳು ಮುನಿಸಿಕೊಳ್ಳುವ ಸಾಧ್ಯತೆಯಿರುವುದರಿಂದ, ಈ ಎಲ್ಲವನ್ನೂ ನಿಭಾಯಿಸುವ 'ಸಮರ್ಥ' ವ್ಯಕ್ತಿ ಅಗತ್ಯವೆಂದು ಆರ್‌ಎಸ್‌ಎಸ್ ಈ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ.

→ 4

- ವಿಧಾನಸಭಾ ಚುನಾವಣೆಯಲ್ಲಿನ ಬಿಜೆಪಿಯ 'ಕಳಪೆ' ಪ್ರದರ್ಶನದ ಬಳಿಕ ಸೈಡ್‌ಲೈನ್ ಆಗಿದ್ದ ಸಂತೋಷ್
- ಲೋಕಸಭೆಯ ಚುನಾವಣೆಯಲ್ಲೂ ಸಂತೋಷ್ ಅವರಿಗೆ ಯಾವುದೇ ರಾಜ್ಯದ ಜವಾಬ್ದಾರಿ ನೀಡಿರಲಿಲ್ಲ
- ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಸ್ಥಾನ ನೀಡದ ಕಾರಣ ಲೋಕ ಚುನಾವಣೆಯಲ್ಲಿ ಕಾಣಿಸಿಕೊಳ್ಳದ ಸಂತೋಷ್

ಮೋದಿ-ಜೋಶಿ ಫೈಟ್

ಆದರೆ ಈ ಹಿಂದೆ ಬಿಜೆಪಿಯ ಸಂಘಟನಾ ಕಾರ್ಯದರ್ಶಿಯಾಗಿದ್ದಾಗ ಈಗಿನ ಪ್ರಧಾನಿ ನರೇಂದ್ರ ಮೋದಿ ಹಾಗೂ ಸಂಜಯ್ ಜೋಶಿ ನಡುವೆ ಶೀತಲ ಸಮರ ಆರಂಭಗೊಂಡು, ಒಬ್ಬರ ಮುಖ ಒಬ್ಬರು ನೋಡಿಕೊಳ್ಳದ ಸ್ಥಿತಿ ನಿರ್ಮಾಣವಾಗಿತ್ತು. 2012ರಲ್ಲಿ ನಿತಿನ್ ಗಡ್ಕರಿ ಬಿಜೆಪಿ ಅಧ್ಯಕ್ಷರಾಗಿದ್ದ ಸಮಯದಲ್ಲಿ ಜೋಶಿ ಅವರನ್ನು ಹೊರಗಿಡುವ ತನಕ ತಾವು ಸಭೆಯಲ್ಲಿ ಭಾಗವಹಿಸುವುದಿಲ್ಲವೆಂದು ಮೋದಿ ಒತ್ತಡ ಹೇರಿದ್ದರು. ದಶಕದ ಬಳಿಕವೂ, ಈ ಇಬ್ಬರ ನಡುವಿನ ಸಂಬಂಧ ವೃದ್ಧಿಸಿಲ್ಲ. ಆದರೀಗ ಆರ್‌ಎಸ್‌ಎಸ್‌ನ ಈ ತೀರ್ಮಾನವನ್ನು ಯಾವ ರೀತಿಯಲ್ಲಿ ಪ್ರಧಾನಿ ಸ್ವೀಕರಿಸಲಿದ್ದಾರೆ ಎನ್ನುವುದನ್ನು ಕಾದು ನೋಡಬೇಕಿದೆ.

ವಿಶ್ವವಾಣಿ ವಿಶೇಷ

ಕೇರಳದಲ್ಲಿ ಕಾಲ ಕಳೆದ ಭವಾನಿ

ನಿರೀಕ್ಷಣಾ ಜಾಮೀನು ಪಡೆದು ಬಂಧನದಿಂದ ಪಾರಾದ ಭವಾನಿ ರೇವಣ್ಣ

ಬೆಂಗಳೂರು: ರಾಜ್ಯಾದ್ಯಂತ ಭಾರಿ ಸದ್ದು ಮಾಡಿದ್ದ ಪೆನ್‌ಡ್ರೈವ್ ಪ್ರಕರಣ ಹಾಗೂ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಕಿಡ್ನಾಪ್ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಭವಾನಿ ರೇವಣ್ಣ ಅವರು ದೇವರನಾಡು ಕೇರಳದಲ್ಲಿ ಕೆಲ ವಾರ ಕಾಲ ಕಳೆದಿದ್ದರು ಎನ್ನಲಾಗಿದೆ.

ರೇವಣ್ಣ ವಿರುದ್ಧ ಕಿಡ್ನಾಪ್ ಪ್ರಕರಣದಲ್ಲಿ ಆರೋಪಿಯಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಭವಾನಿ ರೇವಣ್ಣ ಅವರಿಗೆ ವಿಚಾರಣೆಗೆ ಹಾಜರಾಗಲು ಎಸ್‌ಐಟಿ ಸಾಲು ಸಾಲು ನೋಟಿಸ್ ಕೊಟ್ಟರೂ ಕಾಣಿಸಿಕೊಂಡಿರಲಿಲ್ಲ. ಇದೇ ರೀತಿ ರೇವಣ್ಣ, ಪ್ರಜ್ವಲ್ ರೇವಣ್ಣ ಬಂಧನ ಹಾಗೂ ರೇವಣ್ಣ ಅವರಿಗೆ ಜಾಮೀನು ಮಂಜೂರಾಗಿದ್ದ ಸಮಯದಲ್ಲಿಯೂ ಕಾಣಿಸಿಕೊಂಡಿರಲಿಲ್ಲ.

ದೇಶಿಯ ಅಥವಾ ಅಂತಾರಾಷ್ಟ್ರೀಯ ವಿಮಾನಗಳಲ್ಲಿ ಪ್ರಯಾಣಿಸಿರುವ ಯಾವುದೇ ದಾಖಲೆಗಳಿರಲಿಲ್ಲ.

→ 4

ಬಂಧಿಸಲು ಸಜ್ಜಾಗಿದ್ದ ಎಸ್‌ಐಟಿ

ಕೇರಳದಲ್ಲಿ ಭವಾನಿ ರೇವಣ್ಣ ತಲೆಮರೆಸಿಕೊಂಡಿರುವ ಖಚಿತ ಮಾಹಿತಿ ಗುಪ್ತಚರ ಇಲಾಖೆಯಿಂದ ರಾಜ್ಯ ಪೊಲೀಸರಿಗೆ ಲಭಿಸಿದ ಬೆನ್ನಲ್ಲೇ, ಭವಾನಿ ಅವರನ್ನು ಬಂಧಿಸಲು ಎಸ್‌ಐಟಿಗೆ ಸಿದ್ಧತೆ ನಡೆಸಿಕೊಂಡಿತ್ತು. ಆದರೆ ದಿನಕ್ಕೊಂದು ಜಾಗದಲ್ಲಿ ಭವಾನಿ ಓಡಾಡಿಕೊಂಡಿದ್ದರಿಂದ, ಯಾವ ಪ್ರದೇಶದಲ್ಲಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಂಡ ಬಳಿಕ ಕೇರಳಕ್ಕೆ ತೆರಳಲು ಎಸ್‌ಐಟಿ ಸಜ್ಜಾಗಿತ್ತು. ಆದರೆ ಆ ವೇಳೆಗೆ ಭವಾನಿ ರೇವಣ್ಣ ಅವರಿಗೆ ನಿರೀಕ್ಷಣಾ ಜಾಮೀನು ಸಿಕ್ಕಿದ್ದರಿಂದ, ಎಸ್‌ಐಟಿ ಮುಂದೆ ಭವಾನಿ ಹಾಜರಾದರು ಎಂದು ಮೂಲಗಳು ತಿಳಿಸಿವೆ.

ಎಸ್‌ಐಟಿ ಮುಂದೆ ಹಾಜರ್

ಕೆ.ಆರ್.ನಗರ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಎಸ್‌ಐಟಿ ತನಿಖೆಗೆ ಸಹಕರಿಸದೆ ತಲೆ ಮರೆಸಿಕೊಂಡಿರುವ ಭವಾನಿ ಅವರಿಗೆ ಮುಂದಿನ ಶುಕ್ರವಾರದವರೆಗೆ ಮಧ್ಯಂತರ ಜಾಮೀನು ನೀಡಿ ಕೋರ್ಟ್ ಆದೇಶ ನೀಡಿದೆ. ಇದರ ಬೆನ್ನಲ್ಲೇ, ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾದರು. ಭವಾನಿ ರೇವಣ್ಣ ಶುಕ್ರವಾರ ಮಧ್ಯಾಹ್ನ ಒಂದು ಗಂಟೆಯೊಳಗೆ ವಿಚಾರಣೆಗೆ ಹಾಜರಾಗಬೇಕು. ಆದರೆ ಯಾವುದೇ ಕಾರಣಕ್ಕೂ ಬಂಧಿಸಬಾರದು ಎನ್ನುವ ಸ್ಪಷ್ಟ ಸೂಚನೆ ನೀಡಿದ್ದರಿಂದ ಅಧಿಕಾರಿಗಳ ಮುಂದೆ ಹಾಜರಾದರು. ಸಂಜೆ 5 ರವರೆಗೂ ವಿಚಾರಣೆ ನಡೆಸಬಹುದು ಎಂಬ ನ್ಯಾಯಾಲಯದ ನಿರ್ದೇಶನದಂತೆ ವಿಚಾರಣೆ ನಡೆಸಿದ್ದು, ಅಗತ್ಯವಿದ್ದಾಗ ಮತ್ತೆ ವಿಚಾರಣೆಗೆ ಬರಬೇಕೆಂದು ಅಧಿಕಾರಿಗಳು ಸೂಚಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಎಸ್‌ಪಿ ಕಚೇರಿಗೆ ಅಕ್ರಮ ಪ್ರವೇಶ: 6 ಮಂದಿ ಸೆರೆ

ಬೆಂಗಳೂರು: ಗ್ರಾಮಾಂತರ ಜಿಲ್ಲಾ ಪೊಲೀಸ್ ಎಸ್‌ಪಿ ಕಚೇರಿ ಆವರಣವನ್ನು ಅತಿಕ್ರಮವಾಗಿ ಪ್ರವೇಶಿಸಿ ವಿಡಿಯೊ ಚಿತ್ರೀಕರಿಸುತ್ತಿದ್ದ 6 ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣಾ ಪೊಲೀಸರು ಬಂಧಿಸಿದ್ದಾರೆ. ಎಂ.ಡಿ.ಹನೀಫ್, ರಾಜಶೇಖರ್, ಉಲ್ಲಾಳದ ಮೊಹಮ್ಮದ್ ನದೀಂ, ಸಂಜಯನಗರದ ಮೋಹನ್ ಶೆಟ್ಟಿ, ಗಣಪತಿ ಹಾಗೂ ಜಹೀರ್ ಅಹಮದ್ ಬಂಧಿತ ಆರೋಪಿಗಳು. ಜೂನ್ 3ರಂದು ಮಧ್ಯಾಹ್ನ ಮಿಲ್ಲರ್ಸ್ ರಸ್ತೆಯ ಕೇಂದ್ರ ವಲಯ ಐಜಿಪಿ ಕಚೇರಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್‌ಪಿ ಕಚೇರಿಯ ಆವರಣದೊಳಗೆ ಅತಿಕ್ರಮವಾಗಿ ಪ್ರವೇಶಿಸಿದ್ದ ಆರೋಪಿಗಳು, ವಿಡಿಯೋ ಚಿತ್ರೀಕರಿಸುತ್ತಿದ್ದರು. ಇದನ್ನು ಗಮನಿಸಿ ಎಸ್ಟೇಟ್ ಆಫೀಸರ್ ಸಂತೋಷ್ ಗೌಡ ಪ್ರಶ್ನಿಸಿದಾಗ ಆರೋಪಿಗಳು, ಸ್ವತ್ತಿನ ದಾಖಲೆ ನಮ್ಮ ಬಳಿ ಇದೆ. ನಾವು ಚಿತ್ರೀಕರಣ ಮಾಡುತ್ತೇವೆ. ನಮ್ಮನ್ನು ಕೇಳಲು ನೀನು ಯಾರು ಎಂದು ದಬಾಯಿಸಿದ್ದರು.

ಸಿಬ್ಬಂದಿ ಎಚ್ಚರಿಕೆ ನೀಡಿದ ಬಳಿಕವೂ ಆರೋಪಿಗಳು ಚಿತ್ರೀಕರಣ ಮುಂದುವರಿಸಿದಾಗ ಆರೋಪಿಗಳನ್ನು ಕಚೇರಿಯೊಳಗೆ ಕರೆದೊಯ್ದು ಸಂತೋಷ್ ಗೌಡ ಮತ್ತೆ ಪ್ರಶ್ನಿಸಿದ್ದಾರೆ. ಇದಕ್ಕೆ ಪ್ರತಿಯಾಗಿ, ಈ ಸ್ವತ್ತಿನ ಮಾಲೀಕರಾದ ಗಣಪತಿ ಮತ್ತು ಜಹೀರ್ ಎಂಬವರು ನಮಗೆ ಜಿಪಿಎ ಮಾಡಿಕೊಟ್ಟಿದ್ದಾರೆ ಎಂದು ತಿಳಿಸಿದ್ದರು. ತಕ್ಷಣ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದ ಸಂತೋಷ್ ಗೌಡ, ಆರೋಪಿಗಳ ವಿರುದ್ಧ ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದರು. ಅದರನ್ವಯ ಎಫ್‌ಐಆರ್ ದಾಖಲಿಸಲಾಗಿತ್ತು.

ವಿಶ್ವವಾಣಿ ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ಸತತ 5 ಗಂಟೆ ವಿಚಾರಣೆ | ಅಪಹರಣಕ್ಕೂ ನನಗೂ ಸಂಬಂಧವಿಲ್ಲ: ಭವಾನಿ

ಪೆನ್‌ಡ್ರೈವ್ ಸಂತ್ರಸ್ತೆ ಅಪಹರಣ ಪ್ರಕರಣ ಎಸ್‌ಐಟಿ ವಿಚಾರಣೆಗೆ ಭವಾನಿ ಹಾಜರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಾಸನ ಪೆನ್‌ಡ್ರೈವ್ ವಿಡಿಯೊ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ ರೇವಣ್ಣ ಶುಕ್ರವಾರ ಎಸ್‌ಐಟಿ ವಿಚಾರಣೆಗೆ ಹಾಜರಾದರು.

ಮಧ್ಯಾಹ್ನ 1 ಗಂಟೆಗೆ ಅವರು ವಿಚಾರಣೆಗೆ ಆಗಮಿಸಿದ್ದರು.

ಕೆ.ಆರ್.ನಗರ ಮಹಿಳೆಯ ಅಪಹರಣ ಪ್ರಕರಣದಲ್ಲಿ ಸಂತ್ರಸ್ತೆ ನೀಡಿದ ಹೇಳಿಕೆಯ ಆಧಾರದಲ್ಲಿ ಭವಾನಿ ಅವರನ್ನು ಅಧಿಕಾರಿಗಳು ಸತತ ಐದು ಗಂಟೆಗಳ ಕಾಲ ವಿಚಾರಣೆ ನಡೆಸಿದ್ದಾರೆ. ಸಂಜೆ 5ರವರೆಗೂ ವಿಚಾರಣೆ ನಡೆಸುವಂತೆ ನ್ಯಾಯಾಲಯ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ವಿಚಾರಣೆ ನಡೆದಿದೆ. ಅಗತ್ಯವಿದ್ದಾಗ ಮತ್ತೆ ವಿಚಾರಣೆಗೆ ಬರಬೇಕೆಂದು ಇದೇ ವೇಳೆ ಅಧಿಕಾರಿಗಳು ಸೂಚಿಸಿದ್ದಾರೆ. ಅಪಹರಣ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ನನ್ನ ಮೇಲೆ ಬಂದಿರುವ ಆರೋಪಗಳು ಸುಳ್ಳು. ನಮ್ಮ ಮನೆಯಲ್ಲಿ ಸಂತ್ರಸ್ತೆ ಕೆಲಸ ಮಾಡುತ್ತಿದ್ದುದು ನಿಜ. ಆದರೆ ಅಪಹರಣಕ್ಕೂ ನನಗೂ ಸಂಬಂಧವಿಲ್ಲ ಎಂದು ಭವಾನಿ ಹೇಳಿರುವುದಾಗಿ ಎಸ್‌ಐಟಿ ಮೂಲಗಳಿಂದ ತಿಳಿದುಬಂದಿದೆ.

ಪೊಲೀಸರ ಕಣ್ಣಿಂದ ತಪ್ಪಿಸಿಕೊಂಡು ಓಡಾಡುತ್ತಿರುವ ಭವಾನಿಯನ್ನು ವಶಕ್ಕೆ ಪಡೆಯಲು ಪೊಲೀಸರ ನಾಲ್ಕು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿ ನಿಯಮದ 41 ಎ ಅಡಿ ಭವಾನಿ ರೇವಣ್ಣಗೆ ಎಸ್‌ಐಟಿ ಕಚೇರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸ್ ನೀಡಲಾಗಿತ್ತು. ಆದರೆ, ತಾವು ಹೊಳೆನರಸೀಪುರದ ಮನೆಯಲ್ಲಿ ಸಿಗುವುದಾಗಿ ಭವಾನಿ ತಿಳಿಸಿದ್ದರು. ಇದಕ್ಕಾಗಿ ಎಸ್‌ಐಟಿ ತಂಡ ಅಲ್ಲಿಗೆ ತೆರಳಿದಾಗ, ಭವಾನಿ ಅಲ್ಲಿರದೆ ಕಣ್ಮರೆಯಾಗಿದ್ದರು. ಹೀಗಾಗಿ ಭವಾನಿ ಬಂಧನಕ್ಕಾಗಿ ಬಂಧನ ವಾರೆಂಟ್ ಜಾರಿ ಮಾಡಲಾಗಿತ್ತು. ಬೆಂಗಳೂರು, ಮೈಸೂರು, ಹಾಸನ ಈ ಮೂರು ಜಿಲ್ಲೆಗಳಲ್ಲಿ ಭವಾನಿ ರೇವಣ್ಣಗಾಗಿ ಮುಖ್ಯವಾಗಿ ಹುಡುಕಾಟ ನಡೆಸಲಾಗಿತ್ತು.

ಒಂದು ವಾರ ಮಧ್ಯಂತರ ಜಾಮೀನು: ಕೆ.ಆರ್. ನಗರ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಎಸ್‌ಐಟಿ ತನಿಖೆಗೆ ಬೇಕಾಗಿದ್ದು, ತನಿಖೆಗೆ ಸಹಕರಿಸಿದೆ ತಲೆಮರೆಸಿಕೊಂಡಿರುವ ಭವಾನಿ ಅವರಿಗೆ ಮುಂದಿನ ಶುಕ್ರವಾರದವರೆಗೆ ಮಧ್ಯಂತರ ಜಾಮೀನು ನೀಡಿ ಕೋರ್ಟ್ ಆದೇಶ ನೀಡಿತ್ತು. ಮಧ್ಯಾಹ್ನ 1 ಗಂಟೆಗೆ ಎಸ್‌ಐಟಿ ಮುಂದೆ ತನಿಖೆಗೆ ಹಾಜರಾಗಬೇಕು. ಒಂದು ಗಂಟೆಯಿಂದ ಐದು ಗಂಟೆಯವರೆಗೆ ತನಿಖೆ ನಡೆಸಬಹುದು. ಐದು ಗಂಟೆಯ ನಂತರ ಅವರನ್ನು ಎಸ್‌ಐಟಿ ಕಚೇರಿ ಯಲ್ಲಿ ಇಟ್ಟುಕೊಳ್ಳಬಾರದು ಎಂದು ಕೋರ್ಟ್ ಸೂಚನೆ ನೀಡಿತ್ತು. ಭವಾನಿ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲು 11 ಕಾರಣಗಳಿವೆ ಎಂದು ಭವಾನಿ ಪರ ಹಿರಿಯ ವಕೀಲ ಸಂದೇಶ್ ಚೌಟ ವಾದ ಮಂಡಿಸಿದರು. ಈ ವಾದಗಳನ್ನು ಕೋರ್ಟ್ ಮಾನ್ಯ ಮಾಡಿತು. ಆದರೆ ಕಳೆದೆರಡು ಸಲದ ನೋಟಿಸ್‌ಗೆ ಭವಾನಿ ಹಾಜರಾಗದಿದ್ದುದಕ್ಕೆ ಬಂಧನ ವಾರೆಂಟ್ ಜಾರಿ ಮಾಡಲಾಗಿದೆ. ಸದ್ಯ ಆ ಆದೇಶವನ್ನು ಅಮಾನತಿನಲ್ಲಿ ಇಡಲಾಗಿದೆ. ಮುಂದಿನ ಶುಕ್ರವಾರದವರೆಗೂ ಮಧ್ಯಂತರ ಜಾಮೀನು ನೀಡಲಾಗಿದ್ದು, ಮುಂದಿನ ಶುಕ್ರವಾರಕ್ಕೆ ವಿಚಾರಣೆ ಮುಂದೂಡಲಾಗಿದೆ ಎಂದು ಕೋರ್ಟ್ ಹೇಳಿದೆ.

ಭವಾನಿಗೆ ಕೋರ್ಟ್ ಸೂಚನೆ

1) ಭವಾನಿ ಅವರು ಮಧ್ಯಾಹ್ನ 1 ಗಂಟೆಗೆ ಎಸ್‌ಐಟಿ ಮುಂದೆ ಹಾಜರಾಗಬೇಕು.
2) ವಿಚಾರಣೆಯ ನಂತರ ಐದು ಗಂಟೆಯ ಬಳಿಕ ಅವರನ್ನು ಇಟ್ಟುಕೊಳ್ಳಬಾರದು.
3) ಕೆ.ಆರ್. ನಗರ ತಾಲೂಕು ಮತ್ತು ಹಾಸನಕ್ಕೆ ಭವಾನಿ ಪ್ರವೇಶಿಸಬಾರದು.
4) ತನಿಖೆಗೆ ಸಂಪೂರ್ಣ ಸಹಕಾರ ನೀಡಬೇಕು.

ಅರ್ಜಿ ವಿಚಾರಣೆ ಜೂನ್ 14ಕ್ಕೆ ಮುಂದೂಡಿಕೆ

ಎಚ್.ಡಿ. ರೇವಣ್ಣ ವಿರುದ್ಧ ದಾಖಲಾಗಿದ್ದ 2 ಎಫ್‌ಐಆರ್ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಜೂನ್ 14ಕ್ಕೆ ಹೈಕೋರ್ಟ್ ಮೂಂದೂಡಿದೆ. ಹೈಕೋರ್ಟ್‌ನ ನ್ಯಾ. ಕೃಷ್ಣ ದೀಕ್ಷಿತ್ ಅವರಿದ್ದ ಪೀಠ ಅರ್ಜಿ ವಿಚಾರಣೆಯನ್ನು ಮುಂದೂಡಿಕೆ ಮಾಡಿದೆ. ಇದೇ ವೇಳೆ ರೇವಣ್ಣ ಜಾಮೀನು ರದ್ದು ಮಾಡಲು ಕೋರಿ ಎಸ್‌ಐಟಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯೂ ಮುಂದೂಡಿಕೆ. ಈವರೆಗೆ 2 ಎಫ್‌ಐಆರ್ ದಾಖಲಾದ ಹಿನ್ನೆಲೆಯಲ್ಲಿ ತಮ್ಮ ವಿರುದ್ಧ ದಾಖಲಾದ ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್‌ಗೆ ಮಾಜಿ ಸಚಿವ ಎಚ್.ಡಿ ರೇವಣ್ಣ ಅರ್ಜಿ ಸಲ್ಲಿಸಿದ್ದರು. ಹೊಳೆನರಸೀಪುರದಲ್ಲಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ, ಕೆ.ಆರ್.ನಗರದ ಸಂತ್ರಸ್ತೆ ಅಪಹರಣ ಪ್ರಕರಣ ರದ್ದು ಕೋರಿ ಅರ್ಜಿ ಸಲ್ಲಿಸಲಾಗಿದೆ. ಪ್ರಕರಣಗಳಲ್ಲಿ ಹುರುಳಿಲ್ಲ, ಇದು ರಾಜಕೀಯ ಪ್ರೇರಿತವಾಗಿದೆ. ಹೀಗಾಗಿ ಎಫ್‌ಐಆರ್‌ಗಳನ್ನು ರದ್ದು ಮಾಡಬೇಕು ಎಂದು ರೇವಣ್ಣ, ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇತ್ತೀಚೆಗೆ ಕೆ.ಆರ್.ನಗರದ ಸಂತ್ರಸ್ತೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿ ರೇವಣ್ಣ ಅವರನ್ನು ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಲಾಗಿತ್ತು. ಆರು ದಿನಗಳ ನಿರಂತರ ಕಾನೂನು ಸಮರದ ಬಳಿಕ ಅವರಿಗೆ ಮೇ 13ರಂದು ಜಾಮೀನು ದೊರೆತಿತ್ತು. ನಂತರ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲೂ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರಿಗೆ ಮೇ 20ರಂದು ಜಾಮೀನು ಮಂಜೂರಾಗಿತ್ತು. ಇದೀಗ ಎರಡು ಎಫ್‌ಐಆರ್ ರದ್ದು ಮಾಡುವಂತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಎಟಿಎಂನಿಂದ ಕಳವು: ಮೂವರ ಬಂಧನ

ಬೆಂಗಳೂರು: ಹಳೇ ಉದ್ಯೋಗಿಗಳ ಸಹಾಯದಿಂದ ಪಾಸ್‌ವರ್ಡ್ ತಿಳಿದುಕೊಂಡು ಎಟಿಎಂನಿಂದ ಹಣ ಕಳ್ಳತನ ಮಾಡಿದ್ದ ಆಂಧ್ರ ಪ್ರದೇಶ ಮೂಲದ ಮೂವರನ್ನು ವಿವೇಕಾನಂದ ಠಾಣೆ ಪೊಲೀಸರು ಬಂಧಿಸಿ 20.12 ಲಕ್ಷ ಹಣವನ್ನು ವಶಪಡಿಸಿಕೊಂಡಿದ್ದಾರೆ.

ಮುರಳಿ, ಸಾಯಿತೇಜ ಮತ್ತು ವೆಂಕಟೇಶ್ ಬಂಧಿತ ಆರೋಪಿಗಳು. ವಿಕ್ಟೋರಿಯಾ ಲೇಔಟ್‌ನ ಆಕ್ಸಿಸ್ ಬ್ಯಾಂಕ್‌ನ ಎಟಿಎಂ ಮತ್ತು ಸಿಡಿಎಂ ಯಂತ್ರದಿಂದ 20 ಲಕ್ಷ ಹಣ ಕಳ್ಳತನವಾಗಿರುವ ಬಗ್ಗೆ ಶಾಖಾ ವ್ಯವಸ್ಥಾಪಕರು ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಮುರಳಿ ಮತ್ತು ಸಾಯಿತೇಜನನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ವೆಂಕಟೇಶ್‌ನ ಬಗ್ಗೆ ಬಾಯಿಬಿಟ್ಟಿದ್ದಾರೆ. ಆರೋಪಿ ಮುರಳಿ ಈ ಹಿಂದೆ ಎಟಿಎಂಗಳಿಗೆ ಹಣ ತುಂಬುವ ಏಜೆನ್ಸಿಯಲ್ಲಿ ಹಳೇ ಉದ್ಯೋಗಿಯಾಗಿದ್ದು, ಈ ಹಿಂದೆ ತನ್ನೊಂದಿಗೆ ಕೆಲಸ ನಿರ್ವಹಿಸುತ್ತಿದ್ದ ಹಾಗೂ ಹಾಲಿ ಮಾಡುತ್ತಿರುವ ವೆಂಕಟೇಶ್ ಪಾಸ್‌ವರ್ಡ್‌ಗಳನ್ನು ನೀಡಿದ್ದು, ಆದರ ಸಹಾಯದಿಂದ ಸಾಯಿ ತೇಜನೊಂದಿಗೆ ಸೇರಿಕೊಂಡು ಹಣ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾನೆ. ಇದೀಗ ಮೂವರನ್ನು ಬಂಧಿಸಿರುವ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ನಡ್ಡಾ ಪ್ರಕರಣ: ಸರಕಾರಕ್ಕೆ ನೋಟಿಸ್

ಬೆಂಗಳೂರು: ಪರಿಶಿಷ್ಟ ಜಾತಿ, ಪಂಗಡ ಮತ್ತು ಮುಸ್ಲಿಂ ಸಮುದಾಯಗಳ ಕುರಿತ ಅವಹೇಳನಾಕಾರಿ ಪೋಸ್ಟ್ ಅನ್ನು ಬಿಜೆಪಿಯ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡ ಆರೋಪದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಸಾಮಾಜಿಕ ಜಾಲತಾಣಗಳ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ಮುಖ್ಯಸ್ಥ ಅಮಿತ್ ಮಾಳವಿಯ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದು ಕೋರಿದ ಅರ್ಜಿ ಸಂಬಂಧ ಸರಕಾರಕ್ಕೆ ಹೈಕೋಟ್ ನೋಟಿಸ್ ಜಾರಿಮಾಡಿದೆ.

ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣ ರದ್ದು ಕೋರಿ ಜೆ.ಪಿ.ನಡ್ಡಾ ಮತ್ತು ಅಮಿತ್ ಮಾಳವಿಯ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸುವಂತೆ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ. ಪ್ರಕರಣದಲ್ಲಿ ಅರ್ಜಿದಾರರ ಯಾವುದೇ ಪಾತ್ರವಿಲ್ಲ, ಆದ್ದರಿಂದ ಪ್ರಕರಣ ರದ್ದುಪಡಿಸಬೇಕು ಎಂದು ಅರ್ಜಿದಾರರ ಪರ ವಕೀಲರು ಕೋರಿದರು. ಅಲ್ಲದೆ, ಅರ್ಜಿಯಲ್ಲಿ ಪ್ರತಿ ರಾಜ್ಯದ ಸಾಮಾಜಿಕ ಜಾಲತಾಣಗಳಲ್ಲಿ ಮಾಡುವ ಆರೋಪಗಳಿಗೆ ರಾಷ್ಟ್ರಾಧ್ಯಕ್ಷರ ಪಾತ್ರವಿದೆ ಎಂಬುದಾಗಿ ಅರ್ಥೈಸುವಂತಿಲ್ಲ. ಈ ಆರೋಪಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಯಾವುದೇ ನಿರ್ದಿಷ್ಟ ಸಾಕ್ಷ್ಯಾಧಾರಗಳಿಲ್ಲ. ಅಲ್ಲದೆ, ಇದೇ ಆರೋಪದಲ್ಲಿ ಎರಡು ಪ್ರಕರಣಗಳು ಇವೆ. ಪಕ್ಷಕ್ಕೆ ರಾಷ್ಟ್ರಮಟ್ಟದಿಂದ ಸ್ಥಳೀಯ ಮಟ್ಟದವರೆಗೂ ವಿವಿಧ ಹಂತದಲ್ಲಿ ಮುಖ್ಯಸ್ಥರಿರಲಿದ್ದಾರೆ. ಹೀಗಿರುವಾಗ ಸಾಮಾಜಿಕ ಜಾಲತಾಣಗಳಲ್ಲಿನ ದೈನಂದಿನ ಚಟುವಟಿಕೆಗಳಿಗೆ ಅರ್ಜಿದಾರರು ಕಾರಣ ಎಂದು ಭಾವಿಸಲಾಗುವುದಿಲ್ಲ. ಹೈಗ್ರೌಂಡ್ಸ್ ಠಾಣೆಯಲ್ಲಿ ದೂರು ದಾಖಲಾಗಿದ್ದರೂ, ಇದೇ ಆರೋಪ ಸಂಬಂಧ ಮಲ್ಲೇಶ್ವರ ಠಾಣೆಯಲ್ಲಿಯೂ ಮತ್ತೊಂದು ಪ್ರಕರಣ ದಾಖಲಾಗಿದ್ದು, ಇದಕ್ಕೆ ಕಾನೂನಲ್ಲಿ ಅವಕಾಶವಿಲ್ಲ ಎಂದರು.

ಪ್ರಕರಣದ ಹಿನ್ನೆಲೆ ಏನು?: 2024 ಏಪ್ರಿಲ್ 4 ರಂದು ಬಿಜೆಪಿ ಕರ್ನಾಟಕದ ಸಾಮಾಜಿಕ ತಾಣದಲ್ಲಿ ಅನಿಮೇಷನ್ ಮಾದರಿಯ ವಿಡಿಯೋ ಪೋಸ್ಟ್ ಆಗಿತ್ತು. ಅದರಲ್ಲಿ ಶಿರೋನಾಮೆಯನ್ನು ಎಚ್ಚರ.. ಎಚ್ಚರ.. ಎಚ್ಚರ ಎಂದು ಬರೆದಿದ್ದು, ಅದರಲ್ಲಿ ಎಸ್ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳನ್ನು ಮೂರು ಮೊಟ್ಟೆಗಳಿಂದ ಮರಿಗಳು ಹೊರಬರುತ್ತಿರುವಂತೆ ಗುರುತಿಸಲಾಗಿತ್ತು. ಅದರಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಮತ್ತೊಂದು ಧರ್ಮದ ಮೊಟ್ಟೆಯೊಂದನ್ನು ತಂದಿಟ್ಟು ಎಸ್ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿದ್ದ ಆಹಾರವನ್ನು ನೀಡುತ್ತಿರುವಂತೆ ಬಿಂಬಿಸಲಾಗಿತ್ತು.

ಬ್ಯಾಂಕ್ ಆಫ್ ಬರೋಡ, ಪ್ರಾದೇಶಿಕ ಕಛೇರಿ, ಬೆಂಗಳೂರು ಉತ್ತರ

बैंक ऑफ़ बड़ौदा Bank of Baroda

4ನೇ ಮಹಡಿ, ವಿಜಯ ಟವರ್ಸ್, 41/2, ಎಂ.ಜಿ. ರಸ್ತೆ, ಬೆಂಗಳೂರು–560001, ದೂ. ಸಂಖ್ಯೆ: 080- 25584066/368/520, 9986695637, 9844142456 & 9603504553,
ಇ–ಮೇಲ್: SARBEN@Bankofbaroda.com, recovery.blrnorth@Bankofbaroda.co.in, Website: www.bankofbaroda.in

SCAN HERE For detailed terms & conditions.

ಇ–ಹರಾಜು ಮಾರಾಟ ಸೂಚನೆ "ಅನುಬಂಧ – IV-A [ನಿಯಮ 6(2) & 8 (6)]

ಇ–ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ.
ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, "ಎಲ್ಲಿ ಹೇಗಿದೆಯೋ ಹಾಗೇ" ಮತ್ತು "ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮಿನುದಾರರ /ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಕ್ರ. ಸಂ.	ಸಾಲಗಾರರ / ಅಡಮಾನುದಾರ / ಜಾಮೀನುದಾರರ ಹೆಸರು & ವಿಳಾಸ	ಸ್ಥಿರಾಸ್ತಿಯ / ಚರಾಸ್ತಿಯ ವಿವರಗಳು	ಬಾಕಿ ಮೊತ್ತ	ಇ–ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ, ಇಎಂಡಿ ಬಿಡ್ ಗುಣಾಂಕ ಮೊತ್ತ	ಸ್ವಾಧೀನದ ರೀತಿ (ರಚನಾತ್ಮಕವಾಗಿ/ ಭೌತಿಕವಾಗಿ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	(1) ಶ್ರೀಮತಿ ಇಂದು ನಾರಾಯಣಪ್ಪ, ನಂ.191, 2ನೇ ಕ್ರಾಸ್, 4ನೇ ಮುಖ್ಯ, ಅಂಚೆ ಕಚೇರಿ ಹತ್ತಿರ, ವಿವೇಕನಗರ, ಬೆಂಗಳೂರು ದಕ್ಷಿಣ, ಬೆಂಗಳೂರು–560047 (2) ಶ್ರೀ. ಶ್ರೀನಾಥ್. ಎನ್, ನಂ.191, 2ನೇ ಕ್ರಾಸ್, 4ನೇ ಮುಖ್ಯ, ಅಂಚೆ ಕಚೇರಿ ಹತ್ತಿರ, ವಿವೇಕನಗರ, ಬೆಂಗಳೂರು ದಕ್ಷಿಣ, ಬೆಂಗಳೂರು–560047. ಶಾಖೆ : ಕಾಕ್ಸ್ ಟೌನ್	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಹೆಚ್‌ಎಎಲ್ ಸ್ಯಾನಿಟರಿ ಬೋರ್ಡ್ ಮನೆ ನಂ. 97, ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಹೊಸ ಮುನಿಸಿಪಲ್ ನಂ. 2426/1, ಪಿಐಡಿ ನಂ. 74–138–2426/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 22 ಅಡಿ, ಉತ್ತರದಿಂದ ದಕ್ಷಿಣಕ್ಕೆ: 62 ಅಡಿ, ಒಟ್ಟು ವಿಸ್ತೀರ್ಣ 1364 ಚದರ ಅಡಿ, ಈ ಆಸ್ತಿಯು 16ನೇ 'ಎ' ಮುಖ್ಯರಸ್ತೆ, 2ನೇ 'ಇ' ಕ್ರಾಸ್, ಕೋಡಿಹಳ್ಳಿ, ಹೆಚ್‌ಎಎಲ್ 2ನೇ ಹಂತ, ಬಿಬಿಎಂಪಿ ವಾರ್ಡ್ ನಂ. 74, ವರ್ತೂರು ಹೋಬಳಿ, ಬೆಂಗಳೂರು ರಲ್ಲಿದೆ. ಮತ್ತು ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಆಸ್ತಿ ನಂ. 2426, ಉತ್ತರಕ್ಕೆ: 16ನೇ ಎ ಮುಖ್ಯರಸ್ತೆ, ದಕ್ಷಿಣಕ್ಕೆ: ಅದೇ ಆಸ್ತಿಯ ಉಳಿದ ಖಾಲಿ ಭಾಗ ಮತ್ತು ನಂ.2431/1 ರ ಆಸ್ತಿ.	ರೂ.1,46,39,391.13 (ರೂಪಾಯಿ ಒಂದು ಕೋಟಿ ನಲವತ್ತಾರು ಲಕ್ಷದ ಮೂವತ್ತೊಂಭತ್ತು ಸಾವಿರದ ಮುನ್ನೂರ ತೊಂಭತ್ತೊಂದು ಮತ್ತು ಹದಿಮೂರು ಪೈಸೆ ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	ಮೀಸಲು ಬೆಲೆ : ರೂ.1,36,80,000/– ಇಎಂಡಿ ಮೊತ್ತ : ರೂ.13,68,000/– ಬಿಡ್ ಗುಣಾಂಕದ ಮೊತ್ತ ರೂ.1,00,000/– ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	ಭೌತಿಕವಾಗಿ (ಖಾಲಿ ನಿವೇಶನ)	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ
2	(1) ಶ್ರೀಮತಿ ಪದ್ಮಾವತಿ ಆರ್. ಕೋಂ ಶ್ರೀ ಸಿ ಶ್ರೀಕಂಠ (2) ಶ್ರೀ. ಸಿ ಶ್ರೀಕಂಠ ಬಿನ್ ಶ್ರೀ ಚಂದ್ರಪ್ಪ ನಂ. 1 ಮತ್ತು 2 ರವರುಗಳ ವಿಳಾಸ : ನಂ, 1346, 1ನೇ ಮಹಡಿ, 6ನೇ ಕ್ರಾಸ್, 10ನೇ ಮುಖ್ಯ, 3ನೇ ಹಂತ, ಬಿಇಎಂಎಲ್ ಲೇಔಟ್, ರಾಜೇಶ್ವರಿ ನಗರ, ಬೆಂಗಳೂರು–560098 ಶಾಖೆ : ಯಲಹಂಕ ಹಳೆ ಟೌನ್	ಷೆಡ್ಯೂಲ್ 'ಎ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಸರ್ವೆ ನಂ. 30, 31 & 32, ವಿಸ್ತೀರ್ಣ 13 ಎಕರೆ 01 ಗುಂಟೆಗಳು, ಈ ಆಸ್ತಿಯು ಆದಿಗರಕಲ್ಲಹಳ್ಳಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ದಲ್ಲಿದೆ. ಜೊತೆಗೆ "ಲಾ–ವಿಲೆ ಟೌನ್‌ಶಿಪ್' ಎಂಬ ಯೋಜನೆಯಂತೆ ಬೆಂಗಳೂರು ಬಿಎಂಆರ್‌ಡಿಎ ರೆವಿನ್ಯೂ ವ್ಯಾಪ್ತಿಯಲ್ಲಿದೆ. ಮತ್ತು ಚಕ್ಕುಬಂದಿ : ಪೂರ್ವಕ್ಕೆ: ಸರ್ವೆ ನಂ. 142 ಮತ್ತು 145 ಪಶ್ಚಿಮಕ್ಕೆ: ಸರ್ವೆ ನಂ. 177, ಉತ್ತರಕ್ಕೆ: ಸರ್ವೆ ನಂ. 28 ಮತ್ತು 29, ದಕ್ಷಿಣಕ್ಕೆ: ಸರ್ವೆ ನಂ.47. ಷೆಡ್ಯೂಲ್ 'ಬಿ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಪ್ಲಾಟ್ ನಂ. 79, ಇ–ಖಾತಾ ನಂ. 150200102700422557, ನಂ. 248/79, ವಾಸಯೋಗ್ಯ ಪ್ಲಾಟ್‌ನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.190 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 9.140 ಮೀಟರ್, ಒಟ್ಟು ವಿಸ್ತೀರ್ಣ 111.42 ಚದರ ಮೀಟರ್‌ಗಳು. ಷೆಡ್ಯೂಲ್ ಎ ಆಸ್ತಿಯಲ್ಲಿರುವಂತೆ ಆಸ್ತಿಯು ಆದಿಗರಕಲ್ಲಹಳ್ಳಿ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ದಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ. 97, ಉತ್ತರಕ್ಕೆ: ನಿವೇಶನ ನಂ. 80, ದಕ್ಷಿಣಕ್ಕೆ : ನಿವೇಶನ ನಂ. 78.	ರೂ. 36,70,012.32 (ರೂಪಾಯಿ ಮೂವತ್ತಾರು ಲಕ್ಷದ ಎಪ್ಪತ್ತು ಸಾವಿರದ ಹನ್ನೆರಡು ಮತ್ತು ಮೂವತ್ತೆರಡು ಪೈಸೆ ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	ಮೀಸಲು ಬೆಲೆ : ರೂ.31,52,000/– ಇಎಂಡಿ ಮೊತ್ತ : ರೂ.3,15,200/– ಬಿಡ್ ಗುಣಾಂಕದ ಮೊತ್ತ ರೂ.25,000/– ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	ಭೌತಿಕವಾಗಿ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ
3	(1) ಶ್ರೀಮತಿ. ಶೈಲಜ.ಕೆ.ವಿ. ಕೋಂ ನರಸಿಂಹಯ್ಯ.ಎಂ., ನಂ.49, 2ನೇ ಕ್ರಾಸ್, ಬ್ಲೂಂ ಫೀಲ್ಡ್ ಗಾರ್ಡನ್, ರಾಮಚಂದ್ರಪುರ, ವಿದ್ಯಾರಣ್ಯಪುರ, ಬೆಂಗಳೂರು–560097 (2) ಶ್ರೀ. ನರಸಿಂಹಯ್ಯ.ಎಂ. ಬಿನ್ ಲೇಟ್ ಮುನಿಯಪ್ಪ, ನಂ.49, 2ನೇ ಕ್ರಾಸ್, ಬ್ಲೂಂ ಫೀಲ್ಡ್ ಗಾರ್ಡನ್, ರಾಮಚಂದ್ರಪುರ, ವಿದ್ಯಾರಣ್ಯಪುರ, ಬೆಂಗಳೂರು–560097 ಶಾಖೆ : ಪೀಣ್ಯ 2ನೇ ಹಂತ.	ಷೆಡ್ಯೂಲ್ 'ಎ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ಹಳೆ ಕಾರ್ಪೋರೇಷನ್ ನಂ. 15, 15/1, 16 ಮತ್ತು 16/1, ಪ್ರಸ್ತುತ ಅಮಲ್ಗಮೇಷನ್ ಕಾರ್ಪೋರೇಷನ್ ಮುನಿಸಿಪಲ್ ನಂ. 15, ಬಿಬಿಎಂಪಿ ಪಿಐಡಿ ನಂ. 1–39–15, ಈ ಆಸ್ತಿಯು ಎಸ್‌ಎಂ ರಸ್ತೆ, ಜಾಲಹಳ್ಳಿ ವೆಸ್ಟ್, ಬೆಂಗಳೂರಿನಲ್ಲಿದ್ದು, ಸರ್ವೆ ನಂ. 14 ರಲ್ಲಿ ರೂಪುಗೊಂಡಿದ್ದು, ಹೊಸ ನಂ. 14/2, ಪೀಣ್ಯ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬಿಬಿಎಂಪಿ ವಾರ್ಡ್ ನಂ. 1, ಪ್ರಸ್ತುತ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರ ವ್ಯಾಪ್ತಿಯಲ್ಲಿದ್ದು, ಒಟ್ಟು ವಿಸ್ತೀರ್ಣ 4,544 ಚದರ ಅಡಿ, ಸಂಪೂರ್ಣ ಭೂಮಿಯ ವಿಸ್ತೀರ್ಣ 22,993 ಚದರ ಅಡಿ, ಮತ್ತು ಚಕ್ಕುಬಂದಿ : ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ರಸ್ತೆ ಮತ್ತು ಖಾಸಗಿ ಆಸ್ತಿ. ಷೆಡ್ಯೂಲ್ 'ಬಿ' ಆಸ್ತಿ : ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಿರುವಂತೆ 394 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ, ಹಿತಾಸಕ್ತಿಯನ್ನೊಳಗೊಂಡಿರುವ ಆಸ್ತಿಯಾಗಿರುತ್ತದೆ. ಷೆಡ್ಯೂಲ್ 'ಸಿ' ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ. ಸಿ–6, ಮೊದಲನೇ ಮಹಡಿಯಲ್ಲಿರುವ, ಸಿ ಬ್ಲಾಕ್‌ನ, "ಗ್ಲೋಬಲ್ ಔರಾ ಯೋಜನೆ" ಎಂದು ಕರೆಯಲ್ಪಡುವ ವಾಸಯೋಗ್ಯ ಕಟ್ಟಡದ ಬಿಲ್ಟ್ ಅಪ್ ಪ್ರದೇಶದ ವಿಸ್ತೀರ್ಣ 2,000 ಚದರ ಅಡಿ, ಪರಿವರ್ತಿತ ಆಸ್ತಿಯು ಷೆಡ್ಯೂಲ್ 'ಎ' ಆಸ್ತಿಯಲ್ಲಿ ವಿವರಿಸಿರುವಂತೆ ಒಂದು ಕಾರು ನಿಲ್ಲಿಸುವ ಸ್ಥಳವನ್ನೊಳಗೊಂಡಿರುತ್ತದೆ.	ರೂ. 1,39,28,465.50 (ರೂಪಾಯಿ ಒಂದು ಕೋಟಿ ಮೂವತ್ತೊಂಭತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ನಾಲ್ಕುನೂರ ಅರವತ್ತೈದು ಮತ್ತು ಐವತ್ತು ಪೈಸೆ ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	ಮೀಸಲು ಬೆಲೆ : ರೂ.78,30,000/– ಇಎಂಡಿ ಮೊತ್ತ : ರೂ.7,83,000/– ಬಿಡ್ ಗುಣಾಂಕದ ಮೊತ್ತ ರೂ.50,000/– ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	ಭೌತಿಕವಾಗಿ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ
4	(1) ಶ್ರೀಮತಿ. ಆಶಾ ಎಂ, D/o ಶ್ರೀ. ಮಹದೇವಪ್ಪ, (ಅರ್ಜಿದಾರರು) ನಂ 317, ಚೌಡಪ್ಪ ಬಿಲ್ಡಿಂಗ್, ಅಂಬೇಡ್ಕರ್ ಕಾಲೋನಿ ರಸ್ತೆ, ಹೊಸೂರು ಮುಖ್ಯರಸ್ತೆ, ಕೂಡ್ಲು ಗ್ರಾಮ, ಎಸ್‌ಆರ್‌ಕೆ ಗಾರ್ಡನ್ ಅಪಾರ್ಟ್‌ಮೆಂಟ್ ಪಕ್ಕ, ಬೆಂಗಳೂರು–560068 (2) ಶ್ರೀ ರವಿ ಎಂ, ಬಿನ್ ಶ್ರೀ ಮಹದೇವಪ್ಪ (ಸಹ ಅರ್ಜಿದಾರರು) ನಂ 317, ಚೌಡಪ್ಪ ಬಿಲ್ಡಿಂಗ್, ಅಂಬೇಡ್ಕರ್ ಕಾಲೋನಿ ರಸ್ತೆ, ಹೊಸೂರು ಮುಖ್ಯರಸ್ತೆ, ಕೂಡ್ಲು ಗ್ರಾಮ, ಎಸ್‌ಆರ್‌ಕೆ ಗಾರ್ಡನ್ ಅಪಾರ್ಟ್‌ಮೆಂಟ್ ಪಕ್ಕ, ಬೆಂಗಳೂರು–560068 ಶಾಖೆ : ಚಂದ್ರಾಲೇಔಟ್, ಬೆಂಗಳೂರು.	ಷೆಡ್ಯೂಲ್ ಎ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಜಮೀನಿನ ಸರ್ವೆ ನಂ.8/ಪಿ1 (ಹಳೆಯ ಸರ್ವೆ ನಂ.8), ವಿಸ್ತೀರ್ಣ 0–35 ಗುಂಟೆಗಳು ಮತ್ತು ಸರ್ವೆ ನಂ.9/1ರ ವಿಸ್ತೀರ್ಣ 2 ಎಕರೆ 05 ಗುಂಟೆಗಳು ಒಟ್ಟು ವಿಸ್ತೀರ್ಣ 3 ಎಕರೆ, ಈ ಆಸ್ತಿಯು ಹೀಲಲಿಗೆ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರಿನಲ್ಲಿದೆ, (ವಿಡೆ ಪರಿವರ್ತಿತ ಆದೇಶ ಸಂಖ್ಯೆ BDS.ALN;(A)SR 44/2005-2006, ದಿನಾಂಕ 27.04.2005 ರಂದು ಉಪ ಆಯುಕ್ತರು ಬೆಂಗಳೂರು ನಗರ ಮತ್ತು APA/LAO/83/2011-2012 ದಿನಾಂಕ 14.02.2013 ರಂದು ಪಟ್ಟಣ ಮತ್ತು ಗ್ರಾಮಾಂತರ ಜಂಟಿ ಯೋಜನಾ ಪ್ರಾಧಿಕಾರ ಮತ್ತು ನಿರ್ದೇಶಕರು ಆನೇಕಲ್ ಯೋಜನಾ ಪ್ರಾಧಿಕಾರವನ್ನು ಹೊರಡಿಸಿದ್ದಾರೆ) ಜೊತೆಗೆ ಎಲ್ಲಾ ಹಕ್ಕುಗಳೊಂದಿಗೆ ಚಕ್ಕುಬಂದಿ: ಪೂರ್ವಕ್ಕೆ: ಶಂಬಯ್ಯನವರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮುನಿಯಪ್ಪ ರವರಿಗೆ ಸೇರಿದ ಜಮೀನು, ದಕ್ಷಿಣಕ್ಕೆ: ಶಂಬಯ್ಯರವರಿಗೆ ಸೇರಿದ ಜಮೀನು ಮತ್ತು ಹಳ್ಳ. ಷೆಡ್ಯೂಲ್ ಬಿ ಆಸ್ತಿ : ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಷೆಡ್ಯೂಲ್ ಎ ಆಸ್ತಿಯ ವಿಸ್ತೀರ್ಣ 373.135 ಚದರ ಅಡಿ (ಅವಿಭಾಜಿತ ಹಿತಾಸಕ್ತಿಯನ್ನು ಹೊಂದಿದೆ.) ಷೆಡ್ಯೂಲ್ ಸಿ ಆಸ್ತಿ : ವಾಸಯೋಗ್ಯ ಅಪಾರ್ಟ್‌ಮೆಂಟ್ ಹೊಂದಿರುವ ನಂ.ಜಿ11, ನೆಲಮಹಡಿ, ಬ್ಲಾಕ್ ನಂ.3ರಲ್ಲಿರುವ "ಮಯೂರ್ ಬೃಂದಾವನ" ವನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ. ಮತ್ತು 900 ಚದರ ಅಡಿಗಳಷ್ಟು ಸೂಪರ್ ಬಿಲ್ಟ್ ಅಪ್ ಪ್ರದೇಶದಲ್ಲಿ ಸಾಮಾನ್ಯ ಪ್ರದೇಶಗಳು, ಮಾರ್ಗಗಳು, ಲಾಬಿಗಳಲ್ಲಿ ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳು 373.135 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿ ಮತ್ತು ಮಾಲೀಕತ್ವವನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಹೊಂದಿದೆ, ಇ–ಖಾತಾ ಸಂಖ್ಯೆ 150200100600520278 ರ ಪ್ರಕಾರ, ಆರ್‌ಸಿಸಿ ಚೌಕಟ್ಟಿನ ರಚನೆಯೊಂದಿಗೆ ಚಂದಾಪುರ ಗ್ರಾಮ ಪಂಚಾಯತಿಯಿಂದ ಕ್ರಮಬದ್ಧವಾಗಿ ನೀಡಲಾಗಿದೆ. , ಕಾಂಕ್ರೀಟ್ ಬ್ಲಾಕ್, ಕಲ್ಲು, ಮುಖ್ಯ ಬಾಗಿಲು ತೇಗದ ಚೌಕಟ್ಟು ಮತ್ತು ಸ್ಟೀಮ್ ಬೀಚ್ veneered ಫ್ಲಶ್ ಶಟರ್ ಮತ್ತು ಕೊಠಡಿ ಬಾಗಿಲುಗಳು ವಾಟರ್ ಪ್ರೂಫ್ ಫ್ಲಶ್, ಕವಾಟುಗಳು, ಪೌಡರ್ ಕೋಟೆಡ್ ಅಲ್ಯೂಮಿನಿಯಂ ಕಿಟಕಿಗಳು ಗಾಜು ಮತ್ತು ಸುರಕ್ಷತಾ ಗ್ರಿಲ್‌ಗಳು, ವಿಟ್ರಿಫೈಡ್ ಫ್ಲೋರಿಂಗ್ ಇತ್ಯಾದಿ., ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಫ್ಲಾಟ್ ಸಂಖ್ಯೆ ಜಿ14, ಪಶ್ಚಿಮಕ್ಕೆ: ಫ್ಲಾಟ್ ಸಂಖ್ಯೆ ಜಿ06, ಉತ್ತರಕ್ಕೆ : ಫ್ಲಾಟ್ ಸಂಖ್ಯೆ ಜಿ10, ದಕ್ಷಿಣಕ್ಕೆ : ಫ್ಲಾಟ್ ಸಂಖ್ಯೆ ಜಿ12.	ರೂ. 74,18,718.00 (ರೂಪಾಯಿ ಎಪ್ಪತ್ತನಾಲ್ಕು ಲಕ್ಷದ ಹದಿನೆಂಟು ಸಾವಿರದ ಏಳುನೂರ ಹದಿನೆಂಟು ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	ಮೀಸಲು ಬೆಲೆ : ರೂ.40,95,000/– ಇಎಂಡಿ ಮೊತ್ತ : ರೂ.4,09,500/– ಬಿಡ್ ಗುಣಾಂಕದ ಮೊತ್ತ ರೂ.50,000/– ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	ಭೌತಿಕವಾಗಿ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ
5	(1) ಮೆ॥ ಹೇರಂಬಾ ರೀಫ್ರೆಶ್‌ಮೆಂಟ್ಸ್ ಸಂಖ್ಯೆ 28, ಶೇಷಾದ್ರಿ ರಸ್ತೆ, ಆನಂದ ರಾವ್ ವೃತ್ತ, VRL ಬಸ್ ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು– 560096 (2) ಶ್ರೀ. ರಿತೇಶ್ ಜೆ ಶೆಟ್ಟಿ (ಮಾಲೀಕರು) (3) ಶ್ರೀ. ಕೆ ಜಗನಾಥ ಶೆಟ್ಟಿ (ಜಾಮೀನುದಾರರು) ನಂ. 2 & 3 ರವರುಗಳ ವಿಳಾಸ : ನಂ.304, ಆಶ್ರಮ ವ್ಯೂ ಎನ್‌ಕ್ಲೇವ್, ಕೆ ಎಸ್ ಗಾರ್ಡನ್ಸ್ ಹಲಸೂರು, ಬೆಂಗಳೂರು–560008. ಶಾಖೆ : ಬ್ಯಾಟರಾಯನಪುರ	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್/ ಫ್ಲಾಟ್ ನಂ. 304, 3ನೇ ಮಹಡಿ, "ಶ್ರೀ ಆಶ್ರಮ್ ವ್ಯೂ ಎನ್‌ಕ್ಲೇವ್", ಕುಲುಮೆ ಸಿದ್ದಣ್ಣ ಗಾರ್ಡನ್, (ಮರ್ಫಿ ಟೌನ್), ವಾರ್ಡ್ ನಂ. 82, ಹೊಯ್ಸಳನಗರ, ಹಲಸೂರು, ಬೆಂಗಳೂರು–560008 ಮತ್ತು ಷೆಡ್ಯೂಲ್ 'ಎ' ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ಸ್ವಾಮಿ ವಿವೇಕಾನಂದ ಆಶ್ರಮ ಆಸ್ತಿ, ಪಶ್ಚಿಮಕ್ಕೆ: 25 ಅಡಿ ರಸ್ತೆ, ಮುಖ್ಯ ರಸ್ತೆಗೆ ಹೋಗುವ 25 ಅಡಿ ರಸ್ತೆ, ಆಸ್ತಿ ಸಂಖ್ಯೆ 15/7 & ಖಾಸಗಿ ಆಸ್ತಿ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ.	ರೂ. 66,62,453.62 (ರೂಪಾಯಿ ಅರವತ್ತಾರು ಲಕ್ಷದ ಅರವತ್ತೆರಡು ಸಾವಿರದ ನಾಲ್ಕುನೂರ ಐವತ್ತಮೂರು ಮತ್ತು ಅರವತ್ತೆರಡು ಪೈಸೆ ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ	ಮೀಸಲು ಬೆಲೆ : ರೂ.43,20,000/– ಇಎಂಡಿ ಮೊತ್ತ : ರೂ.4,32,000/– ಬಿಡ್ ಗುಣಾಂಕದ ಮೊತ್ತ ರೂ.25,000/– ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	ಭೌತಿಕವಾಗಿ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ
6	(1) ಮೆ॥ ಹೆಚ್ ಎ ಟ್ರೇಡರ್ಸ್, ಪ್ರತಿನಿಧಿಸುವ ಮಾಲೀಕರು ಶ್ರೀಮತಿ. ಅನೂಷಾ.ಟಿ.ಎನ್. ನಂ.3, 1ನೇ ಕ್ರಾಸ್, ಶಿರಡಿ ಸಾಯಿ ರತನ್ ಲೇಔಟ್, ಆರ್‌ಕೆ ಹೆಗ್ಗಡೆ ನಗರ, ರಾಚೇನಹಳ್ಳಿ, ಬೆಂಗಳೂರು–560077. (2) ಶ್ರೀಮತಿ. ಅನೂಷಾ. ಟಿ.ಎನ್ (3) ಶ್ರೀ. ಸುನಿಲ್ ಕುಮಾರ್.ಆರ್. ನಂ. 2 ಮತ್ತು 3 ರವರುಗಳ ವಿಳಾಸ : ನಂ. 1666, 6ನೇ ಕ್ರಾಸ್, ಎಂಸಿಇಸಿ ಹೆಚ್‌ಎಸ್. ಲೇಔಟ್, ಫೇಸ್–2, ಜಕ್ಕೂರು, ಬೆಂಗಳೂರು–560064, ಮತ್ತೊಂದು ವಿಳಾಸ : ನಿವೇಶನ ನಂ. 29, ವಾರ್ಡ್ ನಂ.3, ನಾರಾಯಣಪ್ಪ ಲೇಔಟ್, ರೋಜಿಪುರ ಗ್ರಾಮ, ನಂದಿ ಹಿಲ್ಸ್ ರಸ್ತೆ, ದೊಡ್ಡಬಳ್ಳಾಪುರ, ಬೆಂಗಳೂರು–561203. ಶಾಖೆ : ಎಂಎಸ್‌ಆರ್‌ಐಟಿ	1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.48, ಖಾತಾ ನಂ.2395/48, ಪೂರ್ವದಿಂದ ಪಶ್ಚಿಮಕ್ಕೆ : 12.19 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.14 ಮೀಟರ್‌ಗಳು, ಹಿರೇಬೆದನೂರು ಗ್ರಾಮ, & ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ & ಚಕ್ಕುಬಂದಿ : ಪೂರ್ವಕ್ಕೆ : 9 ಮೀಟರ್‌ಗಳ ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ.53, ಉತ್ತರಕ್ಕೆ : ಭೂಮಿ, ದಕ್ಷಿಣಕ್ಕೆ : ನಿವೇಶನ ನಂ.49. 2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.107, ಖಾತಾ ನಂ.2395/107, ಪೂರ್ವದಿಂದ ಪಶ್ಚಿಮಕ್ಕೆ 9.14 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.45 ಮೀಟರ್‌ಗಳು, ಹಿರೇಬೆದನೂರು ಗ್ರಾಮ, & ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ & ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ.106, ಪಶ್ಚಿಮಕ್ಕೆ : ನಿವೇಶನ ನಂ.108, ಉತ್ತರಕ್ಕೆ : ಭೂಮಿ, ದಕ್ಷಿಣಕ್ಕೆ : 9 ಮೀಟರ್‌ಗಳ ರಸ್ತೆ. 3) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.53, ಖಾತಾ ನಂ.2395/53, ಪೂರ್ವದಿಂದ ಪಶ್ಚಿಮಕ್ಕೆ 10.36 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ : 9.75 ಮೀಟರ್‌ಗಳು, ಹಿರೇಬೆದನೂರು ಗ್ರಾಮ, & ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ & ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ.48, ಪಶ್ಚಿಮಕ್ಕೆ : 9 ಮೀಟರ್‌ಗಳ ರಸ್ತೆ, ಉತ್ತರಕ್ಕೆ : ಭೂಮಿ, ದಕ್ಷಿಣಕ್ಕೆ : ನಿವೇಶನ ನಂ.52.	ರೂ. 87,51,897.89 (ರೂಪಾಯಿ ಎಂಭತ್ತೇಳು ಲಕ್ಷದ ಐವತ್ತೊಂದು ಸಾವಿರದ ಎಂಟು ನೂರ ತೊಂಭತ್ತೇಳು ಮತ್ತು ಎಂಭತ್ತೊಂಭತ್ತು ಪೈಸೆ ಮಾತ್ರ) ದಿನಾಂಕ: 25.05.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.	25.06.2024 ರಂದು ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯ ವರೆಗೆ ಇಎಂಡಿ ಮೊತ್ತದ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ: 24.06.2024	1) ಮೀಸಲು ಬೆಲೆ : ರೂ.10,26,000/– ಇಎಂಡಿ ಮೊತ್ತ : ರೂ.1,02,600/– ಬಿಡ್ ಗುಣಾಂಕದ ಮೊತ್ತ ರೂ.25,000/– 2) ಮೀಸಲು ಬೆಲೆ : ರೂ.8,15,000/– ಇಎಂಡಿ ಮೊತ್ತ : ರೂ.81,500/– ಬಿಡ್ ಗುಣಾಂಕದ ಮೊತ್ತ ರೂ.25,000/– 3) ಮೀಸಲು ಬೆಲೆ : ರೂ.9,42,000/– ಇಎಂಡಿ ಮೊತ್ತ : ರೂ.94,200/– ಬಿಡ್ ಗುಣಾಂಕದ ಮೊತ್ತ ರೂ.25,000/–	ಭೌತಿಕವಾಗಿ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ –ಯೊಂದಿಗೆ

ಹರಾಜಿನ ಬಗ್ಗೆ ವಿವರವಾದ ಷರತ್ತು & ನಿಬಂಧನೆಗಳಿಗಾಗಿ ಈ ಲಿಂಕ್ https://www.bankofbaroda.in/e-auction.htm and https://ibapi.in.ನ್ನು ನೋಡಿ ಅಥವಾ ಸಂಬಂಧಪಟ್ಟ ಅಧಿಕಾರಿ ಮತ್ತು ಮೊಬೈಲ್ ನಂ.+ 91 9986695637 ಸಂಪರ್ಕಿಸಿ.

ದಿನಾಂಕ: 06.06.2024, ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ.

ವಾಟರ್ ಟ್ಯಾಂಕರ್ ಡಿಕ್ಕಿ; ಅಕ್ಕ-ತಮ್ಮ ಸಾವು

ಬೆಂಗಳೂರು: ರಜೆ ಮುಗಿಸಿ ಮೊದಲ ದಿನ ಕಾಲೇಜಿಗೆ ಹೊರಟಿದ್ದ ಅಕ್ಕ-ತಮ್ಮ ಭೀಕರ ಅಪಘಾತಕ್ಕೆ ಬಲಿಯಾಗಿರುವ ಘಟನೆ ನಗರದಲ್ಲಿ ನಡೆದಿದೆ.

ಅಪರಾಧ ಸುದ್ದಿ

ದೊಡ್ಡನಾಗಮಂಗಲದ ಕೆಂಪೇಗೌಡ ಬಡಾವಣೆಯ ಮಧುಮಿತ (20), ರಂಜನ್ (18) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡನಾಗಮಂಗಲದಲ್ಲಿ ಈ ಘಟನೆ ನಡೆದಿದೆ. ಮಧುಮಿತ ರಜೆ ಮುಗಿಸಿ ಮೊದಲ ದಿನ ಕಾಲೇಜು ಪ್ರಾರಂಭ ಎಂದು ತಮ್ಮನ ಜತೆ ಕಾಲೇಜಿಗೆ ಹೊರಟಿದ್ದಳು. ಬೈಕ್‌ನಲ್ಲಿ ಹೋಗುತ್ತಿದ್ದಾಗ ನೀರಿನ ಟ್ಯಾಂಕರ್ ಚಾಲಕ ಏಕಾಏಕಿ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮವಾಗಿ ಅಕ್ಕ-ತಮ್ಮ ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಸಹೋದರಿ ಮಧುಮಿತಳನ್ನು ಕಾಲೇಜಿಗೆ ಬಿಟ್ಟುಬರಲು ರಂಜನ್ ಬೈಕ್‌ನಲ್ಲಿ ಹೊರಟಿದ್ದ. ಅತಿ ವೇಗವಾಗಿ ಬಂದ ನೀರಿನ ಟ್ಯಾಂಕರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಆಗ ಕೆಳಗೆ ಬಿದ್ದ ಅಕ್ಕ-ತಮ್ಮನ ಮೇಲೆ ವಾಟರ್ ಟ್ಯಾಂಕರ್‌ನ ಹಿಂಬದಿಯ ಚಕ್ರ ಹರಿದಿದೆ.

ವಾಟರ್ ಟ್ಯಾಂಕರ್ ಬೈಕ್‌ಗೆ ಡಿಕ್ಕಿ ಹೊಡೆಯುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವಾಟರ್ ಟ್ಯಾಂಕರ್ ಚಾಲಕನ ಅತಿ ವೇಗ ಮತ್ತು ಅಜಾಗರೂಕತೆ ಚಾಲನೆಯೇ ಅಪಘಾತಕ್ಕೆ ಕಾರಣ ಅಂತ ಸ್ಥಳೀಯರು ಆರೋಪಿಸಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಿಫ್ಟ್ ಡೀಡ್ ಪ್ರಕರಣ ಹೈಕೋರ್ಟ್ ಸೂಚನೆ

ಬೆಂಗಳೂರು: ತಂದೆ ತನ್ನ ಮಗನಿಗೆ ಆಸ್ತಿಯ ಗಿಫ್ಟ್ ಡೀಡ್ (ಉಡುಗೊರೆ ಯಾಗಿ) ಮಾಡಿಕೊಡುವಾಗ ಅದರಲ್ಲಿ ತನ್ನನ್ನು ನೋಡಿಕೊಳ್ಳುವ ಕುರಿತಂತೆ ಷರತ್ತು ಉಲ್ಲೇಖಿಸಿಲ್ಲ ಎಂಬ ಕಾರಣಕ್ಕೆ ಆ ಪತ್ರವನ್ನು ಉಪವಿಭಾಗಾಧಿಕಾರಿ ರದ್ದುಗೊಳಿಸಲು ಅವಕಾಶವಿಲ್ಲ ಎಂ ದು ಹೈಕೋರ್ಟ್ ಸ್ಪಷ್ಟವಾಗಿ ತಿಳಿಸಿದೆ.

ಪ್ರಕರಣ ಸಂಬಂಧ ರಾಮನಗರ ಜಿಲ್ಲೆಯ ಚನ್ನಪಟ್ಟಣ ಮೂಲದ ವಿವೇಕ್ ಜೈನ್ ಎಂಬುವರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಈ ಆದೇಶ ಮಾಡಿದೆ. ಅಲ್ಲದೇ, ಹಿರಿಯ ನಾಗರಿಕರಾದ ತಂದೆ ತನ್ನ ಪುತ್ರನಿಗೆ ಆಸ್ತಿಯ ಉಡುಗೊರೆ ಪತ್ರ ಮಾಡಿಕೊಡುವಾಗ ಅದರಲ್ಲಿ ತನ್ನನ್ನು ನೋಡಿಕೊಳ್ಳುವ ಕುರಿತು ಯಾವುದೇ ಷರತ್ತು ಉಲ್ಲೇಖಿ ಸಿಲ್ಲ ಎಂಬ ಕಾರಣಕ್ಕೆ ಆ ಗಿಫ್ಟ್ ಡೀಡ್ ಅನ್ನು ಉಪ ವಿಭಾಗಾಧಿಕಾರಿಯು ರದ್ದುಗೊಳಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಉಪ ವಿಭಾಗಾಧಿಕಾರಿಯ ಆದೇಶ ರದ್ದು ಮಾಡುತ್ತಿರುವುದಾಗಿ ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಚನ್ನಪಟ್ಟಣದ ಹರ್ಷ ಎಂಬುವರಿಗೆ ಅವರ ತಂದೆ ಶ್ರೀನಿವಾಸ್ ತಮ್ಮ ಆಸ್ತಿಯನ್ನು ಗಿಫ್ಟ್ ಡೀಡ್ ಮಾಡಿಕೊಟ್ಟಿದ್ದರು. ಈ ಆಸ್ತಿ ಯನ್ನು ವಿವೇಕ್ ಜೈನ್ ಎಂಬುವರಿಗೆ ಹರ್ಷ ಮಾರಾಟ ಮಾಡಿದ್ದರು. ಇದರಿಂದ ಅಸಮಾಧಾನಗೊಂಡ ಹರ್ಷ ಅವರ ತಂದೆ, ತನ್ನ ಪುತ್ರನಿಗೆ ನೀಡಿದ್ದ ಆಸ್ತಿಯ ಗಿಫ್ಟ್ ಡೀಡ್ ರದ್ದು ಮಾಡಬೇಕು ಎಂದು ಕೋರಿ ರಾಮನಗರ ಜಿಲ್ಲೆಯ ಕಮೀಷನರ್ ಸೀನಿಯರ್ ಸಿಟಿಜನ್ ಟ್ರಿಬ್ಯೂನಲ್‌ಗೆ ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ಉಪ ವಿಭಾಗಾಧಿಕಾರಿ, ಗಿಫ್ಟ್ ಡೀಡ್ ರದ್ದುಗೊಳಿಸಿ 2021ರ ಜುಲೈ 7ರಂದು ಆದೇಶಿಸಿದ್ದರು. ಈ ಆದೇಶ ರದ್ದುಗೊಳಿಸುವಂತೆ ಕೋರಿ ಅರ್ಜಿದಾರರ ವಿವೇಕ್ ಜೈನ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬಿಟ್‌ಕಾಯಿನ್: ಡಿವೈಎಸ್ಪಿ ಶ್ರೀಧರ್ ಬಂಧನಕ್ಕೆ ತಡೆ

ಬೆಂಗಳೂರು: ಬಿಟ್‌ಕಾಯಿನ್ ಪ್ರಕರಣದಲ್ಲಿ ಆರೋಪಿಗಳನ್ನು ಅಕ್ರಮವಾಗಿ ತಮ್ಮ ವಶದಲ್ಲಿಟ್ಟುಕೊಂಡು ಬಿಟ ಕಾಯಿನ್‌ಗಳ ವರ್ಗಾವಣೆ ಮತ್ತು ಪಾಸ್‌ವರ್ಡ್ ಬದಲಾವಣೆ ಮಾಡಿದ ಆರೋಪಿ ಆಂತರಿಕ ಭದ್ರತಾ ವಿಭಾಗದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಡಿವೈಎಸ್‌ಪಿ) ಶ್ರೀಧರ್ ಕೆ. ಪೂಜಾರ್ ಅವರನ್ನು ಮುಂದಿನ ವಿಚಾರಣೆವರೆಗೂ ಬಂಧಿಸದಂತೆ ಹೈಕೋರ್ಟ್ ಆದೇಶ ಹೊರಡಿಸಿದೆ.

ಪೊಲೀಸ್ ಅಧಿಕಾರಿ ಶ್ರೀಧರ್ ಕೆ. ಪೂಜಾರ್ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಉಮಾ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಸರಕಾರ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಬೇಕು. ಅಲ್ಲಿಯವರೆಗೆ ಪೂಜಾರ್ ಅವರನ್ನು ಬಂಧಿಸುವ ಪ್ರಯತ್ನಕ್ಕೆ ಮುಂದಾಗಬಾರದು ಎಂದು ತಿಳಿಸಿ ವಿಚಾರಣೆಯನ್ನು ಜೂನ್ 12ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಸುಪ್ರೀಂಕೋರ್ಟ್ ನಿರ್ದೇಶನದಂತೆ ಹೊಸದಾಗಿ ನಿರೀಕ್ಷಣಾ ಜಾಮೀನು ಕೋರಲಾಗಿದೆ. ಈ ಹಿಂದೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದ ಹೈಕೋರ್ಟ್ ಸೂಚನೆಯಂತೆ ತನಿಖಾಧಿಕಾರಿಯ ಮುಂದೆ ಪೂಜಾರ್ ವಿಚಾರಣೆಗೆ ಹಾಜರಾಗಿದ್ದರು. ಈ ವೇಳೆ ಪೂಜಾರ್ ಅವರ ಮೊಬೈಲ್ ಫೋನ್, ಲ್ಯಾಪ್‌ಟಾಪ್ ಮತ್ತು ಪೆನ್‌ಡ್ರೈವ್ ಜಪ್ತಿ ಮಾಡಲಾಗಿದೆ. ಇದೀಗ ಪೂಜಾರ್ ಅವರನ್ನು ಬಂಧಿಸಲು ಪ್ರಯತ್ನಿಸಲಾಗುತ್ತಿದೆ ಎಂದು ವಿವರಿಸಿದರು.

ಶರಣ್ ಚೌಧರಿ ಸಾರಥ್ಯದಲ್ಲಿ ಸಂಗೀತ ಉತ್ಸವ ಆಯೋಜನೆ

ಬೆಂಗಳೂರು: ಸಂಗೀತಾಸಕ್ತರಿಗೆ ವಿವಿಧ ಪ್ರಕಾರದ ಸಂಗೀತವನ್ನು ಒಂದೇ ವೇದಿಕೆಯಲ್ಲಿ ಕೇಳುವ ಸುವರ್ಣಾವಕಾಶವನ್ನು ಅಂತಾರಾಷ್ಟ್ರೀಯ ಹಿಂದೂಸ್ತಾನಿ ಗಾಯಕ, ಸಂಗೀತ ನಿರ್ದೇಶಕ ಪಂ.ಶರಣ್ ಚೌಧರಿ ಸಾರಥ್ಯದಲ್ಲಿ ಪ್ರತಿಷ್ಠಿತ ಸಂಗೀತ ವಿದ್ಯಾಲಯ ಶರಣ್ಸ್ ಮ್ಯೂಜಿಕ್ ಅಕಾಡೆಮಿಯವರು ಆಯೋಜಿಸಿದ್ದಾರೆ. ಸಂಗೀತ ಉತ್ಸವ-2024 ಎಂಬ ಸಂಗೀತ ಸುಗ್ಗಿಯನ್ನ ಇಂದು ಸಂಜೆ 04 ಗಂಟೆಗೆ ಮಲ್ಲೇಶ್ವರದ ಶುಕ್ರಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಪಾಶ್ಚಾತ್ಯ ಸಂಗೀತ, ವಾದ್ಯ ಸಂಗೀತ, ಸಮೂಹ ಗೀತೆ ಹಾಗೂ ವಿವಿಧ ಭಾಷೆಯ ಚಲನ ಚಿತ್ರ ಗೀತೆ ಮತ್ತು ನೃತ್ಯ ಪ್ರಸ್ತುತ ಪಡಿಸಲಿದ್ದಾರೆ. ಪಂ.ಶರಣ್ ಚೌಧರಿರವರು ಹಾರ್ಮೋನಿ ಯಂನಲ್ಲಿ, ಪಂ.ರಾಘವೇಂದ್ರ ಜೋಶಿರವರು ತಬಲಾದಲ್ಲಿ, ಮಲ್ಲಿಕಾರ್ಜುನ ಪತ್ತಾರ ಕೀಬೋರ್ಡ್‌ನಲ್ಲಿ ವಾದ್ಯ ಸಹಕಾರ ನೀಡಲಿದ್ದು, ರೇಣುಕಾಚಾರ್ಯ ಹಿರೇ ಮಠ ಮತ್ತು ಅನುಪಮಾ ದೇಸಾಯಿ ಕಾರ್ಯಕ್ರಮ ನಿರ್ವಹಿಸಲಿದ್ದಾರೆ. ಆಸಕ್ತರಿಗೆ ಪ್ರವೇಶ ಉಚಿತವಾಗಿದೆ ಎಂದು ಅಕಾಡೆಮಿ ಅಧ್ಯಕ್ಷೆ ಅಕ್ಷತಾ ಮುರಗೋಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈಟ್ ಟಾಪಿಂಗ್ ಕಾಮಗಾರಿಯಿಂದ ಸಮಸ್ಯೆ

ಬೆಂಗಳೂರು: ಆರ್‌ಟಿ ನಗರದಲ್ಲಿ ಪಾಲಿಕೆಯು ವೈಟ್ ಟಾಪಿಂಗ್ ಕಾಮಗಾರಿಯನ್ನು ನಡೆಸುತ್ತಿದ್ದು, ಗ್ರಾಹಕರು ಆಗಮಿಸದೇ ವ್ಯಾಪಾರಸ್ಥರಿಗೆ ಭಾರೀ ಸಮಸ್ಯೆಯಾಗಿದೆ.

ಸಾವಿರಾರು ವ್ಯಾಪಾರಸ್ಥರು ಆರ್‌ಟಿನಗರದಲ್ಲಿ ವ್ಯಾಪಾರ ಮಾಡುತ್ತಿದ್ದು, ಪಾಲಿಕೆ ಮಾಡುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯಿಂದಾಗಿ ಅಲ್ಲಿನ ವ್ಯಾಪಾರಸ್ಥರಿಗೆ ಸಮಸ್ಯೆಯಾಗಿದೆ. ಗ್ರಾಹಕರು ಆಗಮಿಸದ ಹಿನ್ನೆಲೆ ಏಕಾಏಕಿ ವ್ಯಾಪಾರ ಕುಸಿತವಾಗಿದೆ. ವಾಹನ ಪಾರ್ಕಿಂಗ್‌ಗೆ ಜಾಗವಿಲ್ಲ ಜತೆಗೆ ಎಲ್ಲ ಕಡೆಗಳಲ್ಲಿ ಅಗೆದು ಹಾಕಿರುವುದರಿಂದ ರಸ್ತೆ ಅದ್ವಾನವಾಗಿದೆ. ವಾಹನ ಚಾಲಕರು ಸ್ವಲ್ಪ ಯಾಮಾರಿದರೂ ಗುಂಡಿಗೆ ಬೀಳುವ ಸ್ಥಿತಿಯುಂಟಾಗಿದೆ. ಪಾದಚಾರಿ ಮಾರ್ಗ ಅಗೆದಿರುವುದರಿಂದ ಜನರು ನಡೆದಾಡು ವುದು ಸಮಸ್ಯೆಯಾಗಿದ್ದು, ಮುಖ್ಯ ರಸ್ತೆ ಅಗೆದ ಹಿನ್ನೆಲೆ ಅಡ್ಡ ರಸ್ತೆಗಳಲ್ಲಿರುವ ನಿವಾಸಿಗಳಿಗೂ ತೊಂದರೆ ಯಾಗಿದೆ.

ರಸ್ತೆ ಅಗೆದು ಹಾಕಿರುವುದರಿಂದ ಕಂಡ ಕಂಡಲ್ಲೆಲ್ಲಾ ಗುಂಡಿಗಳುಂಟಾಗಿದ್ದು, ಇದರಿಂದಾಗಿ ವಾಹನ ಸವಾರರು ಭಾರಿ ಸಂಕಷ್ಟ ಎದುರಿಸುವಂತಾಗಿದೆ. ಗ್ರಾಹಕರಿಲ್ಲದೆ ಅಂಗಡಿ, ಹೋಟೆಲ್‌ಗಳು ಖಾಲಿ ಹೊಡೆಯುತ್ತಿವೆ. ವೈಟ್ ಟಾಪಿಂಗ್ ಕಾಮಗಾರಿಯಿಂದಾಗಿ ವಾಹನ ಸವಾರರು ಸಂಚಾರ ದಟ್ಟಣೆಯಿಂದ ಒದ್ದಾಡುತ್ತಿದ್ದಾರೆ. ಆರು ತಿಂಗಳ ಹಿಂದೆ ಆರ್‌ಟಿ ನಗರದಲ್ಲಿ ಸ್ಯಾನಿಟರಿ ಪೈಪ್‌ಲೈನ್ ಅಳವಡಿಕೆ. ಭೂಗತ ವಿದ್ಯುತ್ ಕೇಬಲ್ ಅಳವಡಿಸಲು ರಸ್ತೆಯುದ್ದಕ್ಕೂ ಎರಡೂ ಬದಿ ಅಗೆದು ಹಾಕಲಾಗಿದೆ. ಮಂದಗತಿಯ ಕಾಮಗಾರಿಯಿಂದ ಸುತ್ತಲಿನ 500 ಕ್ಕೂ ಹೆಚ್ಚು ಅಂಗಡಿ, ಹೋಟೆಲ್‌ಗಳಿಗೆ ಕಳೆದ 4-5 ತಿಂಗಳಿನಿಂದ ವ್ಯಾಪಾರ ಇಲ್ಲಂದಾಗಿದೆ ಅಂತ ವ್ಯಾಪರಸ್ಥರು ಗೋಳಾಡುತ್ತಿದ್ದಾರೆ. ಕಳೆದ ಆರು ತಿಂಗಳಿನಿಂದ ನಿರಂತರ ಕಾಮಗಾರಿಯಿಂದಾಗಿ ಸುಮಾರು 60 ಕೋಟಿ ರು. ಆದಾಯ ನಷ್ಟವಾಗಿದೆ ಎಂದು ಬೆಂಗಳೂರು ಹೋಟೆಲ್ ಮಾಲೀಕರ ಸಂಘ ಸರಕಾರಕ್ಕೆ ಪತ್ರ ಬರೆದು, ಕಾಮಗಾರಿ ಬೇಗ ಮುಗಿಸಿಕೊಡುವಂತೆ ಮನವಿ ಮಾಡಿದೆ.

ಪಾಲಿಕೆಗೆ ಶಾಪ ಹಾಕಿದ ಸಾರ್ವಜನಿಕರು: ಮುಖ್ಯ ರಸ್ತೆ ಅಗೆದ ಕಾರಣ ಅಡ್ಡ ರಸ್ತೆಗಳಲ್ಲಿರುವ ನಿವಾಸಿಗಳಿಗೂ ಇದರಿಂದ ತೊಂದರೆಯಾಗಿದೆ. ಮಳೆಗಾಲದಲ್ಲಿ ಚರಂಡಿ ನೀರು, ಕೆಸರು, ಬೇಸಿಗೆಯಲ್ಲಿ ಧೂಳಿನಿಂದ ಹೈರಾಣಾಗಿದ್ದಾರೆ. ಈಗ ನಡೆಸುತ್ತಿರುವ ಕೆಲಸ ಮುಗಿದ ಮೇಲೆ ವೈಟ್ ಟಾಪಿಂಗ್ ಕಾಮಗಾರಿ ಆರಂಭಿಸಲಾಗುತ್ತದೆ. ಆದರೆ ಮಂದಾಗತಿ ನೋಡಿದರೆ ವರ್ಷ ಕಳೆದರೂ ಈ ಕೆಲಸ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಪಾಲಿಕೆ ಇನ್ನಾದರೂ ಶೀಘ್ರ ಕಾಮಗಾರಿ ಮುಗಿಸಿ, ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಂಗ ರಂಗೋಲಿ ನಾಟಕ ಪ್ರದರ್ಶನ ಜೂ.9ರವರೆಗೆ

ಬೆಂಗಳೂರು: ನಗರದ ವೈಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಅಕಾಡೆಮಿ ಆಫ್ ಮ್ಯೂಜಿಕ್ ಜೂ.7ರಿಂದ 9ರವರೆಗೆ ರಂಗ ರಂಗೋಲಿ ಕನ್ನಡ ನಾಟಕವನ್ನು ಆಯೋಜಿಸಿದೆ.



ಜೂ.8 ರಂದು ಸಂಜೆ 6.30ಕ್ಕೆ ಡ್ರಾಮಾಟ್ರಿಕ್ಸ್ ತಂಡದವರು ಎನ್.ಸಿ.ಮಹೇಶ್ ನಿರ್ದೇಶನದ 'ಮಾಯಾಬಜಾರ್' ಆಕರ ಗುರುರಾಜುಲು ನಾಯ್ಡು ಅವರ ಹರಿಕಥೆ ಆಧಾರಿತ ನಾಟಕದ ಪ್ರದರ್ಶಿಸಲಿದ್ದಾರೆ. ಜೂ. 9ರಂದು ಹುಲುಗಪ್ಪ ಕಟ್ಟಿಮನಿ ನಿರ್ದೇಶನದಲ್ಲಿ 'ಕಾಲ ಚಕ್ರ' ಎಂಬ ನಾಟಕ ಮೂಡಿಬರಲಿದೆ. ಜಯವಂತ ದಳ್ವಿ ಅವರು ಮರಾಠಿಯಲ್ಲಿ ರಚಿಸಿರುವ ಮೂಲ ನಾಟಕವನ್ನು ಎಚ್.ಕೆ.ಕರ್ಕೇರಾ ಕನ್ನಡಕ್ಕೆ ಅನುವಾದಿಸಿದ್ದು. ಸಾಲಿಯಾನ ಉಮೇಶ್ ನಾರಾಯಣ ಸಹ ನಿರ್ದೇಶನ ಹಾಗೂ ರಾಮಕೃಷ್ಣ ಭಟ್ಟರ ಸಂಚಾಲಕತ್ವದಲ್ಲಿ ರಂಗ ಸಮೂಹ ತಂಡದ ಕಲಾವಿದರು ನಾಟಕ ಪ್ರದರ್ಶನ ನೀಡಲಿದ್ದಾರೆ. ಸಂಜೆ 6 ಗಂಟೆಗೆ ವೇದಿಕೆ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ ಕಪ್ಪಣ್ಣ, ಸಾಹಿತಿ ಜಯಂತ್ ಕಾಯ್ಕಿಣಿ, ಸಪ್ರಕ ಸಂಸ್ಥೆಯ ಜಿ.ಎಸ್. ಹೆಗಡೆ ಭಾಗವಹಿಸಲಿದ್ದಾರೆ. ಕಲಾಸ್ತಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಇಂದು ನಾದ ಸೌರಭ-2024

ಬೆಂಗಳೂರು: ಸರಸ್ವತೀ ಸಂಗೀತ ವಿದ್ಯಾಲಯವು ನಗರದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ (ಜೂ. 8) ಸಂಜೆ 5.30ಕ್ಕೆ 'ನಾದ ಸೌರಭ- 2024' ಕಾರ್ಯಕ್ರಮವನ್ನು ಆಯೋಜಿಸಿದೆ. ನಾಟಕಕಾರ ಬಿ.ಆರ್. ಶಿವರಾಮಯ್ಯಗೆ 'ಗೋವಿಂದ ಲಕ್ಷ್ಮೀ ಪುರಸ್ಕಾರ' ಹಾಗೂ ಹಾರ್ಮೋನಿಯಂ ವಿದ್ವಾಂಸ ಪಂಡಿತ್ ಸುಧಾಂಶು ಕುಲಕರ್ಣಿಗೆ 'ಶ್ಯಾಮಲಾ ಸ್ಮೃತಿ ಸಮ್ಮಾನ್ ಪುರಸ್ಕಾರ' ನೀಡಿ ಗೌರವಿಸಲಾಗುವುದು. ಕರ್ನಾಟಕ ಬ್ಯಾಂಕ್ ನಿವೃತ್ತ ಶಾಖಾ ಪ್ರಬಂಧಕ ರಾಘವೇಂದ್ರ ಹೆಬ್ಬಾರ್ ಐರೋಡಿ ಇತರರು ಭಾಗವಹಿಸಲಿದ್ದಾರೆ. ಪಂಡಿತ್ ಗೋವಿಂದ್ ವಿಠಲ್ ಭಾವೆ ಮತ್ತು ಲಕ್ಷ್ಮೀ ಜಿ. ಭಾವೆ ಹಾಗೂ ಶ್ಯಾಮಲಾ ಜಿ. ಭಾವೆ ಗುರು ಪರಂಪರೆಯ ಸ್ಮರಣೆಯಲ್ಲಿ 'ನಾದಾಂಜಲಿ' ಸಂಗೀತ ಕಾರ್ಯಕ್ರಮ ಜರುಗಲಿದೆ. ಗಾಯಕ ಪಂಡಿತ್ ವಾಗೀಶ್ ಭಟ್, ತಬಲ ವಾದಕ ಪಂಡಿತ್ ಡಾ. ಸತೀಶ್ ಹಂಪಿಹೊಳಿ, ಹಾರ್ಮೋನಿಯಂ ವಾದಕ ಪಂಡಿತ್ ಶಿವಕುಮಾರ್ ಮಹಾಂತ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಸ್ಮೃತಿ ಎಸ್. ಭಟ್ ಅವರಿಂದ ಭಕ್ತಿ ಸಂಗೀತಕ್ಕೆ ಪ್ರಣವ್ ಪೈ ತಬಲ ಸಾಥ್ ನೀಡಲಿದ್ದಾರೆ. ಪಂಡಿತ್ ಸುಧಾಂಶು ಕುಲಕರ್ಣಿ ಹಾಗೂ ಸಾರಂಗ್ ಕುಲಕರ್ಣಿ ಅವರಿಂದ ಹಿಂದೂಸ್ತಾನಿ ಹಾರ್ಮೋನಿಯಂ ದ್ವಂದ್ವ ವಾದನ ನಡೆಯಲಿದ್ದು ಪಂಡಿತ್ ರಾಜೇಂದ್ರ ನಾಕೊಡ್ ತಬಾಲ ಸಾಥ್ ನೀಡಲಿರುವರು ಎಂದು ಪ್ರಕಟಣೆ ತಿಳಿಸಿದೆ.

ನಿಸ್ಸಾರ್ ಅಹ್ಮದ್ ಆಯೋಗದ ಅಧ್ಯಕ್ಷ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಹಿಂಪಡೆದ ಬೆನ್ನಲ್ಲೇ ರಾಜ್ಯ ಸರಕಾರ ಕರ್ನಾಟಕ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರನ್ನಾಗಿ ನಿವೃತ್ತ ಐಜಿಪಿ ಯು.ನಿಸ್ಸಾರ್ ಅಹ್ಮದ್ ಅವರನ್ನು ನಾಮ ನಿರ್ದೇಶನಗೊಳಿಸಿ ಆದೇಶ ಹೊರಡಿಸಿದೆ. ಈ ಬಗ್ಗೆ ಶುಕ್ರವಾರ ಅಧಿಕೃತ ಆದೇಶ ಹೊರಟಿದ್ದು, ಮುಂದಿನ ಆದೇಶದವರೆಗೆ ಅವರು ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬಹುದಾಗಿದೆ. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಕಾಯ್ದೆ 1994ರ ಸೆಕ್ಷನ್ 3(1) ಮತ್ತು 4 (1)ರಡಿಯಲ್ಲಿ ಸರಕಾರ ಈ ಆದೇಶ ಹೊರಡಿಸಿದೆ.

ಪೌರಕಾರ್ಮಿಕರ ಕುಂದು ಕೊರತೆ ಚರ್ಚೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್‌ರಿಂದ ಮಹದೇವಪುರ ವಲಯ ವ್ಯಾಪ್ತಿಯ ಪೌರಕಾರ್ಮಿಕರ ಕಾಲೋನಿಗೆ ಭೇಟಿ ನೀಡಿ ಕುಂದುಕೊರತೆಗಳನ್ನು ಆಲಿಸಿದರು. ಮಹದೇವಪುರ ವಲಯ ಕೆ.ಆರ್.ಪುರ ವಿಭಾಗ ವಿಜ್ಞಾನ ನಗರ ವಾರ್ಡ್ ನಲ್ಲಿ ಬರುವ ಪೌರಕಾರ್ಮಿಕ ಕಾಲೋನಿಗೆ ತೆರಳಿ ಅವರ ಕುಂದು-ಕೊರತೆಗಳು ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಸುದೀರ್ಘವಾಗಿ ಪೌರಕಾರ್ಮಿಕರೊಂದಿಗೆ ಕುಳಿತು ಚರ್ಚಿಸಿದರು. ನಗರದಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಏನೇನು ಸಮಸ್ಯೆಗಳಿವೆ, ವೇತನ, ಇಎಸ್‌ಐ ಹಾಗೂ ಪಿಎಫ್ ಸರಿಯಾಗಿ ಪಾವತಿಯಾಗುತ್ತಿದೆಯೇ ಎಂಬುದರ ಬಗ್ಗೆ ಮಾಹಿತಿ ಪಡೆದುಕೊಂಡು, ಸಮಾಜ ಕಲ್ಯಾಣ ವಿಭಾಗದಡಿ ಪೌರಕಾರ್ಮಿಕರಿಗಾಗಿ ಸಾಕಷ್ಟು ಯೋಜನೆಗಳಿದ್ದು, ಆ ಎಲ್ಲಾ ಯೋಜನೆಗಳು ಪೌರಕಾರ್ಮಿಕರಿಗೆ ಸರಿಯಾಗಿ ತಲುಪುವಂತೆ ಮಾಡಲು ಹಾಗೂ ಸುಮಾರು 1700 ಪೌರ ಕಾರ್ಮಿಕರು ನೇತ ವೇತನದಡಿ ಕಾರ್ಯನಿರ್ವ ಹಿಸುತ್ತಿದ್ದು, ಖಾಯಂ ಮಾಡುವ ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಹದೇವಪುರ ವಲಯದ ಜಂಟಿ ಆಯುಕ್ತ ದಾಕ್ಷಾಯಿಣಿ ಪ್ರತಿಕ್ರಿಯಿಸಿ, ಮಹದೇವಪುರ ವಲಯದ 1700 ನೇರ ವೇತನ ಪೌರಕಾರ್ಮಿಕರ ಅರ್ಜಿಗಳನ್ನು ಪಾಲಿಕೆ ಘನತ್ಯಾಜ್ಯ ವಿಭಾಗಕ್ಕೆ ಸಲ್ಲಿಸಲಾಗಿದೆ. ಕಾಲೋನಿಯಲ್ಲಿ ವಾಸಿಸುವ ಪೌರಕಾರ್ಮಿಕರು ಮನೆಗಳನ್ನು ನಿರ್ಮಾಣ ಮಾಡಿಕೊಡಲು ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಅವರು, ಸಂಬಂಧಪಟ್ಟ ಅಧಿಕಾರಿಗಳ ಜತೆ ಈ ಬರ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

{ಕೆ.ಎಸ್. ಈಶ್ವರಪ್ಪ} ಮಾಜಿ ಸಚಿವ

ಯಡಿಯೂರಪ್ಪ ಅವರೇ ನಿಮಗೆ ನಿಮ್ಮ ಮಕ್ಕಳದ್ದೇ ಚಿಂತೆ ಅಲ್ಲವೇ? ನೀವು ಬೆಳೆದರೇ ಸಾಕು , ಪಕ್ಷ ಹಾಳಾದರೂ ಪರವಾಗಿಲ್ಲ . ನಾನು ಸೋಲುತ್ತೇನೆ ಎಂಬುದು ಮೊದಲೇ ಗೊತ್ತಿತ್ತು. ಮತದಾರರು ಕೂಡ ಈಶ್ವರಪ್ಪ ಗೆಲ್ಲುವುದಿಲ್ಲ ಎಂದು ತಿಳಿದು ಮೋದಿ ಮುಖ ನೋಡಿ ಬಿಜೆಪಿಗೆ ಮತ ಹಾಕಿದ್ದಾರೆ.

ವಾಹನ ಸವಾರರ ಪರದಾಟ | ಏಳು ಜಿಲ್ಲೆಗಳಿಗೆ ಜೂ.10ರವರೆಗೂ ಯೆಲ್ಲೋ ಅಲರ್ಟ್

ನಗರದಲ್ಲಿ ಗಾಳಿ ಸಹಿತ ಮಳೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಹಲವೆಡೆಗಳಲ್ಲಿ ಸಂಜೆಯಾಗುತ್ತಿದ್ದಂತೆಯೇ ಗಾಳಿ ಸಹಿತ ಮಳೆಯಾಗಿದ್ದು,ಹವಾಮಾನ ಇಲಾಖೆಯು ಏಳು ಜಿಲ್ಲೆಗಳಿಗೆ 10ನೇ ತಾರೀಕಿನವರೆಗೂ ಯೆಲ್ಲೂ ಅಲರ್ಟ್ ಘೋಷಿಸಿದೆ.

ಹಲವೆಡೆ ಬಿದ್ದಿರುವ ಮರ,ವಿದ್ಯುತ್ ಕಂಬಗಳ ತೆರವು ಕಾರ್ಯಾಚರಣೆ ನಡೆಯುತ್ತಿರುವ ನಡುವೆಯೂ ಸತತ 3ನೇ ದಿನವೂ ಮಳೆ ಮುಂದುವರಿದಿದ್ದು, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಶುಕ್ರವಾರ ಧಾರಾಕಾರವಾಗಿ ಸುರಿದಿದೆ. ಸಂಜೆ 4.30 ಶುರುವಾದ ಮಳೆ ಎಚ್‌ಎಸ್‌ಆರ್ ಲೇಔಟ್, ಬೊಮ್ಮನಹಳ್ಳಿ, ಉತ್ತರಹಳ್ಳಿ, ಪುಟ್ಟೇನಹಳ್ಳಿ, ನಂದಿನಿ ಲೇಔಟ್, ಜೆ.ಪಿ.ಪಾರ್ಕ್,ಗಂಗಾನಗರ, ಜಕ್ಕೂರು, ವಿಜಯನಗರ, ಹೊರಮಾವು, ರಾಮಮೂರ್ತಿನಗರ ಶೆಟ್ಟಿಹಳ್ಳಿ. ಮಲ್ಲಸಂದ್ರ, ಹೆಬ್ಬಾಳ, ಧಣಿಸಂದ್ರ, ಮಂಗಮ್ಮನಪಾಳ್ಯ, ಹಂಪನಗರ, ಪೀಣ್ಯ ಕೈಗಾರಿಕಾ ಪ್ರದೇಶ, ಜ್ಞಾನಭಾರತಿ, ಬಾಣಸವಾಡಿ, ಜಯನಗರ, ಬಸವನಗುಡಿ, ಇಟ್ಟಮಡು, ವಿದ್ಯಾಪಿಠ, ನಾಯಂಡಹಳ್ಳಿ ,ಆರ್ ಆರ್ ನಗರ, ನಗರದ ಕತ್ರಿಗುಪ್ಪೆ, ನಾಗರಬಾವಿ, ರಿಂಗ್ ರೋಡ್, ಶ್ರೀರಾಮಪುರ, ಮೆಜೆಸ್ಟಿಕ್, ಮಲ್ಲೇಶ್ವರ, ಮಾಗಡಿ ರೋಡ್, ರಾಜಾಜಿನಗರ ಸೇರಿ ನಗರದ ಹಲವೆಡೆ ಅರ್ಧಗಂಟೆ ಕಾಲ ಹೆಚ್ಚು ಸುರಿದಿದೆ.ಭಾರೀ ಮಳೆಯಿಂದ ಸಂಜೆ ಶಾಲಾ ಮಕ್ಕಳು, ಕಚೇರಿಗಳಲ್ಲಿ ಕೆಲಸ ಮಾಡುವವರು ಮನೆಗೆ ಹೋಗುವವರು ಸಂಚಾರ ದಟ್ಟಣೆಯಿಂದಾಗಿ ಪರದಾಡುವಂತಾಗಿದೆ.

ಮರ, ಕೊಂಬೆಗಳ ಬೀಳುವ ಆತಂಕದಲ್ಲೇ ಪಾದಚಾರಿಗಳು, ಸವಾರರು ಗಾಬರಿಯಿಂದ ಮನೆಗೆ ತೆರಳುತ್ತಿರುವ ದೃಶ್ಯ ಕಂಡುಬಂತು. ಕೆಲವೆಡೆ ಮ್ಯಾನ್ ಹೋಲ್ ಉಕ್ಕಿ ಹರಿದ ಪರಿಣಾಮ ರಸ್ತೆಗಳ ಮೇಲೆ ಕೊಳಚೆ ನೀರು ಹರಿಯಿತು. ಅಂಡರ್‌ಪಾಸ್, ಪ್ರಮುಖ ರಸ್ತೆಗಳಲ್ಲಿ ನೀರು ನಿಂತಿದ್ದ ಪರಿಣಾಮ ವಾಹನ ಸವಾರರು ಪರದಾಡಿದರು. ಕೆಲವೆಡೆ ವಾಹನ ದಟ್ಟಣೆ ಹೆಚ್ಚಾಗಿತ್ತು ಕೆಲ ಬಡಾವಣೆಗಳಲ್ಲಿ ವಿದ್ಯುತ್ ಪೂರೈಕೆ ವ್ಯತ್ಯಯವಾಗಿತ್ತು. ಮೂರು ದಿನಗಳಿಂದ ನಗರದಲ್ಲಿ ಸುರಿದ ಭಾರಿ ಮಳೆಗೆ 400ಕ್ಕೂ ಅಧಿಕ ಮರಗಳು ಬಿದ್ದಿದ್ದು, ಅವುಗಳ ತೆರವು ಕಾರ್ಯಾಚರಣೆ ನಡೆಯುತ್ತಿದ್ದರೂ ಮತ್ತೆ ಮಳೆಗೆ ಇನ್ನಷ್ಟು ಮರಗಳು ಬಿದ್ದಿವೆ. ಆದರೆ, ಕೆಲ ಬಡಾವಣೆಗಳಲ್ಲಿ ರಸ್ತೆ ಬದಿಯಲ್ಲೇ ಬಿದ್ದಿರುವ ಕೊಂಬೆಗಳು ತೆರವು ಮಾಡಿಲ್ಲ.

ಎಲ್ಲೆಲ್ಲಿ ಎಷ್ಟು ಮಳೆ?

ಎಚ್ ಗೊಲ್ಲಹಳ್ಳಿ	15ಮಿ.ಮೀ
ಕೋರಮಂಗಲ	14ಮಿ.ಮೀ
ಹಂಪೆನಗರ	14ಮಿ.ಮೀ
ಚಾಮರಾಜಪೇಟೆ	12ಮಿ.ಮೀ
ದೊರೆಸಾನಿಪಾಳ್ಯ	11ಮೀ ಮೀ
ಹೆಮ್ಮಿಗೆಪುರ	11ಮೀ ಮೀ
ಸಂಪಂಗಿರಾಮನಗರ	10ಮೀಮೀ

ಮುಂದಿನ 24 ಗಂಟೆ ಮೋಡ ವಾತಾವರಣ

ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮುಂದಿನ 24 ಗಂಟೆಗಳ ಕಾಲ ಸಾಮಾನ್ಯವಾಗಿ ಮೋಡ ಕವಿದ ಆಕಾಶ ಇರಲಿದೆ. ಹಗುರದಿಂದ ಸಾಧಾರಣ ಮಳೆಯಾಗುವ ಸಂಭವವಿದೆ. ಮೇಲ್ಮೈ ಮಾರುತಗಳು ಕೆಲವೊಮ್ಮೆ ಬಲವಾಗಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 30 ಡಿಗ್ರಿ ಮತ್ತು 21 ಡಿಗ್ರಿ ಇರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಏಳು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಣೆ

ಬೆಂಗಳೂರು: ಮುಂಗಾರು ಮಾರುತಗಳು ಇಡೀ ರಾಜ್ಯವನ್ನು ಅವರಿಸಿಕೊಂಡಿದೆ. ಈ ಹಿನ್ನಲೆ ಶುಕ್ರವಾರ ಮತ್ತು ಶನಿವಾರ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕರಾವಳಿಯ ಜಿಲ್ಲೆಗಳಾದ ಉಡುಪಿ, ಉತ್ತರ ಕನ್ನಡ. ದಕ್ಷಿಣ ಒಳನಾಡಿನ ಬಾಗಲಕೋಟ, ಬೆಳಗಾವಿ, ಧಾರವಾಡ, ಹಾವೇರಿ, ವಿಜಯಪುರ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಇನ್ನು ದಕ್ಷಿಣ ಕನ್ನಡ, ಗದಗ, ಕಲಬುರಗಿ, ರಾಯಚೂರು, ಯಾದಗಿರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ, ತುಮಕೂರು ಜಿಲ್ಲೆಗಳಿಗೆ ಮುಂದಿನ 24 ಗಂಟೆಗಳ ಕಾಲಕ್ಕೆ ಯೆಲ್ಲೋ ಅಲರ್ಟ್ ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

ಶುಕ್ರವಾರ ಮತ್ತು ಶನಿವಾರ ಬೆಳಗಾವಿ, ಬಾಗಲಕೋಟೆ, ಧಾರವಾಡ, ಹಾವೇರಿ, ವಿಜಯಪುರ ಜಿಲ್ಲೆಗಳಲ್ಲಿ 40 ರಿಂದ 50 ಕಿಲೋಮೀಟರ್ ಪ್ರತಿ ಗಂಟೆಯ ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಚದುರಿದಂತೆ ಭಾರೀ ಮಳೆಯಾಗಲಿದೆ. ದಕ್ಷಿಣ ಕನ್ನಡ, ಗದಗ, ಕಲಬುರ್ಗಿ, ರಾಯಚೂರು, ಯಾದಗಿರಿ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಗಾಳಿ ಮಳೆಯಾಗಲಿದೆ. ಬೀದರ್, ಕೊಪ್ಪಳ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ವಿಜಯನಗರ ಜಿಲ್ಲೆಗಳಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದಿದೆ. ಮುಂದಿನ 48 ಗಂಟೆಗಳಲ್ಲಿ ಕರ್ನಾಟಕದ ಒಳನಾಡಿನಲ್ಲಿ ಗರಿಷ್ಠ ಮತ್ತು ಕನಿಷ್ಠ ತಾಪಮಾನವು 2 ರಿಂದ 3 ಡಿಗ್ರಿ ಸೆಲ್ಸಿಯಸ್ ಕ್ರಮೇಣ ಕಡಿಮೆಯಾಗುವ ಸಾಧ್ಯತೆಯಿದೆ.

ಮರಗಳ ತೆರವಿಗೆ ಕ್ರೇನ್, ಸಿಲ್ಟ್ ಟ್ರ್ಯಾಕ್ಟರ್ ವ್ಯವಸ್ಥೆ

ಬೆಂಗಳೂರು: ಪಾಲಿಕೆ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಬೃಹತ್ ಮರಗಳು ಧರೆಗುರುಳಿದ್ದು, ಹೆಚ್ಚುವರಿಯಾಗಿ ಕ್ರೇನ್‌ಗಳನ್ನು ಹಾಗೂ ಸಿಲ್ಟ್ ಮತ್ತು ಟ್ರ್ಯಾಕ್ಟರ್‌ಗಳನ್ನು ಅಗತ್ಯ ಸಿಬ್ಬಂದಿ/ಅಭಿಯಂತರರು/ ಅರಣ್ಯ ಸಿಬ್ಬಂದಿ ಬಳಸಿಕೊಂಡು ಮರಗಳನ್ನು ತೆರವುಗೊಳಿಸಲಾಗುತ್ತಿದೆ.

ಪಾಲಿಕೆ ಅರಣ್ಯ ವಿಭಾಗದಿಂದ 39 ಮರ ತೆರವುಗೊಳಿಸುವ ತಂಡಗಳು ನಿರಂತರವಾಗಿ ಕಾರ್ಯನಿರ್ವಹಿಸಿ ಧರೆಗುರುಳಿದ ಮರ, ರೆಂಬೆ/ಕೊಂಬೆಗಳನ್ನು ತೆರವುಗೊಳಿಸಲಾಗುತ್ತಿದೆ. ಇದರ ಜತೆಗೆ 4 ದ್ವಿಚಕ್ರ ತಂಡಗಳಿಂದಲೂ ಬಿದ್ದಿರುವ ಮರಗಳ ತೆರವು ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಅರಣ್ಯ ವಿಭಾಗದ ಮರ ತೆರವು ತಂಡಗಳ ಜತೆಗೆ ವಲಯವಾರು ಹೆಚ್ಚುವರಿ ಮರ ತೆರವು ತಂಡಗಳು, ವಾಹನಗಳನ್ನು ನಿಯೋಜಿಸಿಕೊಂಡು ತೆರವು ಮಾಡಲಾಗುತ್ತಿದೆ. ದೊಡ್ಡ ದೊಡ್ಡ ಮರಗಳನ್ನು ತೆರವುಗೊಳಿಸಲು 11 ಕ್ರೇನ್ ಗಳು, 2 ಜೆಸಿಬಿ ಹಾಗೂ ಮರ ಕಟಾವು ಯಂತ್ರೋಪಕರಣಗಳನ್ನು ಬಳಿಸಿಕೊಳ್ಳಲಾಗಿದೆ. ವಾರ್ಡ್‌ಗಳಲ್ಲಿರುವ ಟ್ರ್ಯಾಕ್ಟರ್‌ಗಳಿಂದ ಕಟಾವು ಮಾಡಿರುವ ಮರದ ದಿಮ್ಮಿ, ಕೊಂಬೆಗಳನ್ನು ಡಂಪಿಂಗ್ ಯಾರ್ಡ್‌ಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ.

ಮರದ ತ್ಯಾಜ್ಯ ಮರದ ದಿಂಬೆ,ಕೊಂಬೆ ತೆರವಿಗಾಗಿ ಈಗಾಗಲೇ ವಾರ್ಡ್ ಗಳಲ್ಲಿರುವ ಶಿಲ್ಟ್ ಟ್ರ್ಯಾಕ್ಟರ್ ಬಳಕೆ: ಧರೆಗುರುಳಿರುವ ಮರಗಳ ಸ್ಥಳದಲ್ಲಿ ಬಿದ್ದಿರುವ ತ್ಯಾಜ್ಯವನ್ನು ತೆರವುಗೊಳಿಸುವ ಸಲುವಾಗಿ ಆಯಾ ವಲಯಗಳಲ್ಲಿ ಕಾರ್ಯನಿರ್ವಹಿಸುವ ಶಿಲ್ಟ್ ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು ರಸ್ತೆ ಬದಿ, ಪಾದಚಾರಿ ಮಾರ್ಗದಲ್ಲಿರುವ ತ್ಯಾಜ್ಯವನ್ನು ತೆರುವುಗೊಳಿಸಲಾಗುತ್ತಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಬಿದ್ದ ಮರ, ಕೊಂಬೆಗಳ ಮಾಹಿತಿ

ಉಪವಿಭಾಗ	ವಲಯ	ಬಿದ್ದ ಮರಗಳು	ಬಿದ್ದ ರೆಂಬೆಗಳು	ಅವಶೇಷಗಳು
ದಕ್ಷಿಣ	ದಕ್ಷಿಣ	136	415	551
ದಕ್ಷಿಣ	ಆರ್‌ಆರ್‌ನಗರ	27	67	94
ದಕ್ಷಿಣ	ಬೊಮ್ಮನಹಳ್ಳಿ	32	43	75
ದಕ್ಷಿಣ	ಪಶ್ಚಿಮ	132	324	456
ಉತ್ತರ	ಮಹದೇವಪುರ	19	36	55
ಉತ್ತರ	ಯಲಹಂಕ	29	83	112
ಉತ್ತರ	ಪೂರ್ವ	25	113	138
ಉತ್ತರ	ದಾಸರಹಳ್ಳಿ	47	45	92
ಒಟ್ಟು	447	1126	1573	

ತಾಂತ್ರಿಕ ದೋಷ; ರಿಯಾಯಿತಿ ಬಸ್‌ಪಾಸ್ ಪಡೆಯಲು ಪರದಾಟ

ಬೆಂಗಳೂರು: ರಾಜ್ಯ ಸರಕಾರದ ವತಿಯಿಂದ ವಿದ್ಯಾರ್ಥಿಗಳಿಗೆ ನೀಡಲಾಗುವ ರಿಯಾಯಿತಿ ಬಸ್ ಪಾಸ್‌ಗಾಗಿ ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

2024-25ನೇ ಸಾಲಿನಲ್ಲಿ ಬಿಎಂಟಿಸಿ ಬಸ್‌ಪಾಸಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಹಲವು ಸಮಸ್ಯೆ ಎದುರಿಸುತ್ತಿದ್ದು, ಕೆಲವು ವಿದ್ಯಾಸಂಸ್ಥೆಗಳು ಅನುಮೋದನೆ ನೀಡಿದರೂ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಅಗತ್ಯವಾದ ಒಟಿಪಿ ದೊರೆಯುತ್ತಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

2023-24ಕ್ಕೆ ನೀಡಲಾದ ಬಸ್ ಪಾಸ್ ಮೇ 31 ರಂದು ಮುಕ್ತಾಯಗೊಂಡಿದ್ದು, ಕಳೆದ ವರ್ಷ, ನಾವು ಬಸ್ ಪಾಸ್ ಪಡೆಯುವವರೆಗೆ ಕಾಲೇಜು ಪ್ರವೇಶ ರಶೀದಿ ತೋರಿಸುವ ಮೂಲಕ ಪ್ರಯಾಣಿಸಲು ಅವಕಾಶ ನೀಡಲಾಗಿತ್ತು. ಆದರೆ, ಈ ವರ್ಷ ಆ ಆಯ್ಕೆಯನ್ನು ನೀಡದೆ ಬಸ್ ಪಾಸ್ ಪಡೆಯಬೇಕು ಅಥವಾ ಟಿಕೆಟ್ ಖರೀದಿಸಬೇಕು ಎಂದು ಹೇಳುತ್ತಿದ್ದಾರೆ ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಅರ್ಜಿ ಭರ್ತಿ ಮಾಡಿ ಕಾಲೇಜು ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದ ಬಳಿಕವೂ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲು ಪ್ರಯತ್ನಿಸಿದ್ದರೂ ಸಾಧ್ಯವಾಗುತ್ತಿಲ್ಲ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಒಟಿಪಿ ಬೇಕಾಗಿದ್ದು, ಆದರೆ ಒಟಿಪಿ ದೊರೆಯುತ್ತಿಲ್ಲ. ಆನ್‌ಲೈನ್ ಮೂಲಕ ಹಲವಾರು ಬಾರಿ ಪ್ರಯತ್ನಿಸಲಾಗಿದೆ. ಜತೆಗೆ ಬೆಂಗಳೂರು ಒನ್ ಕೇಂದ್ರಕ್ಕೂ ಭೇಟಿ ನೀಡಲಾಗಿದೆ. ಆದರೆ ಬಿಎಂಟಿಸಿಯಲ್ಲಿ ಸರ್ವರ್ ಸಮಸ್ಯೆಯಿರುವುದರಿಂದ ಒಟಿಪಿ ಬರುತ್ತಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಬಸ್ ಪಾಸ್‌ಇಲ್ಲದೆ ಪ್ರತಿದಿನ ಹಣ ನೀಡಿ ಪ್ರಯಾಣಿಸಬೇಕಾಗಿದೆ ಎಂದು ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಾಂತ್ರಿಕ ಸಮಸ್ಯೆ

ಬಿಎಂಟಿಸಿ ಹಿರಿಯ ಅಧಿಕಾರಿಯೊಬ್ಬರು ಈ ಕುರಿತು ಮಾತನಾಡಿ, ಬುಧವಾರ ಅರ್ಜಿ ಸ್ವೀಕರಿಸುವಲ್ಲಿ ಸಮಸ್ಯೆಗಳು ಎದುರಾಗಿತ್ತು. ತಾಂತ್ರಿಕ ದೋಷಗಳು ಎದುರಾಗಿತ್ತು. ಈ ಬಗ್ಗೆ ವಿದ್ಯಾರ್ಥಿಗಳಿಂದಲೂ ದೂರುಗಳು ಬಂದಿವೆ. ಆದರೂ ಈ ಸಮಸ್ಯೆ ಬಿಎಂಟಿಸಿಯಿಂದಾಗಿಲ್ಲ. ಸೇವಾ ಸಿಂಧು ಪೋರ್ಟಲ್‌ನಿಂದಾಗಿದ್ದು, ಈ ಸಮಸ್ಯೆಯನ್ನು ಪರಿಹರಿಸಲಾಗಿದೆ. ಇದೀಗ ವಿದ್ಯಾರ್ಥಿಗಳು ಎಂದಿನಂತೆ ಪಾಸ್‌ಗಳಿಗಾಗಿ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

9 ಪ್ರಮುಖ ಅಂಶ ಆಧಾರವಾಗಿಟ್ಟುಕೊಂಡು ಪಠ್ಯಕ್ರಮ ರಚನೆ

ಎಸ್‌ಇಪಿ ಪಠ್ಯಕ್ರಮ ರಚನೆ ಕಾರ್ಯಾಗಾರ ಯಶಸ್ವಿ

ಬೆಂಗಳೂರು: ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಹಾಗೂ ರಾಜ್ಯ ಸರಕಾರದ ರಾಜ್ಯ ಶಿಕ್ಷಣ ನೀತಿ ಆಯೋಗ ಸಹಯೋಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಎಚ್.ಎನ್ ಸಭಾಂಗಣದಲ್ಲಿ ಪ್ರಾದೇಶಿಕ ಮಟ್ಟದ ಪಠ್ಯ ಕ್ರಮ ರಚನೆ ಕುರಿತು ಕಾರ್ಯಾಗಾರ ನಡೆಸಲಾಯಿತು.

ಕುಲಪತಿ ಡಾ.ಜಯಕರ ಎಸ್.ಎಂ ಮಾತನಾಡಿ, ಕರ್ನಾಟಕ ರಾಜ್ಯ ಶಿಕ್ಷಣ ನೀತಿ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸ್ತುತ ಮತ್ತು ದೀರ್ಘಾವಧಿಯ ಸವಾಲುಗಳನ್ನು ಪರಿಹರಿಸುವ ಉದ್ದೇಶಗಳನ್ನು ಹೊಂದಿದೆ. ಥೋರಟ್ ನೇತೃತ್ವದಲ್ಲಿ ರಚನೆಯಾಗಿರುವ ಸಮಿತಿಯು 9 ಪ್ರಮುಖ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪಠ್ಯಕ್ರಮ ರಚನೆಗೆ ಮುಂದಾಗಿದೆ. ಸಮಿತಿಯೂ ರಾಜ್ಯಾದ್ಯಂತ ಶಿಕ್ಷಣ ತಜ್ಞರು, ವಿಷಯ ತಜ್ಞರು, ನಿವೃತ್ತ ಕುಲಪತಿಗಳು, ವಿದ್ಯಾರ್ಥಿ ಸಂಘಟನೆ, ಸಮಾಜದ ಪ್ರಮುಖರ ಅಭಿಪ್ರಾಯಗಳನ್ನು ಸಂಗ್ರಹಿಸಿ ಶಿಕ್ಷಣ ನೀತಿ ರೂಪಿಸುತ್ತಿದೆ. ರಾಜ್ಯದಲ್ಲಿ ಸಮಾನ ಮತ್ತು ಸಂವಿಧಾನ ಆಧರಿತ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಉದ್ದೇಶವನ್ನು ಎಸ್‌ಇಪಿ ಹೊಂದಿದೆ. ಎಸ್‌ಇಪಿ ಪಠ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅಭಿವೃದ್ಧಿ ಜತೆಗೆ ಸಮಾಜದೆಡೆಗೆ ವಿಶಾಲ ಮನೋಭಾವ, ಸಮಾನ ದೃಷ್ಟಿಕೋನ ಕೂಡ ಬೆಳೆಯಲಿದೆ. ಎಸ್‌ಇಪಿ ವಿದ್ಯಾರ್ಥಿಗಳ ಕೌಶಲ ಹೆಚ್ಚಿಸುವ ಗುರಿ ಹೊಂದಿರುವುದರಿಂದ ವಿದ್ಯಾರ್ಥಿ ಗಳಿಗೆ ಉದ್ಯೋಗವಕಾಶಗಳು ಹೆಚ್ಚಾಗಲಿದೆ. ಎಸ್‌ಇಪಿ ಕಾರ್ಯಾಗಾರದಲ್ಲಿ ಮತ್ತಷ್ಟು ಸಮೃದ್ಧ ಚರ್ಚೆಗೆ ಅವಕಾಶವಾಗಲಿ ಎಂದು ತಿಳಿಸಿದರು. ರಾಜ್ಯ ಶಿಕ್ಷಣ ನೀತಿ ಆಯೋಗ ಸದಸ್ಯ ಕಾರ್ಯದರ್ಶಿ ಡಾ. ಭಾಗ್ಯವನ್ ಮಾತನಾಡಿ, ರಾಜ್ಯ ಶಿಕ್ಷಣ ನೀತಿ ಆಯೋಗವು ಈ ಹಿಂದಿನ ಎಲ್ಲಾ ಆಯೋಗಗಳ ಶಿಫಾರಸ್ಸುಗಳನ್ನು ಒಳಗೊಂಡಂತೆ ರಾಜ್ಯದ ಸಾಂಸ್ಕೃತಿಕ, ಭೌಗೋಳಿಕ,ಐತಿಹಾಸಿಕ ಅಂಶಗಳನ್ನು ಒಳಗೊಂಡ ನಮ್ಮದೇ ಆದ ಶಿಕ್ಷಣ ನೀತಿ ರಚಿಸುವ ಉದ್ದೇಶ ಹೊಂದಿದೆ. ಈ ಶಿಕ್ಷಣ ಆಯೋಗ ಯಾರ ಪರವೂ ಅಲ್ಲ, ವಿರುದ್ಧವೂ ಅಲ್ಲ,ವೈಜ್ಞಾನಿಕ ತಳಹದಿಯ ಮೇಲೆ ನುರಿತ ಶಿಕ್ಷಣ ತಜ್ಞರು, ಪರಿಣಿತರ ಸಂಪರ್ಕಿಸಿ ಪಠ್ಯಕ್ರಮ ರಚನೆಗೆ ಮುಂದಾಗಿದೆ. ಕಾರ್ಯಾಗಾರದಲ್ಲಿ ಭಾಗಿಯಾಗಿರುವವರು ಮುಕ್ತವಾಗಿ ತಮ್ಮ ಅನಿಸಿಕೆ ಸಲಹೆಯನ್ನು ನೀಡಬಹುದಾಗಿದೆ,ಎಲ್ಲಾ ಅಭಿಪ್ರಾಯಗಳನ್ನು ಆಧಾರಿಸಿ ಪಠ್ಯಕ್ರಮ ಸಿದ್ದಪಡಿಸಲಾಗುವುದು ಎಂದು ಭರವಸೆ ನೀಡಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎಚ್.ಎನ್ ಸಭಾಂಗಣದಲ್ಲಿ ಪ್ರಾದೇಶಿಕ ಮಟ್ಟದ ಪಠ್ಯ ಕ್ರಮ ರಚನೆ ಕುರಿತು ಕಾರ್ಯಾಗಾರವನ್ನು ಕುಲಪತಿ ಡಾ.ಜಯಕರ ಎಸ್.ಎಂ, ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷ ಸುಖದೇವ್ ಥೋರಟ್ ಉದ್ಘಾಟಿಸಿದರು.

ಹಳೇ ದಾಖಲೆ ನೀಡಿ ಅಕ್ರಮ ಬೋರ್‌ವೆಲ್?

ಬೆಂಗಳೂರು: ಕೆ.ಆರ್.ಪುರದಲ್ಲಿ ಆಂಧ್ರಮೂಲದ ಬಿಲ್ಡರ್ ಜಲ ಮಂಡಳಿ, ಅಂತರ್ಜಲ ಪ್ರಾಧಿಕಾರಕ್ಕೆ ನಕಲಿ ದಾಖಲೆ ನೀಡಿ ವಂಚಿಸಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿದೆ.

ರಾಜ್ಯ ಅಂತರ್ಜಲ ಪ್ರಾಧಿಕಾರ ಕೆ.ಆರ್.ಪುರ ಸಮೀಪದ ಸೀಗೆಹಳ್ಳಿಯ ಸಾಯಿ ಸೆರೆನಿಟಿ ಲೇಔಟ್‌ನಲ್ಲಿ ಸರ್ವೇ ನಂಬರ್ 4/2ನಲ್ಲಿ ಬೋರ್‌ವೆಲ್ ಕೊರೆಸಲು ಅನುಮತಿ ನೀಡುವಂತೆ ಜಲಮಂಡಳಿಯಿಂದ ಶಿಫಾರಸು ಪತ್ರ ಸ್ವೀಕರಿಸಿದೆ. ಜತೆಗೆ ಕೆಲ ವಾರಗಳ ಹಿಂದೆ ಇದೇ ಬಡಾವಣೆಯಲ್ಲಿ ಅಕ್ರಮವಾಗಿ ಮರ ಕಡಿಯುತ್ತಿದ್ದವರ ಹೆಸರಿನಲ್ಲಿ ಆಸ್ತಿ ನೋಂದಣಿಯಾಗಿದೆ ಎನ್ನುವ ಮಾಹಿತಿಯೂ ತಿಳಿದುಬಂದಿದೆ. ಫೆಬ್ರವರಿಯಲ್ಲಿ ಬೋರ್‌ವೆಲ್ ಕೊರೆಯಲು ಅನುಮತಿ ಪಡೆಯಲು ಬಿಲ್ಡರ್ ಗೊಲ್ಲ ವೇಣು ಗೋಪಾಲ್ ಅವರ ಆಸ್ತಿಯ ಬಿಬಿಎಂಪಿಯ ತೆರಿಗೆ ರಶೀದಿ ಮತ್ತು ಮಾರಾಟದ ದಾಖಲೆಗಳನ್ನುಎಚ್‌ಆರ್‌ಬಿಆರ್ ಲೇಔಟ್ (ಬೆಂಗಳೂರು ಪೂರ್ವ-2)ನಲ್ಲಿರುವ ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗೆ ಸಲ್ಲಿಸಿದ್ದಾರೆ ಎಂದು ದಾಖಲೆಗಳು ಬಹಿರಂಗಪಡಿಸಿವೆ. ಗೊಲ್ಲ ವೇಣು ಗೋಪಾಲ್ ಜುಲೈ 2023 ರಲ್ಲಿ ಆಸ್ತಿಯನ್ನು ಅದರ ಪಾಲುದಾರರಾದ ಅನ್ವಿತಾ ಕನ್‌ಸ್ಟ್ರಕ್ಷನ್‌ಗೆ ಮಾರಾಟ ಮಾಡಿದ್ದಾರೆ. ಸುಮಾರು 20 ಫ್ಲಾಟ್‌ಗಳು 6.5 ಗುಂಟಾ ಅಳತೆಯ ಭೂಮಿಯಲ್ಲಿ ಬರುತ್ತವೆ.ಅನುಮತಿ ಪಡೆಯಲು ಜಲಮಂಡಳಿಗೆ ಬಿಲ್ಡರ್ ಹಳೆ ದಾಖಲೆಯನ್ನು ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಪರಿಷತ್ ಚುನಾವಣೆ: ರಾಮೋಜಿಗೌಡ ವಿಜೇತ

ಬೆಂಗಳೂರು: ಬೆಂಗಳೂರು ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಅವರು 36,729 ಪ್ರಥಮ ಪ್ರಾಶಸ್ತ್ಯ ಮತ ಪಡೆಯುವ ಮೂಲಕ ವಿಜೇತರಾಗಿದ್ದಾರೆ.

ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಒಟ್ಟಾರೆ 80,080 ಮತಗಳು ಚಲಾವಣೆಯಾಗಿದ್ದವು. ಅದರಲ್ಲಿ 8482 ಮತಗಳು ತಿರಸ್ಕೃತ ಮತಗಳಾಗಿದ್ದು, 71,598 ಅರ್ಹ ಮತಗಳಿದ್ದವು. ಈ ಪೈಕಿ ಇದರ ಅರ್ಧದಷ್ಟು ಅಂದರೆ 35,799 ಪ್ರಥಮ ಪ್ರಾಶಸ್ತ್ಯದಮತ ಪಡೆಯಬೇಕಿತ್ತು. ರಾಮೋಜಿಗೌಡರು 36,729 ಪ್ರಥಮ ಪ್ರಾಶಸ್ತ್ಯ ಮತ ಪಡೆದ ಕಾರಣ ದ್ವಿತೀಯ ಪ್ರಾಶಸ್ತ್ಯ ಮತ ಎಣಿಕೆ ನಡೆಸಲಿಲ್ಲ. ಹೀಗಾಗಿ ಪ್ರಥಮ ಪ್ರಾಶಸ್ತ್ಯ ಮತಗಳಲ್ಲಿಯೇ ರಾಮೋಜಿಗೌಡ ಅವರು ವಿಜೇತರಾದರು. ಪದವೀಧರ, ಸುಶಿಕ್ಷಿತರ ಕ್ಷೇತ್ರದಲ್ಲಿಯೇ 8482 ಮತಗಳು ತಿರಸ್ಕೃತಗೊಂಡಿದ್ದವು. ಈ ತಿರಸ್ಕೃತಗೊಂಡ ಮತಗಳಲ್ಲಿ 7000 ಕ್ಕೂ ಅಧಿಕ ಮತಗಳು ರಾಮೋಜಿಗೌಡರ ಪರವಾಗಿ ಇತ್ತು.

ವಿಧಾನಪರಿಷತ್ ಸದಸ್ಯ ರಾಮೋಜಿಗೌಡ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪುಷ್ಪಗುಚ್ಛ ನೀಡಿ ಧನ್ಯವಾದ ಸಲ್ಲಿಸಿದರು.

ಬೆಂಗಳೂರು ಪದವೀಧರ ಕ್ಷೇತ್ರದ ನೂತನ ವಿಧಾನಪರಿಷತ್ ಸದಸ್ಯರಾಗಿ ಚುನಾಯಿತರಾದ ರಾಮೋಜಿಗೌಡ ಅವರು ಶುಕ್ರವಾರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿಪುಷ್ಪಗುಚ್ಛ ನೀಡಿ ಧನ್ಯವಾದ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಮೂರು ದಿನ ಕರಗ ಉತ್ಸವ 10 ರಿಂದ

ಬೆಂಗಳೂರು: ಮಲ್ಲೇಶ್ವರ ಕೋದಂಡ ರಾಮಪುರದಲ್ಲಿ ಗಂಗಮ್ಮ ದೇವಿಯ ಜಾತ್ರೆ, ಹಸಿ ಕರಗದ ಮಹೋತ್ಸವ ಸಮಾರಂಭ ಇದೇ 10 ರಿಂದ ಮೂರು ದಿನ ಜರುಗಲಿದೆ.

ಸುದ್ದಿಗೋಷ್ಠಿಯಲ್ಲಿ ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂರವರು ಮಾತನಾಡಿ, ಗಂಗಮ್ಮ ದೇವಿಯ ಜಾತ್ರೆ ಮಹೋತ್ಸವ ಮತ್ತು ಹಸೀ ಕರಗ ಮಹೋತ್ಸವ ಕಾರ್ಯಕ್ರಮವನ್ನು ಜೂನ್ 10 ರಿಂದ 12 ರವರೆಗೆ ನಡೆಯಲಿದೆ. ಜೂ.11 ರಂದು ಬೆಳಗ್ಗೆ 6ಗಂಟೆಗೆ ಗಂಗಮ್ಮ ದೇವಿಗೆ ಮಾಂಗಲ್ಯ ಸೂತ್ರಧಾರಣೆ ಮತ್ತು ಮಹಾಮಂಗಳಾರತಿ, ಮಧ್ಯಾಹ್ನ 12ಗಂಟೆ ಕುಂಭನೈವೇದ್ಯ ಹಾಗೂ ಮಹಾಮಂಗಳಾರತಿ ಸಂಜೆ 7ಗಂಟೆಗೆ ಹಸೀ ಹೂವಿನ ಕರಗ ದೇವಸ್ಥಾನದಿಂದ ಹೊರಟು ಕೋದಂಡರಾಮಪುರ, ವೈಯಾಲಿಕಾವಲ್, ಮಲ್ಲೇಶ್ವರಂ ರಸ್ತೆಗಳ ಮೂಲಕ ಬೆಳಗಿನ ಜಾವ 2ಗಂಟೆಗೆ ದೇವಸ್ಥಾನವನ್ನು ತಲುಪಲಿದೆ ಎಂದರು. ಜೂ.12 ರಂದು ಬೆಳಗ್ಗೆ 9-30ಕ್ಕೆ ಸುಮಂಗಲಿ ಪೂಜೆ ಮಧ್ಯಾಹ್ನ 12ಗಂಟೆಗೆ ಅನ್ನಸಂತರ್ಪಣೆಯನ್ನು ಕೋದಂಡರಾಮಪುರ ಪ್ರೌಢ ಶಾಲೆಯ ಆಟದ ಮೈದಾನದಲ್ಲಿ ಏರ್ಪಡಿಸಲಾಗಿದೆ. ಸಂಜೆ 5-30ಕ್ಕೆ ದೇವಿಯ ರಥೋತ್ಸವ ಕೋದಂಡರಾಮಪುರ, ಮಲ್ಲೇಶ್ವರಂ, ವೈಯ್ಯಾಳಿಕಾವಲ್ ಮತ್ತು ಗುಟ್ಟಹಳ್ಳಿ ರಸ್ತೆಗಳ ಮುಖಾಂತರ ಬೆಳಗ್ಗೆ 4ಗಂಟೆಗೆ ದೇವಸ್ಥಾನ ತಲುಪುವುದು ಎಂದು ಮಾಹಿತಿ ನೀಡಿದರು.

ಚಂದನ್-ನಿವೇದಿತಾ ದಾಂಪತ್ಯದಲ್ಲಿ ವಿಚ್ಛೇದನ

ಬೆಂಗಳೂರು: ರ‍್ಯಾಪರ್ ಚಂದನ್ ಶೆಟ್ಟಿ ಹಾಗೂ ನಿವೇದಿತಾ ಗೌಡ ದಾಂಪತ್ಯದಲ್ಲಿ ಬಿರುಕು ಮೂಡಿದೆ ಎಂಬ ಬಗ್ಗೆ ಮಾತು ಕೇಳಿ ಬರುತ್ತಿದೆ. ಚಂದನ್ ಹಾಗೂ ನಿವೇದಿತಾ ಬಿಗ್‌ಬಾಸ್ ಸೀಸನ್ 5ರಲ್ಲಿ ಸ್ಪರ್ಧಿಗಳಾಗಿ

ಪಾಲ್ಗೊಂಡಿದ್ದರು. ಅಲ್ಲಿಯೇ ಈ ಇಬ್ಬರು ಸ್ನೇಹಿತರಾಗಿದ್ದರು, ಆ ಸ್ನೇಹ ಬಳಿಕ ಪ್ರೇಮಕ್ಕೆ ತಿರುಗಿತ್ತು. ಹಾಗಾಗಿ ಇಬ್ಬರು ಕುಟುಂಬಸ್ಥರ ಸಮ್ಮತಿ ಪಡೆದು ಬಂಧು ಬಾಂಧವರ ಸಮ್ಮುಖದಲ್ಲಿ ದಾಂಪತ್ಯಕ್ಕೆ ಕಾಲಿಟ್ಟಿದ್ದರು. ಚಂದನ್ ಶೆಟ್ಟಿ ಸಿನಿಮಾಗಳಿಗೆ ಸಂಗೀತ ಸಂಯೋಜಿಸುವ ಜತೆಗೆ ಹಲವು ಚಿತ್ರದ ಹಾಡುಗಳಿಗೆ ದನಿಯಾಗಿದ್ದರು. ಜತೆಗೆ ಸೂತ್ರದಾರಿ ಸೇರಿದಂತೆ ಕೆಲವು ಚಿತ್ರಗಳಲ್ಲಿ ನಾಯಕನಾಗಿ ನಟಿಸಿದ್ದರು. ನಿವೇದಿತಾ ಗಿಚ್ಚಿ ಗಿಲಿ ಗಿಲಿ ಸೇರಿದಂತೆ ಹಲವು ರಿಯಾಲಿಟಿ ಶೋಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇಬ್ಬರು ಖುಷಿಯಾಗಿದ್ದರು. ಆದರೆ ಈಗ ಇದಕ್ಕಿದ್ದಂತೆ ಮನಸ್ತಾಪ ಮೂಡಿದ್ದು, ಇಬ್ಬರು ಪರಸ್ಪರ ವಿವಾಹ ವಿಚ್ಛೇದನ ಪಡೆಯಲು ನಿರ್ಧರಿಸಿದ್ದಾರೆ ಎನ್ನಲಾಗಿದೆ. ಸದ್ಯ ಚಂದನ್ ಶೆಟ್ಟಿ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು ಚಿತ್ರದ ಬಿಡುಗಡೆಗಾಗಿ ಕಾಯುತ್ತಿದ್ದಾರೆ.

ಗಾಂಜಾ ಪೂರೈಸುತ್ತಿದ್ದ ಕೇರಳ ವಿದ್ಯಾರ್ಥಿ ಸೆರೆ

ಉಡುಪಿ: ಮಣಿಪಾಲದಲ್ಲಿ ವಿದ್ಯಾರ್ಥಿಗಳಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ ಕೇರಳದ ಸಿದ್ದಾರ್ಥ್ (22) ಎಂಬಾತನನ್ನು ಮಣಿಪಾಲ ಪೊಲೀಸರು ಹೆರ್ಗದ ಅಪಾರ್ಟ್‌ಮೆಂಟ್ ಒಂದರಿಂದ ಬಂಧಿಸಿದ್ದಾರೆ.

ಮಣಿಪಾಲದಲ್ಲಿ ಈತ ವಿದ್ಯಾಭ್ಯಾಸ ಮಾಡಿಕೊಂಡಿದ್ದು, ಜತೆಗೆ ವಿದ್ಯಾರ್ಥಿಗಳಿಗೆ ಗಾಂಜಾ ಪೂರೈಕೆ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಪಡೆದ ಮಣಿಪಾಲ ಠಾಣೆ ಪೊಲೀಸ್ ನಿರೀಕ್ಷಕ ದೇವರಾಜ್ ಟಿ.ವಿ. ಅವರ ತಂಡ ಪತ್ರಾಂಕಿತ ಅಧಿಕಾರಿ ಶಂಕರ್, ಉಪನಿರೀಕ್ಷಕ ರಾಘವೇಂದ್ರ ಸಿ., ಎಎಸ್‌ಐ ವಿವೇಕಾನಂದ, ಶೈಲೇಶ್ ಕುಮಾರ್ ಹಾಗೂ ಸಿಬ್ಬಂದಿ ಸುಕುಮಾರ, ಅರುಣ ಕುಮಾರ್, ಚನ್ನೇಶ್, ಮಂಜುನಾಥ ಅವರನ್ನೊಳಗೊಂಡ ತಂಡ ಜೂ. 5ರಂದು ಹೆರ್ಗ ಗ್ರಾಮದ ಅಪಾರ್ಟ್‌ಮೆಂಟ್ ಒಂದರ ಮೇಲೆ ದಾಳಿ ನಡೆಸಿ, ಆತನನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿಯಿಂದ 20 ಸಾವಿರ ಮೌಲ್ಯದ ಸುಮಾರು 388 ಗ್ರಾಂ ಗಾಂಜಾ ಹಾಗೂ 45,000 ಮೌಲ್ಯದ ಮೊಬೈಲ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಈ ಗಾಂಜಾವನ್ನು ಮಣಿಪಾಲದಲ್ಲಿ ವಿದ್ಯಾರ್ಥಿಗಳಿಗೆ ಮಾರಾಟ ಮಾಡಿ ಲಾಭ ಗಳಿಸುವ ಉದ್ದೇಶದಿಂದ ದಾಸ್ತಾನು ಇಟ್ಟಿರುವುದಾಗಿ ಪೊಲೀಸರಿಗೆ ತಿಳಿಸಿದ್ದಾನೆ. ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆತನನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.

ಮರಳಿ ಸಂಘಕ್ಕೆ ಸಂತೋಷ್‌ಜೀ?

← ಮೊದಲಪುಟದಿಂದ

ಸಂಜಯ್ ಜೋಶಿ ಅವರನ್ನು ಈ ಸ್ಥಾನಕ್ಕೆ ತರುವುದರಿಂದ ಸಂತೋಷ್ ಅವರನ್ನು ವಾಪಸು ಸಂಘಕ್ಕೆ ಕರೆಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ. ಆದರೆ ಅಲ್ಲಿ ಯಾವ ಜವಾಬ್ದಾರಿ ನೀಡಲಾಗುತ್ತದೆ ಎನ್ನುವ ಬಗ್ಗೆ ಸ್ಪಷ್ಟತೆಯಿಲ್ಲ ಎಂದು ಮೂಲಗಳು ತಿಳಿಸಿವೆ.

ಯಾರಿದು ಸಂಜಯ ಜೋಶಿ?: ಮೂಲತಃ ಮೆಕ್ಯಾನಿಕಲ್ ಎಂಜಿನಿಯರ್ ಆಗಿರುವ ಸಂಜಯ ಜೋಶಿ ಅವರು, ಸಂಘದ ವಿವಿಧ ಘಟಕಗಳನ್ನು ನಿರ್ವಹಿಸಿದ ಬಳಿಕ ಉತ್ತರ ಪ್ರದೇಶದ ಉಸ್ತುವಾರಿಯನ್ನಾಗಿ ನೇಮಿಸಲಾಯಿತು. ಈ ವೇಳೆ, ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಗಟ್ಟಿ ನೆಲೆ ನೀಡಿದ ಸಂಜಯ್ ಅವರು 2001ರಿಂದ 2005ರವರೆಗೆ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಹೆಚ್ಚಾಗಿ ಕಾಣಿಸಿಕೊಳ್ಳದ ಸಂತೋಷ್: 2019ರಿಂದ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ತನಕ ಬಿ.ಎಲ್.ಸಂತೋಷ್ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಪರಮಾಪ್ತ ವಲಯದಲ್ಲಿ ಕಾಣಿಸಿಕೊಂಡಿದ್ದರು. ಕರ್ನಾಟಕ ಮಾತ್ರವಲ್ಲದೇ, ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿಗೆ ಸಂಬಂಧಿಸಿದ ವಿಷಯದಲ್ಲಿ ಸಂತೋಷ್ ಅವರ ತೀರ್ಮಾನವೇ ಅಂತಿಮ ಎನ್ನುವ ಪರಿಸ್ಥಿತಿ ಇತ್ತು. ಆದರೆ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿನ ಬಿಜೆಪಿಯ 'ಕಳಪೆ' ಪ್ರದರ್ಶನದ ಬಳಿಕ ಸೈಡ್‌ಲೈನ್ ಆಗಿದ್ದರು. ಈ ಲೋಕಸಭಾ ಚುನಾವಣೆಯಲ್ಲಿ, ಸಂತೋಷ್ ಅವರಿಗೆ ಯಾವುದೇ ರಾಜ್ಯದ ಜವಾಬ್ದಾರಿ ನೀಡಲಿಲ್ಲ. ಜತೆಗೆ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿಯೂ ಸ್ಥಾನ ನೀಡಿರಲಿಲ್ಲ. ಆದ್ದರಿಂದ ಇಡೀ ಲೋಕಸಭಾ ಚುನಾವಣೆಯಲ್ಲಿ ಎಲ್ಲಿಯೂ ಹೆಚ್ಚಾಗಿ ಕಾಣಿಸಿಕೊಂಡಿರಲಿಲ್ಲ.

ಕೇರಳದಲ್ಲಿ ಕಾಲಕಳೆದ ಭವಾನಿ

← ಮೊದಲಪುಟದಿಂದ

ಆದ್ದರಿಂದ ಭವಾನಿ ಅವರು ಎಲ್ಲಿ ತಲೆಮರೆಸಿಕೊಂಡಿದ್ದಾರೆ ಎನ್ನುವುದು ಬಹುತೇಕ ಪ್ರಶ್ನೆಯಾಗಿತ್ತು. ಇದೀಗ ಇದಕ್ಕೆ ಉತ್ತರ ಸಿಕ್ಕಿದ್ದು, ಕೇರಳದಲ್ಲಿ ಸ್ನೇಹಿತೆಯೊಬ್ಬರ ಮನೆಯಲ್ಲಿ ಅಡಗಿಕೊಂಡಿದ್ದರು ಎಂದು ತಿಳಿದುಬಂದಿದೆ.

ಎಸ್‌ಐಟಿ ಮುಂದೆ ಹಾಜರಾದರೇ ಅಥವಾ ನೋಟಿಸ್‌ಗೆ ಉತ್ತರಿಸದೇ ಇದ್ದರೆ ಬಂಧನಕ್ಕೆ ಒಳಗಾಗುವ ಆತಂಕವಿತ್ತು. ಆದ್ದರಿಂದ ನಿರೀಕ್ಷಣಾ ಜಾಮೀನು ಸಿಗುವ ತನಕ, ಸಾರ್ವಜನಿಕ ವಲಯದಲ್ಲಿ ಕಾಣಿಸಿಕೊಳ್ಳುವುದು ಬೇಡ ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಕರ್ನಾಟಕದಲ್ಲಿಯೇ ಇದ್ದರೆ, ಗುರುತು ಹಿಡಿಯುವ ಸಾಧ್ಯತೆಯಿರುವುದರಿಂದ ಕೇರಳದಲ್ಲಿ ನೆಲೆಸಿದ್ದರು ಎಂದು ಎಸ್‌ಐಟಿ ಅಧಿಕಾರಿಗಳಿಗೆ ತಿಳಿದುಬಂದಿದೆ.

ಪದೇ ಪದೆ ಕ್ಷೇತ್ರ ಬದಲಾವಣೆ: ಸ್ನೇಹಿತೆಯ ಮನೆಯಲ್ಲಿ ಭವಾನಿ ತಲೆಮರೆಸಿಕೊಂಡಿರುವುದು ರಾಜ್ಯ ಗುಪ್ತಚರ ಇಲಾಖೆಗೆ ಮಾಹಿತಿಯಿತ್ತು. ಆದರೆ ಪದೇ ಪದೆ ಒಂದೂರಿಂದ ಒಂದೂರಿಗೆ ಸ್ಥಳ ಬದಲಾವಣೆ ಮಾಡುತ್ತಿದ್ದರಿಂದ, ಖಚಿತ ಸ್ಥಳ ಗುರುತಿಸುವುದು ಸವಾಲಾಗಿತ್ತು. ಇದರೊಂದಿಗೆ ಮೊಬೈಲ್ ಇಲ್ಲದೇ ಕೇರಳದ ಕಾಡಿನೊಳಗಿನ ಮನೆಗಳಲ್ಲಿ ತಲೆಮರೆಸಿಕೊಂಡಿದ್ದರಿಂದ ಲೊಕೇಷನ್ ಟ್ರೇಸ್ ಮಾಡುವುದು ಅಧಿಕಾರಿಗಳಿಗೆ ಸವಾಲಾಗಿತ್ತು ಎನ್ನಲಾಗಿದೆ.

ಸಮಬಲ ಸಾಧನೆ

← ಮೊದಲಪುಟದಿಂದ

ಇತ್ತ, ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಕೈ ಅಭ್ಯರ್ಥಿ ಚಂದ್ರಶೇಖರ ಪಾಟೀಲ್ ಸತತ ಎರಡನೇ ಬಾರಿಗೆ ಗೆಲುವಿನ ನಗೆ ಬೀರಿದ್ದಾರೆ.

ಬೆಂಗಳೂರು ವ್ಯಾಪ್ತಿಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅ.ದೇವೇಗೌಡ 24,888 ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ 36,729 ಮತ ಪಡೆದು ಪ್ರಥಮ ಪ್ರಾಶಸ್ತ್ಯದ ಮತಗಳಲ್ಲಿಯೇ ಗೆಲುವು ದಾಖಲಿಸಿದರು. 8,482 ಮತಗಳು ಅಸಿಂಧುಗೊಂಡವು.

ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ 8,909 ಮತಗಳಿಂದ ಗೆದ್ದಿದ್ದು, ಹಾಲಿ ಸದಸ್ಯ ನಾರಾಯಣಸ್ವಾಮಿ ಸೋಲು ಕಂಡಿದ್ದಾರೆ. ಬಿಜೆಪಿ ಅಭ್ಯರ್ಥಿ ವೈ.ಎ ನಾರಾಯಣಸ್ವಾಮಿ 7,142 ಮತ ಪಡೆದರೆ, ಪಕ್ಷೇತರ ಅಭ್ಯರ್ಥಿ ವಿನೋದ್ ಶಿವರಾಜ್ 6,894 ಮತ ಪಡೆದರು. 704 ಮತಗಳು ತಿರಸ್ಕೃತಗೊಂಡವು. ಬಿಜೆಪಿಯ ತೆಕ್ಕೆಯಲ್ಲಿದ್ದ ಈ ಎರಡೂ ಕ್ಷೇತ್ರಗಳು ಇದೀಗ ಕಾಂಗ್ರೆಸ್ ಪಾಲಾಗಿವೆ.ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಗುರುವಾರ ನಡೆದ ವಿಧಾನಪರಿಷತ್ತಿನ ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಪದವೀಧರ ಕ್ಷೇತ್ರಗಳ ಮತ ಎಣಿಕೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ ಗೆದ್ದರೆ, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಬಿಜೆಪಿ – ಜೆಡಿಎಸ್ ಮೈತ್ರಿ ಅಭ್ಯರ್ಥಿ ಬೋಜೇಗೌಡ ಹಾಗೂ ನೈರುತ್ಯ ಪದವೀಧರ ಕ್ಷೇತ್ರದ ಮತ ಎಣಿಕೆಯಲ್ಲಿ ಬಿಜೆಪಿ ಮೈತ್ರಿ ಅಭ್ಯರ್ಥಿ ಧನಂಜಯ ಸರ್ಜಿ ಜಯಶಾಲಿಯಾದರು. ಈ ಮೂರು ಕ್ಷೇತ್ರಗಳಲ್ಲಿಯೂ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳು ಗೆಲುವು ಕಂಡಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿವೇಕಾನಂದ 10,823 ಮತ ಪಡೆದರೆ, ಇದೇ ಕ್ಷೇತ್ರದಿಂದ ನಾಲ್ಕು ಸಲ ಗೆದ್ದಿದ್ದ ಕಾಂಗ್ರೆಸ್‌ನ ಮರಿತಿಬ್ಬೇಗೌಡ 6201 ಮತ ಗಳಿಸಿ, 4,622 ಮತಗಳ ಅಂತರದಿಂದ ಸೋಲುಂಡರು.

ನೈರುತ್ಯ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿ ಭೋಜೇಗೌಡ 9,829 ಮತಗಳನ್ನು ಪಡೆದು ಎರಡನೇ ಬಾರಿಗೆ ವಿಧಾನಪರಿಷತ್ತಿಗೆ ಆಯ್ಕೆಯಾದರು. ಕಾಂಗ್ರೆಸ್ ಅಭ್ಯರ್ಥಿ ಡಾ.ಕೆ.ಕೆ. ಮಂಜುನಾಥ್ 4,562 ಮತ ಗಳಿಸಿದರು.

ನೈರುತ್ಯ ಪದವೀಧರ ಕ್ಷೇತ್ರದ ಮತ ಎಣಿಕೆಯಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ. ಧನಂಜಯ ಸರ್ಜಿ ಅವರು 37,627 ಮತ ಪಡೆದು ಗೆಲುವು ದಾಖಲಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜುನಾಥ್ 13,516 ಮತ ಗಳಿಸಿ ಮತ್ತೊಮ್ಮೆ ಸೋಲು ಕಂಡಿದ್ದಾರೆ. ಬಿಜೆಪಿ ಬಂಡಾಯ ಅಭ್ಯರ್ಥಿ ರಘುಪತಿ ಭಟ್ ಕೇವಲ 7,039 ಮತ ಪಡೆಯಲು ಶಕ್ತರಾದರು.

ಸೋತಿದ್ದಕ್ಕೆ ಕಾರಣ ಕೊಡಿ

← ಮೊದಲಪುಟದಿಂದ

ಏನು ಕ್ರಮ ಕೈಗೊಳ್ಳಬೇಕೆಂದು ಹೇಳಿ: ಸಚಿವರೊಂದಿಗೆ ನಡೆದ ಪ್ರತ್ಯೇಕ ಸಭೆಯಲ್ಲಿ ರಾಹುಲ್ ಗಾಂಧಿ ಅವರು, ಉಸ್ತುವಾರಿ ಹೊತ್ತ ಕ್ಷೇತ್ರಗಳಲ್ಲಿ ಕಡಿಮೆ ಮತ ಗಳಿಸಿದ್ದು, ಹಾಗೂ ಸೋತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನೀವು ಹೇಳಿದವರಿಗೆ ಟಿಕೆಟ್ ಕೊಟ್ಟಿದ್ದೇವೆ. ಗೆಲ್ಲಿಸುವ ಜವಾಬ್ದಾರಿ ನಿಮ್ಮ ಮೇಲೆ ಇತ್ತು. ಆದರೂ ಗೆಲ್ಲಿಸುವಲ್ಲಿ ವಿಫಲರಾಗಿದ್ದೀರಿ. ನಿಮ್ಮ ವಿರುದ್ಧ ಏನು ಕ್ರಮ ಕೈಗೊಳ್ಳಬೇಕೆಂದು ಹೇಳಿ ಎಂದು ಗರಂ ಆಗಿದ್ದಾರೆ. ಇದೇ ವೇಳೆ, ರಾಜ್ಯದಲ್ಲಿ ಪಂಚ ಗ್ಯಾರಂಟಿ ನೀಡಿದರೂ ಸೋಲಿಗೆ ಕಾರಣವೇನು. ಎಲ್ಲಿ ತಪ್ಪಾಗಿದೆ ಎಂಬ ಕುರಿತು ಸೋಲಿನ ಬಗ್ಗೆ ವಿಧಾನ ಸಭಾವಾರು ವರದಿ ಕೊಡಿ ಎಂದು ರಾಹುಲ್ ಗಾಂಧಿ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.ಇದಕ್ಕೂ ಮೊದಲು ಗೆದ್ದಿರುವ ಅಭ್ಯರ್ಥಿಗಳನ್ನು ವೈಯಕ್ತಿಕವಾಗಿ ಪರಿಚಯಿಸಿಕೊಂಡು ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ಪರಾಜಿತ ಅಭ್ಯರ್ಥಿಗಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದರು.

ವಿಷಾನಿಲ ಸೋರಿಕೆ: 20ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ಮೈಸೂರು: ತ್ಯಾಜ್ಯ ಸಂಸ್ಕರಣ ಗುಜರಿಯಲ್ಲಿ ವಿಷಕಾರಿ ಅನಿಲ ಸೋರಿಕೆಯಾಗಿ 20ಕ್ಕೂ ಹೆಚ್ಚು ಮಂದಿ ಉಸಿರಾಟದ ಸಮಸ್ಯೆ ಸೇರಿದಂತೆ ಇನ್ನಿತರ ಸಮಸ್ಯೆಗಳು ಕಾಣಿಸಿಕೊಂಡು ಅಸ್ವಸ್ಥರಾಗಿದ್ದಾರೆ. ಮೈಸೂರು ನಗರದ ಹಳೆ ಕೆಸರೆ ಬಡಾವಣೆಯಲ್ಲಿರುವ ಮಹಮದ್ ಎಂಬವರಿಗೆ ಸೇರಿದ ಗುಜರಿಯಲ್ಲಿ ಘಟನೆ ನಡೆದಿದೆ. ಇದರಿಂದಾಗಿ ಹಳೆ ಕೆಸರೆಯಲ್ಲಿ ವಾಸವಾಗಿರುವ ಹಲವರಿಗೆ ಉಸಿರಾಟದ ತೊಂದರೆ, ಕೆಮ್ಮು, ವಾಂತಿ ಸೇರಿದಂತೆ ಇನ್ನಿತರೆ ತೊಂದರೆ ಕಾಣಿಸಿಕೊಂಡ ಪರಿಣಾಮ, ಎಲ್ಲರನ್ನೂ ನಗರದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ, ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಅಲ್ಲದೇ ಆರೋಗ್ಯ ಇಲಾಖೆ ಸಿಬ್ಬಂದಿ ಸಹ ಸ್ಥಳಕ್ಕಾಗಮಿಸಿ ಆರೋಗ್ಯ ತಪಾಸಣೆ ನಡೆಸಿದ್ದಾರೆ.

ನಾಯಿ ದಾಳಿ: ಮಹಿಳೆ ಸಾವು

ದಾವಣಗೆರೆ: ನಗರದಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ರತ್ನಮ್ಮ (51) ಎಂಬವರು ಮೃತಪಟ್ಟಿದ್ದಾರೆ. ಗಾಂಧಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008

No.EE /MI&GWDDD/BGM/TND/AE-1/JE/2023-24/2117 Date:06-06-2024

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ.1,3&4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಗೋಕಾಕ/ಬೆಳಗಾವಿ ಉಪ ವಿಭಾಗದಡಿಯ ಒಟ್ಟು 05 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.200.00 ಲಕ್ಷಗಳು ಹಾಗೂ ಕನಿಷ್ಠ ರೂ.15.00 ಲಕ್ಷಗಳು. 1.ಪೂರ್ವ ಟೆಂಡರ ಸಭೆ ದಿನಾಂಕ:19–06–2024 ಬೆಳಿಗ್ಗೆ 11.00 ಗಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:20–06–2024 ಸಾಯಂಕಾಲ 4.00 ಗಂಟೆಯ ವರೆಗೆ, 3. ಟೆಂಡರ ತೆರೆಯುವ ದಿನಾಂಕ: 21–06–2024 ಸಾಯಂಕಾಲ 4.30 ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

DIPR/BGM/RO-NO-47/KSMCA/2024-25

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ,
ಲೋಯರ್ ಹುತ್ತಾ, ಭದ್ರಾವತಿ –577301
Ph:08282-266355 Fax:08282-266647
Email: dcfbdvt@yahoo.in

ಸಂಖ್ಯೆ: ಎ2:ಬಿಯುಡಿ:ಟೆಂಡರ್.ಸಿ.ಆರ್–25/2024–25–1. Dt: 05.06.2024

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

2024–25ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ವಿವಿಧ ವಲಯ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ:19–06–2024ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಕಾಮಗಾರಿಯ ಅಂದಾಜು ಮೊತ್ತ:–151.82500 ಲಕ್ಷಗಳು
1. ಮಾನ್ಸೂನ್ ನೆಡುತೋಪು ನಿರ್ಮಾಣ ಕಾಮಗಾರಿ **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 19.06.2024 **ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ:** 20.06.2024 04.30 pm **ಆರ್ಥಿಕ ಬಿಡ್ಡು ತೆರೆಯುವ ದಿನಾಂಕ:** 20.06.2024 05.30 pm

ಸಹಿ/– (ಎಮ್.ವಿ ಅಶೀಶ್ ರೆಡ್ಡಿ ಭಾ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/21/06/24–25/60

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂ. ಬಿಐಎಪಿಎ/ಟಿಪಿ/ಭೂಉಬ/90/2023-24/2024-25/440 ದಿನಾಂಕ: 07.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ. ಸುರೇಂದ್ರ ಬಾಬು ಬಿನ್ ಡಿ. ಸುಬ್ಬ ನಾಯ್ಡು, ಶ್ರೀ ಆರ್. ರಮೇಶ್ ಬಾಬು ಬಿನ್ ಆರ್. ರಾಜಗೋಪಾಲ ನಾಯ್ಡು, ಶ್ರೀ ಯಶಸ್ವಿ ಕೃಷ್ಣಮೂರ್ತಿ ಬಿನ್ ಬಿ.ಕೆ. ಕೃಷ್ಣಮೂರ್ತಿ ಮತ್ತು ಸಿ. ನಾಗರಾಜ ಬಿನ್ ಟಿ. ಚಿನ್ನಪ್ಪ ನಾಯ್ಡು	ಯಲಹಂಕ	ಜಾಲ	ಮಹದೇವ ಕೊಡಿಗೆಹಳ್ಳಿ	207/7	0-5.12 & 0-04ಗು 'ಎ' ಖರಾಬು	ವ್ಯವಸಾಯ	ವಸತಿ
2					207/8	0-5.12 & 0-04ಗು 'ಎ' ಖರಾಬು	ವ್ಯವಸಾಯ	ವಸತಿ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಭೂಉಪಯೋಗ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು ಸದರಿ ಜಮೀನುಗಳು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ ವಸತಿ ವಲಯ ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಎಎ/226/2024-25

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/85/2023–24/24–25/442 ದಿನಾಂಕ: 07.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡಂತೆ ಅರ್ಜಿದಾರರು **ವ್ಯವಸಾಯ** ಭೂಉಪಯೋಗ ವಲಯದಿಂದ **ವಸತಿ** ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಹೇಮಂತ್ ಕುಮಾರ್ ಟಾಕ್ ಬಿನ್ ಹೇಮಂತ್ & ಶ್ರೀಮತಿ ವರ್ಷ ರಿತು ಶರ್ಮ ಕೋಂ ವಿನೀತ್ ಶರ್ಮ	ದೇವನಹಳ್ಳಿ	ಚನ್ನರಾಯ ಪಟ್ಟಣ	ಬೂದಿಗೆರೆ	161/5	0ಎ–28.04	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಸತಿ ಭೂಉಪಯೋಗ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಜಿಎ/233/2024–25

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/94/2023–24/439 ದಿನಾಂಕ : 07.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಮೆ॥ ಧರಣಿ ಪ್ರಮೋಟರ್ಸ್ ಪ್ರೈವೇಟ್ ಲಿಮಿಟೆಡ್ ರ ಪರವಾಗಿ ಶ್ರೀ ಚಂದನ್ ಸಿಂಗ್ ರಣಾವತ್	ದೇವನಹಳ್ಳಿ	ಕುಂದಾಣ	ಇಲ್‌ತೊರೆ	48/2	1–11	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ಭೂಉಪಯೋಗ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/229//2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-289/23–24/484/2024–25 ದಿನಾಂಕ: 07.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Nine Hills Education Pvt. Ltd., ನಂ. 3, ಸಲಾರ್ ಪುರಿಯಾ ವಿಂಡ್ಸರ್, 4ನೇ ಮಹಡಿ, ಹಲಸೂರು ರಸ್ತೆ, ಬೆಂಗಳೂರು–560 042.	ಬೆಂಗಳೂರು ದಕ್ಷಿಣ	ಬೇಗೂರು	ಹೊಮ್ಮ ದೇವನಹಳ್ಳಿ	61/3 (ಹಳೇ ಸರ್ವೆ ನಂ. 61)	6ಎ–10ಗುಂ	ವ್ಯವಸಾಯ ವಲಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉದ್ದೇಶಕ್ಕಾಗಿ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-27/478/2024–25 ದಿನಾಂಕ: 07–06–2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	BIAAPA ಮಹಾಯೋಜನೆ 2021 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ಸಂದೀಪ್. ಎಸ್ ಮತ್ತು ಎಸ್. ಕಾವ್ಯ, ಬಾಗಲೂರು ಗ್ರಾಮ, ಜಾಲ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು – 562149.	ಯಲಹಂಕ	ಜಾಲ	ಬಾಗಲೂರು	125/5, 124/13, & 125/10	0ಎ–17ಗುಂ 0ಎ–9.04ಗುಂ 0ಎ–03ಗುಂ ಒಟ್ಟು 0ಎ–29.04ಗುಂ	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿಗಳು ಬಂದಿರುವುದರಿಂದ ಪ್ರಶ್ನಿತ ಜಮೀನು ಮುಖ್ಯರಸ್ತೆಗೆ ಹೊಂದಿಕೊಂಡಿದ್ದು, ಸಾರ್ವಜನಿಕರಿಗೆ ಸುಲಭವಾಗಿ ವಾಣಿಜ್ಯ ಚಟುವಟಿಕೆಗಳು ಮತ್ತು ಉದ್ಯೋಗವು ಲಭ್ಯವಾಗುತ್ತದೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಾಯಕಾರಿ ಆಗಲಿದೆ, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಾದಗಿರಿ
ಹೈದ್ರಾಬಾದ್ ರಸ್ತೆ, ಯಾದಗಿರಿ – 585201.
ಇ–ಮೇಲ್:apmcyadagiri@gmail.com ಕಛೇರಿ/ಟೆಲಿಫ್ಯಾಕ್ಸ್: 08473–250203, 251382.

ಸಂ:ಕೃಉಮಾಸ:ಯಾ:ಅಭಿಕೆ:ವಾಕ್ರಿಯೋ: 54 :2024–25 ದಿನಾಂಕ:01.06.2024.

:ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ:(Short Term Tendar)

ಯಾದಗಿರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ 2024–25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಾಣಿಸಿದ ಅಭಿವೃದ್ಧಿ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999–2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರಕಾರದ ಆದೇಶ ಸುತ್ತೋಲೆಗಳಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಆಸಕ್ತಿ ಹೊಂದಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (K.W-3) ಮುಖಾಂತರ ವೆಬ್‌ಸೈಟ್ http://kppp.karnataka.gov.in ರ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಯ ಹೆಸರು: ಮುಖ್ಯ ಮಾರುಕಟ್ಟೆ ಪ್ರಾಂಗಣದ ಸಿ,ಸಿ, ರಸ್ತೆಚರಂಡಿ ಮತ್ತು ಕಲ್ವರ್ಟ ನಿರ್ಮಿಸುವ ಕಾಮಗಾರಿ (ನಿವೇಶನ ಸಂ, 204 ರಿಂದ ನಿವೇಶನ ಸಂ,215 ರವರೆಗೆ). **ಕಾಮಗಾರಿಗೆ ಟೆಂಡರ್ :** ಮೊತ್ತ ರೂ. 78,74,101.22 (ಜಿ.ಎಸ್.ಟಿ. ಸೇರಿ). ದ್ವಿ–ಲಕೋಟೆ ಪದ್ಧತಿಯಲ್ಲಿ **ಮುಂಗಡ ಠೇವಣಿ** (ಇಎಂಡಿ): ರೂ.1,57,500.00 **ಟೆಂಡರ್ ಪ್ರೊಸೆಸಿಂಗ್ ಶುಲ್ಕ:** ಇ–ಪೋರ್ಟಲ್‌ನ (K.W-3)ರನ್ವಯ. **ಖಾಲಿ ಟೆಂಡರ್ ಫಾರ್ಮ್ ಬೆಲೆ (ತೆರಿಗೆ ಪ್ರತ್ಯೇಕ):** ಇ–ಪೋರ್ಟಲ್ ರನ್ವಯ. **ಗುತ್ತಿಗೆದಾರರ ದರ್ಜೆ:** 1ನೇ ದರ್ಜೆಗುತ್ತಿಗೆದಾರರು. **ಕಾಮಗಾರಿ ಪೂರ್ಣಗೊಳಿಸಬೇಕಾದ ಕಾಲಾವಧಿ:** 175 ದಿನಗಳು (ಮಳೆಗಾಲ ಹೊರತುಪಡಿಸಿ).

1) **ಬಿಡ್ ಪೂರ್ವಭಾವಿ ಸಭೆ ಮತ್ತು ಟೆಂಡರ್ ತಕರಾರು ಸಮಜಾಯಿಷಿ ನೀಡುವ ದಿನಾಂಕ:** 21–06–2024 ಬೆಳಗ್ಗೆ 11.00 ಗಂಟೆಗೆ. 2) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 25.06.2024ರ ಸಂಜೆ 5:00 ವರೆಗೆ. 3) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 27–06–2024. ರ ಸಂಜೆ 4:00 ವರೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 02–07–2024. ರ ಸಂಜೆ 5:00 ವರೆಗೆ. (ಸಾಧ್ಯವಾದಲ್ಲಿ)

ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪೋರ್ಟಲ್ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿದಂತೆ ಇರುತ್ತವೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http://kppp.karnataka.gov.in ನಲ್ಲಿ ಮತ್ತು ಮೋ.ಸಂಖ್ಯೆ: 9481002193 / 9482399558 ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಟೆಂಡರ್‌ನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– ಕಾರ್ಯದರ್ಶಿ
ಕೃ.ಉ.ಮಾ.ಸ. ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/17/ಕೆ.ಎಸ್.ಎಂ.ಸಿ.ಎ/2024–25

ಸಹಿ/–ಅಧ್ಯಕ್ಷರು
ಕೃ.ಉ.ಮಾ.ಸ. ಯಾದಗಿರಿ.

ಬೋಸರಾಜು,ದದ್ದಲ್ ಕೈವಾಡ ಪ್ರಕರಣ ದಾಖಲಿಸಲು ಒತ್ತಾಯ

ರಾಯಚೂರು: ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಹಣ ಅಕ್ರಮ ವರ್ಗಾವಣೆ ಹಗರಣದಲ್ಲಿ ಹಿಂದೆ ಸಚಿವ ಎನ್.ಎಸ್. ಬೋಸರಾಜು, ನಿಗಮದ ಅಧ್ಯಕ್ಷ ಹಾಗೂ ಶಾಸಕ ಬಸನಗೌಡ ದದ್ದಲ್

ಕೈವಾಡವಿದ್ದು, ಅವರ ವಿರುದ್ಧವೂ ಎಫ್ಐಆರ್ ದಾಖಲಿಸುವಂತೆ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಂ.ವಿರೂಪಾಕ್ಷಿ ಒತ್ತಾಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತೆಲಂಗಾಣ ವಿಧಾನಸಭಾ ಚುನಾವಣೆಗಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಜೀರೊ ಬ್ಯಾಲೆನ್ಸ್ ಖಾತೆ ತೆರೆದು 94 ಕೋಟಿ ಹಣ ವರ್ಗಾವಣೆ ಮಾಡಲಾಗಿದೆ ಎಂದು ಗಂಭೀರ ಆರೋಪ ಮಾಡಿದರು. ಶೋಷಿತ ಸಮುದಾಯ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ. ಅಕ್ರಮದ ಬಗ್ಗೆ ಸಿಬಿಐಗೆ ದೂರು ನೀಡಲಾಗಿತ್ತು. ಸಚಿವ ನಾಗೇಂದ್ರ, ಆಪ್ತ ಸೇರಿ ಇಬ್ಬರನ್ನು ಬಂಧಿಸಲಾಗಿದೆ. ಆದರೆ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ಗಮನಕ್ಕೆ ಬಾರದೇ ಇಷ್ಟು ದೊಡ್ಡಮಟ್ಟದ ಹಣ ವರ್ಗಾವಣೆ ನಡೆಯಲು ಅಸಾಧ್ಯ ಎಂದು ವಿರೂಪಾಕ್ಷಿ ಹೇಳಿದರು.

ಸಚಿವ ಶರಣಪ್ರಕಾಶ್ ಪಾಟೀಲ್ ಕಚೇರಿಯಲ್ಲಿ ಚರ್ಚಿಸಿರುವ ಆರೋಪ

ವಾಲ್ಮೀಕಿ ಹಗರಣದಲ್ಲಿ ಶಾಸಕ ದದ್ದಲ್‌ಗೆ ಸಂಕಷ್ಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾಗಿರುವ ಅವ್ಯವಹಾರದ ಆರೋಪದಲ್ಲಿ ಸಚಿವ ಬಿ. ನಾಗೇಂದ್ರ ರಾಜೀ

ನಾಮೆ ಬೆನ್ನಲ್ಲೇ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ್ ದದ್ದಲ್‌ಗೆ ಸಂಕಷ್ಟ ಎದುರಾಗಿದೆ.

ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿ ಬಸವರಾಜ್ ದದ್ದಲ್ ನೇಮಕಗೊಂಡ ಬಳಿಕವೇ ಅಕ್ರಮ ಹಣ ವರ್ಗಾವಣೆಯಾಗಿದ್ದರೂ, ಈವರೆಗೆ ಇಡೀ ಪ್ರಕರಣ ನಾಗೇಂದ್ರ ಅವರ ಸುತ್ತಲೇ ತಿರುಗುತ್ತಿತ್ತು. ಆದರೀಗ ನಿಗಮ ಅಧ್ಯಕ್ಷ ದದ್ದಲ್ ಅವರು ಹೆಸರು ಕೇಳಿಬರುತ್ತಿದೆ. ಕೇವಲ ದದ್ದಲ್ ಮಾತ್ರವಲ್ಲದೇ, ಸಚಿವ ಶರಣಪ್ರಕಾಶ್ ಪಾಟೀಲ್ ಅವರ ವಿರುದ್ಧವೂ ಆರೋಪ ಕೇಳಿಬಂದಿದೆ.

ಮೇ 24ರಂದು ಸಚಿವ ಶರಣಪ್ರಕಾಶ್ ಪಾಟೀಲ್ ಕೊಠಡಿಯಲ್ಲಿ ನಡೆದಿರುವ ಸಭೆಯಲ್ಲಿ, ಬಸವರಾಜ್ ದದ್ದಲ್ ಅವರನ್ನು ನಿಗಮದ ಚಂದ್ರಶೇಖರ್ ಮತ್ತು ಪರಶುರಾಮ್ ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಆದ್ದರಿಂದ ಚಂದ್ರಶೇಖರ್ ಸಾವಿಗೂ ಮುನ್ನ ದದ್ದಲ್‌ಗೆ ಎಲ್ಲವೂ ಗೊತ್ತಿತ್ತು ಎಂದು ಹೇಳಲಾಗುತ್ತಿದೆ. ಈ ಸಂಬಂಧ ಸಿಸಿಟಿವಿ ದೃಶ್ಯ ವಶಕ್ಕೆ ಪಡೆಯಲು ಸೂಚಿಸುವಂತೆ ವಕೀಲರು ಅರ್ಜಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ನಾಯಕರಿಂದ ರಾಜೀನಾಮೆಗೆ ಆಗ್ರಹ

ಇದರ ಬೆನ್ನಲ್ಲೇ ಬಿಜೆಪಿ ನಾಯಕರು ದದ್ದಲ್ ಹಾಗೂ ಸಚಿವ ಶರಣಪ್ರಕಾಶ್ ಪಾಟೀಲ್ ರಾಜೀನಾಮೆಗೆ ಆಗ್ರಹಿಸಿದ್ದಾರೆ. ಈ ಬಗ್ಗೆ ಮಾತನಾಡಿರುವ ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ್, ನಿಗಮದ ಅಧ್ಯಕ್ಷ ಬಸವನಗೌಡ ದದ್ದಲ್ ರಾಜೀನಾಮೆಯೇ? ಪಕ್ಷದಿಂದ ಉಚ್ಚಾಟಿಸುವಿರಾ? ಅವರನ್ನು ಬಂಧಿಸುವಿರಾ? ಸಾಕ್ಷಿ ನಾಶ ಮಾಡುವ ಬಗ್ಗೆ ಮಹತ್ವದ ಸಭೆ ನಡೆಸಿದ್ದ ಸಚಿವ ಶರಣಪ್ರಕಾಶ್ ಪಾಟೀಲರನ್ನು ಬಂಧಿಸುವಿರಾ? ಎಂದು ಪ್ರಶ್ನಿಸಿದರು. ಹಗರಣರಲ್ಲಿ ದೊಡ್ಡ ಜಾಲ ಇದ್ದಂತಿದೆ. ಎಲ್ಲರೂ ಅನುಕೂಲ ಪಡೆದುಕೊಂಡಂತೆ ಕಾಣುತ್ತಿದೆ. ಹಾಗಾಗಿ ಎಲ್ಲ ಸಂದೇಹಗಳಿಗೆ ಉತ್ತರ ಕೊಟ್ಟು ಕ್ರಮವಹಿಸಬೇಕಿದೆ ಎಂದು ಆಗ್ರಹಿಸಿದರು.

ಶಾಸಕ ಸವದಿ ನಿವಾಸಕ್ಕೆ ಶಾಸಕ ಮಹೇಂದ್ರ ಭೇಟಿ

ಅಥಣಿ: ಲೋಕಸಭೆ ಚುನಾವಣೆ ಫಲಿತಾಂಶದ ಬಳಿಕ ಕಾಂಗ್ರೆಸ್ ನಾಯಕರಲ್ಲಿ ಭಿನ್ನಮತದ ಬಿರುಗಾಳಿ ಬೀಸುತ್ತಿದ್ದೆ, ಗುರುವಾರ ಸಚಿವ ಸತೀಶ ಜಾರಕಿಹೊಳಿ ಕಾಂಗ್ರೆಸ್ ಶಾಸಕ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತಿದ್ದಂತೆ ಬೆಳಗಾವಿ

ರಾಜಕಾರಣದಲ್ಲಿ ಮಿಂಚಿನ ಸಂಚಲನ ಪ್ರಾರಂಭವಾಗಿದ್ದು, ಅಥಣಿ ಶಾಸಕ ಲಕ್ಷ್ಮಣ ಸವದಿ ನಿವಾಸಕ್ಕೆ ಶುಕ್ರವಾರ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ಭೇಟಿ ನೀಡಿ ಒಂದು ಗಂಟೆಗಳ ಕಾಲ ಗುಪ್ತ ಮಾತುಕತೆ ನಡೆಸಿದ್ದಾರೆ.

ಲೋಕೋಪಯೋಗಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸತೀಶ್ ಜಾರಕಿಹೊಳಿ ಬಹಿರಂಗವಾಗಿ ಅಥಣಿ ಶಾಸಕ ಲಕ್ಷ್ಮಣ ಸವದಿ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ವಿರುದ್ಧ ವಾಗ್ದಾಳಿ ನಡೆಸಿದ ಬೆನ್ನಲ್ಲೇ ಬೆಳಗಾವಿ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ.

ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಅವರ ಅಥಣಿಯಲ್ಲಿ ಇರುವ ನಿವಾಸಕ್ಕೆ ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ ದಿಢೀರ್ ಭೇಟಿಯಾಗಿ ಸಮಾಲೋಚನೆ ನಡೆಸಿದ್ದಾರೆ. ಸತೀಶ್ ಜಾರಕಿಹೊಳಿ ಈ ಇಬ್ಬರು ನಾಯಕರನ್ನೇ ಟಾರ್ಗೆಟ್ ಮಾಡಿ ಬಹಿರಂಗ ಮಾತಿನ ಯುದ್ಧ ಸಾರಿದರು.

ಸಮಾಚಾರ ಸಣ್ಣದಲ್ಲ

ಅಕ್ಷರದಾಸೋಹ ಅಧಿಕಾರಿ ಆತ್ಮಹತ್ಯೆಗೆ ಯತ್ನ

ಲಿಂಗಸೂಗೂರು: ತಾಲೂಕಿನ ಅಕ್ಷರದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮೌನೇಶ

ಕಂಬಾರ್ ಆತ್ಮಹತ್ಯೆ ಯತ್ನಿಸಿದ ಘಟನೆ ನಡೆದಿದೆ. ಒಂದು ತಿಂಗಳ ಹಿಂದೆಯಷ್ಟೇ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದರು. ಗುರುವಾರ ರಜೆ ಮಾಡಿದ ಅವರು ನಿದ್ರೆ ಮಾತ್ರೆ ಸೇವಿಸಿದ್ದಾರೆ. ಪಟ್ಟಣದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಗೆ ಕರೆದೊಯ್ಯಲಾಗಿದೆ. ಶಿಕ್ಷಣ ಇಲಾಖೆ ಅಧಿಕಾರಿಗಳು ಕಂಬಾರ್ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಆತ್ಮಹತ್ಯೆ ಯತ್ನಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

ವಿದ್ಯುತ್ ತಂತಿ ಸ್ಪರ್ಶಿಸಿ ಬಾಲಕಿ ಸಾವು

ಕಾನಾಹೊಸಹಳ್ಳಿ: ಸಮೀಪದ ಕಾತ್ರಿಕೆಹಟ್ಟಿ ಗ್ರಾಮದಲ್ಲಿ ವಿದ್ಯುತ್ ತಂತಿ ತಗುಲಿ ಬಾಲಕಿ ಮೃತಪಟ್ಟಿರುವ

ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ. ತುಳಸಿ(8) ಮೃತ ಬಾಲಕಿ. ವಿದ್ಯುತ್ ಕಂಬಕ್ಕೆ ಹಾಕಿದ್ದ ತಂತಿ ತಗುಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ. ಸ್ಥಳಕ್ಕೆ ಕಾನಾಹೊಸಹಳ್ಳಿ ಪಿಎಸ್ಐ ಎರಿಯಪ್ಪ ಅಂಗಡಿ, ಜೆಸ್ಕಾಂ ಅಧಿಕಾರಿ ಮಾರಪ್ಪ ಭೇಟಿ ನೀಡಿ ಪರಿಶೀಲಿಸಿದರರು. ಬಾಲಕಿಯ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು. ಬಾಲಕಿಯ ಮೃತ ದೇಹವನ್ನು ಕಾನಾಹೊಸಹಳ್ಳಿ ಪೊಲೀಸರು ಹಾಗೂ ಜೆಸ್ಕಾಂ ಅಧಿಕಾರಿಗಳು ಬಂದು ಮನವೊಲಿಸಿದ ಬಳಿಕ ಬಾಲಕಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗಲಾಯಿತು.

ವಾಹನ ಡಿಕ್ಕಿ: ಚಿರತೆ ಸಾವು

ನಾಗಮಂಗಲ: ತಾಲ್ಲೂಕಿನ ಎ.ನಾಗತಿಹಳ್ಳಿ ಗ್ರಾಮದ ಬಳಿ ಬೆಂಗಳೂರು- ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ದಾಟುತ್ತಿದ್ದ ಚಿರತೆಗೆ

ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಚಿರತೆಯು ಸ್ಥಳದಲ್ಲೇ ಸಾವನ್ನಪ್ಪಿದೆ. ಶುಕ್ರವಾರ ಬೆಳಗಿನ ಜಾವ ರಸ್ತೆ ದಾಟುತ್ತಿದ್ದಾಗ ವಾಹನ ಡಿಕ್ಕಿಯಾಗಿದ್ದು, ತೀವ್ರವಾಗಿ ಗಾಯಗೊಂಡು ಎರಡು ವರ್ಷದ ಚಿರತೆ ಸ್ಥಳದಲ್ಲೇ ಸಾವನ್ನಪ್ಪಿದೆ. ನಂತರ ಸ್ಥಳೀಯರು ಗಮನಿಸಿ ಅರಣ್ಯ ಇಲಾಖೆಯ ಅಧಿಕಾ ರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ವಲಯ ಅರಣ್ಯಾಧಿಕಾರಿ ಮಂಜು ನಾಥ್ ಮತ್ತು ಉಪ ವಲಯ ಅರಣ್ಯಾಧಿಕಾರಿ ಮಂಜು ಪರಿಶೀಲನೆ ನಡೆಸಿದ್ದಾರೆ. ಪಶು ವೈದ್ಯರಿಂದ ಮರಣೋತ್ತರ ಪರೀಕ್ಷೆ ನಡೆಸಿ ಚಿರತೆಯ ಕಳೆಬರವನ್ನು ಅಧಿಕಾರಿಗಳ ಸಮ್ಮುಖದಲ್ಲಿ ಸುಡಲಾಯಿತು.

ಮಂಗಗಳ ಹತ್ಯೆ: ವಿಷಪ್ರಾಶನ ಶಂಕೆ

ಬಾಳೆಹೊನ್ನೂರು: ಇಲ್ಲಿಗೆ ಸಮೀಪದ ಚಿಕ್ಕ ಅಗ್ರಹಾರದ ಬಳಿ, ನಾಲ್ಕು ಮರಿಗಳೂ ಸೇರಿದಂತೆ 30 ಮಂಗಗಳ ಕಳೇಬರ ಪತ್ತೆಯಾಗಿದ್ದು, ವಿಷವಿಕ್ಕಿ

ಬೇರೆಲ್ಲೋ ಮಂಗಗಳನ್ನು ಸಾಯಿಸಿ ಇಲ್ಲಿಗೆ ತಂದು ಎಸೆದಿರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗುಡ್ಡೆಹಳ್ಳದಿಂದ ದಾವಣಕ್ಕೆ ತೆರಳುವ ರಸ್ತೆಯ ರಾಮನಹಡ್ಲುನ ಮೇಗರಮಕ್ಕಿ ಮೀಸಲು ಅರಣ್ಯ ಪ್ರದೇಶದ ಬಳಿ ಮಂಗಗಳ ಮೃತದೇಹ ಕಂಡ ಸ್ಥಳಿಯರು ಅರಣ್ಯ ಇಲಾಖೆಯ ಗಮನಕ್ಕೆ ತಂದಿದ್ದರು. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೊಪ್ಪ ಸಹಾಯಕ ಅರಣ್ಯ ಸಂರಕ್ಷಾಧಿಕಾರಿ ಸುದರ್ಶನ್ ಸುದ್ದಿಗಾರರೊಂದಿಗೆ ಮಾತನಾಡಿ, 4 ಮರಿ, 14 ಗಂಡು ಹಾಗೂ 16 ಹೆಣ್ಣು ಮಂಗಗಳು ಮೃತಪಟ್ಟಿರುವುದು ಪತ್ತೆಯಾಗಿದೆ. ಮೇಲ್ನೋಟಕ್ಕೆ ಬಾಳೆಹಣ್ಣಿಗೆ ವಿಷಹಾಕಿ ಮಂಗಗಳಿಗೆ ತಿನ್ನಲು ಕೊಟ್ಟು, ಅವು ಅರೆಪ್ರಜ್ಞಾವಸ್ಥೆ ತಲುಪಿದಾಗ ದೊಣ್ಣೆಯಿಂದ ಹೊಡೆದು ಸಾಯಿಸಿರುವ ಶಂಕೆ ಇದೆ. ಎಲ್ಲ ಮಂಗಗಳ ತಲೆಗೆ ಪೆಟ್ಟಾಗಿ ರಕ್ತ ಸುರಿದಿದೆ. ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಲಿದ್ದು, ವರದಿ ಬಂದ ನಂತರ ಸಾವಿಗೆ ನಿಖರವಾದ ಕಾರಣ ಗೊತ್ತಾಗಲಿದೆ ಎಂದು ಮಾಹಿತಿ ನೀಡಿದರು.

ಡಿ.ಕೆ ಸುರೇಶ್ ಸೋತ ಕ್ಷೇತ್ರದ ಉಸ್ತುವಾರಿ ಸಚಿವರ ವಿರುದ್ಧ ಡಿಕೆಶಿ ಅಸಮಾಧಾನ

ಸೋಲಿನ ಹೊಣೆ ಸಚಿವರ ಹೆಗಲಿಗೆ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಸೋತಿರುವ ಕ್ಷೇತ್ರಗಳ ಸೋಲಿಗೆ ಸಚಿವರನ್ನೇ ಹೊಣೆ ಮಾಡಲಾಗುವುದು ಎಂದು ರಾಹುಲ್ ಗಾಂಧಿ ಎಚ್ಚರಿಕೆ ನೀಡಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರಿಂದಿಗೆ ಮಾತನಾಡಿದ ಅವರು, 28 ಅಭ್ಯರ್ಥಿಗಳನ್ನು ರಾಹುಲ್ ಗಾಂಧಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಯಾವ ರೀತಿ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದ್ದಾರೆ. ಬೆಂಗಳೂರು, ದೆಹಲಿಯಲ್ಲಿಯೇ ಇರದೇ ಕ್ಷೇತ್ರದಲ್ಲಿ ಹೆಚ್ಚಾಗಿ ಇರಬೇಕು. ಜನರೊಂದಿಗಿರಬೇಕು. ಪರಾಜಿತರೂ ಜನರ ಮಧ್ಯೆಯಿರುವಂತೆ ಸೂಚನೆ ನೀಡಿದ್ದಾರೆ ಎಂದರು.

- ಬೆಂಗಳೂರು, ದೆಹಲಿಯಲ್ಲಿಯೇ ಇರದೇ ಕ್ಷೇತ್ರದಲ್ಲಿ ಹೆಚ್ಚಾಗಿ ಇರಬೇಕು.
- ಕ್ಷೇತ್ರದ ಜನರ ಮಧ್ಯೆಯಿರುವಂತೆ ಸೂಚನೆ
- ಪಕ್ಷ ಸಂಘಟನೆ ಮಾಡಲು ಡಿಸಿಎಂ ಸೂಚನೆ

ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿ ಕ್ಷೇತ್ರವಾರು ಸೋಲಿಗೆ ಕಾರಣವನ್ನು ಕೇಳಿದ್ದಾರೆ. ಆಗಿರುವ ನ್ಯೂನತೆ ಸರಿಪಡಿಸಿ ಪಕ್ಷ ಸಂಘಟನೆ ಮಾಡಲು ಸೂಚನೆ ನೀಡಿದ್ದು, ಒಂದು ಕಾರ್ಯಯೋಜನೆ ಮಾಡಿ, ಸೋಲಾಗಿರುವ ಕ್ಷೇತ್ರಗಳಲ್ಲಿನ ಸಮಸ್ಯೆ ಬಗ್ಗೆ ವರದಿ ನೀಡಲು ಸೂಚಿಸಿದ್ದಾರೆ. ವಿಧಾನಸಭೆ ಕ್ಷೇತ್ರವಾರು ವರದಿ ಕೇಳಿದ್ದಾರೆ. ಎಐಸಿಸಿ ಅಧ್ಯಕ್ಷರು, ಸಿಎಂ, ಡಿಸಿಎಂ ಬಳಿಯೂ ವರದಿ ಕೇಳಿದ್ದಾರೆ ಎಂದರು.

ಸಂಸತ್‌ನಲ್ಲಿ ರಾಜ್ಯದ ಧ್ವನಿಯಾಗಿ: ಈ ಹಿಂದೆಯಿದ್ದ ಸಂಸದರ ಪೈಕಿ ಒಬ್ಬರ ಹೊರತಾಗಿ ಉಳಿದವರು ರಾಜ್ಯದ ಪರವಾಗಿ ಧ್ವನಿ ಎತ್ತಲಿಲ್ಲ. ತೆರಿಗೆ ಅನ್ಯಾಯ, ಕಳಸಾ ಬಂಡೂರಿ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆ ಅನುದಾನ, ಹಣಕಾಸು ಆಯೋಗದ ಅನುದಾನ, ಫೆರಿಫೆರಲ್ ರಿಂಗ್ ರಸ್ತೆ ಸೇರಿದಂತೆ ರಾಜ್ಯಕ್ಕೆ ಬರಬೇಕಾದ ಅನುದಾನ ಹಾಗೂ ಯೋಜನೆಗಳು ಹಾಗೂ ಕೇಂದ್ರದ ಮಲತಾಯಿ ಧೋರಣೆ ವಿರುದ್ಧ ಧ್ವನಿ ಎತ್ತಬೇಕು. ರಾಜ್ಯಕ್ಕೆ ಹಾಗೂ ಮತದಾರರಿಗೆ ನ್ಯಾಯ ಒದಗಿಸಬೇಕು ಎಂದು ಸಲಹೆ ನೀಡಿದ್ದಾರೆ. ರಾಹುಲ್ ಗಾಂಧಿ ಅವರು ನ್ಯಾಯಾಲಯ ಹಾಗೂ ಕಾನೂನಿಗೆ ಗೌರವ ಕೊಟ್ಟು ವಿಚಾರಣೆಗೆ ಹಾಜರಾಗಿದ್ದಾರೆ. ಬಿಜೆಪಿ ನಾಯಕರಾದ ಯತ್ನಾಳ್ ಅವರೇ ಸಿಎಂ ಹುದ್ದೆಗೆ 2,500 ಕೋಟಿ ಹಾಗೂ ಮಾಧ್ಯಮಗಳಲ್ಲಿ ಬಂದಿದ್ದ ವರದಿ ಅನುಸಾರ ಸರಕಾರಿ ಹುದ್ದೆಗೆ ಹಿಂದಿನ ಸರಕಾರದ ರೇಟ್ ಕಾರ್ಡ್ ಅನ್ನು ಜಾಹೀರಾತು ರೂಪದಲ್ಲಿ ಕೊಟ್ಟಿದ್ದೆವು. ಈ ವಿಚಾರದಲ್ಲಿ ರಾಹುಲ್ ಗಾಂಧಿ ಅವರಿಗೂ ಈ ಪ್ರಕರಣಕ್ಕೂ ಸಂಬಂಧವೇ ಇಲ್ಲ. ಆದರೂ ಉದ್ದೇಶಪೂ ರ್ವಕವಾಗಿ ಅವರನ್ನು ಎಳೆದುತರಲಾಗಿದೆ ಎಂದು ಆರೋಪಿಸಿದರು.

ಗೆದ್ದವರು ರಾಜ್ಯದ ಪರ ಧ್ವನಿ ಎತ್ತಬೇಕು. ತೆರಿಗೆ ಅನ್ಯಾಯದ ಬಗ್ಗೆ, ನೀರಾವರಿ ಯೋಜನೆಗಳ ಬಗ್ಗೆ ಗಟ್ಟಿ ದನಿಯಲ್ಲಿ ಮಾತನಾಡಬೇಕು. ರಾಜ್ಯಕ್ಕಾಗಿರುವ ಮಲತಾಯಿ ಧೋರಣೆ ಕುರಿತು ಒಗ್ಗಟ್ಟಾಗಿ ಮಾತನಾಡಿ. ನಾವು 100 ಜನ ಸಂಸತ್‌ನಲ್ಲಿದ್ದೇವೆ. ನಮಗೆ ಹೆಚ್ಚಿನ ಸಮಯಾವಕಾಶ ಸಿಗುತ್ತೆ. ಎಲ್ಲರೂ ಅಧಿವೇಶನದಲ್ಲಿ ಕ್ಷೇತ್ರದ ಪರವಾಗಿ ಮಾತನಾಡಿ ಎಂದು ರಾಹುಲ್ ಸೂಚಿಸಿದ್ದಾರೆ.

- ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಬೆಂ.ಗ್ರಾಮಾಂತರದ ಸೋಲು ವೈಯಕ್ತಿಕ ಸೋಲು

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ನನ್ನ ತಮ್ಮ ಡಿ.ಕೆ. ಸುರೇಶ್ ಸೋಲು ನನ್ನ ವೈಯಕ್ತಿಕ ಸೋಲು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು ಗ್ರಾಮಾಂತರದ ಚುನಾವಣೆಯ ವಿಷಯದಲ್ಲಿ ನಾನು ಅತಿಯಾದ ಆತ್ಮವಿಶ್ವಾಸದಲ್ಲಿದ್ದೆ. ಅದು ಹುಸಿಯಾಗಿದೆ. ಈ ರೀತಿಯ ಸೋಲು ನಿರೀಕ್ಷಿಸಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬಿಜೆಪಿ ಹಾಗೂ ಜೆಡಿಎಸ್‌ನವರು ಒಳ್ಳೆಯ ತಂತ್ರಗಾರಿಕೆ ಮಾಡಿದರು. ಜೆಡಿಎಸ್ ಬದಲಾಗಿ ಬಿಜೆಪಿಯಿಂದ ಅಭ್ಯರ್ಥಿ ಕಣಕ್ಕಿಳಿಸಿದ ಅವರ ತಂತ್ರಗಾರಿಕೆ ಫಲಿಸಿದೆ. ನಮಗೆ ಮಾಗಡಿ ಮತ್ತು ರಾಮನಗರದಲ್ಲಿ ಒಳ್ಳೆಯ ಮುನ್ನಡೆ ಸಿಕ್ಕಿದೆ. ಕನಕಪುರದಲ್ಲಿ 60,000 ಮತಗಳ ಮುನ್ನಡೆ ನಿರೀಕ್ಷಿಸಿದ್ದೆ. ಆದರೆ, 20,000 ಮತಗಳ ಮುನ್ನಡೆ ಮಾತ್ರ ಸಿಕ್ಕಿದೆ. ಬಿಜೆಪಿ ಅಭ್ಯರ್ಥಿಗೆ ಬೆಂಗಳೂರು ದಕ್ಷಿಣ ಸೇರಿದಂತೆ ಕೆಲವು ಕ್ಷೇತ್ರಗಳಲ್ಲಿ ಒಳ್ಳೆಯ ಮುನ್ನಡೆ ಸಿಕ್ಕಿದೆ. ಹೀಗಾಗಿ ಅವರು ಗೆದ್ದರು ಎಂದು ಹೇಳಿದರು. ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸುರೇಶ್ ಸ್ಪರ್ಧೆಯ ಬಗ್ಗೆ ಗೊತ್ತಿಲ್ಲ. ಲೋಕಸಭಾ ಚುನಾವಣೆಯ ಸೋಲಿನ ದುಃಖದಿಂದ ಇನ್ನೂ ಹೊರಬಂದಿಲ್ಲ ಎಂದು ಹೇಳಿದರು.

ಮಾನನಷ್ಟ ಮೊಕದ್ದಮೆ ವಿಚಾರಣೆ ಜು.30ಕ್ಕೆ

ರಾಹುಲ್ ಗಾಂಧಿಗೆ ಜಾಮೀನು

ಬೆಂಗಳೂರು: ಬಿಜೆಪಿ ವಿರುದ್ಧ ಸುಳ್ಳು ಜಹೀರಾತು ಪ್ರಕಟಿಸಿದ್ದಾರೆಂದು ದಾಖಲಾಗಿರುವ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರಿಗೆ ಜಾಮೀನು ಮಂಜೂರಾಗಿದೆ.

ಕೆಲ ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಖುದ್ದು ಹಾಜರಾಗಿ ಜಾಮೀನು ಪಡೆದಿದ್ದರು. ಚುನಾವಣಾ ಕಾರಣ ನೀಡಿ, ರಾಹುಲ್ ಗಾಂಧಿ ಅವರಿಗೆ ಜೂನ್ 7ರವರೆಗೆ ವಿನಾಯಿತಿ ನೀಡುವಂತೆ ಮನವಿ ಮಾಡಲಾಗಿತ್ತು. ಈ ಹಿನ್ನಲೆಯಲ್ಲಿ ಶುಕ್ರವಾರ ಖುದ್ದು ಹಾಜರಾದ ರಾಹುಲ್ ಜಾಮೀನು ಪಡೆದಿದ್ದಾರೆ. ಷರತ್ತುಬದ್ಧ ಜಾಮೀನು ನೀಡಿರುವ ನ್ಯಾಯಾಲಯ ಅರ್ಜಿಯ ವಿಚಾರಣೆಯನ್ನು ಜುಲೈ 30ಕ್ಕೆ ವಿಸ್ತರಿಸಿದೆ. ಈ ನಡುವೆ ರಾಹುಲ್ ಗಾಂಧಿ ಅವರಿಗೆ ಶ್ಯೂರಿಟಿಯಾಗಿ ಮಾಜಿ ಸಂಸದ ಡಿ.ಕೆ. ಸುರೇಶ್ ಸಹಿ ಹಾಕಿದ್ದಾರೆ.

ಬೆಂಗಳೂರಿಗೆ ಆಗಮಿಸಿದ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಸಿಎಂ ಸಿದ್ದರಾಮಯ್ಯ ಸ್ವಾಗತಿಸಿದರು.

ಏನಿದು ಪ್ರಕರಣ?

2023ರಲ್ಲಿ ನಡೆದ ರಾಜ್ಯ ವಿಧಾನಸಭೆ ಚುನಾವಣೆಯ ವೇಳೆ, ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾ ರೂಢ ರಾಜ್ಯ ಬಿಜೆಪಿ ಸರಕಾರ ಶೇ. 40ರಷ್ಟು ಕಮಿಷನ್ ಸರಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ 1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರಕಾರ ' ಎಂದು ಆರೋಪಿಸಿ ದ್ದರು. ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ ಎಂದು ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್.ಕೇಶವಪ್ರಸಾದ್ ಖಾಸಗಿ ದೂರು ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮೊದಲ ಆರೋಪಿ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಹಾಗೂ ರಾಹುಲ್ ಗಾಂಧಿ ಕ್ರಮವಾಗಿ 2, 3 ಮತ್ತು 4ನೇ ಆರೋಪಿಗಳಾಗಿದ್ದಾರೆ.

ಯುವಜನರ ಭವಿಷ್ಯಕ್ಕೆ ಕೇಂದ್ರ ಸರಕಾರದ ಕ್ರಮ ಮಾರಕ

ನೀಟ್ ಅಕ್ರಮ: ಸಮಗ್ರ ತನಿಖೆಗೆ ಆಗ್ರಹ

ಬೆಂಗಳೂರು: ದೇಶಾದ್ಯಂತ ಭಾರಿ ಚರ್ಚೆಗೆ ಗ್ರಾಸವಾಗುತ್ತಿರುವ ನೀಟ್ ಅಕಮ್ರಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆಯಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ

ಆಗ್ರಹಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಬಿಡುಗಡೆಗೊಳಿಸಿರುವ ಅವರು, ನೀಟ್ ಫಲಿತಾಂಶದಲ್ಲಿ ಭಾರಿ ಅಕ್ರಮದ ಬಗ್ಗೆ ದೇಶಾದ್ಯಂತ ವ್ಯಕ್ತವಾಗುತ್ತಿದ್ದು, ಪರೀಕ್ಷೆ ಬರೆದಿರುವ 24 ಲಕ್ಷ ಯುವಜನರು, ಪೋಷಕರಲ್ಲಿ ಮೂಡಿರುವ ಆತಂಕಕ್ಕೆ, ಪರೀಕ್ಷೆಯ ವಿಶ್ವಾಸಾರ್ಹತೆ ಬಗ್ಗೆ ಎದ್ದಿರುವ ಪ್ರಶ್ನೆಗಳಿಗೆ ಎನ್‌ಟಿಎ ಆಗಲಿ, ಕೇಂದ್ರ ಸರಕಾರವಾಗಲಿ ಉತ್ತರಿಸದೇ ಲಕ್ಷಾಂತರ ಯುವಜನರ ಭವಿಷ್ಯವನ್ನು ಮಣ್ಣುಪಾಲು ಮಾಡಲು ಹೊರಟಿದೆ ಎಂದು ಟೀಕಿಸಿದ್ದಾರೆ.

ನೀಟ್‌ನಲ್ಲಿ 67 ಅಭ್ಯರ್ಥಿಗಳಿಗೆ 720ಕ್ಕೆ 720 ಅಂಕಗಳು ಬಂದಿವೆ. ಆದರೆ ಈ ಹಿಂದೆ ಬಂದಿದ್ದ ಟಾಪರ್‌ಗಳ ಸಂಖ್ಯೆ ಎಷ್ಟು? 2019ರಲ್ಲಿ ಒಬ್ಬ ವಿದ್ಯಾರ್ಥಿ, 2020ರಲ್ಲಿ ಒಬ್ಬ, 2021ರಲ್ಲಿ ಮೂವರು, 2022ರಲ್ಲಿ ಒಬ್ಬ, 2023ರಲ್ಲಿ ಇಬ್ಬರು ವಿದ್ಯಾರ್ಥಿಗಳು ನೂರಕ್ಕೆ ನೂರು ಪ್ರತಿಶತ ಅಂಕ ಪಡೆದಿದ್ದರೆ ಈ ವರ್ಷ ಮಾತ್ರ 67 ವಿದ್ಯಾರ್ಥಿಗಳು ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ಪ್ರತಿ ತಪ್ಪು ಉತ್ತರಕ್ಕೆ ಋಣಾತ್ಮಕ ಅಂಕಗಳಿರುವ ಕಾರಣ ಇಷ್ಟೊಂದು ಮಂದಿ ನೂರು ಪ್ರತಿಶತ ಅಂಕ ಗಳಿಸುವುದು ಅಸಾಧ್ಯ ಎನ್ನಿಸುತ್ತದೆ ಎಂದು ಅನುಮಾನ ಹೊರಹಾಕಿದ್ದಾರೆ.

2019 ರಿಂದ 2023ರವರೆಗೆ, ನೀಟ್ ಪರೀಕ್ಷೆಯಲ್ಲಿ 600 ಅಂಕಗಳನ್ನು ಗಳಿಸಿದವರು ಕೈಗೆಟುಕುವ ಶುಲ್ಕದಲ್ಲಿ ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸುಲಭವಾಗಿ ಪ್ರವೇಶ ಪಡೆದಿದ್ದರು. ಈ ವರ್ಷ ನೀಟ್ ಪರೀಕ್ಷೆಯ ಅಂಕಮಿತಿ 137 ಅಂಕಗಳಿಂದ 164 ಕ್ಕೆ ಏರಿಕೆಯಾಗಿದೆ. ಈ ಬಾರಿ 660 ಅಂಕಗಳಿಸಿದ ಅಭ್ಯರ್ಥಿಗಳು ಮಾತ್ರ ಕೈಗೆಟಕುವ ಶುಲ್ಕದಲ್ಲಿ ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಬಹುದು. ಆದರೆ 24 ಲಕ್ಷಕ್ಕೂ ಹೆಚ್ಚು ಯುವಕರು ಬಹುತೇಕ ಬಡ-ಮಧ್ಯಮ ವರ್ಗದ ಕುಟುಂಬಗಳಿಂದ ಬಂದವರು. ವೈದ್ಯರಾಗುವ ಹಂಬಲ ಹೊಂದಿದವರು. ಆದರೆ ಈ ಪರೀಕ್ಷಾ ಗೊಂದಲದಿಂದಾಗಿ ಲಕ್ಷಾಂತರ ಯುವಕರ ಕನಸುಗಳು ನುಚ್ಚುನೂರಾಗಿದೆ ಎಂದು ಆರೋಪಿಸಿದ್ದಾರೆ.

ನೊಂದ ಪರೀಕ್ಷಾರ್ಥಿಗಳ ಅಹವಾಲು ಆಲಿಸಿ

ಬರೀ ವಿವಾದಗಳಿಂದಲೇ ತುಂಬಿರುವ ಮತ್ತು ಯುವಜನರು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿರುವ ಎನ್‌ಟಿಎ ನೀಟ್ ವ್ಯವಸ್ಥೆ ನಿಜಕ್ಕೂ ಎಂತಹದ್ದು ಎಂಬ ಪ್ರಶ್ನೆ ಕಾಡಲಾರಂಭಿಸಿದೆ. ನರೇಂದ್ರ ಮೋದಿಯವರ ಸರಕಾರ ರಚನೆ ಮತ್ತು ಸಂಸದರ ಖರೀದಿಯ ಕಸರತ್ತು ಮುಗಿದಿದ್ದರೆ ಮತ್ತಷ್ಟು ಯುವಜನರು ಪ್ರಾಣ ಕಳೆದುಕೊಳ್ಳುವ ಮುನ್ನ ಪರೀಕ್ಷಾ ಅಕ್ರಮದ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಮತ್ತು ನೊಂದ ಪರೀಕ್ಷಾರ್ಥಿಗಳ ಅಹವಾಲು ಆಲಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಶಾಸಕ ತಮ್ಮಣ್ಣವರ್ ಆರೋಪಕ್ಕೆ ಜಾರಕಿಹೊಳಿ ತಿರುಗೇಟು

ಯಾರನ್ನೂ ನಾನು ಟಾರ್ಗೆಟ್ ಮಾಡಿಲ್ಲ

ಬೆಳಗಾವಿ: ಅಥಣಿ ಮತಕ್ಷೇತ್ರದಲ್ಲಿ ನಮಗೆ 10 ಸಾವಿರ ಲೀಡ್ ಸಿಕ್ಕರೂ ಸಂತೋಷ ಇತ್ತು. ಆದರೆ 7 ಸಾವಿರ ಮೈನಸ್ ಆಗಿದ್ದರಿಂದ ನೋವಾಗಿದೆ. ಅನಾವಶ್ಯಕವಾಗಿ ನಾವು ಯಾರನ್ನು ಟಾರ್ಗೆಟ್ ಮಾಡಿಲ್ಲ. ಅಥಣಿ, ಕುಡಚಿ ಮತಕ್ಷೇತ್ರದಲ್ಲಿ ಏಕೆ ಸಮಸ್ಯೆಯಾಗಿದೆ ಎಂಬುವುದನ್ನು ಸ್ವತಃ ಕಣ್ಣಾರೆ ಕಂಡಿದ್ದೇನೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಮಹೇಂದ್ರ ತಮ್ಮಣ್ಣವರ್ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಚುನಾವಣೆ ಇನ್ನೆರಡು ದಿನ ಇರುವಾಗ ಸ್ವತಃ ಕುಡಚಿಯಲ್ಲಿ ನಾನೆ ಟಿಕಾಣಿ ಹುಡಿದರೂ ಶಾಸಕ ಮಹೇಂದ್ರ ತಮ್ಮಣ್ಣವರ್ ನನ್ನ ಕೈಗೆ ಸಿಕ್ಕಿಲ್ಲ. ಇನ್ನು ಅಥಣಿಯಲ್ಲಿ 77 ಸಾವಿರ ವಿಧಾನಸಭೆ ಚುನಾವಣೆಯಲ್ಲಿ ಲೀಡ್ ಸಿಕ್ಕಿತ್ತು. ಆದರೆ ಲೋಕಸಭೆ ಚುನಾವಣೆಯಲ್ಲಿ 7 ಸಾವಿರ ಮೈನಸ್ ಆಗಿದೆ. ಕನಿಷ್ಠ 10 ಸಾವಿರ ಲೀಡ್ ಸಿಕ್ಕರೂ ಸಂತೋಷ ಇತ್ತು. ಮೈನಸ್ ಆಗಿದ್ದರಿಂದ ನಾನು ಕಾರ್ಯಕರ್ತರಿಗೆ ಅಲ್ಲಿ ನಡೆದ ಬೆಳವಣಿಗೆಗಳನ್ನು ತಿಳಿಸಿದ್ದೇನೆಂದರು.

ಇನ್ನು ಶಾಸಕರಾದ ಲಕ್ಷ್ಮಣ ಸವದಿ, ಮಹೇಂದ್ರ ತಮ್ಮಣ್ಣವರ್ ಅಥಣಿಯಲ್ಲಿ ಸೇರಿದ್ದ ಬಗ್ಗೆ ಮಾತನಾಡಿದ ಅವರು, ಜನ, ಕಾರ್ಯಕರ್ತರು, ಪಕ್ಷ ನಮ್ಮ ಪರ ಇದೆ. ನಮ್ಮನ್ನು ವಿರೋಧಿಸಲು ಅವರು ಯಾರು ಎಂದು ಪ್ರಶ್ನಿಸಿದರು. ತಾವು ಏನು ಮಾಡಿದ್ದಾರೆ ಎಂದು ಮನವರಿಕೆ ಮಾಡಿಕೊಳ್ಳಬೇಕು. ಶಾಸಕರ ಬಗ್ಗೆ ದೂರು ನೀಡಲ್ಲ. ದೂರು ನೀಡಿದರೂ ನಮ್ಮಲ್ಲಿ ಇದುವರೆಗೆ ಯಾರ ಮೇಲೆಯೂ ಕ್ರಮವಾಗಿಲ್ಲ. ಇವರು ಮಾಡಿದ್ದರ ಬಗ್ಗೆ ಜನಕ್ಕೆ ತಿಳಿಸುತ್ತೇನೆಂದರು ಹೇಳಿದರು.

ಚಿಕ್ಕೋಡಿ ಲೋಕಸಭೆ ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಶಾಸಕರು ಲೀಡ್ ಕೊಟ್ಟಿದ್ದಾರೆ. ಅಥಣಿಯಲ್ಲಿ ಶಾಸಕ ಸವದಿ ಅವರು ಲೀಡ್ ಕೊಟ್ಟಿದ್ದರೆ ಅವರ ನಮ್ಮ ಬಾಂಧವ್ಯ ಚೆನ್ನಾಗಿ ಉಳಿಯತ್ತಿತ್ತು. ಆದರೆ ಈಗ ನಮ್ಮಿಂದ ಅಂತರ ಕಾಯ್ದುಕೊಂಡಿದ್ದಾರೆ. ಚುನಾವಣೆಗಿಂತ ಮುಂಚೆ ಪ್ರಿಯಾಂಕಾಗೆ ಲೀಡ್ ಕೊಡುತ್ತೇನೆ ಎಂದು ಅವರೇ ಸ್ವತಃ ಹೇಳಿದ್ದರು. ಆದರೆ 7 ಸಾವಿರ ಮೈನಸ್ ಆಗಿದ್ದರಿಂದ ಅಥಣಿ ಜನತೆ ಅವರನ್ನೇ ಪ್ರಶ್ನಿಸುತ್ತಿದ್ದಾರೆ. ಜನಕ್ಕೆ ಅವರೇ ಉತ್ತರ ನೀಡಬೇಕೆಂದು ತಿಳಿಸಿದರು.

ಗ್ಯಾರಂಟಿಗಳು ಮುಂದೆವರೆಯುತ್ತವೆ. ಲೋಕಸಭೆ ಚುನಾವಣೆಯಲ್ಲಿ ಗ್ಯಾರಂಟಿಗಳ ಪರಿಣಾಮ ಬೀರಿದೆ. ಕಳೆದ ಬಾರಿ ಚುನಾವಣೆಗೆ ಹೋಲಿಸಿದರೆ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರ ಕಡಿಮೆಯಾಗಿದೆ. ಹೀಗಾಗಿ ಚುನಾವಣೆಯಲ್ಲಿ ಗ್ಯಾರಂಟಿಗಳ ಪರಿಣಾಮ ಬೀರಿದೆ. ಗ್ಯಾರಂಟಿಗಳನ್ನು ಮುಂದುವರೆಯುವ ಅವಶ್ಯಕತೆ ಇದೆ.

-ಸತೀಶ್ ಜಾರಕಿಹೊಳಿ, ಸಚಿವ

ಮೂರು ಜಿಲ್ಲೆಗಳು ಆಗಬೇಕು

ಬೆಳಗಾವಿ ವಿಭಜಿಸಿ ಚಿಕ್ಕೋಡಿ, ಗೋಕಾಕ ಕೇಂದ್ರವಾಗಿ ಇನ್ನೆರಡು ಹೊಸ ಜಿಲ್ಲೆಗಳಾಗಬೇಕು. ಬೆಳಗಾವಿ ಜಿಲ್ಲೆ ಪ್ರಾದೇಶಿಕವಾಗಿ ಬಹಳ ದೊಡ್ಡದಿದೆ. ಆಡಳಿತದ ದೃಷ್ಟಿಯಿಂದ ಇದು ಸರಿಯಲ್ಲ. ಜಿಲ್ಲೆ ವಿಭಜನೆ ಆಗಬೇಕು ಎಂದು ನಾನು ಹಿಂದೆಯೂ ಹೇಳಿದ್ದೆ. ಈಗಲೂ ಅಷ್ಟೇ. ಆಡಳಿತ ಸುಗಮವಾಗಲು ಗೋಕಾಕ- ಚಿಕ್ಕೋಡಿಯನ್ನು ಜಿಲ್ಲೆಯನ್ನಾಗಿ ಮಾಡಬೇಕಿದೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಉತ್ತರಾಖಂಡದ ದುರಂತದಲ್ಲಿ ಮೃತಪಟ್ಟಿದ್ದ ಕರ್ನಾಟಕದ ಚಾರಣಿಗರು

ಒಂಬತ್ತು ಮೃತದೇಹಗಳ ಹಸ್ತಾಂತರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉತ್ತರಾಖಂಡ್‌ನ ಸಹಸ್ತ್ರಾಳ್ ಪ್ರದೇಶದಲ್ಲಿ ಚಾರಣ ನಡೆಸುವ ವೇಳೆ ಹಿಮಪಾತಕ್ಕೆ ಸಿಲುಕಿ ಕೊನೆಯುಸಿರು ಎಳೆದ ಕರ್ನಾಟಕದ ಒಂಬತ್ತು ಜನರ ಮೃತದೇಹಗಳನ್ನು ಬೆಂಗಳೂರು ತರಲಾಗಿದ್ದು, ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ.

ಮೃತದೇಹಗಳು ವಿಶೇಷ ವಿಮಾನದ ಮೂಲಕ ಶುಕ್ರವಾರ ಬೆಳಗ್ಗೆ ಬೆಂಗಳೂರು ತಲುಪಿದವು. ಈಗಾಗಲೇ ಬದುಕುಳಿದಿದ್ದ ಚಾರಣಿಗರು ಗುರುವಾರ ರಾತ್ರಿಯೇ ಬೆಂಗಳೂರಿಗೆ ಆಗಮಿಸಿದರು. ಸುರಕ್ಷಿತವಾಗಿ ಚಾರಣಿಗರು ಮರಳಿರುವುದನ್ನು ಕಂಡು ಅವರ ಪೋಷಕರು, ಬಂಧು, ಮಿತ್ರರು ನಿಟ್ಟುಸಿರು ಬಿಟ್ಟಿದ್ದಾರೆ. ಮಕ್ಕಳು ಸುರಕ್ಷಿತವಾಗಿ ಮರಳಿರುವುದನ್ನು ಕಂಡು ಪೋಷಕರು ರಾಜ್ಯ ಸರಕಾರ ಹಾಗೂ ಕಂದಾಯ ಸಚಿವ ಕೃಷ್ಣಬೈರೇಗೌಡರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ.

ಉತ್ತರಾಖಂಡ್ ಸಹಸ್ತ್ರಾಳ್ ಪ್ರದೇಶದಲ್ಲಿ ಮೃತಪಟ್ಟಿದ್ದ 9 ಚಾರಣಿಗರ ಮೃತ ದೇಹಗಳನ್ನು ದೆಹಲಿಯಿಂದ ವಿವಿಧ ವಿಮಾನಗಳ ಮೂಲಕ ಬೆಂಗಳೂರಿಗೆ ತರಲಾಗಿದ್ದು, ಮೃತದೇಹಗಳನ್ನು ಅವರ ಬಂಧುಗಳಿಗೆ ಹಸ್ತಾಂತರಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದ್ದಾರೆ. ಪದ್ಮಿನಿ ಹೆಗ್ಡೆ, ವೆಂಕಟೇಶ ಪ್ರಸಾದ್, ಆಶಾ ಸುಧಾಕರ್, ಪದ್ಮನಾಭ ಕುಂದಾಪು, ಕೃಷ್ಣಮೂರ್ತಿ, ಸಿಂಧು ವಕೇಕಲಂ, ವಿನಾಯಕ ಮುಂಗೂರ್ವಾಡಿ, ಸುಜಾತ ಮುಂಗೂರ್ವಾಡಿ, ಚೈತ್ರ ಪ್ರಣೀತ್, ಅನಿತಾ ರಂಗಪ್ಪ ಅವರ ಮೃತ ದೇಹಗಳನ್ನು ಬೆಂಗಳೂರಿಗೆ ತರಲಾಗಿದೆ. ವಿಮಾನದ ಮೂಲಕ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೃತ ದೇಹಗಳನ್ನು ತರಲಾಗಿದ್ದು, ಆಯಾ ಮೃತ ದೇಹಗಳನ್ನು ಸಂಬಂಧಿಕರಿಗೆ ನೀಡಲಾಗಿದೆ.

ಬೆಂಗಳೂರಿನಲ್ಲಿ 9 ಜನರ ಮೃತದೇಹಗಳಿಗೆ ಸಚಿವ ಕೃಷ್ಣಬೈರೇಗೌಡ ಅಂತಿಮ ನಮನ ಸಲ್ಲಿಸಿದರು.

ಸತತ ಎರಡು ದಿನಗಳ ಕಾಲ ಶ್ರಮವಹಿಸಿ ಬದುಕಿದ್ದ ಚಾರಣಿಗರನ್ನು ಸುರಕ್ಷಿತವಾಗಿ ಕರೆತರಲಾಗಿದೆ. ಹಾಗೆಯೇ ಮೃತದೇಹಗಳನ್ನು ವಾರಸುದಾರರಿಗೆ ತಲುಪಿಸಿ ರಾಜ್ಯ ಸರಕಾರ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದೆ. ಮೃತಪಟ್ಟವರ ಆತ್ಮಕ್ಕೆ ಸದ್ಗತಿ ದೊರೆಯಲಿ ಹಾಗೂ ಮೃತರ ಬಂಧು ಬಾಂಧವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ.

- ಕೃಷ್ಣಬೈರೇಗೌಡ, ಸಚಿವ

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರತಿಕ್ರಿಯೆ

ತಪ್ಪು ಅಭ್ಯರ್ಥಿ ಆಯ್ಕೆ ನಿರ್ಧಾರ ಅಯೋಧ್ಯೆಯಲ್ಲಿ ಬಿಜೆಪಿಗೆ ಸೋಲು

ಬೆಳಗಾವಿ: ಅರ್ಹ ಅಭ್ಯರ್ಥಿಗಳಿಗೆ ಟಿಕೆಟ್ ಕೊಡಲಿಲ್ಲ. ಹಾಗಾಗಿ, ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ. ಅಯೋಧ್ಯೆಯಲ್ಲಿ ಬಿಜೆಪಿ ಸೋತಿದ್ದು ಕೂಡ ಅಭ್ಯರ್ಥಿ ಆಯ್ಕೆಯಲ್ಲಿನ ತಪ್ಪು ನಿರ್ಧಾರದಿಂದ ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಸ್ವಾಮೀಜಿ, ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ಮತದಾರರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಮತದಾನ ಮತ್ತು ಅಭ್ಯರ್ಥಿಗಳ ಆಯ್ಕೆ ಮತದಾರರ ವೈಯಕ್ತಿಕ ಸ್ವಾತಂತ್ರ್ಯ. ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಸರಿಯಾಗಿರಲಿಲ್ಲ. ಹಾಗಾಗಿಯೇ ಸೋತಿರಬಹುದು ಎಂದು ವಿಶ್ಲೇಷಿಸಿದರು. ಕಾಶಿ ಮತ್ತು ಮಥುರಾ ದೇವಾಲಯಗಳನ್ನು ಮರಳಿ ಪಡೆಯಲು ಕಾನೂನಾತ್ಮಕ ಹೋರಾಟ ಪ್ರಗತಿಯಲ್ಲಿದೆ. ಬೀದಿಯಲ್ಲಿ ನಿಂತು ಹೋರಾಟ ಮಾಡು ವುದಕ್ಕಿಂತ ಕಾನೂನು ಹೋರಾಟ ಉತ್ತಮ ಎಂದು ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. ಅಯೋಧ್ಯೆಯ ರಾಮ ಮಂದಿರ ಪ್ರಕರಣದಲ್ಲಿ ಕಾನೂನಿನ ಮೂಲಕವೇ ನಮಗೆ ನ್ಯಾಯ ಸಿಕ್ಕಿದೆ. ಈ ಹಿಂದೆ ನಮಗಾದ ಅನ್ಯಾಯಗಳನ್ನು ಈಗಲಾದರೂ ಸರಿಪಡಿ ಸಬೇಕಿದೆ. ನ್ಯಾಯಯುತ ಹೋರಾಟದಲ್ಲಿ ಜಯ ಸಿಗಬೇಕಿದೆ. ಈಗಲೂ ಎಲ್ಲವೂ ಕಾನೂನು ಪ್ರಕಾರವೇ ನಡೆಸಲಾಗುತ್ತಿದೆಯೇ ವಿನಃ ಅಭಿಯಾನ ನಡೆಸುತ್ತಿಲ್ಲ. ಈ ಕುರಿತು ಸಾಧು ಸಂತರ ಸಭೆಗಳಲ್ಲಿ ಚರ್ಚಿಸುತ್ತೇವೆ ಎಂದು ಹೇಳಿದರು.

ರಾಜ್ಯ ಕಾಂಗ್ರೆಸ್ ಸರಕಾರ ಹಿಂದೂ ಧಾರ್ಮಿಕ ಕೇಂದ್ರಗಳನ್ನು, ಮಠ ಮಂದಿರಗಳನ್ನು ಮುಜರಾಯಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳಲು ಮುಂದಾಗಿರುವುದು ಸರಿಯಲ್ಲ. ಎಲ್ಲರನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಅದನ್ನು ಬಿಟ್ಟು ಒಂದೇ ಧರ್ಮವನ್ನು ಗುರಿಯಾಗಿಸಿಕೊಂಡು ಕ್ರಮ ಕೈಗೊಳ್ಳುವುದು ಸರಿಯಲ್ಲ. ಹೀಗೆ ಮಾಡಿದರೆ ಅನ್ಯಾಯ ಮಾಡಿದಂತಾಗುತ್ತದೆ.

-ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಪೇಜಾವರ ಮಠದ

ವಿಶ್ವವಾಣಿ

ಸಂಪಾದಕೀಯ

ಖಲಿಸ್ತಾನಿ ಶಕ್ತಿಗಳ ಜಯ ಆತಂಕದ ವಿಚಾರ

18ನೇ ಲೋಕಸಭೆಗೆ ಆಯ್ಕೆಯಾದ 543 ಸಂಸದರಲ್ಲಿ 251 ಮಂದಿ ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ ಎಂದು ದೇಶದ ಪ್ರಜಾಸತ್ತೆಯ ಸುಧಾರಣೆಗೆ ಹೋರಾಡುತ್ತಿರುವ ಎಡಿಆರ್ ಸಂಘಟನೆ ತಿಳಿಸಿದೆ. ಪ್ರಜಾಪ್ರಭುತ್ವದ ದೇಗುಲದಲ್ಲಿ ಧನಿಕರು ಮತ್ತು ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳ ಹಾಜರಿ ಹೆಚ್ಚುತ್ತಲೇ ಸಾಗಿದೆ. ಈ ಚುನಾವಣೆಯಲ್ಲಿ ಪಂಜಾಬ್‌ನಿಂದ ದೇಶದ್ರೋಹದ ಆರೋಪ ಎದುರಿಸುತ್ತಿರುವ ಇಬ್ಬರು ಖಲಿಸ್ತಾನಿ ಬೆಂಬಲಿಗರು ಸಂಸತ್ತಿಗೆ ಆಯ್ಕೆಯಾಗಿರುವುದು ಕಳವಳಕಾರಿ ವಿಚಾರ. ಇದಲ್ಲದೆ ಉಗ್ರರಿಗೆ ಹಣಕಾಸು ನೆರವು ನೀಡುತ್ತಿರುವ ಆರೋಪದ ಮೇಲೆ ಬಂಧಿತ ಮಾಜಿ ಶಾಸಕ ಅಬ್ದುಲ್ ರಶೀದ್ ಜೈಲಿನಲ್ಲಿದ್ದುಕೊಂಡೇ ಕಾಶ್ಮೀರದ ಬಾರಾಮುಲ್ಲಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸಂಸತ್ತಿಗೆ ಆಯ್ಕೆಯಾಗಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಖಲಿಸ್ತಾನಿ ಪರ ಸಂಘಟನೆಗಳು ಮತ್ತೆ ಸಕ್ರಿಯವಾಗಿರುವುದು ನಿಜಕ್ಕೂ ಚಿಂತಿಸಬೇಕಾದ ವಿಚಾರ. ಈ ಶಕ್ತಿಗಳು ಕೆನಡಾ ಸೇರಿದಂತೆ ವಿದೇಶಗಳಲ್ಲಿ ದೇಣಿಗೆ ಸಂಗ್ರಹಿಸುವುದರ ಜೊತೆಗೆ ದೇಶ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಕೃಷಿ ಕಾಯಿದೆಯನ್ನು ವಿರೋಧಿಸಿ ದೆಹಲಿಯಲ್ಲಿ ರೈತರು ನಡೆಸಿದ ಪ್ರತಿಭಟನೆಯಲ್ಲಿ ಖಲಿಸ್ತಾನಿ ಪರ ಶಕ್ತಿಗಳೂ ಭಾಗವಹಿಸಿದ್ದವು ಎಂಬ ದೂರುಗಳು ಕೇಳಿ ಬಂದಿದ್ದವು. ಇದೀಗ ಭಾರತದ ಸಂವಿಧಾನ ಮತ್ತು ಸಾರ್ವಭೌಮತೆಯಲ್ಲಿ ನಂಬಿಕೆ ಇಲ್ಲ ಎಂದು ಸಾರಿದ ಇಬ್ಬರು ಖಲಿಸ್ತಾನಿವಾದಿಗಳು ಸಂಸತ್ತು ಪ್ರವೇಶಿಸಲು ಸಜ್ಜಾಗಿದ್ದಾರೆ. ರಾಷ್ಟ್ರೀಯ ಭದ್ರತಾ ಕಾಯಿದೆಯಡಿ ಬಂಧಿತ ಅಮೃತ್ ಪಾಲ್ ಸಿಂಗ್ ಜೈಲಿನಲ್ಲಿದ್ದು ಕೊಂಡೇ ಪಂಜಾಬಿನ ಖಾಡುರ್ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾನೆ. ಈತ ಪಂಜಾಬಿನ ಉಳಿದ ಎಲ್ಲ ಅಭ್ಯರ್ಥಿಗಳಿಗಿಂತ ಹೆಚ್ಚು 1,97,120 ಮತಗಳ ಅಂತರದಲ್ಲಿ ಗೆದ್ದಿರುವುದು ಉಲ್ಲೇಖನೀಯ ಅಂಶ. ಫರೀದ್‌ಕೋಟ್ ಕ್ಷೇತ್ರದಿಂದ ಗೆದ್ದಿರುವ ಸರಬ್‌ಜಿತ್ ಸಿಂಗ್ ಖಾಲ್ಸಾ ಮಾಜಿ ಪ್ರಧಾನಿ ಇಂದಿರಾಗಾಂಧಿ ಹಂತಕ ಬಿಯಾಂತ್‌ಸಿಂಗ್ ಪುತ್ರ. ಇವರಿಬ್ಬರಿಗೂ ಕೆನಡಾ ಮೂಲದ ನಿಷೇಧಿತ 'ಸಿಖ್ಸ್ ಫಾರ್ ಜಸ್ಟೀಸ್' ಸಂಘಟನೆ ಹಣಕಾಸು ನೆರವು ನೀಡಿದೆ ಎನ್ನಲಾಗುತ್ತಿದೆ. ಇವರಿಬ್ಬರಲ್ಲದೆ ಶಿರೋಮಣಿ ಅಕಾಲಿದಳದ ಮಾಜಿ ಸಂಸದ ಸಿಮ್ರಾನ್‌ಜಿತ್ ಸಿಂಗ್ ಮಾನ್ ಸೇರಿದಂತೆ ಏಳು ಮಂದಿ ಖಲಿಸ್ತಾನ್ ಬೆಂಬಲಿಗ ಅಭ್ಯರ್ಥಿಗಳು ಈ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದರು. ಆರಿಸಿ ಬಂದರೆ ಕ್ಷೇತ್ರದಲ್ಲಿ ಹೇರ್ ಸೆಲೂನ್‌ಗಳನ್ನು, ಬ್ಯೂಟಿಪಾರ್ಲರ್‌ಗಳನ್ನು, ಮದ್ಯ ಮತ್ತು ಮಾಂಸದಂಗಡಿಗಳನ್ನು ಮುಚ್ಚಿಸುವುದಾಗಿ, ಸಿಖ್ ಯುವಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುವುದಾಗಿ ಅಮೃತ್‌ಪಾಲ್ ಸಿಂಗ್ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ. ಒಂದೆಡೆ ಭಾರತವನ್ನು ತನಗೆ 'ಬೆದರಿಕೆ ಯಾಗಿರುವ' ರಾಷ್ಟ್ರ ಎಂದು ಪರಿಗಣಿಸಿರುವ ಕೆನಡಾ ಮತ್ತು ಪಾಕಿಸ್ತಾನದ ಐಎಸ್‌ಐ ಗುಪ್ತಚರ ಸಂಸ್ಥೆ ಖಲಿಸ್ತಾನಿ ಶಕ್ತಿಗಳಿಗೆ ಬೆಂಬಲ ನೀಡುತ್ತಿವೆ. ಇನ್ನೊಂದೆಡೆ ಈ ಶಕ್ತಿಗಳು ಹಲವು ವರ್ಷಗಳ ಬಳಿಕ ಭಾರತದಲ್ಲಿ ನೆಲೆ ಕಂಡುಕೊಳ್ಳುತ್ತಿವೆ. ಪಂಜಾಬಿನಲ್ಲಿ ಮತ್ತೆ ಹಿಂಸೆ ಮತ್ತು ಅಸ್ಥಿರತೆ ತಲೆ ಎತ್ತದಂತೆ ನೋಡಿಕೊಳ್ಳಬೇಕಾಗಿದೆ. ದೇಶದ ಸಮಗ್ರತೆ ಮತ್ತು ಏಕತೆ ವಿಚಾರದಲ್ಲಿ ಎಲ್ಲ ಪಕ್ಷಗಳು ಒಗ್ಗಟ್ಟಿನಿಂದ ನಿರ್ಧಾರ ಕೈಗೊಳ್ಳಬೇಕು.

ಸೊಂಪಾದಕೀಯ

ಈ ದೇಶ ಗಂಡಸರಿಗಲ್ಲ

ನಮ್ಮ ಸಮಾಜದಲ್ಲಿ ಆಗಾಗ ಕೇಳಿಬರುವ, ಅದರಲ್ಲೂ ಮಹಿಳೆಯರ ವಿಷಯ ಬಂದಾಗೆಲ್ಲ ತೇಲಿಬರುವ ಪದಪುಂಜ ಅಂದ್ರೆ, ಇದು ಪುರುಷ ಪ್ರಧಾನ ಸಮಾಜ ಅನ್ನೋದು. ಆದರೆ ಸಮಾಜದಲ್ಲಿ ನಿಜವಾಗಿಯೂ ಕೆಲವು ಕಟ್ಟಳೆ, ಕಾನೂನು ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯತೆ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ನಿಜವಾದ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡ ಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜೊತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದು ಎಂಬಂತೆ ಸರ್ಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ನಮ್ಮ ಕಾಂಗ್ರೆಸ್ ಸರ್ಕಾರ ಅಂತೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹ ಲಕ್ಷ್ಮೀ ಯೋಜನೆ ಅಡಿಯಲ್ಲಿ ಹಣ ಎನ್ನುತ್ತಾ ಗಂಡಸರನ್ನು ಮರೆತೇಬಿಟ್ಟಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಹಣ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋದರ ಬದಲು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಪಾಪ ಇಲ್ಲೂ ಪಾಪಿ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ನಾವು ಯಾರ ಹಿಂದೆ ಬಿದ್ದಿದ್ದೇವೆ?

ಒಂದು ಸಂಸ್ಥೆ ಅಥವಾ ಕಂಪನಿಯ ಮುಖ್ಯಸ್ಥನಾದವನು, ಪ್ರಚಾರಕ್ಕಾಗಿ ಪತ್ರಕರ್ತರ ಹಿಂದೆ ಬಿದ್ದರೆ ಅಥವಾ ಯಾವುದೋ ಕೆಲಸಕ್ಕಾಗಿ ರಾಜಕಾರಣಿಯ ಹಿಂದೆ ಬಿದ್ದರೆ, ಆ ಸಂಸ್ಥೆಯಲ್ಲಿ ಎಲ್ಲವೂ ಸರಿ ಇಲ್ಲ ಎಂದರ್ಥ. ಪ್ರಚಾರಕ್ಕಾಗಿ ಹಾತೊರೆಯುವ ಸಮಯದಲ್ಲಿ, ತನ್ನ ಸಿಬ್ಬಂದಿ, ತನ್ನ ತಂಡದವರ ಜತೆ ಕಳೆದರೆ, ಅವರ ಸಮಸ್ಯೆಗಳಿಗೆ ಕಿವಿಯಾದರೆ, ಆತ ಅವೆಷ್ಟೋ ಸಮಸ್ಯೆಗಳನ್ನು ಇತ್ಯರ್ಥಪಡಿಸಬಹುದು. ಯಾವತ್ತೂ ಕಂಪನಿಯ ಮುಖ್ಯಸ್ಥನಾದವನು ಪತ್ರಕರ್ತರ ಹಿಂದೆ, ರಾಜಕಾರಣಿಗಳ ಹಿಂದೆ ಬೀಳಬಾರದು. ಅದರ ಬದಲು ಅವರೇ ಇವನ ಹಿಂದೆ ಬೀಳಬೇಕು. ಕಂಪನಿಯ ಮುಖ್ಯಸ್ಥನ ಸಂದರ್ಶನಕ್ಕಾಗಿ ಪತ್ರಕರ್ತರು ಹಾತೊರೆಯುವಂತಾಗಬೇಕು. ರಾಜಕಾರಣಿಗಳ ಹಿಂದೆ ಬಿದ್ದರೆ, ಅವರ ಮರ್ಜಿಯಲ್ಲಿ ಇದ್ದಂತಾಗುತ್ತದೆ. ಅವರು ಈಡೇರಿಸಲಾಗದ ಷರತ್ತುಗಳನ್ನು ಹಾಕುತ್ತಾರೆ. ರಾಜಕಾರಣಿಗಳು ಮತ್ತು ಪತ್ರಕರ್ತರು ನಿಮ್ಮ ಭೇಟಿಗೆ ಕಾಯುತ್ತಿದ್ದಾರೆ ಅಂದರೆ, ನೀವು ಒಬ್ಬ ಸಂಸ್ಥೆಯ ಮುಖ್ಯಸ್ಥರಾಗಿ, ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದೀರಿ ಎಂದು ಭಾವಿಸಬಹುದು. ಯಾವತ್ತೂ ಒಂದು ಕಂಪನಿಯ ಮುಖ್ಯಸ್ಥರು ಹೆಚ್ಚಿನ ಸಮಯವನ್ನು ತನ್ನ ಸಂಸ್ಥೆಯಲ್ಲಿ ಕಳೆಯಬೇಕು. ತನ್ನ ತಂಡದ ಪ್ರಮುಖರೊಂದಿಗೆ ಕಳೆಯಬೇಕು. ಅವರ ಹೊಸ ಯೋಚನೆಗಳಿಗೆ ಕಿವಿಯಾಗಬೇಕು. ಅವರ ಜತೆ ಸದಾ ಆಲೋಚನೆಗಳನ್ನು ಹಂಚಿಕೊಳ್ಳಬೇಕು. ಅವರ ಐಡಿಯಾಗಳನ್ನೂ ಕೇಳಬೇಕು. ನಿತ್ಯ ಜನರ ಜತೆ ಇರುವ ರಾಜಕಾರಣಿಗೂ, ವರ್ಷಕ್ಕೊಮ್ಮೆ ಮತದಾರರಿಗೆ ಮುಖ ತೋರಿಸುವ ರಾಜಕಾರಣಿಗೂ ಸಾಕಷ್ಟು ವ್ಯತ್ಯಾಸವಿರುತ್ತದೆ. ಈ ಮಾತು ಕಂಪನಿಯ ಮುಖ್ಯಸ್ಥರಿಗೂ ಅನ್ವಯ. ಸಂಸ್ಥೆಯ ಮುಖ್ಯಸ್ಥರಾಗಿ ತಿಂಗಳಿಗೊಮ್ಮೆ ನೀವು ಕಚೇರಿಗೆ ಹೋದರೆ, ನಿಮ್ಮ ಆದ್ಯತೆಗಳೇನು ಎಂಬುದು ಉದ್ಯೋಗಿಗಳಿಗೆ ಗೊತ್ತಾಗುವುದಿಲ್ಲ. ಅವರು ನಿಮ್ಮ ಮತ್ತು ಸಂಸ್ಥೆಯ ಧ್ಯೇಯೋದ್ದೇಶಗಳಿಂದ ವಿಮುಖರಾಗುತ್ತಾರೆ. ಅವರಿಗೆ ನಿಶ್ಚಿತವಾದ ಗುರಿ ಇಲ್ಲದಂತಾಗುತ್ತದೆ. ನಾಯಕನಾದವನು ಅಥವಾ ಕಂಪನಿಯ ಸಿಇಒ ಆದವನು ಯಾವತ್ತೂ ನಿಂತ ನೆಲದಲ್ಲಿ ಬೇರು ಬಿಟ್ಟಿರಬೇಕು. ಆತನಿಗೆ ಸಮಸ್ಯೆಗಳ ಪರಿಚಯವಿರುತ್ತದೆ. ಆತ ಆ ಸಮಸ್ಯೆಗಳನ್ನು ತನ್ನ ಜನರನ್ನು ಸೇರಿಸಿಕೊಂಡು ಪರಿಹರಿಸುತ್ತಾನೆ. ನಿಮ್ಮ ತಂಡದ ಸದಸ್ಯರನ್ನೆಲ್ಲರನ್ನೂ ಒಟ್ಟಾಗಿ ತೊಡಗಿಸಿಕೊಂಡರೆ, ಅವರ ಆಲೋಚನೆಗಳು ಮುಖ್ಯಸ್ಥರಾದವರ ಸುತ್ತಲೂ ಸುತ್ತುತ್ತಿರುತ್ತವೆ. ನೀವು ಅವರ ಜತೆ ಇದ್ದರೆ ಸಾಕು, ತನ್ನಷ್ಟಕ್ಕೇ ಕೆಲಸಗಳಾಗುತ್ತವೆ. ನಿಮ್ಮ ಉಪಸ್ಥಿತಿಯೇ ಅವರಿಗೆ ಹೊಸ ಹುಮ್ಮಸ್ಸು ನೀಡಿದಂತಾಗುತ್ತದೆ. ಅವರ ಕೆಲಸಗಳನ್ನು ನೋಡದಿದ್ದರೆ, ಅವರನ್ನು ಹುರಿದುಂಬಿಸದಿದ್ದರೆ ಅವರಿಗೆ ಪ್ರೇರಣೆ ಸಿಗಲು ಸಾಧ್ಯವಿಲ್ಲ. ನಿಜವಾದ ನಾಯಕನಾದವನು ಜನರ ಮಧ್ಯೆ ಇರುತ್ತಾನೆ. ಹಾಗೆಯೇ ಕಂಪನಿಯ ಮುಖ್ಯಸ್ಥನಾದವನು ತನ್ನ ಸಿಬ್ಬಂದಿ, ತನ್ನ ತಂಡದವರ ಜತೆಗಿರುತ್ತಾನೆ. ನಾಯಕತ್ವವೆಂದರೆ ಎಷ್ಟೋ ಸಲ ನಾಯಕತ್ವವನ್ನು ತೋರಿಸಿಕೊಳ್ಳುವುದೂ ಆಗಿರುತ್ತದೆ. ರಿಮೋಟ್ ಕಂಟ್ರೋಲ್ ಮೂಲಕ ಜನರನ್ನು ನಿಯಂತ್ರಿಸುತ್ತೇನೆಂದು ಯಾರಾದರೂ ಬಯಸಿದರೆ, ಅದು ಹೆಚ್ಚು ದಿನಗಳ ಕಾಲ ನಡೆಯುವುದಿಲ್ಲ. ಜಗತ್ತಿನಲ್ಲಿ ಉತ್ತಮ ನಾಯಕನಾದವರು ಮತ್ತು ಉತ್ತಮ ಸಂಸ್ಥೆಗಳನ್ನು ಕಟ್ಟಿದವರೆಲ್ಲರೂ ತಮ್ಮ ಮಾತು, ಕ್ರಿಯೆ ಮತ್ತು ನಾಯಕತ್ವದಿಂದಲೇ ಜನರ ಮೇಲೆ ಪ್ರಭಾವ ಬೀರಿದವರು. ಜನರಿಗೆ ತಮ್ಮನ್ನು ತೊಡಗಿಸಿಕೊಳ್ಳಲು ಒಂದು ಗುರಿ, ಆಶಯ, ಧ್ಯೇಯ ಮತ್ತು ನಾಯಕಬೇಕು. ಹೀಗಾಗಿ ನಾಯಕನಾದವರು ಮತ್ತು ಸಂಸ್ಥೆಯ ಮುಖ್ಯಸ್ಥರಾದವರು ತಾವು ಯಾರ ಹಿಂದೆ ಬಿದ್ದಿದ್ದೇವೆ ಮತ್ತು ಯಾರ ಜತೆಯಲ್ಲಿದ್ದೇವೆ ಎಂಬುದನ್ನು ಆಗಾಗ ನೋಡಿಕೊಳ್ಳುತ್ತಿರಬೇಕು.

ದಕ್ಷಿಣದಲ್ಲಿ ಬಿಜೆಪಿ ಕಮಾಲ್

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಸ್ವತಂತ್ರ ಭಾರತದ ಇತಿಹಾಸದಲ್ಲಿ ನೆಹರು ನಂತರ ಸತತವಾಗಿ ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಆಯ್ಕೆಯಾದವರು ನರೇಂದ್ರ ಮೋದಿ. ಇಂದಿರಾ ಗಾಂಧಿ ಮೂರನೇ ಬಾರಿಗೆ ಪ್ರಯತ್ನ ಪಟ್ಟರೂ ಸಹ, ದೇಶದ ಜನರ ಮೇಲೆ ತುರ್ತು ಪರಿಸ್ಥಿತಿ ಹೇರಿದ್ದರ ಪರಿಣಾಮ ಹೀನಾಯವಾಗಿ ಸೋತರು. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಒಕ್ಕೂಟ 292 ಕ್ಷೇತ್ರಗಳನ್ನು ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಿದ್ದರೂ ಸಹ ವಿರೋಧ ಪಕ್ಷಗಳು ಮೋದಿಯವರದ್ದು ದೊಡ್ಡ ಸೋಲೆಂಬಂತೆ ಬಿಂಬಿಸುವ ಪ್ರಯತ್ನ ಮಾಡಿದವು, ಇಂಡಿ ಒಕ್ಕೂಟಕ್ಕಿಂತಲೂ ಭಾರತೀಯ ಜನತಾ ಪಕ್ಷ ಗೆದ್ದಿರುವ ಸೀಟುಗಳು ಹೆಚ್ಚಿದ್ದರೂ ಸಹ ತಮ್ಮ ಸೋಲನ್ನು ಸಂಭ್ರಮಿಸುತ್ತಿದ್ದರು. ಭಾರತೀಯ ಜನತಾ ಪಕ್ಷವನ್ನು ಕೇವಲ ಹಿಂದಿ ಮಾತನಾಡುವ ರಾಜ್ಯಗಳಿಗೆ ಸೀಮಿತವಾದ ಉತ್ತರ ಭಾರತದ ಪಕ್ಷವೆಂದು ವಿರೋಧಿಗಳು ಹೇಳುತ್ತಿದ್ದರು, ಆದರೆ 2024ರ ಲೋಕಸಭಾ ಚುನಾವಣೆಯಲ್ಲಿ ದೇಶದ ನಾಲ್ಕೂ ದಿಕ್ಕುಗಳಲ್ಲಿಯೂ ಭಾರತೀಯ ಜನತಾ ಪಕ್ಷ ತನ್ನ ಅಸ್ತಿತ್ವವನ್ನು ತೋರಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಂತೂ ಭಾರತೀಯ ಜನತಾ ಪಕ್ಷದ ನೆಲೆಯೇ ಇಲ್ಲದಂತೆ ವಿರೋಧಿಗಳು ಮಾತನಾಡುತ್ತಿದ್ದರು, ಪಂಚರಾಜ್ಯಗಳ ಚುನಾವಣೆಗಳನ್ನು ಗೆದ್ದಾಗ ಕಾಂಗ್ರೆಸ್ಸಿನ ಪಿ.ಚಿದಂಬರಂ ದಕ್ಷಿಣದಲ್ಲಿ ಬಿಜೆಪಿಗೆ ಜನರು ಮನ್ನಣೆ ನೀಡುವುದಿಲ್ಲವೆಂದು ಟ್ವೀಟ್ ಮಾಡಿದ್ದರು. ತಮಿಳುನಾಡಿನ ಸ್ಟಾಲಿನ್ ಕುಟುಂಬದ ಸಂಸದರು ಸಂಸತ್ತಿನಲ್ಲಿ ಬೇಕಂತಲೇ ಹಿಂದಿಯನ್ನು ವಿರೋಧಿಸುವ ಸಲುವಾಗಿ, ಹಿಂದಿ ಹೇರಿಕೆ ಎಂಬ ನಿರೂಪಣೆಯನ್ನು ಮೋದಿಯವರ ವಿರುದ್ಧ ಚುನಾ ವಣೆಯ ಸಂದರ್ಭದಲ್ಲಿ ಮುನ್ನೆಲೆಗೆ ತರುತ್ತಿದ್ದರು. ಆದರೆ 2024ರ ಲೋಕಸಭಾ ಚುನಾವಣೆಯಲ್ಲಿ ತಮಿಳುನಾಡಿನ ಚಿತ್ರಣ ಸಂಪೂರ್ಣ ಬದಲಾಗಿದೆ, ಬಿಜೆಪಿ ತನ್ನ ಖಾತೆ ಯನ್ನು ಅಧಿಕೃತವಾಗಿ ತೆರೆಯದಿದ್ದರೂ ಸಹ ಮತಗಳಿಕೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದೆ. ಬಿಜೆಪಿಯ ಒಟ್ಟಾರೆ ರಾಜ್ಯದ ಮತಪ್ರಮಾಣ ಶೇ.11.24 ರಷ್ಟಿದೆ, ಆಡಳಿತಾರೂಢ ಡಿ.ಎಂ.ಕೆ ಪಕ್ಷಕ್ಕೆ 1,16,89,879 ಮತಗಳು ಬಿದ್ದಿವೆ, ಬಿ.ಜೆ.ಪಿಗೆ 48,80,984 ಬಿದ್ದಿವೆ. ತಮಿಳುನಾಡಿನ ಪ್ರಮುಖ ಕ್ಷೇತ್ರಗಳಾದ ಚೆನ್ನೈ ಸೆಂಟ್ರಲ್ ನಲ್ಲಿ ಶೇ.23, ಚೆನ್ನೈ ದಕ್ಷಿಣದಲ್ಲಿ ಶೇ.26, ವೆಲ್ಲೂರಿನಲ್ಲಿ ಶೇ.31, ಕೊಯಮತ್ತೂರಿನಲ್ಲಿ ಶೇ.32, ನೀಲಗಿರೀಸ್ (ಊಟಿ)ಯಲ್ಲಿ ಶೇ.22, ಪೊಲ್ಲಾಚಿಯಲ್ಲಿ ಶೇ.19, ತೆಂಕಾಶಿಯಲ್ಲಿ ಶೇ.20, ತಿರುನಲ್ವೇಲಿಯಲ್ಲಿ ಶೇ.31, ಮದುರೈನಲ್ಲಿ ಶೇ.22ರಷ್ಟು ಮತಗಳು ಭಾರತೀಯ ಜನತಾ ಪಕ್ಷಕ್ಕೆ ಸಿಕ್ಕಿದೆ. ಬಿ.ಜೆ.ಪಿಯ ಮಿತ್ರಪಕ್ಷಗಳ ಮತಗಳಿಕೆಯ ಪ್ರಮಾಣ ಶೇ.5.5ರಷ್ಟಿದ್ದು, ಒಟ್ಟಾರೆ ಮಿತ್ರಪಕ್ಷಗಳ ಜೊತೆಗೂಡಿ ತಮಿಳುನಾಡಿನಲ್ಲಿ ಮತಪ್ರಮಾಣ ಶೇ.16 ಕ್ಕೆ ತಲುಪಿದೆ. ಬಿಜೆಪಿಯವರು ಹಿಂದಿವಾಲಗಳು, ಆರ್ಯರು, ಉತ್ತರ ಭಾರತದವರು ಅವರಿಗೆ ತಮಿಳುನಾಡಿನಲ್ಲಿ ನೆಲೆಯೂರಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದವರಿಗೆ 2024ರ ಫಲಿತಾಂಶ ದೊಡ್ಡ ಪೆಟ್ಟನ್ನು ನೀಡಿದೆ. ಸಾಕ್ಷಿಯಿಲ್ಲದ ಟೊಳ್ಳು ದ್ರಾವಿಡ ಮತ್ತು ಆರ್ಯ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಆರು ದಶಕಗಳ ಕಾಲ ರಾಜಕೀಯ ಮಾಡಿದ ದ್ರಾವಿಡ ಪಕ್ಷಗಳಿಗೆ ಬಿಜೆಪಿಯ ತಮಿಳುನಾಡಿನ ಫಲಿತಾಂಶ ಶಾಕ್ ನೀಡಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಲೋಕಸಭೆಯಲ್ಲಿ ಗಳಿಸಿರುವ ಮತಪ್ರಮಾಣವನ್ನು ಗಮನಿಸಿದರೆ 2026 ರಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ತಮಿಳುನಾಡಿನಲ್ಲಿ ಉತ್ತಮ ಫಲಿತಾಂಶ ನೀಡುವುದರಲ್ಲಿ ಯಾವುದೇ ಅನುಮಾನವಿಲ್ಲ, ಸತತ 10 ವರ್ಷಗಳ ಪಕ್ಷದ ನಾಯಕರ ಶ್ರಮ ಮತ್ತು ಅಣ್ಣಾಮಲೈ ನೇತೃತ್ವ ಬಿಜೆಪಿಯ 2024ರ ಚುನಾವಣಾ ಫಲಿತಾಂಶದಲ್ಲಿ ಕಾಣುತ್ತಿದೆ.

ದಕ್ಷಿಣ ಭಾರತದ ಮತ್ತೊಂದು ರಾಜ್ಯ ಕೇರಳ, ಸತತವಾಗಿ ಕಮ್ಯುನಿಸ್ಟರ ಆಡಳಿತದಲ್ಲಿ ಅಭಿವೃದ್ಧಿಯನ್ನು ಕಾಣದೆ ತನ್ನದೇ ಲೋಕದಲ್ಲಿರುವ ರಾಜ್ಯವಿದು. ಸ್ವಾಮಿ ವಿವೇಕಾನಂದರು ಕೇರಳಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಅಲ್ಲಿನ ಸಮಾಜದಲ್ಲಿದ್ದ ಜಾತಿಗಳ ನಡುವಣ ಅಸಮಾನತೆಯನ್ನು ಕಂಡು ಹುಚ್ಚರ ಸಂತೆ ಎಂದಿದ್ದರು. ಅಸಮಾನತೆಯನ್ನೇ ಬಳಸಿಕೊಂಡಂತಹ ಕಮ್ಯುನಿಸ್ಟರು ಕೇರಳ ರಾಜ್ಯದಲ್ಲಿ ಹಲವು ದಶಕಗಳ ಕಾಲ ನೆಲೆಯೂರಿ ರಾಜಕಾರಣ ಮಾಡಿದರು. ಬದಲಾದ ಕಾಲಘಟ್ಟದಲ್ಲಿ ಕೇರಳದ ಮತದಾರರು ತಮ್ಮ ಪೂರ್ವಜರ ಮನಸ್ಥಿತಿಯನ್ನೇ ಮುಂದುವರೆಸಿಕೊಂಡು ಬಂದರು. 2024ರ ಲೋಕಸಭೆ ಚುನಾವಣೆಯಲ್ಲಿ ಕೇರಳದಲ್ಲಿ ಬಿ.ಜೆ.ಪಿಯ ಮತಪ್ರಮಾಣ ಶೇ.16.68 ರಷ್ಟಿದೆ, ರಾಜ್ಯದಲ್ಲಿ ಒಟ್ಟಾರೆ 32,96,354 ಮತಗಳು ಬಿ.ಜೆ.ಪಿಗೆ ಸಿಕ್ಕಿದೆ, ಕಮ್ಯುನಿಸ್ಟರಿಗೆ ಸುಮಾರು 51,00,000 ಮತಗಳು ಬಿದ್ದಿದ್ದರೆ, ಕಾಂಗ್ರೆಸ್ಸಿಗೆ ಸುಮಾರು 69,00,000 ಮತಗಳು ಬಿದ್ದಿವೆ. ಮೊಟ್ಟಮೊದಲ ಬಾರಿಗೆ ಕೇರಳದ ತ್ರಿಶೂರ್ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಸುರೇಶ್ ಗೋಪಿ ಗೆದ್ದಿದ್ದಾರೆ, ಮಾಜಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ತಿರುವನಂತಪುರಂ ಕ್ಷೇತ್ರದಿಂದ ಶಶಿ ತರೂರ್ ವಿರುದ್ಧ ಸ್ಪರ್ಧಿಸಿದ್ದರು. ಶೇ.35ರಷ್ಟು ಮತಗಳಿಸಿ ಕೇವಲ 16,077 ಮತಗಳಿಂದ ಸೋತಿದ್ದಾರೆ, ಬಿಜೆಪಿ ಅಲಪ್ಪುಲದಲ್ಲಿ ಶೇ.28, ಅಳತೂರಿನಲ್ಲಿ ಶೇ.18, ಅಟ್ಟಿನಗಳ್ ಕ್ಷೇತ್ರದಲ್ಲಿ ಶೇ.31, ಕಾಸರಗೋಡಿನಲ್ಲಿ ಶೇ.19, ಪಾಲಕ್ಕಾಡಿನಲ್ಲಿ ಶೇ.24, ಪತಣಂತಿಟ್ಟ ಕ್ಷೇತ್ರದಲ್ಲಿ ಶೇ.25ರಷ್ಟು ಮತಗಳನ್ನು ಗಳಿಸಿದೆ.

ತೆಲಂಗಾಣ ರಾಜ್ಯದಲ್ಲಿ ಹತ್ತು ವರ್ಷಗಳ ಶ್ರಮ ಭಾರತೀಯ ಜನತಾ ಪಕ್ಷದ ಕೈಹಿಡಿದೆ, ಸತತವಾಗಿ ಛಲಬಿಡದೆ ಪಕ್ಷ ಕಟ್ಟುವ ಕೆಲಸ ಕಳೆದ ಒಂದು ದಶಕದಿಂದ ನಡೆಯುತ್ತಿತ್ತು. 2014 ರ ಲೋಕಸಭಾ ಚುನಾವಣೆಯಲ್ಲಿ ಮತಗಳಿಕೆಯ ಪ್ರಮಾಣ ಶೇ.10.50 ರಷ್ಟಿತ್ತು ಮತ್ತು ಒಂದು ಕ್ಷೇತ್ರವನ್ನು ಗೆದ್ದಿತ್ತು, 2019 ರಲ್ಲಿ ಮತಗಳಿಕೆಯ ಪ್ರಮಾಣ ಶೇ.19.65 ಕ್ಕೆ ಏರಿಕೆಯಾಗಿ ನಾಲ್ಕು ಕ್ಷೇತ್ರವನ್ನು ಬಿಜೆಪಿ ಗೆದ್ದಿತ್ತು, 2024 ರ ಚುನಾವಣೆಯಲ್ಲಿ ಮತಗಳಿಕೆ ಪ್ರಮಾಣ ಶೇ.36 ಕ್ಕೆ ಏರಿಕೆಯಾಗಿ ಎಂಟು ಕ್ಷೇತ್ರಗಳಲ್ಲಿ ಬಿ.ಜೆ.ಪಿ ಜಯಭೇರಿ ಬಾರಿಸಿದೆ. ಹೈದರಾಬಾದಿನ ಪಾಲಿಕೆ ಚುನಾವಣೆಯಲ್ಲಿ 48 ವಾರ್ಡುಗಳನ್ನು ಗೆಲ್ಲುವ ಮೂಲಕ 2020ರಲ್ಲಿ ಬಿ.ಜೆ.ಪಿ ಕಮಾಲ್ ಮಾಡಿತ್ತು, ನಂತರ 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಂಟು ಕ್ಷೇತ್ರಗಳನ್ನು ಗೆಲ್ಲುವ ಮೂಲಕ ತನ್ನ ನೆಲೆಯನ್ನು ಮತ್ತಷ್ಟು ಭದ್ರ ಮಾಡಿಕೊಂಡಿತ್ತು. ಬಂಡಿ ಸಂಜಯ್ ರೆಡ್ಡಿ, ಕಿಶನ್ ಕುಮಾರ್‌ರಂತಹ ನಾಯಕರು ಸತತವಾಗಿ ಪಕ್ಷ ಕಟ್ಟುವ ಕೆಲಸ ಮಾಡುತ್ತಾ ಬಂದ ಪರಿಣಾಮ ದಕ್ಷಿಣ ಭಾರತದಲ್ಲಿ ತೆಲಂಗಾಣ ರಾಜ್ಯ ಇಂದು ಬಿ.ಜೆ.ಪಿಯ ಭದ್ರ ಕೋಟೆಯಾಗುವತ್ತ ಸಾಗುತ್ತಿದೆ. ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಯಾದ ಬಿ.ಎಲ್.ಸಂತೋಷ್ ಅವರ ಪಕ್ಷ ಸಂಘಟನೆಯ ನಿರಂತರ ಶ್ರಮ ಬಿಜೆಪಿಗೆ ದಕ್ಷಿಣದ ರಾಜ್ಯಗಳಾದ ತೆಲಂಗಾಣ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಕಾಣುತ್ತಿದೆ.

ಟಿ.ಆರ್.ಎಸ್ ಪಕ್ಷದ ಚಂದ್ರಶೇಖರ್ ರಾವ್ ಬಿ.ಎಲ್.ಸಂತೋಷ್ ಅವರ ಪಕ್ಷ ಸಂಘಟನೆಯನ್ನು ಗಮನಿಸಿ, ಭಾರತೀಯ ಜನತಾ ಪಕ್ಷದ ವೇಗಕ್ಕೆ ಕಡಿವಾಣ ಹಾಕಲು ಅವರ ಮೊಬೈಲ್ ಟ್ಯಾಪ್ ಮಾಡಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದಿದ್ದರೆಂಬ ಆಘಾತಕಾರಿ ಅಂಶವೂ ಇತ್ತೀಚೆಗೆ ವರದಿಯಾಗಿತ್ತು. ಚಂದ್ರಶೇಖರ್ ರಾವ್ ತಮ್ಮ ಮಗಳನ್ನು ದೆಹಲಿಯ ಲಿಕ್ಕರ್ ಹಗರಣದಿಂದ ಮುಕ್ತಿಗೊಳಿಸಲು ಹೂಡಿದ್ದ ದೊಡ್ಡ ಷಡ್ಯಂತ್ರದ ಭಾಗವಾಗಿತ್ತೆಂಬ ಮತ್ತೊಂದು ಅಂಶ ಬಯಲಾಯಿತು. ಮುಂದಿನ ಕೆಲವೇ ಕೆಲವು ವರ್ಷಗಳಲ್ಲಿ ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಕ್ಷ ಸ್ವತಂತ್ರವಾಗಿ ಅಧಿಕಾರ ಹಿಡಿಯಲು ಮುಂಚೂಣಿಯಲ್ಲಿರುವ ಮತ್ತೊಂದು ರಾಜ್ಯ ತೆಲಂಗಾಣ. 2024ರ ಚುನಾವಣೆಯಲ್ಲಿ ಇಡೀ ದೇಶದ ಗಮನಸೆಳೆದ ಹೈದರಾಬಾದ್ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿಯ ಮಾಧವಿ ಲತಾ ಓ.ವೈ.ಸಿಗೆ ಸರಿಯಾದ ಠಕ್ಕರ್ ನೀಡಿದ್ದರು. ಚುನಾವಣೆ ಗೆಲ್ಲಲು ಸಾಧ್ಯವಾಗದಿದ್ದರೂ ಮುಸ್ಲಿಂ ಮತಬ್ಯಾಂಕಿನ ಭದ್ರಕೋಟೆಯಾಗಿದ್ದ ಕ್ಷೇತ್ರದಲ್ಲಿ ಮಾಧವಿ ಲತಾ ಶೇ.29% ಮತಗಳಿಸಿದ್ದರು, ಹಿಂದೂ ಧರ್ಮದ ಮೇಲಿನ ಅವರ ಅಪಾರ ನಿಷ್ಠೆ ತೆಲಂಗಾಣದ ಇತರ ಕ್ಷೇತ್ರಗಳ ಮೇಲೂ ಪರಿಣಾಮ ಬೀರಿತ್ತು.

2024 ರಲ್ಲಿ ಆಂಧ್ರ ಪ್ರದೇಶದಲ್ಲಿ ಎನ್.ಡಿ.ಎ ಮೈತ್ರಿಕೂಟ ಅದ್ಭುತ ಸಾಧನೆ ಮಾಡಿದೆ, ಭಾರತೀಯ ಜನತಾ ಪಕ್ಷ ತೆಲುಗು ದೇಶಂ ಪಕ್ಷ ಮತ್ತು ಜನಸೇನಾ ಪಕ್ಷಗಳ ಮೈತ್ರಿ ಜಗನ್ ಮೋಹನ್ ರೆಡ್ಡಿ ಮತ್ತು ಕಾಂಗ್ರೆಸ್ ಪಕ್ಷವನ್ನು ಧೂಳಿಪಟ ಮಾಡಿದೆ. ಭಾರತೀಯ ಜನತಾ ಪಕ್ಷ ಮೂರು ಕ್ಷೇತ್ರಗಳನ್ನು ಗೆದ್ದಿದೆ, ಭಾರತೀಯ ಜನತಾ ಪಕ್ಷದ ಮತಗಳಿಕೆಯ ಪ್ರಮಾಣ ಶೇ.11.28 ಕ್ಕೇರಿದೆ, ಚುನಾವಣೆಯಲ್ಲಿ ನಿಂತ ಮೂರು ಕ್ಷೇತ್ರಗಳಲ್ಲಿ ಜಯಗಳಿಸಿದೆ. ತೆಲುಗು ನಟ ಪವನ್ ಕಲ್ಯಾಣ್ 2014 ರಲ್ಲಿ ಜನಸೇನಾ ಪಕ್ಷ ಸ್ಥಾಪನೆ ಮಾಡಿದಾಗ ಸ್ಪರ್ಧಿಸಿದ್ದ ಎರಡು ಕ್ಷೇತ್ರದಲ್ಲಿ ನಿಂತು ಸೋತಿದ್ದರು, ಸೋತರೂ ಧೃತಿಗೆಡದೆ ಮತ್ತೆ 2019 ಮತ್ತು 2024 ರಲ್ಲಿ ಸ್ಪರ್ಧಿಸಿ ಪಕ್ಷದ ಪರವಾಗಿ ಪ್ರಚಾರ ಮಾಡಿದ್ದರು. 2024ರ ವಿಧಾನಸಭೆಯಲ್ಲಿ ಸ್ಪರ್ಧಿಸಿದ್ದ 21 ಕ್ಷೇತ್ರದಲ್ಲಿ 21 ಕ್ಷೇತ್ರಗಳನ್ನು ಗೆದ್ದಿದ್ದಾರೆ, ಲೋಕಸಭೆಯಲ್ಲಿ ಸ್ಪರ್ಧಿಸಿದ್ದ ಎರಡು ಕ್ಷೇತ್ರಗಳನ್ನು ಗೆದ್ದು ಶೇ.100 ರಷ್ಟು ಅಂಕ ಗಳಿಸಿದ್ದಾರೆ. ಪವನ್ ಕಲ್ಯಾಣ್ ವಿಶಾಖ ಪಟ್ಟಣದಲ್ಲಿ ಏರ್ಪಡಿಸಿದ್ದ ಪಾದಯಾತ್ರೆಯನ್ನು ಜಗನ್ ಸರಕಾರ ತಡೆದಿತ್ತು, ಜನಸೇನಾ ಪಕ್ಷದ ಕಾರ್ಯಕರ್ತರನ್ನು ಸಿಕ್ಕಸಿಕ್ಕಲ್ಲಿ ಬಂಧಿಸಿ ಜೈಲಿಗಟ್ಟಿತ್ತು. 'ಪವನ್‌ಕಲ್ಯಾಣ್'ರನ್ನು ಹೋಟೆಲಿನಲ್ಲಿ ಗೃಹ ಬಂಧನದಲ್ಲಿಟ್ಟಿತು. ಪವನ್ ಕಲ್ಯಾಣ್ ಕಾರನ್ನು ತಡೆದಿತ್ತು. ತನ್ನ ಕಾರನ್ನು ತಡೆದರೂ ಧೃತಿಗೆಡದ ಪವನ್ ಕಲ್ಯಾಣ್ ಬರಿಗಾಲಿನಲ್ಲಿ ನಡೆದು ಕಾರ್ಯಕ್ರಮಕ್ಕೆ ತೆರಳುವ ದೃಶ್ಯಗಳು ಸಾಮಾನ್ಯವಾಗಿದ್ದವು. ಪವನ್‌ಕಲ್ಯಾಣ್ ತಮ್ಮ ಭಾಷಣದಲ್ಲಿ ಜಗನ್ ಮೋಹನ್ ರೆಡ್ಡಿಯವರಿಗೆ ಚಪ್ಪಲಿಯಲ್ಲಿ ಹೊಡೆಯುವುದಾಗಿ ಹೇಳಿದ್ದರು. ಕಳೆದ ಒಂದು ವರ್ಷದಿಂದ ಆಂಧ್ರ ಪ್ರದೇಶದ ಚುನಾವಣೆಯಲ್ಲಿ ತೆಲುಗು ಸಿನಿಮಾ ಮಾದರಿಯ ಅನೇಕ ಘಟನೆಗಳು ನಡೆ ದವು. ಜಗನ್ ಮೋಹನ್ ರೆಡ್ಡಿಯ ದ್ವೇಷ ರಾಜಕೀಯದ ಪರಿಣಾಮ ಚಂದ್ರಬಾಬು ನಾಯ್ಡು ಅವರನ್ನು ಸೆಪ್ಟೆಂಬರ್ 2023ರಲ್ಲಿ ಬಂಧಿಸಿ ಜೈಲಿಗಟ್ಟಿದ್ದರು. ಜಗನ್ ಅಧಿಕಾರಕ್ಕೆ ಬಂದ ನಂತರ ಆಂಧ್ರದಲ್ಲಿ ಹಿಂದೂ ಧರ್ಮಕ್ಕೆ ಅಪಚಾರ ವೆಸಗುವ ಹಲವು ಘಟನೆಗಳು ನಡೆದವು, ತಿರುಪತಿಯಲ್ಲಿ ಕ್ರಿಶ್ಚಿಯನ್ ಸಮು ದಾಯದವರನ್ನು ನಿರ್ದೇಶಕರನ್ನಾಗಿ ಮಾಡಲಾಗಿತ್ತು. ಲೀಲಾಜಾಲವಾಗಿ ಕ್ರಿಶ್ಚಿಯನ್ ಮಿಷನರಿಗಳ ಮತಾಂತರ ಸಿಕ್ಕ ಸಿಕ್ಕಲ್ಲಿ ನಡೆಯುತ್ತಿದ್ದವು, ಮತಾಂತರ ವನ್ನು ಪೋಷಿಸುತ್ತಲೇ ಬಂದ ಜಗನ್ ಇಡೀ ರಾಜ್ಯದಲ್ಲಿ ಹಿಂದುಗಳಿಂದ ದೂರವಾದರು. ದಕ್ಷಿಣ ಭಾರತದ ಭಾಗವಾಗಿಲ್ಲದಿದ್ದರೂ, ಭಾರತೀಯ ಜನತಾ ಪಕ್ಷದ ನಿರಂತರ ಪರಿಶ್ರಮದ ಫಲಿತಾಂಶ ಒಡಿಶಾ ರಾಜ್ಯದಲ್ಲಿ ಈ ಬಾರಿ ಕಂಡಿದೆ, ದಶಕಗಳ ಪ್ರಯತ್ನದ ಫಲವಾಗಿ 24 ವರ್ಷಗಳ ಕಾಲ ನಿರಂತರವಾಗಿ ಆಡಳಿತ ನಡೆಸಿದ್ದ ಬಿಜು ಜನತಾದಳ ಅಧಿಕಾರ ಕಳೆದುಕೊಂಡಿದೆ. ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 78 ಕ್ಷೇತ್ರಗಳಲ್ಲಿ ಗೆದ್ದು ಬಹುಮತ ಪಡೆದು ಭಾರತೀಯ ಜನತಾ ಪಕ್ಷ ಅಧಿಕಾರ ಹಿಡಿದಿದೆ. ಲೋಕಸಭೆಯ 21 ಸ್ಥಾನ ಗಳ ಪೈಕಿ 20 ಸ್ಥಾನಗಳನ್ನು ಗೆದ್ದಿದೆ. ಒಡಿಶಾದಲ್ಲಿ ಮೊದಲ ಬಾರಿಗೆ ಪಕ್ಷ ಸಂಘಟಿಸಲು ಮುಂದಾದಾಗ ಕಡಿಮೆ ಮತಗಳಿಕೆ ಸಿಕ್ಕಿತೆಂಬ ಕಾರಣಕ್ಕೆ ಕೈಬಿಟ್ಟಿದ್ದರೆ, ಇಂದು ಅಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ, ಒಡಿಶಾ ಉದಾಹರಣೆ ಮುಂದಿರುವ ಬೆನ್ನಲ್ಲೇ ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಬಿಜೆಪಿಯ ಭವಿಷ್ಯ ಕಾಣುತ್ತಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಮೊದಲ ಬಾರಿಗೆ ಅಧಿಕಾರಕ್ಕೆ ತಂದ ಕೀರ್ತಿ ಯಡಿಯೂರಪ್ಪನವರಿಗೆ ಸಲ್ಲುತ್ತದೆ, ಬಿಜೆಪಿ ಅಧಿಕಾರ ಹಿಡಿದ ದಿನದಿಂದಲೂ ಕನ್ನಡಿಗರು ಕೇಂದ್ರ ದಲ್ಲಿ ಬಿಜೆಪಿ ಪಕ್ಷದ ಪರವಾಗಿ ನಿಂತಿದ್ದಾರೆ. 2024 ರ ಚುನಾವಣೆಯಲ್ಲೂ ಸಹ ಭಾರತೀಯ ಜನತಾ ಪಕ್ಷ ಕರ್ನಾಟಕದಿಂದ 17 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ತನ್ನ ಗೆಲುವಿನ ಓಟವನ್ನು ಮುಂದುವರೆಸಿದೆ. ಭಾರತೀಯ ಜನತಾ ಪಕ್ಷ ಉತ್ತರದ ರಾಜ್ಯಗಳಲ್ಲಿ ಕೆಲವು ಕ್ಷೇತ್ರಗಳನ್ನು ಕಳೆದುಕೊಂಡಿರಬಹುದು, ಆದರೆ ದಕ್ಷಿಣದ ರಾಜ್ಯಗಳಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ವಿರೋಧಿಗಳಲ್ಲಿ ನಡುಕ ಹುಟ್ಟಿಸಿದೆ. ದಕ್ಷಿಣ ಭಾರತದಲ್ಲಿ ಎನ್.ಡಿ.ಎ ಮೈತ್ರಿಕೂಟ 2019 ರಲ್ಲಿ 30 ಕ್ಷೇತ್ರಗಳನ್ನು ಗೆದ್ದಿತ್ತು, 2024 ರಲ್ಲಿ 49 ಕ್ಷೇತ್ರಗಳಲ್ಲಿ ಗೆದ್ದಿದೆ. 2024ರ ಚುನಾವಣಾ ಫಲಿತಾಂಶವನ್ನು ಗಮನಿಸಿದರೆ ಭಾರತೀಯ ಜನತಾ ಪಕ್ಷ ಸಂಸತ್ತಿನಲ್ಲಿ ದೇಶದ ನಾಲ್ಕೂ ದಿಕ್ಕುಗಳಲ್ಲಿ ತನ್ನ ಪ್ರತಿನಿಧಿಗಳನ್ನು ಹೊಂದಿದೆ.

ಬಿಜೆಪಿ ಗೆಲ್ಲಿಸಿದ್ದು ಮತದಾರ, ಕಾರ್ಯಕರ್ತ ಅಲ್ಲ!

ವಿಶ್ಲೇಷಣೆ

ಡಾ. ಜಗದೀಶ ಮಾನೆ
vveditoped@gmail.com

ಕಳೆದ ನಾಲ್ಕೈದು ದಿನಗಳ ಹಿಂದೆ ಲೋಕಸಭಾ ಚುನಾವಣೆಯ ಫಲಿತಾಂಶ ಬಂದಿದೆ. ಸಮ್ಮಿಶ್ರ ಸರಕಾರ ರಚನೆಗೆ ಈ ಫಲಿತಾಂಶ ನಾಂದಿ ಹಾಡಿದೆ. ಕಳೆದ ಎರಡು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮಾಡಿರುವಂತಹ ಅಭೂತಪೂರ್ವ ಸಾಧನೆಗೆ ಮತದಾರ ಕೊಂಚ ಬ್ರೇಕ್ ಹಾಕಿದ್ದಾನೆ. ಅತಿಯಾದ ಹುಮ್ಮಸ್ಸಿನಲ್ಲಿದ್ದ ಬಿಜೆಪಿಗೆ ಮರ್ಮಾಘಾತವಾಗಿದೆ. 400ರ ಗುರಿಯನ್ನು ಇಟ್ಟುಕೊಂಡಿದ್ದ ಬಿಜೆಪಿಗೆ ಸರಳ ಬಹುಮತಕ್ಕೂ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ದೇಶದಲ್ಲಿ ನರೇಂದ್ರ ಮೋದಿ ಅವರು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರೂ ಕೂಡ ಮತದಾರ ಬಿಜೆಪಿಯನ್ನು ಈ ಹಂತಕ್ಕೆ ತಂದು ನಿಲ್ಲಿಸಿದ್ದು ಯಾಕೆ ಅಂತ ಅವಲೋಕನ ಮಾಡಿಕೊಳ್ಳುವ ಸಮಯವಿದು.

ಬಿಜೆಪಿಗೆ ಕಳಶಪ್ರಾಯದಂತಿದ್ದ ಉತ್ತರ ಪ್ರದೇಶದಲ್ಲಿ ದೊಡ್ಡ ಹಿನ್ನಡೆಯಾಗಿದೆ. ಉತ್ತರ ಪ್ರದೇಶದ ಆದಿಯಾಗಿ ರಾಜಸ್ಥಾನ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮುಂತಾದ ಕಡೆಗಳಲ್ಲಿ ಬಿಜೆಪಿಯ ಸೋಲಿಗೆ ಹಲವು ಕಾರಣಗಳಿದೆ. ಬಿಜೆಪಿ ಹಾಗೂ ಮೋದಿಯನ್ನು ಸೋಲಿಸಿದ್ದು ವಿಪಕ್ಷಗಳಿಗಿಂತ ಹೆಚ್ಚಾಗಿ ಬಿಜೆಪಿಯ ಕೆಲ ನಾಯಕರ ನಾಲಿಗೆಗಳೇ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಳೆದ ಹತ್ತು ವರ್ಷದ ಮೋದಿಯವರ ಆಡಳಿತದಲ್ಲಿ ಅಭಿವೃದ್ಧಿ ವಿಚಾರದಲ್ಲಾಗಲಿ, ಭ್ರಷ್ಟಾಚಾರದ ವಿಚಾರದಲ್ಲಿಯಾಗಲಿ ಮೋದಿ ಅವರ ವಿರುದ್ಧ ಮಾತನಾಡುವುದಕ್ಕೆ ಪಕ್ಷಗಳ ಬಳಿ ಯಾವುದೇ ಅಸ್ತ್ರಗಳಿರಲಿಲ್ಲ. ಆದರೆ ಕೆಲ ಬಿಜೆಪಿ ನಾಯಕರೇ ಜಾತಿಯ ಬಗ್ಗೆ, ಸಂವಿಧಾನ ಬದಲಾವಣೆಯ ಮಾತಿನ ಅಸ್ತ್ರವನ್ನು ವಿಪಕ್ಷಗಳಿಗೆ ಕೊಟ್ಟಿದ್ದರು. ಅದರಲ್ಲೂ ಉತ್ತರ ಪ್ರದೇಶದಲ್ಲಿ ಬಿಜೆಪಿ ರಾಮ ಮಂದಿರದ ಲೋಕಾರ್ಪಣೆ ಮಾಡಿದೆ. ಅಲ್ಲಿ ಸಾಕಷ್ಟು ಹೂಡಿಕೆಗಳು ಬಂದವು. ಇದರಿಂದ ಉದ್ಯೋಗಾವಕಾಶಗಳು ಕೂಡ ಹೆಚ್ಚಾದವು. ಅಲ್ಲದೆ ನೂತನ ರೈಲು ನಿಲ್ದಾಣ, ವಿಮಾನ ನಿಲ್ದಾಣಗಳ ನಿರ್ಮಾಣ, ವಾರಣಾಸಿಯ ಅಭಿವೃದ್ಧಿ, ಕಾಶಿ ಮಥುರಾಗಳು ಕೂಡ ಮುನ್ನೆಲೆಗೆ ಬಂದಿದ್ದವು. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳಾಗಿದ್ದವು. ರಾಮ ಮಂದಿರ ನಿರ್ಮಾಣವಾದ ಅಯೋಧ್ಯೆ ವ್ಯಾಪ್ತಿಯಲ್ಲಿ ಬರುವ ಫೈಜಾಬಾದ್ ಕ್ಷೇತ್ರದಲ್ಲೂ ಬಿಜೆಪಿ ಹೀನಾಯವಾಗಿ ಸೋತಿತ್ತು.

ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸಂಸದ ಹಾಗೂ ಕೇಂದ್ರದಲ್ಲಿ ಮಂತ್ರಿ ಆಗಿದ್ದ 'ಪುರುಷೋತ್ತಮ ರೂಪಾಲ್' ಕೂಡಾ ಭಾಷಣ ಒಂದರಲ್ಲಿ 'ಠಾಕೂರ್– ರಜಪೂತ'ರ ಬಗ್ಗೆ ಕೇವಲವಾಗಿ ಮಾತನಾಡಿದರು. ವಿದೇಶಿಗರು ಮತ್ತು ಬ್ರಿಟಿಷರು ನಮ್ಮ ರಾಜರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾಗ ಅದನ್ನು ನಮ್ಮ ರಾಜರು ಎದುರಿಸುವುದನ್ನು ಬಿಟ್ಟು ಅವರ ಜೊತೆ ಕೈಜೋಡಿಸುತ್ತಿದ್ದರು. ನಮ್ಮ ಹೆಣ್ಣು ಮಕ್ಕಳನ್ನು ಅವರಿಗೆ ಕೊಟ್ಟು ವಿವಾಹ ಮಾಡಿಸಿ ಸಂಬಂಧ ಬೆಳೆಸಿದರು. ಅವರ ಈ ಹೇಳಿಕೆ ರಜಪೂತ್ ಸಮುದಾಯದವರ ಆತ್ಮಾಭಿಮಾನಕ್ಕೆ ಧಕ್ಕೆ ಉಂಟಾಗುವಂತೆ ಮಾಡಿತು. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಮತ್ತು ಬಿಜೆಪಿಯದ್ದೇ ಮತ ಬ್ಯಾಂಕ್ ಆಗಿರುವ ಠಾಕೂರ್ ಸಮುದಾಯ ಮತದಾನದಿಂದ ದೂರ ಉಳಿಯಿತು. ಇದು ಗಾಯದ ಮೇಲೆ ಬರೆ ಎಳೆದಂತಾಯಿತು. ಈ ಅಂಶ ಮೊದಲು ಮತ್ತು ಎರಡನೆಯ ಹಂತದ ಚುನಾವಣೆಯ ಬಳಿಕ ಬಿಜೆಪಿಗೆ ಅರ್ಥ ಆಯಿತು. ರಜಪೂತರ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ಮತದಾನ ಬಹಳಷ್ಟು ಕಡಿಮೆಯಾಗಿತ್ತು.

ಇನ್ನು ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ 28ರಿಂದ 30 ಕ್ಷೇತ್ರಗಳಲ್ಲಿ ಗೆದ್ದೇ ಗೆಲ್ಲುತ್ತದೆ ಅಂತ ಎಲ್ಲರೂ ಭಾವಿಸಿದ್ದರು. ಇದರ ನಡುವೆ ಮಮತಾ ಬ್ಯಾನರ್ಜಿ ಮಾತ್ರ ಬಹಳ ದೊಡ್ಡ ಗೇಮ್ ಪ್ಲಾನ್ ಮಾಡಿದ್ದರು. ಅವರು ಆರಂಭದಲ್ಲಿ ಇಂಡಿಕೂಟದ ಜೊತೆಗಿದ್ದರು. ಬಳಿಕ ಅಲ್ಲಿಂದ ಹೊರ ಬರುತ್ತಾರೆ. ಆದರೆ ಇದು ಬಿಜೆಪಿಗರಿಗೆ ಮಾತ್ರ ಅರ್ಥ ಆಯ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಇದು ಮಮತಾರ ದೊಡ್ಡ ಲಾಜಿಕ್! ಒಂದು ವೇಳೆ ಮಮತಾ ಇಂಡಿಕೂಟದಲ್ಲಿ ಇದ್ದಿದ್ದೆ ಆದರೆ ಕಾಂಗ್ರೆಸ್ ಹಾಗೂ ಎಡ ಪಕ್ಷಗಳಲ್ಲಿರುವ ಮತಗಳು ಅದು ಮಮತಾ ವಿರೋಧಿ ಮತಗಳು, ಅವು ಬಿಜೆಪಿಗೆ ಶಿಫ್ಟ್ ಆಗುತ್ತಿತ್ತು. ಅದನ್ನು ತಡೆಯೋದಕ್ಕಾಗಿ ಆ ಕೂಟದಿಂದ ಮಮತಾ ಹೊರಬಂದರು. ಆರಂಭದಲ್ಲಿ ಆ ಕೂಟ ಸೇರಿದ್ದು ಯಾಕೆ ಅಂದ್ರೆ, ಒಂದು ವೇಳೆ ಈ ಕೂಟ ಸೇರದಿದ್ದರೆ ಮಮತಾರನ್ನು ಬಿಜೆಪಿಯ ಬಿ ಟೀಮ್ ಅಂತ ಕರೆಯಲಾಗುತ್ತಿತ್ತು. ಹಾಗಾದಾಗ ಮುಸ್ಲಿಂ ಮತದಾರರು ಬೇಸರಗೊಂಡು ಮಮತಾ ಅವರಿಗೆ ಮತ ನೀಡುತ್ತಿರಲಿಲ್ಲ ಬದಲಾಗಿ ಅವು ಬೇರೆ ಪಕ್ಷಕ್ಕೆ ಮತ ಹಾಕುವ ಸಾಧ್ಯತೆ ಇತ್ತು. ಹಾಗಾಗಿ ಈ ಎಲ್ಲ ಲೆಕ್ಕಾಚಾರಗಳೊಂದಿಗೆ ಮಮತಾ ಮುಸ್ಲಿಂ ಹಾಗೂ ದಲಿತ ಮತಗಳು ತನಗೆ ಸಿಕ್ಕು ವಿರೋಧಿ ಮತಗಳು ಮಾತ್ರ ಬೇರೆ ಪಕ್ಷಗಳಿಗೆ ಹೋಗದೆ ಅವು ಕಾಂಗ್ರೆಸ್ ಪಕ್ಷದಲ್ಲೇ ಉಳಿಯಬೇಕು ಅಂತ ಗೇಮ್ ಪ್ಲಾನ್ ಮಾಡುವ ಮೂಲಕ ಅತ್ಯುತ್ತಮವಾಗಿ ಚುನಾವಣೆಯನ್ನು ಎದುರಿಸಿದ್ದರ ಪರಿಣಾಮವಾಗಿ ಅಲ್ಲಿ ಬಿಜೆಪಿಗೆ ಸೋಲಾಯಿತು.

ಮಹಾರಾಷ್ಟ್ರದಲ್ಲಿ ಕಳೆದ ಬಾರಿ ಬಿಜೆಪಿ ಹಾಗೂ ಶಿವಸೇನೆ 42 ಸ್ಥಾನಗಳಲ್ಲಿ ಗೆದ್ದಿದ್ದರು. ಈ ಬಾರಿ ಅಲ್ಲಿ ಶಿವಸೇನೆ ಒಡೆದಿತ್ತು. ಆದರೂ ಕೂಡಾ ಇದು ಅಲ್ಲಿನ ಜನರಿಗೆ ಏನೂ ಅನಿಸಿರಲಿಲ್ಲ. ಆದರೆ ಅಲ್ಲಿ ಅಮಿತ್ ಶಾ ಅವರು ದೊಡ್ಡ ತಪ್ಪು ಮಾಡಿದ್ದರು. ಎನ್‌ಸಿಪಿಯ ಅಜಿತ್ ಪವಾರ್ ಅನ್ನು ಕರೆತಂದಿದ್ದರು. ಮಹಾರಾಷ್ಟ್ರದ ಸ್ಥಳೀಯ ಬಿಜೆಪಿಗರಲ್ಲಿ ಮತ್ತು ಅಜಿತ್ ಪವಾರಲ್ಲಿ ದೊಡ್ಡ ದ್ವೇಷದ ರಾಜಕಾರಣವಿದೆ. ಅಂತಹ ಅಜಿತ್ ಪವಾರನ್ನು ಬಿಜೆಪಿಗೆ ಕರೆದ ಅಮಿತ್ ಶಾ ಅವರನ್ನು ಉಪಮುಖ್ಯಮಂತ್ರಿ ಮಾಡಿದ್ದಲ್ಲದೆ ಅವರೊಂದಿಗೆ ಸೀಟು ಶೇರಿಂಗ್ ಕೂಡಾ ಮಾಡಿದ್ದರು ಇದು ಮಹಾರಾಷ್ಟ್ರದಲ್ಲಿ ಬಿಜೆಪಿಯ ಕಾರ್ಯಕರ್ತರು ಹಾಗೂ ಮತದಾರರನ್ನು ಮುನಿಸಿಕೊಳ್ಳುವಂತೆ ಮಾಡಿತ್ತು. ಇದು ಬಿಜೆಪಿ ಹೇಳುವುದೊಂದು ಮಾಡುವುದೊಂದು ಅಂತ ಅನೇಕರು ಬಿಜೆಪಿಗೆ ಮತ ಹಾಕಲಿಲ್ಲ. ಅಲ್ಲಿ ಬಿಜೆಪಿಗೆ ದೊಡ್ಡ ಹೊಡೆತ ಆಯಿತು.

ಇನ್ನು ರಾಜಸ್ಥಾನದಲ್ಲಿ ಅತ್ಯಂತ ಪ್ರಮುಖವಾದ ಕ್ಷತ್ರೀಯ ಸಮುದಾಯದ ವಸುಂಧರಾರಾಜೆ ಅವರನ್ನು ಹೊರಗಿಟ್ಟು ಬ್ರಾಹ್ಮಣ ಸಮುದಾಯದವರನ್ನು ಸಿಎಂ ಮಾಡಿದ್ದು, ರಾಜಸ್ಥಾನದಲ್ಲಿ ಸ್ವಲ್ಪ ಹೊಡೆತ ಆಗಿದೆ. ರಜಪೂತ ಸಮುದಾಯದ ವಿರುದ್ಧ ಬಿಜೆಪಿ ಮುಖಂಡ ಪುರುಷೋತ್ತಮ ರೂಪಾಲರ ಹೇಳಿಕೆ ಮತ್ತೊಂದೆಡೆ ಮುಖ್ಯಮಂತ್ರಿ ಬದಲಾಯಿಸಿದ್ದು ರಾಜಸ್ಥಾನದ ಮತದಾರರು ಬಿಜೆಪಿಯ ಮೇಲೆ ಮುನಿಸು ಹೆಚ್ಚಾಗಿತ್ತು. ಬಳಿಕ ನರೇಂದ್ರ ಮೋದಿ ಅವರು ಈ ಎಲ್ಲ ತಪ್ಪುಗಳನ್ನು ಕಂಟ್ರೋಲ್ ಮಾಡುವ ಸಾಕಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ.

ಉತ್ತರ ಪ್ರದೇಶದ ಅನೇಕ ಕ್ಷೇತ್ರಗಳಲ್ಲೂ ಮತದಾನ ಕಡಿಮೆಯಾಗಿದೆ. ಬಿಜೆಪಿಯ ಗಟ್ಟಿ ಮತದಾರರೇ ಮತಗಟ್ಟೆಗಳಿಗೆ ಬರಲಿಲ್ಲ. ಪರಿಣಾಮ ವಾರಣಾಸಿಯಲ್ಲಿ ನರೇಂದ್ರ ಮೋದಿ ಅವರಿಗೂ ಬಹಳಷ್ಟು ಟಫ್ ಆಯ್ತು. ಅಲ್ಲಿನ ಬಹಳಷ್ಟು ಬಿಜೆಪಿ ಕಾರ್ಯಕರ್ತರಲ್ಲಿ ನಿರುತ್ಸಾಹವೇ ತುಂಬಿತ್ತು. ಬಹು ಮುಖ್ಯವಾಗಿ ಬಿಜೆಪಿ ದೊಡ್ಡ ದೊಡ್ಡ ಟಾರ್ಗೆಟ್‌ಗಳನ್ನು ಇಟ್ಟುಕೊಂಡಾಗಲೆಲ್ಲ ಹಿನ್ನಡೆಯನ್ನು ಸಾಧಿಸಿದ ಚಿತ್ರಣ ನಮ್ಮ ಕಣ್ಮುಂದೆ. ಪಶ್ಚಿಮ ಬಂಗಾಳದ 2021ರ ಚುನಾವಣೆಯ ಸಂದರ್ಭದಲ್ಲಿ ಅಮಿತ್ ಶಾ ಬಿಜೆಪಿ ಈ ಬಾರಿ 200 ಸ್ಥಾನ ಗೆಲ್ಲಲಿದೆ ಅಂತ ಹೇಳಿಕೆ ನೀಡಿದ್ದರು. ಸಂದರ್ಭದಲ್ಲಿ ಕೂಡ ಬಿಜೆಪಿ ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿತ್ತು. ಕಳೆದ ಬಾರಿ ಕರ್ನಾಟಕದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಬಿಜೆಪಿ 150 ಸೀಟುಗಳಲ್ಲಿ ಗೆದ್ದೇ ಗೆಲ್ಲುತ್ತೇವೆ ಅಂತ ಹೇಳುತ್ತಿದ್ದರು. ಆದರೆ ಕೊನೆಗೆ ಗೆದಿದ್ದು, ಕೇವಲ 66 ಸ್ಥಾನ ಮಾತ್ರ. ಈ ದೊಡ್ಡ ದೊಡ್ಡ ಟಾರ್ಗೆಟ್‌ಗಳು ಜನರಲ್ಲಿ ಗೊಂದಲ ಉಂಟುಮಾಡುತ್ತವೆ.

ಕರ್ನಾಟಕದ 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಒಂದಿಷ್ಟು ಹೊಸ ಪ್ರಯೋಗಗಳನ್ನು ಮಾಡಲು ಹೋಗಿ ಹೇಗೆ ಕೈ ಸುಟ್ಟುಕೊಂಡಿತ್ತೋ ಈಗ ಲೋಕಸಭಾ ಚುನಾವಣೆಯಲ್ಲೂ ಅದೇ ರೀತಿಯ ಪ್ರಯೋಗಗಳನ್ನು ಮಾಡಿ ಅದೇ ರೀತಿಯ ಎಡವಟ್ಟುಗಳನ್ನು ಮಾಡಿಕೊಂಡಿದೆ. ಹಾಗಂತ ಎಲ್ಲದರಲ್ಲೂ ವಿಫಲ ಆಗಿದೆ ಅಂತ ಅಲ್ಲ, ಕೆಲವೊಂದು ಪ್ಲಾನುಗಳು ಸಕ್ಸಸ್ ಕೂಡ ಆಗಿವೆ. ಆಂಧ್ರ ಪ್ರದೇಶದಲ್ಲಿ ಟಿಡಿಪಿಯೊಂದಿಗೆ ಬಿಹಾರದಲ್ಲಿ ನಿತೀಶ್‌ರೊಂದಿಗೆ ಮೈತ್ರಿ ಮಾಡಿಕೊಂಡಿದ್ದು ಮತ್ತು ಒರಿಸ್ಸಾದಲ್ಲಿ ಮೈತ್ರಿ ಮಾಡಿಕೊಳ್ಳದೆ ಇದ್ದಿದ್ದು ಕೆಲವೊಂದಿಷ್ಟು ಲಾಭಗಳಾಗಿವೆ. ಏನೇ ಆದರೂ ಕೂಡಾ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಗೆಲ್ಲಿಸಿದ್ದು ಮತದಾರನೇ ಹೊರತು ಬಿಜೆಪಿಯ ನಾಯಕರು, ಕಾರ್ಯಕರ್ತರಲ್ಲ, ನಾಯಕ ಹಾಗೂ ಕಾರ್ಯಕರ್ತರು ಕೇವಲ ಮೋದಿ ಜಪದಲ್ಲಿಯೇ ತಲ್ಲೀನರಾಗಿ ಆಲಸಿಗಳಾಗಿದ್ದರು. ಮೇಲಿನ ಅಂಶಗಳು ದೇಶದಲ್ಲಿ ಬಿಜೆಪಿಗೆ ಹಿನ್ನಡೆ ಉಂಟು ಮಾಡಲು ಸಾಧ್ಯವಾಗಿದೆ.

(ಲೇಖಕರು: ರಾಜ್ಯಶಾಸ್ತ್ರ ಅಧ್ಯಾಪಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವ್ಯಕ್ತಿ ಪೂಜೆಯ ಪೊಳ್ಳು ಮೆರುಗು

ಸರೋವರವೊಂದು ಸದಾ ನೀರಿನಿಂದ ತುಂಬಿರಬೇಕೆಂದರೆ ಅದರ ತಳದಲ್ಲಿ ಯಾವಾಗಲೂ ಒಸರುವ ಜಲವಿದ್ದರೆ ಮಾತ್ರ ಸಾಧ್ಯ. ಹೊರಗಿನಿಂದ ಎಷ್ಟು ನೀರು ಸುರಿದರೂ ಅದು ಸರೋವರವನ್ನು ಸದಾ ತುಂಬಿಡುವ ಸಾಮರ್ಥ್ಯ ಹೊಂದುವುದಿಲ್ಲ, ಅದೇ ರೀತಿ ಮನುಷ್ಯನ ಒಳಗಿನ ಖಾಲಿತನಕ್ಕೆ ಹೊರಗಿನಿಂದ ಎಷ್ಟು ವಿಷಯ ತುಂಬಿದರೂ ಅದು ಒಳಗಿನ ಪೊಳ್ಳನ್ನು ಮುಚ್ಚುವದಿಲ್ಲ. ಇಂದಿನ ದಿನಗಳಲ್ಲಿ ಕಾಣುವ ವ್ಯಕ್ತಿ ಪೂಜೆಯ ಅತಿರೇಕಕ್ಕೆ ಮನುಷ್ಯನು ನೈತಿಕವಾಗಿ ಸಂಪೂರ್ಣ ಖಾಲಿಯಾಗಿರುವುದೇ ಕಾರಣ. ಅತಿರೇಕ ಎಂದು ಹೇಳುವುದಕ್ಕೆ ನಿದರ್ಶನಗಳೆಂದರೆ, ತಮಗೆ ಇಷ್ಟವಾದ ಸಿನೆಮಾ ತಾರೆಯರ, ಕ್ರಿಕೆಟ್ ಪಟುಗಳ ಗುಡಿ ಕಟ್ಟುವುದು, ಕಟೌಟ್‌ಗಳಿಗೆ ಹಾಲಿನ ಅಭಿಷೇಕ, ಹೂವಿನ, ಹಣ್ಣುಗಳ ಮಾಲೆಗಳು. ಇವೆಲ್ಲ ಎಲ್ಲೆ ಮೀರಿದ ಆಂತರಿಕ ಪತನದ ಸ್ಪಷ್ಟ ಸಂಕೇತಗಳು. ತಮ್ಮೊಳಗೆ ಕಾಡುವ ಅಭದ್ರತೆಯ ಭಾವಕ್ಕೆ ಈ ರೀತಿಯ ಸಿಂಗರಣೆ ಮಾಡುವ ಚಪಲ, ಪೂಜೆಗೊಳ್ಳುವ ಮತ್ತು ಪೂಜಿಸುವ ಇಬ್ಬರಲ್ಲೂ ಇರುತ್ತದೆ. ತಮಗೆ ಇಷ್ಟವಾದ ವ್ಯಕ್ತಿಯನ್ನು ವೈಭವೀಕರಿಸಿಕೊಳ್ಳುತ್ತ ಆ ಸಂಭ್ರಮದಲ್ಲಿ ತಮ್ಮ ನೈತಿಕ ಖಾಲಿತನವನ್ನು ಮರೆಯುವ ವ್ಯರ್ಥ ಪ್ರಯತ್ನ ಇವೆಲ್ಲ ಅನಿಸುತ್ತದೆ. ಈಗೀಗ ವ್ಯಕ್ತಿ ಪೂಜೆಯ ಹುಚ್ಚುತನ ಯಾವ ಮಟ್ಟಕ್ಕೆ ತಲುಪಿದೆಯೆಂದರೆ, ಕಾನೂನಿನ ಚೌಕಟ್ಟಿನಲ್ಲಿ ಕಾರಾಗೃಹ ಸೇರಿದವರು ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರಗೆ ಬಂದರೆ ಪಟಾಕಿ ಸಿಡಿಸಿ ಸಂತಸ ಪಡುವಷ್ಟು. ಆರೋಪಿಯೋ, ನಿರಪರಾಧಿಯೋ ಎಂದು ಇನ್ನೂ ನಿರ್ಣಯವೇ ಆಗಿರುವುದಿಲ್ಲ, ಸಂಭ್ರಮ ಪಡಲು ಕಾರಣವೇ ಇರುವುದಿಲ್ಲ, ಇದನ್ನು ನೋಡಿದಾಗ ಸಮಾಜ ಎಲ್ಲಿಗೆ ಹೋಗಿ ತಲುಪುತ್ತಿದೆ? ಎಂಬ ಪ್ರಶ್ನೆ ಮೂಡುತ್ತದೆ.

ಇನ್ನೊಂದು ಬಗೆಯಲ್ಲಿ ವ್ಯಕ್ತಿ ಪೂಜೆ ಒಂದು ಸಾಮೂಹಿಕ ಸನ್ನಿ ಎಂದು ಕರೆಯಬಹುದು. ಆರಾಧಿಸುವವರು ಮತ್ತು ಆರಾಧಿಸಲ್ಪಡುವವರು ಇಬ್ಬರೂ ಭ್ರಮೆ ಭ್ರಾಂತಿಯ ಸುಳಿಗೆ ಸಿಕ್ಕವರೇ. ಸಾರ್ವಜನಿಕ ಜೀವನದಲ್ಲಿ ತಮ್ಮ ಹೆಸರು ಸದಾ ಚಲಾವಣೆಯಲ್ಲಿ ಇರಬೇಕೆಂಬ ಆಸೆಬುರುಕುತನ ಇಂತಹ ಹುರುಳಿಲ್ಲದ ಮೆರೆದಾಟಕ್ಕೆ ವ್ಯಕ್ತಿಗಳನ್ನು ತಳ್ಳಬಹುದು. ಸಾರ್ವಜನಿಕ ಜೀವನದಲ್ಲಿ ಇರುವ ಬಹುತೇಕ ಜನರ ಹುಟ್ಟುಹಬ್ಬಗಳು ನಡೆಯುವ ರೀತಿಗೆ ಯಾವುದೇ ವಿವೇಕ ಕಾಣುವುದಿಲ್ಲ, ಎಲ್ಲವೂ ಅತಿ ಎಂಬಂತೆ ಇರುವುದು ಮಾತ್ರ ನಿಚ್ಚಳವಾಗಿ ತೋರುತ್ತದೆ. ಇಲ್ಲಿ ಇನ್ನೊಂದು ಬಹು ಸೂಕ್ಷ್ಮ ಸಂಗತಿಯನ್ನು ನಾವು ಗಮನಿಸಬೇಕು. ವ್ಯಕ್ತಿ ಪೂಜೆ ಮಾಡುವ ಬಹಳಷ್ಟು ಮಂದಿ, ಕೈ ತಪ್ಪಿದ ಅವಕಾಶಗಳು, ವೈಯಕ್ತಿಕ ಜೀವನದ ಸೋಲುಗಳು ಇಂತಹವುಗಳಿಂದ ಹತಾಶೆಗೆ ಒಳಪಟ್ಟವರೇ ಆಗಿರುತ್ತಾರೆ. ಹಾಗಾಗಿ ಇವೆಲ್ಲವನ್ನೂ ಸಾಧಿಸಿರುವ ಅಥವಾ ಗಳಿಸಿರುವವನು ಅವರಿಗೆ ತಮ್ಮದೇ ಪ್ರತಿರೂಪದಂತೆ ಭಾಸವಾಗಬಹುದು. ಆ ವ್ಯಕ್ತಿಯ ಡೋಲು ಡಂಗುರಗಳಲ್ಲಿ ತಮ್ಮನ್ನು ಕಲ್ಪಿಸಿಕೊಂಡು ಸಿಗುವ ಕ್ಷಣಿಕ ಸಂತೋಷವೂ ಇರಬಹುದು. ಯಾವುದೇ ದೃಷ್ಟಿಯಿಂದ ನೋಡಿದರೂ ವ್ಯಕ್ತಿ ಪೂಜೆ ಎಂದೂ ಸಮರ್ಥನೀಯವಲ್ಲ, ದೇಶಕ್ಕಾಗಿ ಮಡಿದ ಯೋಧರು, ದೇಶದ ಸ್ವಾತಂತ್ರ್ಯಕ್ಕಾಗಿ, ಯಾವುದೋ ಒಂದು ಸಾರ್ವಜನಿಕ ಸದುದ್ದೇಶಕ್ಕಾಗಿ ದುಡಿದವರು, ಸಮಾಜದ ಉನ್ನತಿಗಾಗಿ ಕ್ರಾಂತಿ ಮಾಡಿದವರು, ಇಂತಹ ಶ್ರೇಷ್ಠ ಸಾಧಕರಿಗೆ ಗೌರವ ನೀಡುವುದು ನಮ್ಮ ಪ್ರಾಶಸ್ತ್ಯ ಬಹುಶಃ ನಾವು ಯಾವುದಕ್ಕೆ ಎಷ್ಟು ಆದ್ಯತೆ ನೀಡಬೇಕು ಎಂಬುದರ ಸರಿಯಾದ ಅರಿವು ನಮಗಿಲ್ಲದಿರುವುದೂ ಕೂಡ ಈ ರೀತಿಯ ತರ್ಕರಹಿತ ವರ್ತನೆಗಳ ಸಾಧ್ಯತೆಯನ್ನು ಮತ್ತಷ್ಟು ಹೆಚ್ಚಿಸಿದೆ.

-ವಿದ್ಯಾ ಶಂಕರ್ ಶರ್ಮ

ಇದು ದುರ್ದೈವ

ಕರ್ನಾಟಕದಿಂದ ಉತ್ತರಾಖಂಡದ ಹಿಮಾಲಯದಲ್ಲಿ ಟ್ರೆಕ್ಕಿಂಗಿಗೆ ಹೋಗಿದ್ದ ಒಂಬತ್ತು ಚಾರಣಿಗರ ದುರಂತ ಸಾವಾಗಿದೆ. ಅವರೆಲ್ಲರೂ ಕರ್ನಾಟಕ ಮೌಂಟೆನೀರಿಂಗ್ ಅಸೋಸಿಯೇಷನ್ ಸದಸ್ಯರಾಗಿದ್ದು ಅನುಭವೀ ಚಾರಣಿಗರು ಮತ್ತು ಹಿರಿಯರು. ಈ ಹಿಂದೆಯೂ ಹಲವಾರು ಅಂತಹ ಎತ್ತರ ಹಿಮಾಲಯದ ಚಾರಣಗಳನ್ನು ಮಾಡಿದವರು. ಹಿಮಾಲಯ ಭಾಗದ ಚಾರಣಗಳಲ್ಲಿ ಒಮ್ಮೊಮ್ಮೆ ಸಾವುಗಳಾಗುವುದುಂಟು. ಇದರಲ್ಲಿ ಬಹುತೇಕ ಘಟನೆಗಳು ಎತ್ತರ ಪ್ರದೇಶಗಳಲ್ಲಿನ ಆಕ್ಸಿಜೆನ್ ಕೊರತೆಯಿಂದ, ಅಂತಹ ವಾತಾವರಣಕ್ಕೆ ನಮ್ಮ ದೇಹ ಹೊಂದಿಕೊಳ್ಳದ ಕಾರಣದಿಂದ ಆಗಿರುವ ಉದಾಹರಣೆಗಳಿವೆ. ಕೆಲವರು ಪ್ರಜ್ಞಾಹೀನ ಸ್ಥಿತಿಗೆ ತಲುಪಿ ಸಮಯೋಚಿತ ಸಹಾಯದಿಂದ ಬದುಕಿಬಂದವರಿದ್ದಾರೆ. ಆದರೆ ಇಷ್ಟೆಲ್ಲಾ ಜನರ ಸಾವಾಗಿರುವುದು ಹವ್ಯಾಸಿ ಚಾರಣಿಗ ಸಮುದಾಯದ ದೊಡ್ಡ ದುರಂತವೆಂದೇ ಹೇಳಬಹುದು. ಈ ದುರಂತಕ್ಕೆ ಕಾರಣ ಇದ್ದಕ್ಕಿದ್ದಂತೇ ಶುರುವಾದ ಹಿಮಪಾತ, ಬಿರುಗಾಳಿ ಮತ್ತು ತೀವ್ರವಾಗಿ ಕಡಿಮೆಯಾದ ಉಷ್ಣತೆ ಎಂದು ಹೇಳಲಾಗಿದೆ. 22 ಜನರಲ್ಲಿ 13 ಜನ ಬದುಕುಳಿದು ಬಂದಿದ್ದಾರಾದರೂ ಕಣ್ಣೆದುರೇ ಸಹಚಾರಣಿಗರ ಸಾವನ್ನು ನೋಡುವ ದುಃಸ್ಥಿತಿಯು ಯಾರಿಗೂ ಬರಬಾರದಂಥದ್ದು. ಇತ್ತೀಚಿನ ವರ್ಷಗಳಲ್ಲಿ ಟ್ರೆಕ್ಕಿಂಗ್ ಹವ್ಯಾಸ ಹೆಚ್ಚಾಗಿದೆ. ವೃತ್ತಿಪರ ಸಂಸ್ಥೆಗಳ ಮೂಲಕವೇ ಬಹುತೇಕ ಟ್ರೆಕ್ಕಿಂಗ್‌ಗಳು ನಡೆಯುವುದರಿಂದ ಸಾಕಷ್ಟು ಪರಿಕರಗಳನ್ನು ತೆಗೆದುಕೊಂಡು ಹೋಗಲಾಗುತ್ತದೆ. ಆದರೆ ಎಂತಹ ಅನುಭವಿಗಳಾದರೂ ಪ್ರಕೃತಿಯ ಮುಂದೆ ಎಲ್ಲರೂ ಮಕ್ಕಳೇ! ಈ ಘಟನೆಯಲ್ಲಿ ಯಾರ ಅಜಾಗರೂಕತೆ ಅದು ಇದು ಎಂಬ ಮಾತಿಗೆ ಅವ ಕಾಶವಿಲ್ಲ. ಪ್ರಕೃತಿಯಲ್ಲಿ ಯಾವ ಕ್ಷಣದಲ್ಲಿ ಎಲ್ಲಿ ಏನಾದರೂ ಆಗಬಹುದಾದ ಸಾಧ್ಯತೆಗಳು ಅಂತಹ ಪ್ರದೇಶಗಳಲ್ಲಿ ಹೆಚ್ಚು, ಜೊತೆಗೆ ಎಲ್ಲಾ ಸಹಜವಾಗಿದೆ ಅನ್ನಿಸುತ್ತಿದ್ದ ನಮ್ಮ ದೇಹ ಇದ್ದಕ್ಕಿದ್ದಂತೆ ಕೈಕೊಡಬಹುದು! ಹಾಗಾಗಿ ಯಾವುದೇ ಕಾರಣಕ್ಕೂ ಸಾಕಷ್ಟು ಅಭ್ಯಾಸ, ದೈಹಿಕ ಸಾಮರ್ಥ್ಯ, ಗಂಭೀ ರತೆ, ಪೂರ್ವತಯಾರಿ, ಮುಖ್ಯವಾಗಿ ಅಲ್ಲಿನ ಸ್ಥಳೀಯರ ಸಲಹೆ/ಮಾರ್ಗದರ್ಶನ ಇಲ್ಲದೇ ಎತ್ತರ ಹಿಮಾಲಯದ ಚಾರಣಗಳನ್ನು ಕೈಗೊಳ್ಳಬಾರದು ಎಂಬು ದಂತೂ ಎಲ್ಲರೂ ಗಮನದಲ್ಲಿಡಬೇಕಾದ ಅಂಶ. ಸಾವಿಗೀಡಾದವರಲ್ಲಿ ಕೆಲವರು ನಾನು KMA ಜೊತೆಗೆ ಹೋದ ಕೆಲವು ಸ್ಥಳೀಯ ಚಾರಣಗಳಲ್ಲಿ ನಮ್ಮನ್ನು ಕರೆದುಕೊಂಡು ಮುನ್ನಡೆಸಿದ್ದವರಿದ್ದರು. ಇದು ದುರ್ದೈವ.

-ರವಿ ಗೊಟ್ಟಿಗೆರೆ, ಬೆಂಗಳೂರು

ಬಾಲ ಆನೆಯನ್ನು ಅಲ್ಲಾಡಿಸುತ್ತಿದೆ

ಆನೆ ಬಾಲವನ್ನು ಅಲ್ಲಾಡಿಸುವುದು ಸಹಜ .ಆದರೆ, ಬಾಲವೇ ಆನೆಯನ್ನು ಅಲ್ಲಾಡಿಸುವುದು ಸ್ವಲ್ಪ ವಿಚಿತ್ರವಾದರೂ ಸತ್ಯ. ದೆಹಲಿಯಲ್ಲಿ ಕೇಂದ್ರ ಸಂಪುಟ ರಚನೆಯ ಕಸರತ್ತಿನಲ್ಲಿ ಮೈತ್ರಿ ಕೂಟದ ಮಿತ್ರ ಪಕ್ಷಗಳು ಸಚಿವ ಸಂಪುಟದಲ್ಲಿ ಪ್ರಮುಖ ಖಾತೆಗಳನ್ನು ಮತ್ತು ತಮ್ಮ ರಾಜ್ಯಗಳಿಗೆ ವಿಶೇಷ ಸ್ಥಾನಮಾನವನ್ನು ಒತ್ತಾಯಿಸುವುದನ್ನು ನೋಡಿದಾಗ ಬಾಲವು ಆನೆಯನ್ನು ಅಲ್ಲಾಡಿಸುವ ಪ್ರಹಸನ ನೆನಪಿಗೆ ಬರುತ್ತದೆ. ಇದು ಸಮ್ಮಿಶ್ರ ಸರಕಾರದಲ್ಲಿ ಮಿತ್ರ ಪಕ್ಷಗಳು ಸರಕಾರದ ಮುಖ್ಯ ಪಕ್ಷದ ಅನಿವಾರ್ಯತೆ ಮತ್ತು ಸಂದಿಗ್ದತೆಯನ್ನು ಹೇಗೆ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತವೆ ಎನ್ನುವುದರ ಒಂದು ಉದಾಹರಣೆ ಮತ್ತು ಭಾರೀ ನಿರೀಕ್ಷೆ ಮತ್ತು ಭರವಸೆಯಲ್ಲಿರುವ ಒಂದು ದೇಶ ಒಂದು ಚುನಾವಣೆ ಮತ್ತು ಏಕರೂಪ ನಾಗರಿಕ ಸಂಹಿತೆ ಮಸೂದೆಗಳ ಗತಿ ಏನಾಗಬಹುದೆನ್ನುವ ಮುನ್ಸೂಚನೆ ಇದು.

-ರಮಾನಂದ ಶರ್ಮಾ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕ್ಯಾಚ್

● **ಮಹಿಮಾ ಪಾಟೀಲ, ದಾವಣಗೆರೆ**
ಓದಿದ ಅಥವಾ ಗೌರವದ ಡಾಕ್ಟರ್‌ಗೂ ದುಡ್ಡು ಕೊಟ್ಟು ಸಂಪಾದಿಸಿದ ಡಾಕ್ಟರ್‌ಗೆ ವ್ಯತ್ಯಾಸ ಹೇಗೆ ಸರ್?
– ಯೋಗ್ಯರು ಮತ್ತು ಅಯೋಗ್ಯರಿಗೆ ಸಿಕ್ಕಿರುವುದಷ್ಟೇ ವ್ಯತ್ಯಾಸ!!

● **ಶಿವಾನಂದ ಜ್ಞಾನಜ್ಯೋತಿ ನಗರ, ಬೆಂಗಳೂರು**
ಇಂದಿನ ಜೆಟ್ ಯುಗದಲ್ಲೂ ಮಗು ಹುಟ್ಟುವುದಕ್ಕೆ 9 ತಿಂಗಳು ದೀರ್ಘವಾಗ್ಲಿಲ್ಲವೆ?
– ಮಗು ಹುಟ್ಟಿಸುವುದು ಇಂಟರ್ನೆಟ್ ಅಲ್ವಲ್ಲಾ!

● **ಹೇಮಂತ್ ಕುಮಾರ, ಬೆಂಗಳೂರು**
ಉದ್ಘಾಟನೆಗೂ, ಉಚ್ಚಾಟನೆಗೂ ನಡುವೆ ಇರುವ ಸಂಬಂಧವೇನು?
– ಒಂದು ಆರಂಭ, ಮತ್ತೊಂದು ಅಂತ್ಯ!

● **ಶಿವನಗೌಡ ಎಸ್., ಸಿರುಗುಪ್ಪ**
ಹುಡುಗಿ ಹಣ ಬೀಳಿಸಿದರೆ ಎತ್ತಿಕೊಡಬೇಕಾ ಅಥವಾ ಮೆತ್ತಗೆ ಜೇಬಿಗಿಳಿಸಬೇಕಾ?
– ಹುಡುಗಿ ವಯಸ್ಸು ಮತ್ತು ಅಂದದ ಮೇಲೆ ನಿರ್ಧರಿಸಬಹುದು !!!

● **ಚಕ್ರವರ್ತಿ ಸಂಪತ್, ಬನಶಂಕರಿ ನಾಲ್ಕನೇ ಹಂತ**
ಎಲ್ಲರ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಲ್ಲವೇ?
– ನನಗೆ ಉತ್ತರಿಸದಿರುವುದೇ ಕಷ್ಟ!

● **ರಮೇಶ ಶಿಂಧೆ, ಚನ್ನರಾಯಪಟ್ಟಣ**
ನೀವು ಬಹಳ ಒಳ್ಳೆಯ ಗಂಡ ಎಂದು ಅವಳು ಹೇಳಿದಳಲ್ಲ?
– ಹಾಗಾದರೆ ಅವಳು ನಿನ್ನ ಅಧಿಕೃತ ಹೆಂಡತಿ ಆಗಿರಲಿಕ್ಕಿಲ್ಲ, ಏನಂತೀಯಾ?!

● **ಶಿವಪ್ರಕಾಶ, ಗದಗ**
ಹೆಂಡ್ತಿ ನಮ್ಮ ಪರ ಆಗೋಕೆ ಏನ್ ಮಾಡಬೇಕು?
– ಅವರಪ್ಪನ್ ಮನೆಯವ್ರ ಕಾಟ ಅತಿಯಾಗ್ಬೇಕು!

● **ತ್ರಿವೇಣಿ ರಾವ್, ಗಿರಿನಗರ**
ಗಂಡನನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ತಪ್ಪಾ?
– ಅಮ್ಮಾ ತ್ರಿವೇಣಿ, ಯಾರ ಗಂಡನನ್ನು ಅಂತ ಸ್ಪಷ್ಟವಾಗಿ ಹೇಳಬಾರದೇನಮ್ಮಾ?!

● **ಸಂಜನಾ (ಇಮೇಲ್ ಮೂಲಕ)**
ನಾನು ಪ್ರೀತಿಸುವ ಹುಡುಗ ಹೇಗಿರಬೇಕು ಸಾರ್?
– ಇದು ಅತಿಯಾಯ್ತು, ಇಲ್ಲೂ ನನ್ನನ್ನೇ ಆದರ್ಶವಾಗಿಟ್ಟುಕೊಳ್ಳಬೇಡ!

● **ಸ್ವಾತಿ (ಊರು ಬೇಡ)**
ಹಳ್ಳಿಯ ಕೃಷಿಕನನ್ನೇ ಮದುವೆ ಆಗಬೇಕು ಅಂತ ನಿರ್ಧರಿಸಿದ್ದೇನೆ, ಏನಂತೀರಿ?
– ನಿನ್ನಂಥ ಪ್ಯಾಟೆ ಹುಡುಗಿಯನ್ನು ಹಳ್ಳಿಯವರು ಒಪ್ಪಬೇಕಲ್ಲ!

ಮಳೆಗಾಲದಲ್ಲಿ ಹೇಗಿರಬೇಕು ಆಹಾರ-ವಿಹಾರ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಮಳೆಗಾಲ ಯಾರಿಗೆ ಇಷ್ಟ ಇಲ್ಲ ಹೇಳಿ?! ಈ ರಮ್ಯವಾದ ಋತುವಿನಲ್ಲಿ ಹೊರಗಿನ ಪ್ರಕೃತಿಯ ಸೌಂದರ್ಯವನ್ನು ಆನಂದಿಸುವುದರ ಜೊತೆಗೆ ನಮ್ಮ ದೇಹದ ಒಳಗಿನ ಪ್ರಕೃತಿಯ ಅರಿವನ್ನು ಹೊಂದುವುದು ಅಷ್ಟೇ ಮುಖ್ಯ. ವರ್ಷಾಕಾಲದಲ್ಲಿ ಬಾಹ್ಯ ವಾತಾವರಣದ ಪ್ರಭಾವದಿಂದ ಶರೀರದಲ್ಲಿ ಕ್ಲೇದ/ ದ್ರವಾಂಶ ಹೆಚ್ಚು. ಜೀರ್ಣಶಕ್ತಿ, ಹಸಿವೆ, ಬಾಯಾರಿಕೆ ಕಡಿಮೆ. ದೇಹದ ಬಲ ಕ್ಷಯ. ಮೂರು ದೋಷಗಳ ವಿಕೃತಾವಸ್ಥೆ. ಇಂತಹ ಪರಿಸ್ಥಿತಿಯಲ್ಲಿ ಈ ಎಲ್ಲ ಏರುಪೇರುಗಳನ್ನು ಸರಿದೂಗಿಸಿಕೊಂಡು ಹೋಗುವ ಆಹಾರ-ವಿಹಾಗಳನ್ನು ಕಲ್ಪಿಸಿಕೊಳ್ಳುವುದು ಬಹಳ ಮುಖ್ಯ . ಇದಕ್ಕೆ ಆಯುರ್ವೇದದ 'ಋತುಚರ್ಯ'ಯೇ ಸೂಕ್ತವಾದ ಮಾರ್ಗದರ್ಶಿ. ಹಾಗಾದರೆ ಹೆಚ್ಚಿನ ಪೀಠಿಕೆ ಇಲ್ಲದೆ ಮಳೆಗಾಲದ ಸೂಕ್ತ ಆಹಾರವಿಹಾರಗಳನ್ನು ಶಾಸ್ತ್ರದ ಚೌಕಟ್ಟಿನಲ್ಲಿ ತಿಳಿಯೋಣ.

ಜೀರ್ಣಶಕ್ತಿ ಕಡಿಮೆ ಇರುವಾಗ ಆಹಾರದ ಪ್ರಮಾಣದ ಬಗ್ಗೆ ಎಚ್ಚರವಹಿಸಬೇಕು. ಜೀರ್ಣ ಮಾಡಿಕೊಳ್ಳಲು ಸಾಧ್ಯವಾಗುವಷ್ಟೇ ಆಹಾರವನ್ನು ಸೇವಿಸಬೇಕು. ಆಹಾರಕಾಲದ ನಡುವೆ ಏನನ್ನು ಸೇವಿಸದಿರುವುದು, ಏನನ್ನು ಕುಡಿಯದಿರುವುದು ಹುಳಿತೇಗು, ಅಜೀರ್ಣ, ಭೇದಿ, ತಲೆನೋವು ಮುಂತಾದ ಸಮಸ್ಯೆಗಳನ್ನು ನಿವಾರಿಸುತ್ತದೆ. ಸಾಮಾನ್ಯವಾಗಿ ಸೇವಿಸುವ ಆಹಾರವು ಬಿಸಿಯಾಗಿದ್ದಷ್ಟು ಆರೋಗ್ಯಕ್ಕೆ ಒಳ್ಳೆಯದು. ಆಹಾರದಲ್ಲಿರುವ ಪೋಷಕಾಂಶಗಳು ದೇಹಕ್ಕೆ ದೊರಕಬೇಕಾದರೆ ಆಗಷ್ಟೇ ತಯಾರಿಸಿದ, ಬಿಸಿಯಾದ ಚೆನ್ನಾಗಿ ಬೆಂದ ಆಹಾರದ ಸೇವನೆ ಅವಶ್ಯಕ. ಆದರೆ, ಇಂದಿನ "Busy life' ನಲ್ಲಿ ಮೂರು ಹೊತ್ತು ಬಿಸಿ ಊಟವನ್ನು ಮಾಡುವುದು practical ಅಲ್ಲ ಅನ್ನುವದು ಬಹಳ ಜನರ ಅಭಿಪ್ರಾಯ. ಅದಕ್ಕೆ ಒಂದು ಸುಲಭವಾದ ಪರಿಹಾರವೆಂದರೆ ಊಟ ತಣ್ಣಗಾಗಿದ್ದರೂ, ಅದರ ಜೊತೆಯಲ್ಲಿ ಸ್ವಲ್ಪ ಬಿಸಿ ನೀರನ್ನು ಊಟದ ಮಧ್ಯೆ ಮಧ್ಯೆ ಹೀರುವುದರಿಂದ, ಆಹಾರವನ್ನು ಸುಲಭವಾಗಿ ಜೀರ್ಣ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಯಾಕೆಂದರೆ ಆಯುರ್ವೇದದ ಪ್ರಕಾರ, ಕುದಿಸಿದ ಬಿಸಿನೀರು – 'ದೀಪನ' ಅಂದರೆ ಜಠರಾಗ್ನಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಆಹಾರವನ್ನು ಸುಲಭವಾಗಿ ಜೀರ್ಣಿಸಿ, ಮಲಮೂತ್ರ ಪ್ರವೃತ್ತಿಯನ್ನು ಸಹ ಸರಾಗ ಮಾಡುತ್ತದೆ. ಹಾಗಾಗಿ, ಆಹಾರದ ಜೊತೆ ಸದಾ ಕುದಿಸಿದ ನೀರನ್ನು ಸೇವಿಸುವುದು ಅತ್ಯುತ್ತಮ. ಆಯುರ್ವೇದ ಹೇಳತ್ತೆ, ಸ್ವಾಸ್ಥ್ಯ ರಕ್ಷಣೆಗಾಗಿ ಆಹಾರದ ಮೊದಲು ಅಥವಾ ಆಹಾರದ ನಂತರ ನೀರು ಸೇವಿಸುವುದ ಒಳ್ಳೆಯದಲ್ಲ. ಸದಾ ಊಟದ ಜೊತೆ, ಸ್ವಲ್ಪ ಸ್ವಲ್ಪ ನೀರು ಕುಡಿಯುವುದು ಸದಾ ಆರೋಗ್ಯಕರ ಅಭ್ಯಾಸ ವೆಂದು.

ಇನ್ನು, ಮಾಡಿಟ್ಟ ತಂಗಳ ಆಹಾರ/ ಫ್ರಿಡ್ಜ್‌ನಲ್ಲಿ ವಾರಗಳ ಗಟ್ಟಲೆ ಶೇಖರಿಸಿದ ಆಹಾರವು ಶರೀರ-ಮನಸ್ಸುಗಳ ಸ್ವಾಸ್ಥ್ಯವನ್ನು ಹಾಳು ಮಾಡುವುದು ಖಚಿತ. ಮಳೆಗಾಲದಲ್ಲಂತೂ ಕೇಳುವುದೇ ಬೇಡ. ಹಾಗೆಯೇ ಒಮ್ಮೆ ಮಾಡಿಟ್ಟು ಮತ್ತೆ ಮತ್ತೆ ಅದನ್ನೇ ಬಿಸಿ ಮಾಡಿ/ ಓವೆನ್‌ನಲ್ಲಿಟ್ಟು ಬಿಸಿ ಮಾಡಿದ ಆಹಾರವು ಆರೋಗ್ಯ ಪೂರಕವಲ್ಲ. ಇಂತಹ ಆಹಾರಗಳು ಪೋಷಣೆಯನ್ನು ನೀಡದೆ ಬೇಗನೆ ಮುಪ್ಪು ಆವರಿಸುವುದಕ್ಕೂ ಕಾರಣ. ರೋಗ ನಿರೋಧಕ ಶಕ್ತಿಯನ್ನು ಕುಂದಿಸಿ ಪದೇ ಪದೇ ಅನಾರೋಗ್ಯವನ್ನು ತರುತ್ತದೆ. ಹಾಗಾಗಿ ತಂಗಳ ಪಟ್ಟಿಗೆಯಿಂದ ದೂರವಿದ್ದಷ್ಟು ಆರೋಗ್ಯಕ್ಕೆ ಹತ್ತಿರವಾಗಬಹುದು.

ಮಳೆಗಾಲದಲ್ಲಿ ವಿಶೇಷವಾಗಿ ಯಾವ ರುಚಿ ಪ್ರಧಾನವಾದ ಆಹಾರವನ್ನು ಸೇವಿಸಬೇಕು? ನಿಮಗೆ ಗೊತ್ತಿರಬಹುದು ರಸಗಳು 6 – ಮಧುರ ಅಂದರೆ ಸಿಹಿ, ಆಮ್ಲ ಅಂದರೆ ಹುಳಿ, ಲವಣ ಅಂದರೆ ಉಪ್ಪು, ಕಟು ಅಂದರೆ ಖಾರ, ತಿಕ್ತ ಅಂದರೆ ಕಹಿ ಹಾಗೂ ಕಷಾಯ ಅಂದರೆ ಒಗರು – ಇವುಗಳನ್ನು ಆಯುರ್ವೇದದಲ್ಲಿ 'ಷಡ್ರಸ' ಎಂದು ಕರೆಯುತ್ತಾರೆ. ಆಯುರ್ವೇದದ ಪ್ರಕಾರ ಷಡ್ರಸೋಪೇತ ಭೋಜನ ಯಾವಾಗಲೂ ಆರೋಗ್ಯಕರ – ಅಂದರೆ ನಿತ್ಯ ಸೇವಿಸುವ ಮೂರು ಕಾಲದ ಆಹಾರದಲ್ಲಿಯೂ 6 ರಸಗಳ balance ಇರಬೇಕು. ಯಾವುದೋ ಒಂದೇ ರುಚಿ ಪ್ರಧಾನವಾದ ಆಹಾರವನ್ನೇ ಸದಾ ಸೇವಿಸುವುದರಿಂದ ಬಲ ಕಡಿಮೆಯಾಗುವುದು ಖಚಿತ ಅನ್ನುವುದು ಆಯುರ್ವೇದದ ವಾಕ್ಯ.

ಇನ್ನು ಮಳೆಗಾಲದಲ್ಲಿ ವಿಶೇಷವಾಗಿ ಹುಳಿರಸ ಹೆಚ್ಚಾಗಿರುವ, ಜೊತೆಗೆ ಉಪ್ಪು ಖಾರ ಇರುವ ಬಿಸಿ ಬಿಸಿಯಾದ, ಸ್ವಲ್ಪ ಜಿಡ್ಡಿನಿಂದ ಒಗ್ಗರಿಸಿದ, ಜೀರ್ಣಕ್ಕೆ ಹಗುರವೂ ಆದ ಆಹಾರದ ಸೇವನೆ ಹಿತಕರ. ಉದಾಹರಣೆಗೆ – ಜೀರಿಗೆ, ಮೆಣಸು, ಹಿಂಗು,

ಸಾಸಿವೆಗಳಿಂದ ಒಗ್ಗರಿಸಿದ ಹುಣಸೆ ಸಾರು, ನಿಂಬೆಹಣ್ಣಿನ ಸಾರು, ನೆಲ್ಲಿಕಾಯಿ ಸಾರು, ಶುಂಠಿ ರಸಂ, ಕೋಕಂ/ಅಮ್ಸೋಲ್ ಸಾರು, ದಾಳಿಂಬೆ ಸಾರು ಇತ್ಯಾದಿ.

ಇನ್ನು ಮಜ್ಜಿಗೆಯಿಂದ ಮಾಡಿದ ಕಡಿ, ಮಜ್ಜಿಗೆ ಹುಳಿ, ಪಳದ್ಯಗಳು ಅತ್ಯಂತ ಹಿತ. ಆದರೆ ನೆನಪಿಡಿ– ಈ ಖಾದ್ಯಗಳಿಗೆ ಮಜ್ಜಿಗೆಯನ್ನು– ಚೆನ್ನಾಗಿ ನೀರು ಹಾಕಿ ಕಡಿದ ಮಜ್ಜಿಗೆಯನ್ನು ಉಪಯೋಗಿಸಬೇಕೇ ಹೊರತು, ಮೊಸರನ್ನಲ್ಲ! ಯಾಕೆಂದರೆ ಮೊಸರನ್ನು ಎಂದಿಗೂ ಬಿಸಿ ಮಾಡಬಾರದು ಅಥವಾ ಬಿಸಿ ಆಹಾರದ ಜೊತೆ ಸೇವಿಸಬಾರದು. ಹಾಗಾಗಿ ಮಜ್ಜಿಗೆಯ ಬಳಕೆ ಸದಾ ಹಿತ.

ಹಳೆಯ ಅಕ್ಕಿಯ ಅನ್ನ, ಹಳೆಯ ಜವೆ ಗೋಧಿ/ ಬಾರ್ಲಿ, ಗೋಧಿಯ ಅನ್ನ, ಫುಲ್ಕಾ, ರೊಟ್ಟಿಗಳು ಒಳ್ಳೆಯದು. ಹೊಸ ಅಕ್ಕಿ ಜೀರ್ಣಕ್ಕೆ ಜಡ ಹಾಗೂ ಮಧುಮೇಹದಂತಹ ಖಾಯಿಲೆಗಳಿಗೆ ಕಾರಣವಾಗಬಹುದು. ಹುರುಳಿ ಕಟ್ಟು ಸಾರು, ತೊಗರಿ ಕಟ್ಟು, ಹೆಸರು ಕಟ್ಟು ಸಾರು, ರಾಗಿ ಮತ್ತು ಹೆಸರುಬೇಳೆಯನ್ನು ಸಾಕಷ್ಟು ಬಳಸಬಹುದು. ಶುಂಠಿ, ಮೆಣಸು, ಬೆಳ್ಳುಳ್ಳಿ, ಸಾಸಿವೆ, ಅರಿಶಿಣಗಳನ್ನು ಹೆಚ್ಚಾಗಿ ಬಳಸಬೇಕು. ಬೇಸಿಗೆಯಲ್ಲಿ ಚೆನ್ನಾಗಿ ಒಣಗಿಸಿಟ್ಟ ಒಣ ತರಕಾರಿ, ಬಾಳಕ, ಉಪ್ಪು ಮೆಣಸಿನ ಕಾಯಿಯ ಬಳಕೆ ಹಿತ. ಹೀರೆಕಾಯಿ, ಪಡವಲಕಾಯಿ, ಹಾಲುಗುಂಬಳ, ಸೋರೆಕಾಯಿ, ಮಂಗಳೂರು ಸೌತೆ, ಬೂದುಗುಂಬಳ, ಮೂಲಂಗಿ, ಕ್ಯಾರೆಟ್, ಈರುಳ್ಳಿ, ಬೆಳ್ಳುಳ್ಳಿಗಳನ್ನು ಬಳಸಬಹುದು. ಆದರೆ ನೆನಪಿಡಿ ಹೆಚ್ಚಿನ Raw Salads/sprouts ಈ ಋತುವಿನಲ್ಲಿ ವರ್ಜ್ಯ. ಹೊಸ ನೀರು, ಭೂಮಿಯಲ್ಲಿ ಕೆಸರು ಇರುವ ಕಾರಣ ಈ ಕಾಲದಲ್ಲಿ ಬೆಳೆದ ಸೊಪ್ಪುತರಕಾರಿಗಳು ಕ್ರಿಮಿಯನ್ನು ಉತ್ಪತ್ತಿ ಮಾಡುತ್ತದೆ. ಜೀರ್ಣವಾಗುವಾಗ ಹುಳಿಗೊಳ್ಳುತ್ತದೆ. ಈ ಕಾರಣದಿಂದ ಬಳಸದೇ ಇರುವುದು ಅಥವಾ ಮಿತವಾಗಿ ಬಳಸುವುದು ಕ್ಷೇಮ. ನಿಮಗಿದು ಗೊತ್ತೇ? ಆಯುರ್ವೇದದ ಪ್ರಕಾರ ಮೊಳಕೆ ಕಾಳುಗಳ ಮತ್ತು ಹಸಿ ತರಕಾರಿಗಳ ಬಳಕೆ ನಿಷಿದ್ಧ. ಇವುಗಳು ಅತ್ಯಂತ ಅನಾರೋಗ್ಯಕರ ಪದಾರ್ಥಗಳೆಂದು ಆಯುರ್ವೇದದ ಮತ.

ಮಾಂಸಾಹಾರಿಗಳು ಕೂಡ ಜೀರ್ಣಕ್ಕೆ ಹಗುರವಾದಂತಹ ಪಕ್ಷಿಗಳ/ಪ್ರಾಣಿಗಳ ಮಾಂಸದ ಬಳಕೆ ಮಾಡಬಹುದು. ಅವುಗಳನ್ನು ಬೇಯಿಸಿದ ನೀರು, ಸೂಪ್, ಸಾರು, ಗ್ರಿಲ್ಡ್ ಚಿಕನ್, ಒಣಗಿಸಿ ಬೇಯಿಸಿದ ಮಾಂಸವನ್ನು ತಿನ್ನಬಹುದು. No fried meat!

ಸಂಡಿಗೆ, ಹಪ್ಪಳ, ಉಪ್ಪಿನಲ್ಲಿಟ್ಟ ತರಕಾರಿ, ಉಪ್ಪಿನಕಾಯಿಗಳ ಮಿತವಾದ ಸೇವನೆ ಒಳ್ಳೆಯದು. ಹಣ್ಣುಗಳಲ್ಲಿ– ಒಣ ದ್ರಾಕ್ಷಿ, ದಾಳಿಂಬೆ, ಬೆಟ್ಟದ ನೆಲ್ಲಿಕಾಯಿ, ಖರ್ಜೂರಗಳನ್ನು ಬಳಸಬಹುದು. ಇನ್ನು ಮೊಸರಿನ ಬಳಕೆಯ ಬಗ್ಗೆ ವಿಶೇಷವಾಗಿ ಹೇಳಬೇಕು – ಮೊಸರನ್ನು ಆಯುರ್ವೇದವು ರಾತ್ರಿ ಸೇವನೆಗೆ ನಿಷಿದ್ಧವೆಂದು ಹೇಳಿದೆ. ಆದರೆ, ದಿನದಲ್ಲಿ ಹುಳಿ ಇರದ/ ತಣ್ಣಗಿರದ ಮೊಸರನ್ನು ಸ್ವಲ್ಪ ಜೇನುತುಪ್ಪ ಅಥವಾ ಬೇಳೆ ಕಟ್ಟು ಅಥವಾ ಸಕ್ಕರೆ ಅಥವಾ ನೆಲ್ಲಿಪುಡಿಯ ಜೊತೆಗೆ ಬಳಸುವುದು ಹಿತಕರ. ಮೊಸರಿನ ಜೊತೆ ಹಾಲನ್ನು ಬೆರೆಸಿ ತಿನ್ನುವುದು ಅಥವಾ ಬಿಸಿಯಾದ ಆಹಾರದ ಜೊತೆ ತಿನ್ನುವುದು ಒಳ್ಳೆಯದಲ್ಲ.

ಇನ್ನು ಮಳೆಗಾಲದಲ್ಲಿ ನೀರಿನ ಬಳಕೆಯ ಬಗ್ಗೆ ಕೆಲವು ವಿಚಾರಗಳು – ಮಳೆಗಾಲದಲ್ಲಿ ಎಂತಹ ನೀರನ್ನು ಕುಡಿಯಬೇಕು? ಘನಾಹಾರಗಳ ಜೊತೆ ಸದಾ ಕುಡಿಯಲು ಹೊಂದುವ ಪಾನೀಯವೆಂದರೆ ಚೆನ್ನಾಗಿ ಕುದಿಸಿದ ನೀರು ಅಥವಾ ಸ್ವಲ್ಪವೇ ಶುಂಠಿ ಪುಡಿ ಹಾಕಿ ಕುದಿಸಿದ ನೀರು ಅಥವಾ ಜೀರಿಗೆ ಹಾಕಿ ಕುದಿಸಿದ ನೀರು. ಆದರೆ ನೆನಪಿಡಿ – ಬಾಯಾರಿಕೆಯನ್ನು ಗಮನಿಸಿ ನೀರು ಕುಡಿದರೆ ಕ್ಷೇಮ. ಬಾಯಾರಿಕೆ ಇಲ್ಲದೆ ಸುಮ್ಮನೆ ಪದೇ ಪದೇ ಮಳೆಗಾಲದಲ್ಲಿ ನೀರು ಕುಡಿಯುವುದರಿಂದ ಹಲವಾರು ರೋಗಗಳನ್ನು ನಾವೇ ಬರಮಾಡಿಕೊಂಡಂತಾಗುತ್ತದೆ . ಇದಲ್ಲದೆ, ಮಳೆಗಾಲದಲ್ಲಿ ಶರೀರದಲ್ಲಿ ದ್ರವದ ಅಂಶ ಹೆಚ್ಚುವ ಕಾರಣ ಈ ಋತುವಿನಲ್ಲಿ ಜೇನುತುಪ್ಪದ ಪ್ರಯೋಗ ಬಹಳ ಒಳ್ಳೆಯದು. ಆದರೆ ಹಿತಮಿತ ಪ್ರಮಾಣದಲ್ಲಿರಲಿ. ಕಾಯಿಸಿ ಆರಿಸಿದ ನೀರಿಗೆ ಸಿಹಿಯಾಗುವಂತೆ ಶುದ್ಧವಾದ ಜೇನುತುಪ್ಪವನ್ನು ಸೇರಿಸಿಕೊಂಡು ಕುಡಿಯಬಹುದು .Remember to never eat honey with anything hot or in hot climate! ಈ ಮೇಲೆ ಹೇಳಿದ ಎಲ್ಲಾ ಪಾನೀಯಗಳು ಜೀರ್ಣಕ್ರಿಯೆಗೆ ಪುಷ್ಟಿ ನೀಡಿ ತೇವಾಂಶವನ್ನು ಸರಿದೂಗಿಸುತ್ತವೆ.

ಒಟ್ಟಿನಲ್ಲಿ ಮಳೆಗಾಲದಲ್ಲಿ ತಾಜಾ, ಬಿಸಿ ಆಹಾರ, ಮಿತವಾದ ಆಹಾರ, ಜೀರ್ಣಕ್ಕೆ ಸುಲಭವಾದ ಆಹಾರ ಸೇವನೆ ಹಿತಕರ. ಒಂದು ಪುಟ್ಟ ಕಿವಿಮಾತು – ವಿಶೇಷವಾಗಿ ಅತಿಯಾಗಿ ಮಳೆ ಇರುವ ದಿನಗಳಂದು ಬಿಸಿ ಆಹಾರ, ಹುಳಿ–ಉಪ್ಪು ರುಚಿ ಪ್ರಧಾನವಾದ ಜಿಡ್ಡಿನಿಂದ ಒಗ್ಗರಿಸಿದ ಆಹಾರ ಸೇವಿಸುವುದು ಬಹಳ ಒಳ್ಳೆಯದು. ಅನ್ನಕ್ಕೆ ಬಿಸಿ ಬಿಸಿ ಕೋಕಂ ರಸಂ, ಅದರೊಂದಿಗೆ ಸ್ವಲ್ಪ ನಿಂಬೆಕಾಯಿ ಚಿತ್ರಾನ್ನ ಅಥವಾ ಪುಳಿಯೋಗರೆ , ಕೊನೆಯಲ್ಲಿ ಸ್ವಲ್ಪ ಶುಂಠಿ ತಂಬುಳಿ ಸವಿದರೆ – ಅದುವೇ ಮಳೆಗಾಲದ ಅತ್ಯಂತ healthiest menu!

ಇನ್ನು ಮಳೆಗಾಲದಲ್ಲಿ ನಮ್ಮ ವಿಹಾರಗಳು ಹೇಗಿರಬೇಕು?

ರಾತ್ರಿ ನಿದ್ದೆಗೆಡುವುದು ಅಥವಾ ತಡ ರಾತ್ರಿ ಮಲಗುವುದು ಅನಾರೋಗ್ಯಕರ. ಹಾಗೆಯೇ ಈ ಕಾಲದಲ್ಲಿ ಹಗಲು ನಿದ್ದೆಯೂ ದೇಹದಲ್ಲಿ ಮತ್ತಷ್ಟು ಜಡತ್ವ ತರುತ್ತದೆ ಜೊತೆಗೆ ತೂಕವನ್ನೂ ಹೆಚ್ಚಿಸುತ್ತದೆ. ಇದರಿಂದ ಅವರೋಧಾತ್ಮಕ ರೋಗಗಳು ಉತ್ಪತ್ತಿಯಾಗುತ್ತವೆ. ಹಗಲು ನಿದ್ದೆ ಮತ್ತು ರಾತ್ರಿ ಜಾಗರಣೆ ನಮ್ಮನ್ನು ರೋಗಗಳ ಗೂಡನ್ನಾಗಿಸುತ್ತದೆ ಅನ್ನುವುದು ಆಚಾರ್ಯರ ಸ್ಪಷ್ಟನುಡಿ.

ಹದವಾದ ವ್ಯಾಯಾಮ ಅಥವಾ ಮೃದು ವ್ಯಾಯಾಮ ಹಿತಕರ. ಅತಿಯಾಗಿ ಸುಸ್ತಾಗುವಷ್ಟು ಮಾಡುವ ವ್ಯಾಯಾಮವು ಈ ಕಾಲದಲ್ಲಿ ಖಂಡಿತ ಬೇಡ ಯಾಕೆಂದರೆ ಈಗಾಗಲೇ ಶರೀರದ ಬಲ ಕಡಿಮೆ ಇರುವುದರಿಂದ ಅತಿವ್ಯಾಯಾಮ ತೊಂದರೆ ತರುವುದು ಸಿದ್ಧ. ಇದರಿಂದ ಬೇರೆ ಬೇರೆ ರೀತಿಯ deficiency, degeneration , joint disorders, low immunity ಕಾಣಿಸಿಕೊಳ್ಳಬಹುದು. ವಿಶೇಷವಾಗಿ 'ಅಭ್ಯಂಜನ ಸ್ನಾನ' ಬಹಳ ಮುಖ್ಯವಾದ ವಿಹಾರ. ಇಡೀ ಮೈಗೆ – ತಲೆಯಿಂದ ಹಿಡಿದು ಪಾದ ಹಾಗೂ ಕಾಲ ಬೆರಳಿನವರೆಗೆ ವಾತಹರ ತೈಲದಿಂದ ಅಭ್ಯಂಜನ ಮಾಡಿ ಅಂದ್ರೆ ಎಣ್ಣೆ ಹಚ್ಚಿ , ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದು– ನೋವು ನಿವಾರಕ, ಬಲದಾಯಕ ಹಾಗೂ ಪುಷ್ಟಿಕರ. Insomnia, hair fall, joint pain, dry skin ಗಳನ್ನು ನಿವಾರಿಸುತ್ತದೆ. ಮೈಥುನ 15 ದಿನಕ್ಕೊಮ್ಮೆ ಇರಲಿ. ಪ್ರಯಾಣ ಕಡಿಮೆ ಇರಲಿ. ಪ್ರಯಾಣದಲ್ಲಿ ಎದುರು ಗಾಳಿಯಿಂದ ರಕ್ಷಣೆ ಪಡೆಯಲು helmet/mask/scarf ಗಳನ್ನು ಬಳಸುವುದು ಉತ್ತಮ.

ಇವಿಷ್ಟು ವರ್ಷಾ ಋತುಚರ್ಯೆಯ ಒಂದು ಪಕ್ಷಿ ನೋಟ. ಹಾಗಾದರೆ ಪ್ರತಿಯೊಂದು ಋತುವಿನ ಚರ್ಯೆಯನ್ನು ಯಾವಾಗ ಪ್ರಾರಂಭ ಮಾಡಬೇಕು?? ಯಾವಾಗ ಮುಗಿಸಬೇಕು? ಆಯುರ್ವೇದದಲ್ಲಿ 'ಋತುಸಂಧಿ' ಅನ್ನುವ ಒಂದು ವಿಷಯವಿದೆ. ಇದರ ಪ್ರಕಾರ ಹಿಂದಿನ ಋತುವಿನ ಕೊನೆಯ ಏಳು ದಿನಗಳನ್ನು ಹಾಗೂ ನಂತರದ ಋತುವಿನ ಮೊದಲ ಏಳು ದಿನಗಳನ್ನು– ಅಂದರೆ ಒಟ್ಟು 14 ದಿನಗಳನ್ನು ಋತುಸಂಧಿ ಅಂತ ಪರಿಗಣಿಸಬಹುದು. ಈ ಕಾಲದಲ್ಲಿ ಹಿಂದಿನ ಋತುಚರ್ಯೆಯನ್ನು ನಿಧಾನವಾಗಿ ನಿಲ್ಲಿಸಿ ಮುಂದಿನ ಋತುವಿನ ಆಹಾರ ವಿಹಾರಗಳನ್ನು ಕ್ರಮೇಣವಾಗಿ ಪಾಲಿಸಲು ಪ್ರಾರಂಭ ಮಾಡಬೇಕು. ತಕ್ಷಣವಾಗಿ ಹಳೆಯ ಆಚರಣೆಯನ್ನು ನಿಲ್ಲಿಸಿ ಮುಂದಿನ ಋತುಚರ್ಯೆಯನ್ನು ಪ್ರಾರಂಭಿಸುವುದು ಅನಾರೋಗ್ಯಕರ. ಹಾಗಾಗಿ ಬದಲಾವಣೆ ನಿಧಾನವಾಗಿ ಆಗಲಿ.

ಸ್ನೇಹಿತರೆ, ಇದು ಆಯುರ್ವೇದದಲ್ಲಿ ಹೇಳಿರುವ ಮಳೆಗಾಲದಲ್ಲಿ ಆರೋಗ್ಯ ರಕ್ಷಣೆಯ ವಿಧಾನ. ಇಡೀ ಋತುಚರ್ಯೆಯು– ದೇಹ ಬಲ, ಜೀರ್ಣ ಬಲ/ಅಗ್ನಿ ಬಲ ಹಾಗೂ ದೋಷದ ಬಲಗಳಿಗೆ ಅನುಗುಣವಾಗಿ ಆಹಾರ ವಿಹಾರಗಳ ಸೂಕ್ತ ಬದಲಾವಣೆ. ತನ್ಮೂಲಕ ದೇಹದಲ್ಲಿ ವಿಕೃತವಾದ ದೋಷಗಳ ಪ್ರಾಕೃತ ಶಮನ. ಇದಕ್ಕಿಂತ ವೈಜ್ಞಾನಿಕವಾದಂತಹ ಆರೋಗ್ಯ ಪಾಲನೆ ಮತ್ತೆಲ್ಲಿ ಶೋಧಿಸಿದರೂ ಸಿಗುವುದಿಲ್ಲ ಅನ್ನುವ ಮಾತನ್ನು ಬಹಳ ಧೈರ್ಯವಾಗಿ ಹೇಳುತ್ತೇನೆ! Come let us all embrace Ayurveda to Harvest health Happiness!

ಪ್ರಸ್ತುತ

ಶ್ರೀಧರ್ ಡಿ.ರಾಮಚಂದ್ರಪ್ಪ

ಮತ್ತೆ ಪ್ರಾದೇಶಿಕ ಪಕ್ಷಗಳ ಹಂಗಾಮ

ಇತ್ತೀಚೆಗೆ ನಡೆದ 2024ರ ಲೋಕಸಭೆ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್ ನ ಯಾವುದೇ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗದೇ ಪ್ರಾದೇಶಿಕ ಅಂಗ ಪಕ್ಷಗಳ ನೆರವಿನಿಂದ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟವು 292 ಸಂಖ್ಯೆಯ ಸಾಧಾರಣ ಬಹುಮತ ಪಡೆದು ಅಧಿಕಾರದ ಚುಕ್ಕಾಣಿ ಹಿಡಿಯಲು ಸಿದ್ದವಾಗಿದೆ. ಈ ಹೊತ್ತಿನಲ್ಲಿ ಬಿಜೆಪಿಯ ಸಾರಥಿ ನರೇಂದ್ರ ಮೋದಿಯವರ 2014 ರಿಂದ 2024 ವರೆಗಿನ ಆಡಳಿತಕ್ಕೆ ಮತದಾರ ಪ್ರಭು ಸಂಪೂರ್ಣವಾಗಿ ಜೈ ಎನ್ನದೇ ಬೇಸರಗೊಂಡಿರುವುದು ಜೂನ್ 4ರಂದು ಹೊರಬಿದ್ದ ಏಳು ಹಂತಗಳ ಲೋಕಸಭೆ ಚುನಾವಣೆ ಫಲಿತಾಂಶದಿಂದ ತಿಳಿಯುತ್ತದೆ.

ಇದೇ ಸಂದರ್ಭದಲ್ಲಿ ಮತ್ತೆ ಕೇಂದ್ರದಲ್ಲಿ ಪ್ರಾದೇಶಿಕ ಪಕ್ಷಗಳ ಅನಿವಾರ್ಯತೆಯನ್ನು ಈ ಫಲಿತಾಂಶ ಎತ್ತಿ ತೋರಿಸುತ್ತದೆ. ಈಗೀರುವಾಗ ದಕ್ಷಿಣ ಭಾರತದ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನ ಪ್ರಾದೇಶಿಕ ಪಕ್ಷಗಳ ಹಂಗಾಮ ಶುರುವಾಗಿದೆ. ಬಿಜೆಪಿಯ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕಾಲಾವಧಿಯಲ್ಲಿ ಹೆಚ್ಚಿನ ಮನ್ನಣೆ ಗಳಿಸಿದ್ದ ಈ ರಾಜ್ಯಗಳ ಪಕ್ಷಗಳು, ನಂತರದ ಮತ್ತೊಬ್ಬ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ ಸರಕಾರದ ಹತ್ತು ವರ್ಷಗಳ ಅವಧಿಯ ಆಡಳಿತಕ್ಕೆ ನಿರ್ಣಾಯಕ ಪಾತ್ರವನ್ನು ವಹಿಸಿದ್ದವು. ಇಂತಹ ಸನ್ನಿವೇಶದಲ್ಲಿ 3 ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ದೇಶದಲ್ಲಿ ಹಿಂದುತ್ವದ ಹವಾ ಸೃಷ್ಟಿಸಿದ್ದ ನರೇಂದ್ರ ಮೋದಿ ಆರಂಭದಲ್ಲಿ ದೇಶದ ಜನತೆಯಲ್ಲಿ ಅಪಾರ ಕುತೂಹಲ, ನಿರೀಕ್ಷೆಯನ್ನು ಹುಟ್ಟು ಹಾಕಿದ್ದರು. ಹತ್ತು ವರ್ಷಗಳ ಅವಧಿಯಲ್ಲಿ ಬಿಜೆಪಿ ಬಹುಮತ ಪಡೆದು ಜಯಭೇರಿ ಬಾರಿಸಿ ಮೈತ್ರಿಕೂಟದ ಅಂಗ ಪಕ್ಷಗಳ ನೆರವಿಲ್ಲದೇ ಅಧಿಕಾರಕ್ಕೆ ಬಂದಿತ್ತು. ಒಂದೆಡೆ ವಿಪಕ್ಷ ಕಾಂಗ್ರೆಸ್‌ಗೆ ಸಮರ್ಥ ನಾಯಕತ್ವ ಇಲ್ಲದೇ ಈ ಅವಧಿಯ ಪ್ರಧಾನಿ ನರೇಂದ್ರ ಮೋದಿಗೆ ಯಾರೂ ಎದುರಾಳಿ ಇಲ್ಲದೇ, ಸಲೀಸಾಗಿ ಆಡಳಿತ ನಡೆಸಲು ಅನುಕೂಲವಾಗಿತ್ತು. ಆದರೆ ಹತ್ತು ವರ್ಷಗಳ ನಂತರ ಮೋದಿ ಅಲೆಯು ಕಡಿಮೆಯಾಗಿರುವುದಕ್ಕೆ ಈ ಬಾರಿಯ ಲೋಕಸಭಾ ಚುನಾವಣೆ ಫಲಿತಾಂಶವೇ ಕೈಗನ್ನಡಿಯಾಗಿದೆ. ಹಾಗಾಗಿ, ಈ ಸಲ ಬಹುಮತಕ್ಕೆ ಮ್ಯಾಜಿಕ್ ನಂಬರ್ 272ನ್ನು ಸ್ವತಂತ್ರವಾಗಿ ತಲುಪಲು ಮೋದಿ ನಾಯಕತ್ವದ ಬಿಜೆಪಿಗೆ ಸಾಧ್ಯವಾಗದೇ 244 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳುವಂತಾಯಿತು. ಈಗಾಗಿ, ಮತ್ತೆ ದೇಶದ ಕೇಂದ್ರ ಸರಕಾರ ರಚನೆಗೆ ಪ್ರಾದೇಶಿಕ ಪಕ್ಷಗಳ ಅನಿವಾರ್ಯತೆ ಎದುರಾಗಿದೆ. ಈ ನಿಟ್ಟಿನಲ್ಲಿ ಸೀಮಾಂಧ್ರದ ತೆಲುಗು ದೇಶಂ ಪಕ್ಷ ಮತ್ತು ಬಿಹಾರದ ಜೆಡಿಯು ಈ ಬಾರಿ ಕೇಂದ್ರದಲ್ಲಿ ರಚನೆಯಾಗಲಿರುವ ಬಿಜೆಪಿ ಸಾರಥ್ಯದ ಎನ್ ಡಿಎ ಮೈತ್ರಿ ಕೂಟದ ಸರಕಾರ ರಚನೆಗೆ ಅವುಗಳ ಬೆಂಬಲ ದೊಡ್ಡ ಮಟ್ಟದಲ್ಲಿ ಡಿಮ್ಯಾಂಡ್ ಸೃಷ್ಟಿಸಿದೆ.

ಕಾಂಗ್ರೆಸ್‌ನಿಂದ ಜೆಡಿಯುಗೆ ಉಪ ಪ್ರಧಾನಿ ಹುದ್ದೆ, ಟಿಡಿಪಿಗೆ ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನದ ಭರವಸೆಯನ್ನು ಆಫರ್ ನೀಡಲಾಗಿತ್ತು. ಒಂದೊಮ್ಮೆ ಇಂಡಿಯಾ ಒಕ್ಕೂಟದ ಸರಕಾರ ರಚನೆಗೆ ಬೆಂಬಲ ನೀಡಿದ್ದಲ್ಲಿ ಎಂದು. ಆದರೆ ಈ ಪಕ್ಷಗಳ ಮುಖ್ಯಸ್ಥರಾದ ನಿತೀಶ್ ಹಾಗೂ ಚಂದ್ರಬಾಬು ನಾಯ್ಡು ಅವರು ಮೊದಲೇ ನಿರ್ಧರಿಸಿದಂತೆ ಬಿಜೆಪಿ ನೇತೃತ್ವದ ಎನ್‌ಡಿಎಗೆ ತಮ್ಮ ಬೆಂಬಲ ಘೋಷಿಸಿದ್ದಾರೆ. ಇದರ ನಡುವೆ ಹಲವು ಬೇಡಿಕೆಗಳ ಪಟ್ಟಿಯನ್ನೇ ನರೇಂದ್ರ ಮೋದಿ ನಾಯಕತ್ವದ ಬಿಜೆಪಿಗೆ ನೀಡಿದ್ದು, ಅದರಲ್ಲಿ ಲೋಕಸಭೆ ಸ್ಪೀಕರ್, ಹಲವು ಕ್ಯಾಬಿನೆಟ್ ಸಚಿವ ಸ್ಥಾನ, ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡುವಂತೆ ತಮ್ಮ ಅಹವಾಲುಗಳನ್ನು ಸಲ್ಲಿಸಲಾಗಿದೆ. ಇದರಿಂದ ಸಹಜವಾಗಿ ಮೋದಿ ನಾಯಕತ್ವದ ಬಿಜೆಪಿಗೆ ಇಕ್ಕಟ್ಟಿನ ಸ್ಥಿತಿ ನಿರ್ಮಿಸಲಾಗಿದೆ.

ಅಂದಹಾಗೇ, ನರೇಂದ್ರ ಮೋದಿ ಅವರು ಈ ಮೊದಲಿನ ಹತ್ತು ವರ್ಷಗಳ ಆಡಳಿತದ ಅವಧಿಯಲ್ಲಿ ನಡೆದುಕೊಂಡ ಸರ್ವಾಧಿಕಾರಿ ಧೋರಣೆ ಈ ಬಾರಿಯ ಅಧಿಕಾರಾವಧಿಯಲ್ಲಿ ಇರಲು ಸಾಧ್ಯವಿಲ್ಲ, ಆ ದಿಶೆಯಲ್ಲಿ ಪ್ರಾದೇಶಿಕ ಪಕ್ಷಗಳು ಸರಕಾರದ ಜುಟ್ಟನ್ನು ತಮ್ಮ ಕೈಲಿ ಹಿಡಿದಿಟ್ಟುಕೊಳ್ಳುವ ಮೂಲಕ ನೀತಿ-ನಿರ್ಧಾರಗಳಲ್ಲಿ ತಮ್ಮ ನಡೆಯನ್ನು ನಿರ್ಣಾಯಕಗೊಳಿಸುತ್ತವೆ. ಇಂತಹ ಸನ್ನಿವೇಶದಲ್ಲಿ ಮುಂದಿನ ಐದು ವರ್ಷಗಳ ಅವಧಿಯಲ್ಲಿ ನರೇಂದ್ರ ಮೋದಿಯವರ ನಡೆಯು ತಂತಿಯ ಮೇಲಿನ ನಡಿಗೆಯನ್ನು ನೆನಪಿಸುವಂತಿರುತ್ತದೆ. ಆ ಮಟ್ಟಿಗೆ ಪ್ರಾದೇಶಿಕ ಪಕ್ಷಗಳ ಹಂಗಾಮ ಮತ್ತೆ ಶುರುವಾಗಿದೆ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ.

ಭಾಜಪಾದಲ್ಲಿ ಧನಂ ಜಯ ಯೋಜನೆ ಅಂತ್ಯವಾಗಲಿ!



ಅಭಿಪ್ರಾಯ

ರವೀ ಸಜಂಗದ್ದೆ
vveditoped@gmail.com

ಕರ್ನಾಟಕದ ಕರಾವಳಿ ಭಾಗದ ಕ್ಷೇತ್ರಗಳಲ್ಲಿ ಭಾಜಪಾ ಚಿಹ್ನೆಯಡಿ ಯಾರನ್ನು ನಿಲ್ಲಿಸಿದರೂ ಮತದಾರರು ಗೆಲ್ಲಿಸುತ್ತಾರೆ ಎನ್ನುವ ಪ್ರತೀತಿ ದಶಕಗಳ ಹಿಂದಿನಿಂದಲೇ ಇತ್ತು. ಅದನ್ನು ಮತ್ತೆ ಅಲ್ಲಿನ ಮತದಾರ ಬಂಧುಗಳು ನೈರುತ್ಯ ಪದವೀಧರ ಕ್ಷೇತ್ರದ ಚುನಾವಣೆಯ ಫಲಿತಾಂಶದ ಮೂಲಕ ಸಾಬೀತು ಮಾಡಿದ್ದಾರೆ. ಭಟ್ಟಂಗಿಗಳ ಗುಂಪು ಗೆದ್ದಿದೆ, ಭಟ್ಟರು ಸೋತು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ! ಅನೇಕ ದೇವದುರ್ಲಭರು ಮನಸ್ಸಿಲ್ಲದಿದ್ದರೂ ಪಕ್ಷದ ಅಣತಿಯಂತೆ ಭಾಜಪಾ ಅಭ್ಯರ್ಥಿಯ ಪರ ಹಗಲಿರುಳು ಕೆಲಸ ಮಾಡಿದ್ದಾರೆ; ಮತ ಚಲಾಯಿಸಿದ್ದಾರೆ! ಅಲ್ಲಿಗೆ ಭಾಜಪಾ ಅಭ್ಯರ್ಥಿ ಧನಂಜಯ ಸರ್ಜಿಯವರು ನೈರುತ್ಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜಯ ಗಳಿಸಿದ್ದಾರೆ. ಅಭಿನಂದನೆಗಳು.

ದೇವದುರ್ಲಭ ಕಾರ್ಯಕರ್ತನಿಗೆ ಸೋಲು ಹೊಸದೇನೂ ಅಲ್ಲ! ಹಲವು ದಶಕಗಳಿಂದ ದುಡಿದು ಸೋಲನ್ನು ಅನುಭವಿಸಿರುವ ಚರಿತ್ರೆ ಮತ್ತು ಅದರಿಂದ ಪಾಠ ಕಲಿತು ಪುಟಿದೇಳುವ ಅವನ ಪ್ರಯತ್ನ ನಿರಂತರ ಸಾಗುತ್ತಿದೆ. ಕಳೆದೊಂದು ದಶಕದಿಂದ ಅವನ ಪಾಳಯದ ವರು ಗೆಲ್ಲುತ್ತಿರುವ, ಅಧಿಕಾರ ಪಡೆದು ರಾಜ್ಯಭಾರ ಮತ್ತು ದೇಶಭಾರ ಮಾಡುತ್ತಿರುವುದನ್ನು ನೋಡಿ ಸಂತಸದಿಂದ ಇದ್ದಾನೆ. ಅವನ ಪಕ್ಷನಿಷ್ಠೆ ಮತ್ತು ಸೈದ್ಧಾಂತಿಕ ನಿಲುವು ಅಂದಿನಿಂದ ಇಂದಿನವರೆಗೂ ಅಪ್ಪಟ ಚಿನ್ನದಂತೆ ಹಾಗೇ ಇದೆ, ಭಾಜಪಾದ ಅನೇಕ ಓತಿಕ್ಯಾತ ಗಳಂತೆ, ಕಪ್ಪೆಯಂತೆ ಪಕ್ಷದಿಂದ ಪಕ್ಷಕ್ಕೆ ಜಿಗಿಯುವವರಂತೆ, ಅಧಿಕಾರಕ್ಕಾಗಿ ನಿಷ್ಠೆ ಬದಲಾಯಿಸುವವರಂತೆ ಒಂಚೂರು ಬದಲಾಗಲಿಲ್ಲ, ಬದಲಾಗುವುದೂ ಇಲ್ಲ! ಅದೆಲ್ಲ ಅವನಿಗೆ ಆಗಿಬರದು, ಅದೇನಿದ್ದರೂ ಕರ್ನಾಟಕ ಬಿಜೆಪಿಯ ಹಲವು ಢೋಂಗಿ ರಾಜಕಾರಣಿ ಯಾನೆ ಉದ್ಯಮಿಗಳಿಗಷ್ಟೇ ಮೀಸಲು. ಬಿಜೆಪಿ ಅಂದರೆ ಈಗ 'ಭಟ್ಟಂಗಿಗಳ ಜನತಾ ಪಾರ್ಟಿ' ಆದಂತೆ ಭಾಸವಾಗುತ್ತದೆ!

ಭಾಜಪಾದಲ್ಲಿ ಈಗೇನಾಗಿದೆ ಅಂದರೆ ದುಡ್ಡಿರುವವರು, ತಾವಿರುವ ಕ್ಷೇತ್ರದಲ್ಲಿ ಒಂದಷ್ಟು ಪ್ರಭಾವ ಇರುವವರು, ತಮ್ಮ ಜಾತಿ, ಆರ್ಥಿಕ ಬಲದಿಂದ ಮತದಾರರನ್ನು ಸೆಳೆಯುವ ಅರ್ಹತೆ ಇರುವ ಯಾರೇ ಆದರೂ ಅಂಥವರನ್ನು ಕೆಂಪುಹಾಸು ಹಾಕಿ ಮಲ್ಲೇಶ್ವರಂನ ಜಗನ್ನಾಥ ಭವನಕ್ಕೆ ಸ್ವಾಗತಿಸಿ ಭಾಜಪಾ ಹಿರಿಯರಿಂದ ಶಾಲು ಮತ್ತು ಗಂಧದ ಮಾಲೆ ಹಾಕಿ ಸ್ವಾಗತಿಸುವ, ಭಾಜಪಾ ಬಳಗಕ್ಕೆ ಸೇರಿಸಿಕೊಳ್ಳುವ ಕೆಟ್ಟ ಸಂಪ್ರದಾಯ new normal ಅಂತಾಗಿದೆ! ಇವರಿಗೆ ಫಂಡಿಂಗ್ ಮತ್ತು ರಾಶಿ ರಾಶಿ ಮತಗಳನ್ನು ತರಬಲ್ಲ ವ್ಯಕ್ತಿ ಬೇಕು; ಇವೆರಡು ಅರ್ಹತೆ ಇರುವ ಯಾರೇ ಆದರೂ, ಆ ವ್ಯಕ್ತಿ ಭಾಜಪದ ತತ್ವ-ಸಿದ್ಧಾಂತಗಳಿಗೆ ತದ್ವಿರುದ್ಧ ವ್ಯಕ್ತಿಯಾದರೂ ಚಿಂತೆಯಿಲ್ಲ. ಆ ವ್ಯಕ್ತಿಗೆ ಸ್ಥಾನಮಾನ ಮತ್ತು ಅಧಿಕಾರ ಬೇಕು. ಅಲ್ಲಿಗೆ ಉಳಿದ ಎಲ್ಲಾ ವಿಷಯ, ವಿಚಾರಗಳೂ ಗೌಣ. ಸಿದ್ಧಾಂತವೂ ಇಲ್ಲ, ಬದ್ಧತೆ ಮೊದಲೇ ಇಲ್ಲ -it's pure business and both side sees the return on investment.ಕೈ ತುಂಬಾ 'ಧನ' ಹಿಡಿದುಕೊಂಡು ಪಕ್ಷದ ಪ್ರಮುಖರನ್ನು ಸಂಪರ್ಕಿಸುತ್ತಾರೆ, ಟಿಕೆಟ್‌ಗೆ ದರ ನಿಗದಿಯಾಗಿ ಸ್ಪರ್ಧಿಸುತ್ತಾರೆ. ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ದೇವದುರ್ಲಭರ ನಿರಂತರ ಕೆಲಸ, ಪ್ರಚಾರ ಪ್ರಯತ್ನದಿಂದ 'ಜಯ' ಗಳಿಸುತ್ತಾರೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಭಾಜಪಾ ಸೇರಿ, ಆ ಪಕ್ಷದ ಚಿಹ್ನೆಯಿಂದ ಗೆಲ್ಲುತ್ತಿರುವ ಹೆಚ್ಚಿನವರೂ ಪಾಪ್ಯುಲರ್ 'ಧನಂ' 'ಜಯ' ಯೋಜನೆಯ ಲಾಭಾಂಶಿಗಳೇ ಆಗಿದ್ದಾರೆ!

ಮೋದಿಯವರು ಅಧಿಕಾರಕ್ಕೆ ಬರುವ ಮೊದಲು, ಅಂದರೆ ಹತ್ತು ವರುಷಗಳ ಹಿಂದೆ ದೇಶದಾದ್ಯಂತ ಭಾಜಪಾದಲ್ಲಿ ಇದ್ದ ನಾಯಕರ ಪಟ್ಟಿ ಮಾಡಿ ಅದನ್ನು ಇಂದಿನ ದೇಶದಾದ್ಯಂತ ಇರುವ ಭಾಜಪಾದ so called ನಾಯಕರ ಪಟ್ಟಿಯೊಂದಿಗೆ ಹೋಲಿಸಿ ನೋಡಿ. ಈಗ ಅರ್ಧಕ್ಕಿಂತ ಹೆಚ್ಚಿನವರು ಉದ್ಯಮಿಗಳು, ಹಣವಂತರು. ಅಧಿಕಾರಕ್ಕಾಗಿ ಮತ್ತು ಮಾಡಿದ ಭ್ರಷ್ಟಾಚಾರದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಭಾಜಪಾ ಬಳಗಕ್ಕೆ ಬಂದವರ ಸಂಖ್ಯೆಯೂ ದೊಡ್ಡದಿರುವುದು ಮತ್ತೊಂದು ದುರಂತ. ಭ್ರಷ್ಟಾಚಾರದಿಂದ ಹಣ, ಆಸ್ತಿ, ಅಂತಸ್ತು ಮಾಡಿ, ಅನಂತರ ಭಾಜಪಾಗೆ ಬಂದರೆ ಆಗ ಪಕ್ಷದ washing machine ಅಂಥವರನ್ನು ಸ್ವಚ್ಛ, ಸಭ್ಯ ಮತ್ತು ನಿರಪರಾಧಿ ಎಂದು ಷರಾ ಬರೆಯುತ್ತದೆ. ಅಲ್ಲಿಗೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮತ್ತು ಅಧಿಕಾರದಲ್ಲಿ ಇರುವ ಪಕ್ಷದಲ್ಲಿ ಇರುವುದರಿಂದ ಮತ್ತಷ್ಟು ಬಾಚುವುದೂ ಸುಲಭ. ಇಂಥಾ ಸರಳ ಮತ್ತು ಸುಲಲಿತ business model ದೇಶದ ಯಾವುದೇ ಭಾಗದಲ್ಲೂ ಇರಲಾರದು, ಸಿಗಲಾರದು.

'ತಿನ್ನುವುದಿಲ್ಲ; ತಿನ್ನಲು ಬಿಡುವುದಿಲ್ಲ', 'ಭ್ರಷ್ಟಾಚಾರದ ವಿಷಯದಲ್ಲಿ ಶೂನ್ಯ ಸಹಿಷ್ಣುತೆ' (zero tolerance) ಇತ್ಯಾದಿ ಸ್ಲೋಗನ್‌ಗಳು ಕೇವಲ ಕೆಲವೇ ಕೆಲವರನ್ನು ದಮನಿಸಲು ಮಾತ್ರ ಉಪಯೋಗಕ್ಕೆ ಬರುತ್ತಿವೆ. ದೊಡ್ಡ ತಿಮಿಂಗಿಲಗಳು, ನುಂಗಣ್ಣಗಳು, ಧಗಾಕೋರರು, ಮೊಸಳೆಗಳು ಇದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ನಿರಂತರ ಬಾಚುತ್ತಾ ತಮ್ಮ ತಮ್ಮ ಆಸ್ತಿ ವೃದ್ಧಿಸುತ್ತಿವೆ. ಇವರು ಬೀಸುವ ಬಲೆಗೆ ಸಣ್ಣ ಮೀನುಗಳು ಮತ್ತು ಕೆಲ ಅದೃಷ್ಟ ಕಡಿಮೆ ಇರುವ ಸಣ್ಣ ಸಣ್ಣ ಕಳ್ಳರು ಮಾತ್ರ ಬಿದ್ದು ED, CBI, Income Tax ಇತ್ಯಾದಿ ಕಚೇರಿಗಳಿಗೆ ಎಡತಾಗುತ್ತಿದ್ದಾರೆ. ಅಲ್ಲೂ ಕೆಲವೊಮ್ಮೆ ವ್ಯವಹಾರ ಕುದುರಿ ಕೇಸುಗಳಿಂದ ಖುಲಾಸೆಗೊಂಡ ಉದಾಹರಣೆಗಳೂ ತುಂಬಾ ಇವೆ!

ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಸೀಟುಗಳು ಬಾರದೇ ಇರುವುದರ ಹಿಂದೆಯೂ ಇಂಥದ್ದೇ ಸಾಕಷ್ಟು ಅಬದ್ಧಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳ ನಿರ್ಧಾರಗಳು ಕಾರಣ. ವಿರೋಧ ಪಕ್ಷದವರೂ ಸೇರಿ ಈ ಪರಿಸ್ಥಿತಿಯನ್ನು ಯಾರೂ ನಿರೀಕ್ಷಿಸಿರಲಿಲ್ಲ. ಗೆದ್ದವರು ಬೇಸರದಲ್ಲಿ ಇದ್ದಾರೆ; ಸೋತ ವರು ಕಳೆದ ಬಾರಿಗಿಂತ ಹೆಚ್ಚು ಸೀಟು ಪಡೆದ ಸಂತಸದಲ್ಲಿ ಇದ್ದಾರೆ!

ಇದು ಸಾಕು! ಕರ್ನಾಟಕ ಭಾಜಪಾ ಮುಂದಿನ ವಿಧಾನಸಭಾ ಚುನಾವಣೆ ಗೆಲ್ಲಬೇಕಾದರೆ ನೈಜ ಕಾರ್ಯಕರ್ತ ಮತ್ತು ನಿಷ್ಠಾವಂತ ಜನರ ನಡುವಿನ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನೆಲೆಗೆ ತರಬೇಕು. ಪ್ರತಾಪ್ ಸಿಂಹ, ಸಿಟಿ ರವಿ, ಅರುಣ್ ಕುಮಾರ್ ಪುತ್ತಿಲ, ರಘುಪತಿ ಭಟ್, ಅರವಿಂದ ಬೆಲ್ಲದ, ಬಸನಗೌಡ ಪಾಟೀಲ್ ಯತ್ನಾಳ್, ಪ್ರೀತಂ ಗೌಡ ಮುಂತಾದ ನಡುವಯಸ್ಸಿನ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದೊಳ್ಳೆ ಕೆಲಸ ಮಾಡುವ ತಂಡವನ್ನು ಕಟ್ಟಬೇಕು. ಮತ್ತು ಅವರಿಗೆ ಕೆಲಸದ ವಿಚಾರದಲ್ಲಿ free hand ಕೊಡಬೇಕು. ಒಂದೆರಡು ವರುಷಗಳಲ್ಲಿ ಇಂಥಾ ತಂಡದ ಕೆಲಸ ಮತ್ತು ಕಾರ್ಯನಿರ್ವಹಣಾ ಶೈಲಿಯ ಫಲಿತಾಂಶ ನೋಡಿ ಭಾಜಪಾ ಜೊತೆಗೆ ಇತರ ಪಕ್ಷಗಳೂ ಬೆರಗಾಗದಿದ್ದರೆ ಮತ್ತೆ ಹೇಳಿ! ಇದೆಲ್ಲ ಪಕ್ಷದ ನಾಯಕರಿಗೆ ಗೊತ್ತಿಲ್ಲದ ವಿಚಾರ ವೇನಲ್ಲ! 'ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು?!' ಎನ್ನುವುದೇ ಯಕ್ಷಪ್ರಶ್ನೆ.

ಪುತ್ತೂರಿನಲ್ಲಿ ಪುತ್ತಿಲರಿಗೆ ಟಿಕೆಟ್ ನಿರಾಕರಣೆ, ದೇಶದಲ್ಲೇ ಅಭಿವೃದ್ಧಿ ವಿಚಾರದಲ್ಲಿ ಮೊದಲಿಗರಾಗಿದ್ದ ಇದ್ದ ಪ್ರತಾಪ್ ಸಿಂಹಗೆ ಟಿಕೆಟ್ ಕೊಡದಿದ್ದುದು, ಕೊಟ್ಟ ಮಾತಿಗೆ ತಪ್ಪಿ ರಘುಪತಿ ಭಟ್ಟರಿಗೆ ಎರಡೆರಡು ಬಾರಿ ಟಿಕೆಟ್ ನಿರಾಕ ರಿಸಿದ್ದು, ಯತ್ನಾಳ್ ಸೋಲಿಸಲು ಯತ್ನಿಸಿ ಸ್ವಲ್ಪದರಲ್ಲೇ ವಿಫಲರಾದದ್ದು, ಪ್ರೀತಂ ಗೌಡ, ಮಾಧುಸ್ವಾಮಿ ಮತ್ತು ಸಿಟಿ ರವಿಯವರನ್ನು ಹೊಂದಾಣಿಕೆ ರಾಜಕಾರಣ ಮಾಡಿ ಸೋಲಿಸಿದ್ದು... ಇದೆಲ್ಲವೂ ಭಾಜಪದ ಸರ್ವಾಂಗೀಣ ಅಭಿವೃದ್ಧಿಗೆ ದೊಡ್ಡ ಹೊಡೆತ ಕೊಟ್ಟಿರುವುದು ಅಲ್ಲಿನ ಎಲ್ಲರಿಗೂ ಗೊತ್ತಿದೆ. ಯಾರೂ ಮಾತನಾಡುತ್ತಿಲ್ಲ, ಇವೆಲ್ಲ ಏಟುಗಳು ಭಾಜಪಾಗೆ ದುಬಾರಿಯಾಗಿವೆ. ಇಂಥಾ ಎಲ್ಲ ಅಪದ್ಧಗಳೂ ಸಂಪೂರ್ಣ ನಿಂತು ಎಲ್ಲರನ್ನೂ ವಿಶ್ವಾಸದಿಂದ ತೆಗೆದುಕೊಂಡು ಹೋಗುವ ಕೆಲಸವಾಗಬೇಕು, ನಾಯಕರು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಕರ್ನಾಟಕ ಭಾಜಪಾ ಥಿಂಕ್ ಟ್ಯಾಂಕ್ ಈ ಎಲ್ಲ ಆಯಾಮಗಳಲ್ಲಿ ಯೋಚಿಸಿ ಒಂದು ಸದೃಢ, ಕೆಲಸ ಮಾಡುವ ಮತ್ತು ಸಮಷ್ಟಿಯ ದೃಷ್ಟಿಕೋನ ಇರುವ ನವ-ಯವ ತಂಡ ಮತ್ತು ಯೋಜನೆ ಕೈಗೆತ್ತಿಕೊಳ್ಳುವ ತುರ್ತು ಬಂದಿದೆ. ಫೀಲ್ಡಿಗಿಳಿದು ಕಾರ್ಯಪ್ರವೃತ್ತರಾಗಬೇಕಷ್ಟೇ!

ಭಟ್ಟರು ಚುನಾವಣೆಯಲ್ಲಿ ಸೋತಿದ್ದಾರೆ, ಜೊತೆಗೆ ಅಲ್ಲಿನ ದೇವದುರ್ಲಭ ಕಾರ್ಯಕರ್ತನೂ. ಅವರ ಛಲ, ಸೆಡವು ಮತ್ತು ತಾನು ಉಸಿರಾಡುವ ಸೈದ್ಧಾಂತಿಕತೆ ಇನ್ನೂ ಹಸಿರಾಗಿದೆ ಮತ್ತು ಅದಕ್ಕೆ ಇನ್ನಷ್ಟು ಹಸಿವಿದೆ! ಅಲ್ಲಿನ ಒಳಗಿನವರೇ ಹಲವರು ಖಂಡಿತಾ ತುಂಬಾ 'ಸಂತೋಷ' ಪಡುತ್ತಿರಬಹುದು. 'ತಾನು ಮಾಡಿದರೆ ಮಾತ್ರ ತ್ಯಾಗ, ಉಳಿದವರದ್ದು ಭೋಗ ಎಂದು ತಿಳಿದುಕೊಂಡವನು ಅಯೋಗ್ಯ' ಎನ್ನುವ ಉಕ್ತಿಯೊಂದಿದೆ. ಹಾಗೇನಾದರೂ ಈ ಬಾರಿಯೂ ಅಂದುಕೊಂಡರೆ ಇರಲಿ 'ಅವರವರ ಭಾವಕ್ಕೆ; ಅವರವರ ಭಕುತಿಗೆ'. ಭಾಜಪಾದಲ್ಲಿ ಪಕ್ಷ ಕಟ್ಟುವವರಿಗಿಂತ, ಇತ್ತೀಚೆಗೆ ಮಾಮೂಲಾಗಿರುವ ಪಕ್ಷದೊಳಗೆ ಒಬ್ಬರನ್ನೊಬ್ಬರು ಎತ್ತಿ ಕಟ್ಟುವ ಚಾಳಿ-ಸಂಸ್ಕೃತಿ ಕೊನೆಯಾಗಬೇಕಿದೆ.

ವಿರೋಧಿಗಳಿಂದ ಸೋಲುಂಟಾದಾಗ ಆಗುವ ನೋವಿಗೂ ಒಳಗಿನವರೇ ಸೋಲಿಸಿದಾಗ ಆಗುವ ಅದಮ್ಯ ಸಂಕಟಕ್ಕೂ ಇರುವ ವ್ಯತ್ಯಾಸ ನಾವು ಅರಿತಿದ್ದೇವೆ. ಬಿಟ್ಟುಬಿಡಿ, ನಮಗೆಲ್ಲ ಇದೇನೂ ಹೊಸದಲ್ಲವಲ್ಲ! ಭಟ್ರೇ ಮುಂದಿನ ಕ್ರಿಯಾ ಯೋಜನೆ ಸಿದ್ಧಪಡಿಸೋಣ. ನಾಳೆಯಿಂದಲೇ ಫೀಲ್ಡಿಗಿಳಿಯೋಣ. ಮೊದಲು ಉಡುಪಿಯಲಿ ನೆಲೆಸಿರುವ ಪೊಡವಿಯೊಡೆ ಯನಿಗೆ ನಮಸ್ಕರಿಸಿ ಅನ್ನ ಪ್ರಸಾದ ಸ್ವೀಕರಿಸಿ ನಂತರ ಪೇಜಾವರ ಶ್ರೀಗಳನ್ನು ಭೇಟಿಮಾಡಿ ಆಶೀರ್ವಾದ, ಮಂತ್ರಾಕ್ಷತೆ ಪಡೆಯೋಣ. ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಗೆದ್ದಿರುವ ಡಾ. ಧನಂಜಯ ಸರ್ಜಿಯವರನ್ನು ಭೇಟಿ ಯಾಗಿ ಗೆಲುವಿಗೆ ಅಭಿನಂದನೆ ಸಲ್ಲಿಸೋಣ, ನೀವು ಅಭ್ಯರ್ಥಿಯಾಗಿ ಘೋಷಿಸಿದ್ದ ಪ್ರಣಾಳಿಕೆಯ ವಿವರಗಳನ್ನು ಅವರ ಮುಂದಿಟ್ಟು ಅದನ್ನೆಲ್ಲ ಪೂರೈಸಿ ಕೊಡುವಂತೆ ವಿನಂತಿಸಿ ವಾಗ್ದಾನ ಪಡೆಯೋಣ.

ಅನಂತರ ಹಿತೈಷಿಗಳ ಸಭೆ ನಡೆಸಿ, ಒಂದೊಳ್ಳೆಯ ಶುಭದಿನ ನೋಡಿ ಮತ್ತೆ ತವರುಮನೆಗೆ ಹೊರಟು ನಿಲ್ಲೋಣ! ನಿಮಗೆ ಭಾಜಪಾ ಬಳಗದಲ್ಲಿ ಇದ್ದು ದುಡಿಯುವ ಜರೂರತ್ತು ಎಷ್ಟಿದೆಯೋ, ಅಷ್ಟೇ ನಿಮ್ಮ ಜರೂರತ್ತು ಭಾಜಪಾಗೆ ಮುಂದಿನ ದಿನಗಳಲ್ಲಿ ಉಡುಪಿ ಮತ್ತು ಕರ್ನಾಟಕದಾದ್ಯಂತ ಇದ್ದೇ ಇದೆ ಎನ್ನುವುದು ನನ್ನ ಬಲವಾದ ವಾದ ಮತ್ತು ನಂಬಿಕೆ! ಹೌದು, ಎರಡೂ ಕಡೆಯಿಂದ ಒಂದಷ್ಟು ಕೆಸರೆರಚಾಟ ನಡೆದಿದೆ, ತಪ್ಪಾಗಿದೆ. ಅಂದು ಕೆಜೆಪಿ ಕಟ್ಟಿ ಭಾಜಪಾ ಸೋಲಿಗೆ ಕಾರಣರಾ ದವರನ್ನು, ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗದಿದ್ದಕ್ಕೆ ಪಕ್ಷ ಬಿಟ್ಟು ಹೋದ ಮಾಜಿ ಮುಖ್ಯಮಂತ್ರಿ ಗಳನ್ನೂ ವಾಪಸ್ ಕರೆಸಿ ಸೂಕ್ತ ಸ್ಥಾನಮಾನ ಕೊಟ್ಟಿರುವ ಹೆಗ್ಗಳಿಕೆ ಇರುವ ಪಕ್ಷವಿದು! ಹಾಗಾಗಿ ನಿಮ್ಮ ಘರ್ ವಾಪಸಾತಿಗೆ ತೊಂದರೆ, ಹಿನ್ನಡೆ ಆಗಲಾರದು. ಆಗಲೂ ಕೂಡದು.

(ಲೇಖಕರು: ಹವ್ಯಾಸಿ ಬರಹಗಾರರು)

ಅಭಿಪ್ರಾಯ

ಕೆ ಎಸ್ ನಾಗರಾಜ್
vveditoped@gmail.com

ನಾಚಿಕೆಗೇಡಿನ ತಂತ್ರಗಾರಿಕೆ

1980ರಿಂದ ಸತತವಾಗಿ ಎಂಟು ಬಾರಿ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆ ಆಗಿರುವ ಸಭಾಪತಿಗಳಾಗಿರುವ ಶ್ರೀ ಬಸವರಾಜ್ ಹೊರಟ್ಟಿ ಅವರನ್ನು ಭೇಟಿ ಮಾಡಿ, ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ನಡೆಯುತ್ತಿರುವಂತಹ ಮತ್ತು ನಡೆದಂತಹ ಕೆಲವು ಘಟನೆಗಳ ಬಗ್ಗೆ ಪ್ರಸ್ತಾಪಿಸಿದಾಗ. ಅವರು ಸಹ ಅತ್ಯಂತ ಬೇಸರದಿಂದ, ನಮ್ಮಂತವರು ಈ ಕ್ಷೇತ್ರದಿಂದ ಆಯ್ಕೆಯಾಗಿದ್ದೇವೆ ಎಂದು ಹೇಳಿಕೊಳ್ಳಲು ಈಗ ನಮಗೂ ನಾಚಿಕೆಯಾಗುತ್ತಿದೆ. ಎಂದು ಬೇಸರವನ್ನು ವ್ಯಕ್ತಪಡಿಸುತ್ತಾ. ಚುನಾವಣೆಯಲ್ಲಿ ಹಣ ಮತ್ತು ಹೆಂಡದ ಬಳಕೆಯ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಕರ್ನಾಟಕದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ವಿಧಾನ ಪರಿಷತ್ತು ಸದಸ್ಯತ್ವಕ್ಕಾಗಿ ಶಿಕ್ಷಕರ ಕ್ಷೇತ್ರ ಮತ್ತು ಪದವೀಧರ ಕ್ಷೇತ್ರಕ್ಕೆ ಚುನಾವಣೆಗಳು ನಡೆಯುತ್ತಿದೆ. ಪ್ರಥಮ ಬಾರಿಗೆ 1958 ರಲ್ಲಿ ಈ ಕ್ಷೇತ್ರಗಳು ಸ್ಥಾಪನೆ ಆಗಿರುತ್ತದೆ. ಕಳೆದ ಒಂದು ದಶಕದ ತನಕ ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿಗಳು ಶಿಕ್ಷಕರಾಗಿರುತ್ತಿದ್ದರು, ಇಲ್ಲವೇ ಸಾರ್ವಜನಿಕ ಜೀವನದಲ್ಲಿ ಪ್ರಮುಖವಾದಂತಹ ಪತ್ರವನ್ನು ವಹಿಸಿದಂತಹ ಗೌರವಾನ್ವಿತ ವ್ಯಕ್ತಿಗಳಾಗಿರುತ್ತಿದ್ದರು. ಅವರುಗಳು ಕೇವಲ ಮತದಾರರನ್ನ ನೋಂದಾಯಿಸಿ ಮನವಿ ಪತ್ರವನ್ನು ನೀಡಿ ತಮ್ಮ ಸೇವೆ ಮತ್ತು ಅನುಭವದ ಆಧಾರದ ಮೇಲೆ ಆದ್ಯತೆಯನ್ನ ನೀಡಬೇಕೆಂದು ಕೋರಿಕೊಳ್ಳುತ್ತಿದ್ದರು. ಮತದಾರರು ಸಹ ಅದೇ ರೀತಿಯಲ್ಲಿ ಇವರಿಗೆ ಸ್ಪಂದಿಸುತ್ತಾ ಯಾವುದೇ ರೀತಿಯ ಹಣದ ಪ್ರಭಾವವಿಲ್ಲದೆ ಜಾತಿಯ ಸೋಂಕು ಇಲ್ಲದೆ ಯೋಗ್ಯರನ್ನ ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಬಸವರಾಜ್ ಹೊರಟ್ಟಿರವರು ಎಂಟು ಬಾರಿ ಗೆದ್ದಿರುವುದು ಈ ಹಿಂದೆ ವಿ ಎಸ್ ಕೃಷ್ಣ ಅಯ್ಯರ್, ಗುಂಡಯ್ಯ ಶೆಟ್ಟಿ, ಶಂಕರ್ ಮೂರ್ತಿ, ಡಾ.ತಂಗಾ, ಡಾ.ಎಂ.ಪಿ ನಾಡಗೌಡ, ಮಧುಸೂದನ್, ಪೂಜಾರ, ಬಸವರಾಜ್ ಹೀಗೆ ಅನೇಕರ ಹೆಸರುಗಳನ್ನು ಉದಾಹರಣೆಯಾಗಿ ಕೊಡಬಹುದು ಆದರೆ ಇತ್ತೀಚಿನ ದಿನಗಳಲ್ಲಿ ಈ ಚುನಾವಣೆ ನಾಚಿಕೆ ಬರುವ ರೀತಿಯಲ್ಲಿ ನಡೆಯುತ್ತಿದೆ ಮತದಾರ ಅನೇಕ ಸಂದರ್ಭದಲ್ಲಿ ಹಣದ ಪ್ರಭಾವಕ್ಕೆ ಗುರಿಯಾಗುತ್ತಿದ್ದಾರೆ ಇಲ್ಲವೇ ಕ್ಷಣಿಕ ಅಮಿಷಗಳಿಗೆ ಬಲಿಯಾಗುತ್ತಿದ್ದಾರೆ ಪ್ರತಿಯೊಂದು ಮತಕ್ಕೆ 2,000 ದಿಂದ 10,000 ತನಕ ನಿಗದಿ ಮಾಡುತ್ತಿರುವುದು, ಅತ್ಯಂತ ಆತಂಕದ ಸಂಗತಿಯಾಗಿದೆ. ಸಾರ್ವಜನಿಕ ಚುನಾವಣೆಗಳಲ್ಲಿ ಬಡವರು ಹಣವನ್ನು ಬಯಸುತ್ತಾರೆ ಎನ್ನುವ ಮಾತಿದೆ. ಆದರೆ, ಬಹಳಷ್ಟು ಬಡವರು ಸ್ವಾಭಿಮಾನದಿಂದ ಇಂತಹ ಸಂದರ್ಭದಲ್ಲಿ ತಮ್ಮ ನೈತಿಕತೆಯನ್ನು ಪ್ರದರ್ಶಿಸಿ ದೊಡ್ಡತನವನ್ನು ತೋರಿದ್ದಾರೆ. ಅದೇ ರೀತಿಯಲ್ಲಿ ಶಿಕ್ಷಕರು ಮತ್ತು ಪದವೀಧರರು ಬಹಳಷ್ಟು ಮಂದಿ ಯಾವುದೇ ರೀತಿಯ ಅಮೀಷೆಗಳಿಗೆ ಬಲಿಯಾಗದೆ ತಮ್ಮ ಮತವನ್ನ ಸರಿಯಾದ ರೀತಿಯಲ್ಲಿ ಯೋಗ್ಯರಿಗೆ ಚಲಾವಣೆಯನ್ನು ಮಾಡುವ ಮನಸ್ಥಿತಿಯವರು ಸಾಕಷ್ಟು ಮಂದಿ ಇದ್ದಾರೆ. ಆದರೂ, ದುರ್ಬಲ ಮನಸ್ಸಿನ ಮತದಾರರನ್ನ ಗುರಿಯನ್ನಾಗಿಸಿಕೊಂಡು ಅವರಿಗೆ ಹಣವನ್ನ ಕೊಟ್ಟು ಮತವನ್ನು ಪಡೆಯುವಂತಹ ತಂತ್ರಗಾರಿಕೆಯನ್ನ ಅನುಸರಿಸುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ.

ಶಿಕ್ಷಕರು ಮತ್ತು ಪದವೀಧರ ಕ್ಷೇತ್ರದಲ್ಲಿನ ಹಣದ ಪ್ರಭಾವವನ್ನ ನಿಯಂತ್ರಿಸದಿದ್ದರೆ ಮುಂದಿನ ದಿನಗಳಲ್ಲಿ ಸಭ್ಯರು ಯಾರು ಚುನಾವಣೆಗೆ ಬರಲು ಸಾಧ್ಯವೇ ಇಲ್ಲ. ಬಂಡವಾಳ ಶಾಹಿಗಳು ಮಾತ್ರವೇ ಇಂತಹ ಚುನಾವಣೆಗಳಲ್ಲಿ ಆಯ್ಕೆಯಾಗಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಸಭಾಪತಿಗಳು ಒಂದು ಗಂಭೀರವಾದಂತಹ ಚರ್ಚೆಯನ್ನು ವಿಧಾನ ಪರಿಷತ್ತಿನಲ್ಲಿ ಆದರೂ ಸರಿಯೇ ಇಲ್ಲವೇ ಸಾರ್ವಜನಿಕ ವೇದಿಕೆಗಳಲ್ಲಿ ಆರಂಭಿಸಬೇಕಾಗಿದೆ. ಮತದಾರರಲ್ಲಿ ಜಾಗೃತಿಯನ್ನು ಉಂಟು ಮಾಡಬೇಕಾಗಿದೆ. ಇಲ್ಲದಿದ್ದರೆ ಇಂತಹ ಕ್ಷೇತ್ರಗಳ ಅವಶ್ಯಕತೆಯಾದರು ಇದೇಯೇ ಎನ್ನುವ ಪ್ರಶ್ನೆ ಪ್ರಜಾಪ್ರಭುತ್ವದಲ್ಲಿ ಮೌಲ್ಯಗಳನ್ನ ಬಯಸುವ ಜನರಿಗೆ ಕಾಡುತ್ತದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 166

18ನೇ ಲೋಕಸಭೆ ರಚನೆಯ ಹಾದಿಯಲ್ಲಿ...



ಕಳೆದ 10 ವರ್ಷಗಳಿಂದ ಕಾಂಗ್ರೆಸ್ ಎಷ್ಟೇ ಪ್ರಯತ್ನಪಟ್ಟರೂ 100 ಸೀಟು ಗೆಲ್ಲಲು ಸಾಧ್ಯವಾಗಿಲ್ಲ ಮುಂದಿನ 100 ವರ್ಷಗಳಲ್ಲೂ ಇದು ಸಾಧ್ಯವಿಲ್ಲ. ಮೊದಲು ಇಂಡಿಯಾ ಒಕ್ಕೂಟದ ನಾಯಕರು ನಿಧಾನವಾಗಿ ಮುಳುಗುತ್ತಿದ್ದರು, ಈಗ ವೇಗದಲ್ಲಿ ಮುಳುಗಲು ಆರಂಭಿಸಿದ್ದಾರೆ , ಸುಳ್ಳು ಪ್ರಚಾರದಲ್ಲೇ ಕಾಂಗ್ರೆಸ್ ಚುನಾವಣೆ ಮುಗಿಸಿದೆ.

-ನರೇಂದ್ರ ಮೋದಿ, ಹಂಗಾಮಿ ಪ್ರಧಾನಿ

ಕಾಂಗ್ರೆಸ್ ಪಕ್ಷವು ವಿದ್ಯುನ್ಮಾನ ಮತಯಂತ್ರದ ಬಳಕೆಯನ್ನು ತಿರಸ್ಕರಿಸಿಲ್ಲ. ಬದಲಾಗಿ ವಿವಿಪ್ಯಾಟ್‌ಗಳ ಸುಧಾರಣೆಗೆ ಒತ್ತಾಯಿಸಿತ್ತು. ನಾನು ಎಂದಿಗೂ ಮತಯಂತ್ರವನ್ನು ದೂರಿಲ್ಲ. ಅಲ್ಲದೇ ಪಕ್ಷದ ಪ್ರಣಾಳಿಕೆಯಲ್ಲಿ ನಾವು ಇದನ್ನು ಉಲ್ಲೇಖಿಸಿರಲಿಲ್ಲ. ಬೇಕಿದ್ದರೆ ಪ್ರಣಾಳಿಕೆಯನ್ನು ಮತ್ತೊಮ್ಮೆ ಓದಿ. ನಾವು ಮತ ಹಾಕಿದ ಬಳಿಕ ವಿವಿಪ್ಯಾಟ್ ಯಂತ್ರದಲ್ಲಿ ನಾವು ಯಾವ ಪಕ್ಷಕ್ಕೆ ಮತ ಹಾಕಿದ್ದೇವೆ ಎಂಬುದನ್ನು ಕನಿಷ್ಠ 4ರಿಂದ 5 ಸೆಕೆಂಡುಗಳ ಕಾಲ ತೋರಿಸಬೇಕು. ನಂತರ ವಿವಿಪ್ಯಾಟ್ ಸ್ಲಿಪ್ ಬಾಕ್ಸ್ ಒಳಗೆ ಬೀಳಬೇಕು. ಮತಯಂತ್ರದಲ್ಲಿ ಈ ಸುಧಾರಣೆಯಾಗಬೇಕು ಎಂದು ನಾವು ಪ್ರಣಾಳಿಕೆಯಲ್ಲಿ ತಿಳಿಸಿದ್ದೇವೆ. ಆದರೆ, ವಿವಿಪ್ಯಾಟ್‌ನ ಸ್ಲಿಪ್ ತಕ್ಷಣವೇ ಬಾಕ್ಸ್‌ನಲ್ಲಿ ಬೀಳುತ್ತದೆ. ಮತದಾರನಿಗೆ ಇದು ಗೊಂದಲವಾಗುತ್ತದೆ. ಈ ಒಂದು ಸುಧಾರಣೆಯಾದರೆ ಮತಯಂತ್ರ-ವಿವಿಪ್ಯಾಟ್ ವ್ಯವಸ್ಥೆ ಕುರಿತು ಯಾರಿಗೂ ಯಾವುದೇ ಅನುಮಾನ ಇರುವುದಿಲ್ಲ.

-ಪಿ. ಚಿದಂಬರಂ, ಕಾಂಗ್ರೆಸ್ ಹಿರಿಯ ನಾಯಕ

ಸರ್ವ ಧರ್ಮ ಸಮಭಾವ ತತ್ವಕ್ಕೆ ಬದ್ಧ | ಎನ್‌ಡಿಎ ಸಭೆಯಲ್ಲಿ ಪ್ರಧಾನಿ ಹೇಳಿಕೆ | ನಮ್ಮದು ತತ್ವಾಧಾರಿತ ಮೈತ್ರಿಕೂಟ: ಮೋದಿ

ಅಭಿವೃದ್ಧಿ, ಮಹತ್ವಾಕಾಂಕ್ಷೆಯ ಹೊಸ ಭಾರತ

ದೆಹಲಿ: ಮಿತ್ರ ಪಕ್ಷಗಳ ಸಹಯೋಗದಲ್ಲಿ ಸಮ್ಮಿಶ್ರ ಸರಕಾರದ ಮೂಲಕ ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲು ನರೇಂದ್ರ ಮೋದಿ ಸಿದ್ಧತೆ ನಡೆಸಿದ್ದು, ಶುಕ್ರವಾರ ನಡೆದ ಎನ್‌ಡಿಎ ನಾಯಕರ ಸಭೆಯಲ್ಲಿ ಮೋದಿಯವರನ್ನು 18ನೇ ಲೋಕಸಭೆಯ ಎನ್‌ಡಿಎ ಸಂಸದೀಯ ಪಕ್ಷದ ನಾಯಕರಾಗಿ ಆಯ್ಕೆ ಮಾಡಲಾಗಿದೆ. ಆ ಬಳಿಕ ಹಳೆಯ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಹಂಗಾಮಿ ಪ್ರಧಾನಿ ಮೋದಿ ಭಾಷಣ ಮಾಡಿದ್ದು ಎನ್‌ಡಿಎ ಸರಕಾರದ ದೂರದೃಷ್ಟಿ ಯೋಜನೆಗಳನ್ನು ಶ್ಲಾಘಿಸಿದ್ದಲ್ಲದೆ ವಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಸರ್ವ ಧರ್ಮ ಸಮಭಾವ' ತತ್ವಕ್ಕೆ ಬದ್ಧ: ಬಿಜೆಪಿಯ ನಾಯಕನನ್ನಾಗಿ, ಎನ್‌ಡಿಎ ಸಂಸದೀಯ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಿದ್ದಕ್ಕೆ ಸದಸ್ಯರಿಗೆ ಧನ್ಯವಾದ ಅರ್ಪಿಸಿದ ಮೋದಿ, ಈ ಗೆಲುವಿಗೆ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೆ ಶಿರಬಾಗಿ ನಮಿಸುತ್ತೇನೆ ಎಂದು ಕೃತಜ್ಞತೆ ಸಲ್ಲಿಸಿದ್ದಾರೆ. ಎನ್‌ಡಿಎ ಮೈತ್ರಿಕೂಟ ಸರ್ವ ಧರ್ಮ ಸಮಾನ ತತ್ವಕ್ಕೆ ಬದ್ಧರಾಗಿದ್ದೇವೆ. ಈ ಒಕ್ಕೂಟ ಭಾರತದ ರಾಜಕೀಯ ಇತಿಹಾಸದಲ್ಲೇ ನೈಜ ಒಕ್ಕೂಟ ಎಂದ ಮೋದಿ ವಾಜಪೇಯಿ, ಪ್ರಕಾಶ ಸಿಂಗ್ ಬಾದಲ್. ಬಾಳಾ ಸಾಹೇಬ್ ಠಾಕ್ರೆಯಂತಹ ನಾಯಕರು ಬಿತ್ತನೆ ಮಾಡಿ ಭಾರತದ ಜನರು ಎನ್‌ಡಿಎ ವಿಶ್ವಾಸಕ್ಕೆ ನೀರೆರೆದು ನಾಯಕರು ಬಿತ್ತಿದ ಬೀಜವನ್ನು ಹೆಮ್ಮರವಾಗಿ ಬೆಳೆಸಿ ಫಲ ನೀಡುವಂತೆ ಮಾಡಿದ್ದಾರೆ.

ಈ ಒಕ್ಕೂಟಕ್ಕೆ ರಾಷ್ಟ್ರವೇ ಮೊದಲು. ಇಂತಹ ನಾಯಕರ ಆಶೀರ್ವಾದ ನಮ್ಮ ಜೊತೆ ಇರುವುದಕ್ಕೆ ಹೆಮ್ಮೆ ಎನಿಸುತ್ತದೆ.



ಕಳೆದ 10 ವರ್ಷಗಳಿಂದ ಈ ಪರಂಪರೆಯನ್ನು ಮುಂದುವರೆಸಿಕೊಂಡು ಭಾರತವನ್ನು ಮುನ್ನಡೆಸುವ ಪ್ರಯತ್ನ ನಡೆಸುತ್ತಿದ್ದೇವೆ... ಬಡವರ, ಮಧ್ಯಮವರ್ಗದ ಜನರ ಅಭಿವೃದ್ಧಿ, ಗುಣಮಟ್ಟದ ಜೀವನ ನೀಡುವುದೇ ನಮ್ಮ ಗುರಿ ಎಂದು ಮೋದಿ ಭಾಷಣದಲ್ಲಿ ಹೇಳಿದರು.

10 ವರ್ಷ ಕಳೆದರೂ ಕಾಂಗ್ರೆಸ್ 100ರ ಗಡಿ ದಾಟಲಿಲ್ಲ: ಮೂರನೇ ಬಾರಿ ಪ್ರಧಾನಿ ಮಂತ್ರಿಯಾಗಿ ಅಧಿಕಾರವಹಿಸಿ ಕೊಳ್ಳುವ ಮೊದಲು ನರೇಂದ್ರ ಮೋದಿ ಮಾಡಿದ ಭಾಷಣದಲ್ಲಿ ಕಾಂಗ್ರೆಸ್, ವಿಪಕ್ಷ ನಾಯಕರನ್ನು ಇವಿಎಂ ವಿಚಾರದಲ್ಲಿ ಟೀಕಿಸಿದ್ದಾರೆ. ಸದಾ ಇವಿಎಂ ವಿಚಾರವಾಗಿ ಆರೋಪಗಳನ್ನು ಮಾಡುತ್ತಿದ್ದ ಕಾಂಗ್ರೆಸ್ ಹಾಗೂ ವಿಪಕ್ಷಗಳನ್ನು ತರಾಟೆಗೆ ತೆಗೆದು ಕೊಂಡ ಮೋದಿ ಫಲಿತಾಂಶದ ದಿನ ಇವಿಎಂ ಬದುಕಿದೆಯೇ ಎಂದು ಪ್ರಶ್ನಿಸ ಬೇಕಾದ ಸಂದರ್ಭ ಬಂತು ಕಾಂಗ್ರೆಸ್ ಮಾಡಿದ ಆರೋಪಗಳನ್ನು ನೋಡಿದಾಗ ಇವಿಎಂಗಳ ಅಂತ್ಯಕ್ರಿಯೆ ನಡೆಸುತ್ತಾರೇನೋ ಎನಿಸಿತ್ತು. ಆದರೆ ಇನ್ನು ಯಾರೂ ಇವಿಎಂ ಬಗ್ಗೆ ಮಾತನಾಡಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಅಡ್ವಾಣಿ ಭೇಟಿಯಾದ ಪ್ರಧಾನಿ

ಪ್ರಧಾನಿಯಾಗಿ ಅಧಿಕಾರವಹಿಸಿಕೊಳ್ಳುವ ಮೊದಲು ಬಿಜೆಪಿ ಭೀಷ್ಮ ಎಲ್ ಕೆ ಅಡ್ವಾಣಿ , ಮುರಳಿ ಮನೋಹರ ಜೋಶಿ ಹಾಗೂ ರಾಮನಾಥ ಕೋವಿಂದ್ ಅವರನ್ನು ಭೇಟಿಯಾಗಿ ಮೋದಿ ಆಶೀರ್ವಾದ ಪಡೆದರು. ಈ ಬಗ್ಗೆ ಅಡ್ವಾಣಿ ತಮ್ಮ ನೆಚ್ಚಿನ ಶಿಷ್ಯ ಮೂರನೇ ಬಾರಿಗೆ ಪ್ರಧಾನಿಯಾಗಿದ್ದು, ಮೋದಿ ಅವರಿಗೆ ಬೆನ್ನು ತಟ್ಟಿ ಅಭಿನಂದನೆ ಸಲ್ಲಿಸಿದರು. ಈ ಮೂಲಕ ಹಿರಿಯ ನಾಯಕರ ಆಶೀರ್ವಾದ ಪಡೆದು ಸರಕಾರ ರಚನೆಗೆ ಮೋದಿ ಮುಂದಾಗಿದ್ದಾರೆ.

ಸಂವಿಧಾನಕ್ಕೆ ನಮಿಸಿದ ಮೋದಿ

ಎನ್‌ಡಿಎ ಸಭೆಯಲ್ಲಿ ಮೈತ್ರಿಕೂಟದ ಸದಸ್ಯರು ಮೋದಿ ಅವರನ್ನು ಸಂಸದೀಯ ಪಕ್ಷದ ನಾಯಕನನ್ನಾಗಿ ಮಾಡಿದ್ದು ಜೂನ್ 9 ರಂದು ಮೋದಿ ಪ್ರಮಾಣವಚನಕ್ಕೆ ಮುಹೂರ್ತ ನಿಗದಿ ಯಾಗಿದೆ. ಎನ್‌ಡಿಎ ಸಭೆಗೂ ಮುನ್ನ ಸೆಟ್ರಲ್ ಹಾಲ್‌ನಲ್ಲಿ ಇರಿಸಲಾಗಿದ್ದ ಸಂವಿಧಾನ ಪ್ರತಿಗೆ ವಂದಿಸಿದ್ದಾರೆ. ಸರಕಾರ ನಡೆಸಲು ಬಹುಮತ ಬೇಕು, ದೇಶ ನಡೆಸಲು ಒಮ್ಮತ ಬೇಕು ಎಂದು ಮೋದಿ ಎನ್‌ಡಿಎ ಸಭೆಯಲ್ಲಿ ಹೇಳುವ ಮೂಲಕ ಎಲ್ಲಾ ನಿರ್ಧಾರದಲ್ಲಿ ಒಮ್ಮತ ಸಾಧಿಸುವ ವಿಶ್ವಾಸವನ್ನು ಮೋದಿ ವ್ಯಕ್ತಪಡಿಸಿದ್ದಾರೆ.

'ಪೆಹೆಲೆಭೀ, ಆಜ್‌ಭೀ, ಕಲ್‌ಭಿ ಎನ್‌ಡಿಎ'

2024ರ ಲೋಕಸಭೆ ಚುನಾವಣೆಯ ಫಲಿತಾಂಶವನ್ನು ಎಲ್ಲಾ ಆಯಾಮಗಳಲ್ಲಿ ನೋಡಿದಾಗ ಜಗತ್ತು ಈ ಗೆಲುವನ್ನು ಮಹಾವಿಜಯ ಎಂದು ಕರೆದಿದೆ. ಇತಿಹಾಸದಲ್ಲೇ ಎನ್‌ಡಿಎ ಬಲಿಷ್ಠ ಮೈತ್ರಿಕೂಟವಾಗಿದ್ದು ನಮಗೆ ಗೆಲುವಲ್ಲಿ ಅಹಂಕಾರ ಪಡುವ, ಸೋಲನ್ನು ಅಪಹಾಸ್ಯ ಮಾಡುವ ಮನಸ್ಥಿತಿ ಇಲ್ಲ. ನಾವು ಸೋತಿಲ್ಲ, ಸೋಲುವುದೂ ಇಲ್ಲ, ಎನ್‌ಡಿಎ ಈ ಹಿಂದೆಯೂ ಅಧಿಕಾರದಲ್ಲಿತ್ತು. ಈಗಲೂ ಇದೆ ಮುಂದೂ ಇರಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ 10 ವರ್ಷಗಳ ಕಾಲ ಈ ಮೈತ್ರಿ ಕೂಟ ಉತ್ತಮ ಆಡಳಿತ, ಅಭಿವೃದ್ಧಿ ಎಡೆಗೆ ಕೆಲಸ ಮಾಡಲಿದೆ, ಕನಿಷ್ಠ ಸರಕಾರ ಗರಿಷ್ಠ ಆಡಳಿತ ನಮ್ಮ ಮಂತ್ರವಾಗಲಿದೆ ಎನ್‌ಡಿಎ ಹೊಸ ಭಾರತ, ಅಭಿವೃದ್ಧಿ ಭಾರತ, ಮಹಾತ್ವಾಕಾಂಕ್ಷೆಯ ಭಾರತ ಎಂದು ಬಣ್ಣಿಸಿದರು.

ಸಮಾಚಾರ ಸಣ್ಣದಲ್ಲ

ಪವನ್ ಕಲ್ಯಾಣ್‌ಗೆ ಅದ್ದೂರಿ ಸ್ವಾಗತ

ಆಂಧ್ರಪ್ರದೇಶ: ವಿಧಾನಸಭಾ ಚುನಾವಣೆಯಲ್ಲಿ ಟಿಡಿಪಿ ಹಾಗೂ ಜನಸೇನಾ ಪಕ್ಷ, ಜಗನ್ ಅವರ ವೈಎಸ್ ಆರ್‌ಸಿಪಿಯನ್ನು ಬಗ್ಗು ಬಡಿದು ಸರಕಾರ ರಚನೆ ಮಾಡಿವೆ. ಆ ನಿಟ್ಟಿನಲ್ಲಿ ಕುಸಿದು ಹೋಗಿದ್ದ ಟಿಡಿಪಿಗೆ ಬೆನ್ನೆಲುಬಾಗಿ ನಿಂತು ಅಧಿಕಾರ ಹಿಡಿಯಲು ಜನಸೇನಾ ಪಕ್ಷವೂ ಶ್ರಮಿಸಿದ್ದು, ಪವನ್ ಕಲ್ಯಾಣ್ ಅವರಿಗೆ ಆಂಧ್ರ ಅಷ್ಟೇ ಅಲ್ಲದೇ ಇಡೀ ದೇಶದ ತುಂಬ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಕಳೆದ ಐದು ವರ್ಷಗಳಿಂದ ಚುನಾವಣೆಯ ಮೇಲೆ ಕಣ್ಣಿಟ್ಟು ಸಾಕಷ್ಟು ಶ್ರಮವಹಿಸಿ ತಮ್ಮ ಜನಸೇನಾ ಪಕ್ಷ 21 ಸ್ಥಾನಗಳನ್ನು ಪಡೆಯುವಂತೆ ಮಾಡಿದ್ದಾರೆ. ಫಲಿತಾಂಶದ ನಂತರ ತಮ್ಮ ಕುಟುಂಬ ಹಾಗೂ ಆತ್ಮೀಯರನ್ನು ಭೇಟಿಯಾಗುತ್ತಿರುವ ಪವನ್ ಅವರು, ತಮ್ಮ ಸಹೋದರ, ಮೆಗಾಸ್ಟಾರ್ ಚಿರಂಜೀವಿ ಅವರನ್ನು ಹೈದರಾಬಾದ್‌ನ ಬಂಜಾರಾ ಹಿಲ್ಸ್‌ನಲ್ಲಿರುವ ಅವರ ಮನೆಗೆ ತೆರಳಿ ಆಶೀರ್ವಾದ ಪಡೆದರು. ಈ ವೇಳೆ ಚಿರಂಜೀವಿ ಹಾಗೂ ಅವರ ಕುಟುಂಬದ ಅನೇಕರು ಪವನ್ ಕಲ್ಯಾಣ್ ಅವರಿಗೆ ಹೂಮಳೆ ಸುರಿಸಿ, ಆರತಿ ಎತ್ತಿ ಭರ್ಜರಿ ಸ್ವಾಗತ ಕೋರಿದ್ದಾರೆ. ಈ ವೇಳೆ ಪವನ್ ಕಲ್ಯಾಣ ಅವರ ಪತ್ನಿ ರಷ್ಯಾ ಮೂಲದ ಅನ್ನಾ ಲೆಜ್ನೇವಾ, ನಟ ರಾಮ ಚರಣ್, ಸಾಯಿ ಧರ್ಮತೇಜ ಸೇರಿದಂತೆ ಕೋನಿಡೇಲಾ ಕುಟುಂಬದ ಹಲವರು ಪವನ್ ಕಲ್ಯಾಣ್ ಅವರ ಸಾಧನೆಯನ್ನು ಸಂಭ್ರಮಿಸಿದರು.

ರೆಪೋ ದರದಲ್ಲಿ ಬದಲಾವಣೆ ಇಲ್ಲ

ದೆಹಲಿ: ಹಣದುಬ್ಬರವನ್ನು ನಿಯಂತ್ರಣದಲ್ಲಿಡುವ ನಿಟ್ಟಿನಲ್ಲಿ ರೆಪೋ ದರವನ್ನು ಯಥಾಸ್ಥಿತಿಯಲ್ಲಿಡಲು ಹಣಕಾಸು ನೀತಿ ಸಮಿತಿಯು ನಿರ್ಧರಿಸಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ತಿಳಿಸಿದ್ದಾರೆ. ಹಣಕಾಸು ವರ್ಷದ ಎರಡನೇ ದ್ವೈಮಾಸಿಕ ಹಣ ಕಾಸು ನೀತಿ ಸಮಿತಿಯು ಸಭೆಯಲ್ಲಿ ಸದ್ಯ ರೆಪೊ ದರ 6.5% ಇದ್ದು, ಸತತ 8ನೇ ಬಾರಿಯೂ ಇದೇ ದರ ವನ್ನು ಮುಂದು ವರೆಸಲು ನಿರ್ಧರಿಸಲಾಗಿದೆ. ಹಣದುಬ್ಬರ 4% ಕ್ಕಿಂತಲೂ ಅಧಿಕವಾಗಿರುವ ಹಿನ್ನೆಲೆ ಹಣದುಬ್ಬರದ ಮೇಲೆ ನಿಯಂತ್ರಣ ಸಾಧಿಸಲು ರೆಪೊ ದರ ಬದ ಲಾಯಿಸದೇ ಇರಲು ಒಮ್ಮತದ ನಿರ್ಧಾರ ತೆಗೆದು ಕೊಳ್ಳಲಾಗಿದೆ ಎಂದಿದ್ದಾರೆ. ರೆಪೊ ದರದ ಜತೆಗೆ ಎಸ್‌ಡಿಎಫ್ ದರವನ್ನು ಸಹ 6.25%ನಲ್ಲಿಯೇ ಮುಂದು ವರೆಸಲು ನಿರ್ಧರಿಸಲಾಗಿದ್ದು, ಎಂಎಸ್ ಎಫ್ ಮತ್ತು ಬ್ಯಾಂಕ್ ದರವನ್ನು 6.75%ನಲ್ಲಿರಿಸಲು ನಿರ್ಧರಿಸಲಾ ಗಿದೆ ಎಂದು ಅವರು ಹೇಳಿದ್ದಾರೆ. 2024ರ ಚುನಾವಣಾ ಫಲಿತಾಂಶ ಬಂದ ಕೆಲವೇ ದಿನಗಳಲ್ಲಿ ಈ ಹಣಕಾಸು ನೀತಿಯನ್ನು ಘೋಷಿಸಿದ್ದು ರಿಯಲ್ ಎಸ್ಟೇಟ್, ಗೃಹ ಸಾಲ ಸೇರಿ ಅನೇಕ ಕ್ಷೇತ್ರಗಳಲ್ಲಿ ಹೂಡಿಕೆಗಳಿಗೆ ಇದು ಉತ್ತೇಜನ ನೀಡಲಿದೆ ಎಂದು ನಿರೀಕ್ಷಿಸಲಾಗಿದೆ. ಸದ್ಯ ಹಣ ದುಬ್ಬರ ಪ್ರಮಾಣ 4.5% ಎಂದು ಅಂದಾಜಿಸಲಾಗಿದ್ದು, ಈ ಸಂಖ್ಯೆ ಯನ್ನು 4% ಇಳಿಸುವ ಗುರಿ ಹೊಂದಿದ್ದೇವೆ ಎಂದು ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಸಂಸತ್ ಪ್ರವೇಶ ಯತ್ನ: ಮೂವರ ಸೆರೆ

ದೆಹಲಿ: ಬಿಗಿ ಭದ್ರತೆ ನಡುವೆಯೂ ನಕಲಿ ಗುರುತಿನ ಕಾರ್ಡ್ ಬಳಸಿ ಅಕ್ರಮವಾಗಿ ಸಂಸತ್ ಕಟ್ಟಡ ಪ್ರವೇಶಿಸಲು ಯತ್ನಿಸಿದ ಮೂವರನ್ನು ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ ಎಂದು ವರದಿಯಾಗಿದೆ. ಈ ಘಟನೆ ಜೂನ್ 4 ರಂದು ನಡೆದಿದ್ದು, ಅಕ್ರಮವಾಗಿ ಸಂಸತ್ ಪ್ರವೇಶಿಸಲು ಯತ್ನಿಸಿದ ಕಾಸಿಮ್, ಮೊನೀಸ್ ಮತ್ತು ಸೊಯೇಬ್ ಎನ್ನುವರನ್ನು ಬಂಧಿ ಸಲಾಗಿದೆ. ಆರೋಪಿಗಳು ಸಂಸತ್ ಸಂಕೀರ್ಣದಲ್ಲಿ ನಡೆಯುತ್ತಿರುವ ಕಾಮಗಾರಿಯಲ್ಲಿ ಭಾಗಿ ಯಾಗಿ ರುವ ಕಾರ್ಮಿಕರು ಎಂದು ಹೇಳಲಾಗಿದೆ. ವರದಿಯ ಪ್ರಕಾರ ಗೇಟ್ ನಂ.3ರಲ್ಲಿ ಸಿಐಎಸ್‌ಎಫ್ ಭದ್ರತಾ ತಪಾಸಣೆ ವೇಳೆ ಇಬ್ಬರು ಒಂದೇ ರೀತಿಯ ನಂಬರ್ ಹೊಂದಿರುವ, ಫೋಟೊ ಮಾತ್ರ ಬೇರೆ ಇರುವ ಆಧಾರ್ ಕಾರ್ಡ ಹಿಡಿದು ಬಂದಿರು ವುದು ಪತ್ತೆಯಾಗಿದೆ. ಆರೋಪಿಗಳೆಲ್ಲರೂ ಉತ್ತರ ಪ್ರದೇಶ ಮೂಲದವರು ಎಂದು ಹೇಳಲಾ ಗಿದ್ದು, ಸಾಮಾನ್ಯ ಪ್ರವೇಶ ಪತ್ರದ ಮೂಲಕ ಸಂಸತ್ ಪ್ರವೇಶಕ್ಕೆ ಯತ್ನಿಸಿದ್ದರು. ಈ ಬಗ್ಗೆ ಚುರುಕು ಗೊಂಡ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಶರದ್ ಪವಾರ್ ವಿರುದ್ಧ ಮಾತನಾಡಬಾರದಿತ್ತು..

ಮುಂಬೈ: ಲೋಕಸಭಾ ಚುನಾವಣೆಯಲ್ಲಿ ಶರದ್ ಪವಾರ್ ವಿರುದ್ಧ ಸಚಿವ ಚಂದ್ರಕಾಂತ್ ಪಾಟೀಲ್ ಅವರು ಮಾತನಾಡಿದ್ದೇ ಬಾರಾಮತಿಯಲ್ಲಿ ನಮ್ಮ ಸೋಲಿಗೆ ಕಾರಣವಾಯಿತು ಎಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ. ಚಂದ್ರಕಾಂತ್ ಪಾಟೀಲ್ ಅವರ ಹೇಳಿಕೆಯಿಂದಾಗಿಯೇ ಬಾರಾಮತಿಯಲ್ಲಿ ತಮ್ಮ ಪತ್ನಿ ಸುನೇತ್ರಾ ಪವಾರ್ ಅವರು ಸುಪ್ರಿಯಾ ಸುಳೆ ಅವರ ವಿರುದ್ಧ 1.5 ಲಕ್ಷ ಮತಗಳ ಅಂತರದಿಂದ ಸೋಲು ಅನುಭವಿಸಿದರು. ಚಂದ್ರಕಾಂತ್ ಅವರು ಶರದ್ ಪವಾರ್ ಅವರ ಬಗ್ಗೆ ಮಾತನಾಡಬಾರದಿತ್ತು ಎಂದು ಅವರು ಹೇಳಿದ್ದಾರೆ.

ಚರ್ಚೆಗೆ ಕಾರಣವಾದ ಕಂಗನಾ ಪ್ರಕರಣ | ಬಾಲಿವುಡ್ ಮೌನಕ್ಕೆ ಸಂಸದೆ ಆಕ್ರೋಶ

ಕಂಗನಾ ಕಪಾಳಮೋಕ್ಷ ಮಾಡಿದ್ದ ಕೌರ್ ಬಂಧನ

ದೆಹಲಿ: ಸಿನೆಮಾ ತಾರೆ ಹಾಗೂ ನೂತನ ಸಂಸದೆ ಕಂಗನಾ ರಣಾವತ್‌ಗೆ ಕಪಾಲ ಮೋಕ್ಷ ಮಾಡಿದ ಆರೋಪದ ಮೇಲೆ ಸಿಐಎಸ್‌ಎಫ್ ಕಾನ್ಸ್‌ಟೇಬಲ್ ಕುಲ್ವಿಂದರ್ ಕೌರ್ ಅವರನ್ನು ಸೇವೆಯಿಂದ ಅಮಾನುಗೊಳಿಸಿ ಬಂಧಿಸಲಾಗಿದೆ. ಚಂಡೀಗಢ ವಿಮಾನ ನಿಲ್ದಾಣದಲ್ಲಿ ಗುರುವಾರ ನಟಿ ಹಾಗೂ ಸಂಸದೆ ಕಂಗನಾ ರಣಾವತ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸ ಲಾಗಿದ್ದು, 2020ರಲ್ಲಿ ನಡೆದ ರೈತ ಪ್ರತಿಭಟನೆ ಸಂದರ್ಭದಲ್ಲಿ ಕಂಗನಾ ರಣಾವತ್' ರೈತರು 100 ರೂಪಾಯಿ ಆಸೆಗೆ ಪ್ರತಿಭಟನೆಗೆ ಬಂದು ಕುಳಿತಿದ್ದಾರೆ' ಎಂಬ ಪೋಸ್ಟ್ ಹಾಕಿದ್ದರ ಪರಿಣಾಮವಾಗಿ ಚಂಡೀಗಢ ವಿಮಾನ ನಿಲ್ದಾಣಕ್ಕೆ ಬಂದ ವೇಳೆ ಸಿಐಎಸ್‌ಎಫ್ ಮಹಿಳಾ ಕಾನ್ಸ್‌ಟೇಬಲ್ ಅವರ ಕೆನ್ನೆಗೆ ಹೊಡೆದಿದ್ದಾರೆ ಎನ್ನಲಾಗಿತ್ತು. ಶುಕ್ರವಾರ ಹಲ್ಲೆ ಆರೋಪ ಹೊತ್ತಿರುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಯನ್ನು ಅಮಾನುಗೊಳಿಸಲಾಗಿದ್ದು, ಪೊಲೀಸರು ಹಲ್ಲೆ ನಡೆಸಿದ ಆರೋಪದಡಿ ಬಂಧಿಸಿದ್ದಾರೆ ಎನ್ನಲಾಗಿದೆ.

ಬಾಲಿವುಡ್ ಮೌನಕ್ಕೆ ಕಂಗನಾ ಆಕ್ರೋಶ

ಜೂನ್ 6 ರಂದು ವಿಮಾನ ನಿಲ್ದಾಣದಲ್ಲಿ ತನ್ನ ಮೇಲೆ ಹಲ್ಲೆ ನಡೆದರೂ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದ ಬಾಲಿವುಡ್ ವಿರುದ್ಧ ಕಂಗನಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಇನ್‌ಸ್ಟಾ ಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಿ ಬಳಿಕ ಡಿಲೀಟ್ ಮಾಡಿಕೊಂಡಿದ್ದಾರೆ.' ಬಾಲಿವುಡ್ ಕಲಾವಿದರೇ ನನ್ನ ಮೇಲಿನ ಹಲ್ಲೆಯನ್ನು ಸಂಭ್ರ ಮಿಸುತ್ತಿದ್ದೀರೋ ಅಥವಾ ಉದ್ದೇಶಪೂರ್ವಕವಾಗಿ ಮೌನವಾಗಿದ್ದಿರೋ? ನಾಳೆ ನೀವು ಭದ್ರತೆ ಇಲ್ಲದೇ ರಸ್ತೆಯಲ್ಲಿ ಓಡಾಡುವಾಗ ರಫಾ ಬೆಂಬ ಲಿಸಿದ ಕಾರಣಕ್ಕೆ ಇಸ್ರೇಲಿ ಅಥವಾ ಪ್ಯಾಲಿಸ್ಟೇನ್‌ಗಳು ನಿಮ್ಮ ಮೇಲೆ ಹಲ್ಲೆ ನಡೆಸಿದರೆ ಆಗ ನಾನು ನಿಮ್ಮ ಅಭಿವ್ಯಕ್ತಿ ಸ್ವಾತಂತ್ರದ ಪರವಾಗಿ ಮಾತನಾ ಡುತ್ತೇನೆ ಎಂದು ಬರೆದುಕೊಂಡಿದ್ದರು.

ರಾಜೀನಾಮೆ ಬೇಡ: ಫಡ್ನವೀಸ್‌ಗೆ ಶಾ ಸಲಹೆ



ಮುಂಬೈ: ಮಹಾರಾಷ್ಟ್ರ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಸೋಲಿನ ಹೊಣೆ ಹೊತ್ತು ಡಿಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ದೇವೇಂದ್ರ ಫಡ್ನವೀಸ್ ಘೋಷಿಸಿದ್ದರು.

ಈ ಬಗ್ಗೆ ನಡೆದ ಮಾತುಕತೆಯಲ್ಲಿ ಅಮಿತ್ ಶಾ ರಾಜ್ಯ ಸರಕಾರದ ಕೆಲಸದಲ್ಲಿ ಮುಂದುವರೆಯಿರಿ ಎಂದು ಸೂಚನೆ ನೀಡಿದ್ದು, ಆ ಮೂಲಕ ಫಡ್ನವೀಸ್ ರಾಜೀನಾಮೆ ನಿರ್ಧಾರವನ್ನು ಅಮಿತ್ ಶಾ ತಿರಸ್ಕರಿಸಿದ್ದಾರೆ ಎನ್ನಲಾಗಿದೆ.

2019ರಲ್ಲಿ 48ರಲ್ಲಿ 41 ಸ್ಥಾನ ಗೆದ್ದಿದ್ದ ಬಿಜೆಪಿ -ಶಿವಸೇನೆ ಈ ಬಾರಿ 17 ಸೀಟು ಗೆಲ್ಲುವಲ್ಲಿ ಮಾತ್ರ ಸಫಲವಾಗಿದೆ. ಫಲಿತಾಂಶದ ಬಳಿಕ ಮುಖ್ಯಮಂತ್ರಿ ಏಕನಾಥ ಶಿಂದೆ, ಡಿಸಿಎಂ ಅಜಿತ ಪವಾರ ಹಾಗೂ ಡಿಸಿಎಂ ದೇವೇಂದ್ರ ಫಡ್ನವೀಸ್ ಸೋಲಿನ ಅವಲೋಕನ ಸಭೆ ನಡೆಸಿದ್ದು, ಈ ವೇಳೆ ಫಡ್ನವೀಸ್ ರಾಜೀನಾಮೆ ವಿಚಾರ ಪ್ರಸ್ತಾಪಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದಾಗಿ ತಿಳಿಸಿದ್ದ ಫಡ್ನವೀಸ್ ಉಪ ಮುಖ್ಯಮಂತ್ರಿ ಸ್ಥಾನದಿಂದ ಬಿಡುಗಡೆ ನೀಡಬೇಕು ಎಂದು ಬಿಜೆಪಿ ವರಿಷ್ಠರಲ್ಲಿ ಮನವಿ ಮಾಡಿದ್ದರು. ಈ ನಿರ್ಧಾರದ ಬಳಿಕ ಸಾಕಷ್ಟು ಮನವೊಲಿಕೆ ಪ್ರಯತ್ನ ಕೂಡ ನಡೆದಿದ್ದು, ಒಗ್ಗಟ್ಟಾಗಿ ಚುನಾವಣೆಗೆ ಕೆಲಸ ಮಾಡಿದ್ದೇವೆ, ಸೋಲಿಗೆ ಎಲ್ಲರೂ ಕಾರಣ ಎಂದು ಶಿಂದೆ ಸಮಾಧಾನಪಡಿಸುವ ಯತ್ನ ನಡೆಸಿದ್ದರು. ಅಮಿತ್ ಶಾ ನಿವಾಸದಲ್ಲಿ ದೇವೇಂದ್ರ ಫಡ್ನವೀಸ್ ಭೇಟಿಯಾಗಿದ್ದು, ಮಹಾರಾಷ್ಟ್ರ ಸರಕಾರದ ಕೆಲಸವನ್ನು ಮುಂದುವರೆಸಿ ಜತೆಗೆ ಬಿಜೆಪಿ ಪುನಶ್ಚೇತನಕ್ಕೆ ಯೋಜನೆ ರೂಪಿಸಿ, ರಾಜೀನಾಮೆ ನೀಡಿದರೆ ಪಕ್ಷದ ಕಾರ್ಯಕರ್ತರ ಮೇಲೆ ಪ್ರಭಾವ ಬೀರಲಿದೆ ಎಂದು ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಬಿಭವ್ ಜಾಮೀನು ಕೋರಿದ ಅರ್ಜಿ ವಜಾ

ದೆಹಲಿ: ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರ ಮೇಲೆ ಹಲ್ಲೆ ನಡೆಸಿದ ಆರೋಪದ ಪ್ರಕರಣದಲ್ಲಿ, ಜಾಮೀನು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಪ್ತ ಸಹಾಯಕ ಬಿಭವ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿಯ ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿದೆ. ಜಾಮೀನು ಕೋರಿ ಬಿಭವ್ ಕುಮಾರ್ ಎರಡನೇ ಬಾರಿ ಅರ್ಜಿ ಸಲ್ಲಿಸಿದ್ದು, ಆರೋಪಿಯು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಬಗ್ಗೆ ಆತಂಕ ವ್ಯಕ್ತಪಡಿಸಿರುವ ನ್ಯಾಯಾಲಯ, ಜಾಮೀನು ಅರ್ಜಿಯನ್ನು ವಜಾಗೊಳಿಸಿದೆ. ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶೆ ಏಕ್ತಾ ಗೌಬಾ ಮಾನ್, ಪ್ರಕರಣ ಕುರಿತ ತನಿಖೆ ಆರಂಭಿಕ ಹಂತದಲ್ಲಿದೆ. ಸಂತ್ರಸ್ತೆಗೆ ನಿರಂತರವಾಗಿ ಬೆದರಿಕೆ ಕರೆಗಳು ಬರುತ್ತಿದ್ದು, ತನ್ನ ಹಾಗೂ ತನ್ನ ಕುಟುಂಬದ ಸದಸ್ಯರ ಸುರಕ್ಷತೆ ಬಗ್ಗೆ ಆಕೆಗೆ ಭಯವಿದೆ ಎಂದು ಹೇಳಿದರು.

ಟಿಡಿಪಿ ವಿರುದ್ಧ ವೈಎಸ್‌ಆರ್‌ಸಿಪಿ ಆರೋಪ | ರಾಜ್ಯಪಾಲರಿಗೆ ದೂರು | ಸರಕಾರ ರಚನೆಗೂ ಮುನ್ನ ಆಂಧ್ರದಲ್ಲಿ ಗದ್ದಲ

ವೈಎಸ್‌ಆರ್‌ಸಿಪಿ ನಾಯಕರ ಮನೆ ಮೇಲೆ ದಾಳಿ

ವಿಜಯವಾಡ: ಲೋಕಸಭೆ ಮತ್ತು ವಿಧಾನಸಭೆ ಚುನಾವಣೆ ಬಳಿಕ ತೆಲುಗು ದೇಶಂ ಪಕ್ಷದ ಕಾರ್ಯಕರ್ತರು ರಾಜ್ಯದ ಹಲವೆಡೆ ವೈಎಸ್‌ಆರ್ ಕಾಂಗ್ರೆಸ್ ಮುಖಂಡರನ್ನು ಗುರಿಯಾಗಿಸಿ ಗಡ ಗಳನ್ನು ನಡೆಸುತ್ತಿದ್ದು, ಅಶಾಂತಿ ವಾತಾವರಣ ಸೃಷ್ಟಿಸಿದ್ದಾರೆ ಎಂದು ವೈಎಸ್‌ಆರ್ ಕಾಂಗ್ರೆಸ್ ಆರೋಪಿಸಿದೆ.

ಲೋಕಸಭಾ ಫಲಿತಾಂಶ ಘೋಷಣೆಯಾದಾಗಿನಿಂದ ವೈಎಸ್‌ಆರ್‌ಸಿ ಹಾಗೂ ಟಿಡಿಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆಯುತ್ತಿದ್ದು, ಶುಕ್ರವಾರ ವೈಎಸ್‌ಆರ್ ಕಾಂಗ್ರೆಸ್‌ನ ವಲ್ಲಭನೇನಿ ವಂಶಿ ಮನೆ ಮತ್ತು ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ. ನಾಯಕ ವಂಶಿ ನಿವಾಸದ ಎದುರು ಜಮಾಯಿಸಿದ ಟಿಡಿಪಿ ಕಾರ್ಯಕರ್ತರು, ಮನೆಯ ಗೇಟು ಮುರಿದು ನುಗ್ಗಲು ಯತ್ನಿಸಿದ್ದು, ಆ ಬಳಿಕ ಮನೆ ಹೊರಗೆ ನಿಲ್ಲಿಸಲಾಗಿದ್ದ ವಾಹನಗಳ ಗಾಜುಗಳನ್ನು ಒಡೆದು ಹಾಕಿರುವ ವಿಡಿಯೋ ವೈರಲ್ ಆಗಿದೆ. ವಿಷಯ ತಿಳಿದ ಪೊಲಿಸರು ತಕ್ಷಣ ಸ್ಥಳಕ್ಕೆ ಧಾವಿಸಿದ್ದು, ಕಾರ್ಯಕರ್ತರನ್ನು ಚದುರಿಸಿ ದ್ದಾರೆ. ಸರಕಾರ ರಚನೆಗೂ ಮುನ್ನವೇ ಆಂಧ್ರದಲ್ಲಿ ಗಲಭೆಗಳು ಆರಂಭವಾಗಿದ್ದು, ಟಿಡಿಪಿ ವಿರುದ್ಧ ವೈಎಸ್ ಆರ್ ಕಾಂಗ್ರೆಸ್ ನೇರ ಆರೋಪ ಮಾಡಿದೆ.

ರಾಜ್ಯಪಾಲರಿಗೆ ವೈಎಸ್‌ಆರ್ ದೂರು: ಅದರಂತೆ ಮಾಜಿ ಸಚಿವ ವೈಎಸ್‌ಆರ್‌ಸಿ ಮುಖಂಡ ಕೊಡಲಿ ವೆಂಕಟೇಶ್ವರ್ ರಾವ್ (ನಾನಿ) ಮನೆ ಮೇಲೂ ದಾಳಿ ನಡೆದಿದ್ದು, ನಿವಾಸದ ಮೇಲೆ ಕಲ್ಲು, ಮೊಟ್ಟೆಗಳನ್ನು ಎಸೆದು ಗಲಭೆ ಸೃಷ್ಟಿಸಿದ್ದಾರೆ ಎಂದೂ ವರದಿಯಾಗಿದೆ. ಘಟನೆಯನ್ನು ಖಂಡಿಸಿ ವೈಎಸ್‌ಆರ್‌ಸಿಪಿ ರಾಜ್ಯ ಸಭಾ ಸಂಸದ ನಿರಂಜನ್ ರೆಡ್ಡಿ , ಹಾಗೂ ಶಾಸಕರ ನಿಯೋಗ ರಾಜ್ಯಪಾಲ ಅಬ್ದುಲ್ ನಜೀರ್ ಭೇಟಿಯಾಗಿ ಟಿಡಿಪಿ ಕಾರ್ಯಕರ್ತರಿಂದ ತಮ್ಮ ಪಕ್ಷದ ಮುಖಂಡರ ಮೇಲೆ ದಾಳಿಯ ಬಗ್ಗೆ ದೂರು ಸಲ್ಲಿಸಿದ್ದಾರೆ. ಟಿಡಿಪಿಯಿಂದ ಸಂಯೋಜಿತ ಹಿಂಸಾಚಾರ ನಡೆಯುತ್ತಿದ್ದು, ಎಸ್ ಎಸ್‌ಟಿ, ಹಿಂದುಳಿದ ವರ್ಗಗಳ ನಾಯಕರನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ. ಇಷ್ಟಾದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವೈಎಸ್‌ಆರ್‌ಸಿ ಆರೋಪಿಸಿದ್ದು, ರಾಜ್ಯಪಾಲರು ಮಧ್ಯ ಪ್ರವೇಶಿಸಿ ಟಿಡಿಪಿ ಹಳದಿ ಗ್ಯಾಂಗ್‌ನ ದಾಳಿಗಳನ್ನು ತಡೆಯಬೇಕು, ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕು ಎಂದು ಮನವಿ ಮಾಡಿದೆ.

ವೈಎಸ್‌ಆರ್‌ಸಿಪಿ ನಾಯಕರ ವಾಹನಗಳ ಮೇಲೆ ಕಲ್ಲು ತೂರಾಟ ನಡೆದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ವಿವಾದಕ್ಕೆ ಎಡೆಮಾಡಿದ ನೀಟ್ ಪರೀಕ್ಷೆ ಫಲಿತಾಂಶ | ದೇಶಾದ್ಯಂತ ವಿರೋಧ

ಒಂದೇ ಕೇಂದ್ರದ 6 ಅಭ್ಯರ್ಥಿಗಳಿಗೆ ಫಸ್ಟ್‌ರ್‍ಯಾಂಕ್

ದೆಹಲಿ: ವೈದ್ಯಕೀಯ ಕೋರ್ಸ್‌ನ ಪ್ರವೇಶಕ್ಕೆ ನಡೆದಿದ್ದ ನೀಟ್ ಪರೀಕ್ಷೆಯಲ್ಲಿ ಕೆಲವರಿಗೆ ಹೆಚ್ಚು ಅಂಕಗಳು ಬಂದಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದು ಹಲವು ನೀಟ್ ಆಕಾಂಕ್ಷಿಗಳು ಆರೋಪಿಸಿದ್ದಾರೆ. ಈ ಕಾರಣ ದಿಂದಲೇ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ 67 ಅಭ್ಯರ್ಥಿಗಳು ಪ್ರಥಮ ರ್‍ಯಾಂಕ್ ಹಂಚಿಕೊಳ್ಳಲು ಸಾಧ್ಯವಾಗಿದೆ ಎಂದು ಅವರು ದೂರಿದ್ದಾರೆ.

ಆದರೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಈ ಕುರಿತ ಯಾವುದೇ ಅಕ್ರಮಗಳನ್ನು ನಿರಾಕರಿಸಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಲ್ಲಿ ಬದಲಾವಣೆ ಆಗಿರುವುದು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಸಮಯ ನಷ್ಟವಾದವರಿಗೆ ಕೃಪಾಂಕ ದೊರೆತಿರುವುದರಿಂದ ಕೆಲವರ ಅಂಕಗಳು ಹೆಚ್ಚಾಗಿವೆ ಎಂದು ಹೇಳಿದೆ. ಎನ್‌ಟಿಎ ಬುಧವಾರ ಸಂಜೆ ನೀಟ್ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಹರಿಯಾಣದ ಒಂದೇ ಪರೀಕ್ಷಾ ಕೇಂದ್ರದ ಆರು ಅಭ್ಯರ್ಥಿಗಳು ಸೇರಿದಂತೆ ದೇಶದಾದ್ಯಂತ 67 ಅಭ್ಯರ್ಥಿಗಳು ಮೊದಲ ರ್‍ಯಾಂಕ್ ಅನ್ನು ಹಂಚಿಕೊಂಡಿದ್ದಾರೆ.

ಎನ್‌ಟಿಎ ಪ್ರತಿಕ್ರಿಯೆ: ಪರೀಕ್ಷಾ ಸಮಯದಲ್ಲಿ ಆದ ನಷ್ಟದ ಕುರಿತು ಕೆಲ ಅಭ್ಯರ್ಥಿಗಳು ಸಲ್ಲಿಸಿದ್ದ ಮನವಿಗಳನ್ನು ಪರಿಶೀಲಿಸಲಾಗಿದೆ. ಸುಪ್ರೀಂಕೋರ್ಟ್ ತೀರ್ಪಿನ (2018) ಪ್ರಕಾರ ಅಳವಡಿಸಿಕೊಂಡಿರುವ ಸಾಮಾನ್ಯ ಸೂತ್ರವನ್ನು ಆಧರಿಸಿ ಸಮಯ ನಷ್ಟದ ಪರಿಹಾರವನ್ನು ಅವರಿಗೆ ನೀಡಲಾಗಿದೆ ಎಂದು ಎನ್‌ಟಿಎ ತಿಳಿಸಿದೆ. ಅಭ್ಯರ್ಥಿಗಳಿಗೆ ಆಗಿರುವ ಪರೀಕ್ಷಾ ಸಮಯದ ನಷ್ಟವನ್ನು ಖಚಿತಪಡಿಸಿಕೊಂಡು, ಅವರಿಗೆ ಕೃಪಾಂಕದ ಮೂಲಕ ಪರಿಹಾರ ನೀಡಲಾಗಿದೆ. ಈ ಕಾರಣಕ್ಕೆ ಅಭ್ಯರ್ಥಿಗಳ ಅಂಕಗಳು 718 ಅಥವಾ 719 ಆಗಿರಬಹುದು ಎಂದು ಅದು ಪ್ರಕಟಣೆಯಲ್ಲಿ ತಿಳಿಸಿದೆ.

ಅದರ ಜತೆಗೆ, ಈ ಪ್ರಕರಣವನ್ನು ಕಾಂಗ್ರೆಸ್, ಪ್ರಿಯಾಂಕಾ ಗಾಂದಿ ವಾದ್ರಾ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವಾರು ನಾಯಕರು ವಿರೋಧ ಮಾಡಿದ್ದು. ತನಿಖೆಗೆ ಗ್ರಹ ಪಡೆಸಿದ್ದಾರೆ.

ವಿದ್ಯಾರ್ಥಿನಿ ಆತ್ಮಹತ್ಯೆ

ಕೋಟಾ: ನೀಟ್‌ನಲ್ಲಿ ಕಡಿಮೆ ಅಂಕ ಗಳಿಸಿದ್ದಕ್ಕಾಗಿ ನೊಂದಿದ್ದಳು ಎನ್ನಲಾದ 18 ವರ್ಷದ ವಿದ್ಯಾರ್ಥಿನಿ, ಇಲ್ಲಿನ ಕಟ್ಟಡವೊಂದರ 9ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಮಧ್ಯಪ್ರದೇಶದ ರೇವಾ ಜಿಲ್ಲೆಯ ಬಾಗೀಶಾ ತಿವಾರಿ ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿನಿ. ಇದು, ಈ ವರ್ಷದ 10ನೇ ಸಂಶಯಾಸ್ಪದ ಆತ್ಮಹತ್ಯೆ ಪ್ರಕರಣವಾಗಿದೆ.

ವಿದ್ಯಾರ್ಥಿಗಳು ನೀಟ್ ಪರೀಕ್ಷೆಯ ಅಕ್ರಮಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಒಂದೇ ಕೇಂದ್ರದ ಹಲವು ವಿದ್ಯಾರ್ಥಿಗಳು ಪೂರ್ಣ ಅಂಕ ಪಡೆದಿರುವುದು ಮತ್ತು ಸಮೀಪದ ರೋಲ್ ನಂಬರ್ ಹೊಂದಿರುವ ವಿದ್ಯಾರ್ಥಿಗಳು ಅಗ್ರಸ್ಥಾನ ಪಡೆದಿರುವುದು ಸೇರಿದಂತೆ ಇಂತಹ ಹಲವು ಅಂಶಗಳನ್ನು ಗಮನಿಸಿದರೆ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿರುವ ಶಂಕೆ ಬಲವಾಗಿದೆ.

-ಅಶೋಕ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಈ ರೀತಿಯ ಘಟನೆಗಳು ಶೈಕ್ಷಣಿಕ ವಲಯದಲ್ಲಿ ರಾಜ್ಯ ಸರಕಾರದ ಪ್ರಧಾನ್ಯತೆಯ ಬಗ್ಗೆ ಒತ್ತು ನೀಡುತ್ತದೆ. ನಾವು ಮತ್ತೇ ಹೇಳುತ್ತಿದ್ದೇವೆ ನೀಟ್ ಮತ್ತು ಇತರ ಅರ್ಹತಾ ಪರೀಕ್ಷೆಗಳು ಬಡವರ ವಿರೋಧಿ, ಸಾಮಾಜಿಕ ನ್ಯಾಯದ ವಿರುದ್ಧವಾಗಿದೆ. ಅದಕ್ಕಾಗಿ ಎಲ್ಲ ರಾಜ್ಯಸರಕಾರಗಳು ಇದರ ವಿರುದ್ಧ ಒಟ್ಟಾಗಿ ಹೋರಾಡಬೇಕಿದೆ.

-ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಭವಿಷ್ಯದಲ್ಲಿ ಚುನಾವಣಾ ಭವಿಷ್ಯ ನುಡಿಯಲಾರೆ

ತಲೆಕೆಳಗಾದ ಸಮೀಕ್ಷೆ ಪ್ರಶಾಂತ್ ತಪ್ಪೊಪ್ಪಿಗೆ

ದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 300ರ ಗಡಿದಾಟಿ, ಇಂಡಿಯಾ ಕೂಟ ಕಳಪೆ ಸಾಧನೆ ಮಾಡಲಿದೆ ಎಂದು ಭವಿಷ್ಯ ನುಡಿದಿದ್ದ ಚುನಾವಣಾ ತಂತ್ರಗಾರ ಪ್ರಶಾಂತ ಕಿಶೋರ್, ಫಲಿತಾಂಶದಲ್ಲಿ ತಮ್ಮ ಲೆಕ್ಕಾಚಾರ ತಲೆಕೆಳಗಾಗಿದ್ದನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡಿದ್ದು, ಇನ್ನು ಮುಂದೆ ಯಾವುದೇ ಕಾರಣಕ್ಕೂ ತಾವು ಚುನಾವಣಾ ಭವಿಷ್ಯ ಹೇಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಚುನಾವಣೆಯ ಫಲಿತಾಂಶ ಹೊರಬಿದ್ದ ನಂತರ ಸಂದರ್ಶನವೊಂದರಲ್ಲಿ ಮಾತನಾಡಿದ ಕಿಶೋರ್, ಈ ಬಾರಿ ತಮ್ಮ ಲೆಕ್ಕಾಚಾರದಲ್ಲಿ ತಪ್ಪಾಗಿದೆ ಎಂಬುದನ್ನು ಅಂಗೀಕರಿಸಿದರು. ತಮ್ಮಂತಹ ಅನೇಕ ಸಮೀಕ್ಷರು ನುಡಿದ ಭವಿಷ್ಯ ಸುಳ್ಳಾಯಿತು. ತಾವು ಹೇಳಿದ್ದರ ಬಗ್ಗೆ ವಿನಮ್ರವಾಗಿ ಆತ್ಮನಿರೀಕ್ಷೆ ಮಾಡಿಕೊಳ್ಳುತ್ತೇನೆ ಎಂದ ಅವರು, ಭವಿಷ್ಯದಲ್ಲಿ ಯಾವುದೇ ಪಕ್ಷ ಇಂತಿಷ್ಟೇ ಸ್ಥಾನ ಗಳಿಸುತ್ತದೆ ಎಂಬುದನ್ನು ಹೇಳುವುದಿಲ್ಲ ಎಂದರು.

ಸಮೀಕ್ಷೆ ಉಲ್ಟಾ: 2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ 300ರ ಗಡಿದಾಟಲಿದ್ದು, ಪ್ರತಿಪಕ್ಷಗಳ ಒಕ್ಕೂಟ ಹೆಚ್ಚಿನ ಸಾಧನೆ ಮಾಡದು. ವಿಶೇಷವಾಗಿ ಒಡಿಶಾ ಮತ್ತು ಪ. ಬಂಗಾಳದಲ್ಲಿ ಬಿಜೆಪಿ ಹೆಚ್ಚಿನ ಸ್ಥಾನ ಗಳಿಸಿ ದೇಶದ ರಾಜಕೀಯ ಪರಿಸ್ಥಿತಿಯೇ ಬದಲಾಗುತ್ತದೆ. ಮತ ಎಣಿಕೆ ದಿನ ಆಘಾತಗಳಿಗೆ ಸಿದ್ಧವಾಗಿರಿ ಎಂದು ಕಿಶೋರ್ ಸೂಚ್ಯವಾಗಿ ಇಂಡಿಯಾಗೆ ಎಚ್ಚರಿಕೆ ಕೊಟ್ಟಿದ್ದರು. ಆದರೆ ಫಲಿತಾಂಶ ಪ್ರಕಟಗೊಂಡಾಗ ಬಿಜೆಪಿ 240 ಸ್ಥಾನ ಗಳಿಸಿ ಎನ್‌ಡಿಎ 293ಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಪ್ರಶಾಂತ್ ಕಿಶೋರ್ ಭವಿಷ್ಯ ಸುಳ್ಳುಮಾಡುವಂತೆ ಇಂಡಿಯಾ ಉತ್ತರಪ್ರದೇಶ ಮತ್ತು ಬಂಗಾಳದಲ್ಲಿ ಬಿಜೆಪಿ ವಿರುದ್ಧ ಮೇಲುಗೈ ಸಾಧಿಸಿತು.



ಸುನೀಲ್ ಛೇಟ್ರಿಗೆ ವಿವಿಧ ಸನ್ಮಾನ

ಕೋಲ್ಕತ್ತಾ: ಭಾರತ ಮತ್ತು ಕುವೈತ್ ನಡುವಿನ ಫಿಫಾ ವಿಶ್ವಕಪ್ 2026ರ ಅರ್ಹತಾ ಪಂದ್ಯವು ಗೋಲುರಹಿತ ಡ್ರಾದಲ್ಲಿ ಮುಕ್ತಾಯಗೊಂಡಿದ್ದು, ಕೋಲ್ಕತದ ಸಾಲ್ಟ್ ಲೇಕ್ ಸ್ಟೇಡಿಯಮ್ನಲ್ಲಿ ನಡೆದ ಆ ಪಂದ್ಯವು ಭಾರತೀಯ ಫುಟ್ಬಾಲ್ ತಂಡದ ನಾಯಕ ಸುನೀಲ್ ಚೆಟ್ರಿಯ ಅಂತಾರಾಷ್ಟ್ರೀಯ ವಿದಾಯ ಪಂದ್ಯವಾಗಿತ್ತು. ಫುಟ್‌ಬಾಲ್‌ನಿಂದ ನಿವೃತ್ತರಾದ ಛೇಟ್ರಿಯನ್ನುಬಳಿಕ ಸನ್ಮಾನಿಸಲಾಯಿತು. ಅಖಿಲ ಭಾರತ ಫುಟ್ಬಾಲ್ ಫೆಡರೇಶನ್ ಅಧ್ಯಕ್ಷ ಸೇರಿದಂತೆ ಭಾರತೀಯ ಫುಟ್‌ಬಾಲ್ ಕ್ಷೇತ್ರದ ಹಲವು ಗಣ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಪಶ್ಚಿಮ ಬಂಗಾಳದ ಕ್ರೀಡಾ ಸಚಿವ ಅರೂಪ್ ಬಿಸ್ವಾಸ್, ಚೆಟ್ರಿಗೆ ಚಿನ್ನದ ಸರ ಪ್ರದಾನ ಮಾಡಿದರು. ಬಳಿಕ ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಮತ್ತು ಕೋಲ್ಕತ್ತಾದ ಮೂರು ದೊಡ್ಡ ಫುಟ್‌ಬಾಲ್ ಕ್ಲಬ್‌ಗಳಾದ ಈಸ್ಟ್ ಬೆಂಗಾಲ್, ಮೋಹನ್ ಬಾಗನ್ ಮತ್ತು ಮುಹಮ್ಮದನ್ ಸ್ಪೋರ್ಟ್ಸ್ ಕ್ಲಬ್‌ಗಳು ಚೆಟ್ರಿಗೆ ಸ್ಮರಣಿಕೆಗಳನ್ನು ನೀಡಿದವು.

ನೂತನ ತಂಡಕ್ಕೆ ಭರ್ಜರಿ ಗೆಲುವು | ಸೂಪರ್ ಓವರ್‌ನಲ್ಲಿ ಗೆದ್ದ ಯುಎಸ್‌ಎ

ಅಮೆರಿಕ ಆಟಕ್ಕೆ ಬೆಚ್ಚಿದ ಪಾಕ್!

ಸೂಪರ್ ಓವರ್‌ನಲ್ಲಿ ಪಂದ್ಯವನ್ನು ಕಳೆದುಕೊಂಡಿರುವುದು ಪಾಕಿಸ್ತಾನ ಕ್ರಿಕೆಟ್‌ಗೆ ದೊಡ್ಡ ಅವಮಾನವಾಗಿದೆ. ಇದಕ್ಕಿಂತ ದೊಡ್ಡ ಅವಮಾನ ಇರಲು ಸಾಧ್ಯವಿಲ್ಲ. ಯುಎಸ್‌ಎ ಅಸಾಧಾರಣವಾಗಿ ಉತ್ತಮವಾಗಿ ಆಡಿದೆ. ಅಮೆರಿಕ ಪಾಕಿಸ್ತಾನಕ್ಕಿಂತ ಮೇಲಿದ್ದಾರೆ ಎಂದು ಅನಿಸಿತು. ಅದು ಅವರು ತೋರಿಸಿದ ಪ್ರಬುದ್ಧತೆಯ ಮಟ್ಟ ಉತ್ತಮವಾಗಿತ್ತು.

– **ಅಕ್ಮಲ್**, ಮಾಜಿ ಕ್ರಿಕೆಟಿಗ

ಡಲ್ಲಾಸ್: ಮೊನಾಂಕ್ ಪಟೇಲ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಹಾಗೂ ಮುಂಬೈ ಆಟಗಾರ ನೇತ್ರವಲ್ಕರ್ ಅವರ ಮಾರಕ ಬೌಲಿಂಗ್ ದಾಳಿಯಿಂದಾಗಿ ಪಾಕಿಸ್ತಾನದ ವಿರುದ್ಧ ಅಮೆರಿಕ ತಂಡವು ಸೂಪರ್ ಓವರ್‌ನಲ್ಲಿ ರೋಚಕ ಗೆಲುವು ಸಾಧಿಸಿದೆ. ಈ ಮೂಲಕ ಕ್ರಿಕೆಟ್ ಲೋಕದ ಇತಿಹಾಸದಲ್ಲಿ ಭಾರೀ ಛಾಪು ಮೂಡಿಸಿರುವ ಅಮೆರಿಕ ತಂಡವು, ವಿಶ್ವದ ಬಲಿಷ್ಟ ಬೌಲಿಂಗ್ ದಾಳಿ ಉಳ್ಳ ತಂಡದ ವಿರುದ್ಧ ವಿರೋಚಕ ಗೆಲುವು ಸಾಧಿಸಿ ಇತಿಹಾಸ ಸೃಷ್ಟಿಸಿದೆ. ಡಲ್ಲಾಸ್‌ನಲ್ಲಿ ನಡೆದ ರೋಚಕ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ನಲ್ಲಿ 7 ವಿಕೆಟ್ ಕಳೆದುಕೊಂಡು 159 ರನ್ ಗಳಿಸತು. ಅದನ್ನು ಬೆನ್ನುಹತ್ತಿದ ಅಮೆರಿಕ ತಂಡವು ಬಲವಾಗಿ ಉತ್ತರಿಸಿ 3 ವಿಕೆಟ್ ಕಳೆದುಕೊಂಡು 159 ರನ್ ಗಳಿಸಿ ಟೈ ಮಾಡಿಕೊಂಡಿತು. ಆ ಬಳಿಕ ಆಡಿಸಲಾದ ಯುಎಸ್‌ಎ ತಂಡವು ಪಾಕಿಸ್ತಾನ ವಿರುದ್ಧ ರಣರೋಚಕ ಸೂಪರ್ ಓವರ್‌ನಲ್ಲಿ ಅದ್ಭುತ ಗೆಲುವು ದಾಖಲಿಸಿತು.

ಬಾಬರ್, ಶಾದಬ್ ಖಾನ್ ಹೋರಾಟ: ಪಾಕ್ ತಂಡದ ಬ್ಯಾಟಿಂಗ್ ಆರಂಭಿಸಿದ ರಿಜ್ವಾನ್ ಹಾಗೂ ಬಾಬರ್ ಆಝುಂ ಉತ್ತಮ ಜೋಡಿಯಾಟ ನೀಡಲಿಲ್ಲ. ಕೇವಲ 9 ರನ್ ಗಳಿಸಿ ರಿಜ್ವಾನ್ ಔಟಾದರು. ಬಳಿಕ ಬಂದ ಉಸ್ಮಾನ್ ಖಾನ್ 3 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಫಕರ್ ಜಮಾನ್ ಸಹ 11 ರನ್ ಗಳಿಸಿ ವಿಕೆಟ್ ನೀಡಿದರು . ಈ ವೇಳೆ ಪಾಕಿಸ್ತಾನ ಸಂಕಷ್ಟಕ್ಕೆ ಸಿಲುಕಿಕೊಂಡಿತ್ತು. ಆದರೆ, ಈ ವೇಳೆ ಜತಗೂಡಿದ ನಾಯಲಕ ಬಾಬರ್ ಹಾಗೂ ಶಾದಬ್ ಖಾನ್ ಉತ್ತಮ ಫೈಟ್ ನೀಡಿದರು. ಒಂದೆಡೆ ನಿಧಾನವಾಗಿ ಆಡಿ ವಿಕೆಟ್ ಉಳಿಸಿದ ಬಾಬರ್ ಆಝುಂ 43 ಎಸೆತದಲ್ಲಿ 44 ಗಳಿಸಿದರೆ, ಇನ್ನೊಂದೆಡೆ ಸ್ಕೋರ್ ಅತ್ತ ನೋಡಿಕೊಂಡ ಶಾದಬ್ ಖಾನ್ 25 ಎಸೆತದಲ್ಲಿ 40 ರನ್ ಗಳಿಸಿ ವಿಕೆಟ್ ನೀಡಿದರು. ಉಳಿದಂತೆ ಆಝುಂ ಖಾನ್ ಶೂನ್ಯಕ್ಕೆ ಆಟ ನಿಲ್ಲಿಸಿದರೆ, ಅಹ್ಮದ್ 18 ರನ್ ಕೊಡುಗೆ ನೀಡಿದರು.. ಕೊನೆಯಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಶಾಹಿನ್ ಅಫ್ರಿದಿ ಅಜೇಯ 26 ರನ್ ಗಳಿಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಇನ್ನು ಅಮೆರಿಕ ಪರ ನಿಶುತೋಷ್ 30/4 ಪಡೆದರೆ, ನೇತ್ರವಾಲ್ಕರ್ 18/2 ಪಡೆದು ಕೊಂಡರು.

ಮೋನಾಂಕ್ ಪಟೇಲ್ ಸ್ಫೋಟಕ ಬ್ಯಾಟಿಂಗ್: ಗುರಿ ಬೆನ್ನಟ್ಟಿದ ಯುಎಸ್‌ಎ ತಂಡಕ್ಕೆ ಸ್ಥಿರ ಆರಂಭದ ಅಗತ್ಯವಿತ್ತು ಮತ್ತು ತಮ್ಮ ಆರಂಭಿಕರಿಂದ ಅದನ್ನು ಪಡೆದರು. ಸ್ಟೀವನ್ ಟೇಲರ್ 12 ರನ್ ಗಳಿಸಿ ಮೊನಾಂಕ್ ಪಟೇಲ್ ಜತೆ 36 ರನ್‌ಗಳ ಜೊತೆಯಾಟ ನಿರ್ಮಿಸಿದರು ಔಟಾದರು. ನಾಯಕ ಮೊನಾಂಕ್ ಪಟೇಲ್ 38 ಎಸೆತಗಳಲ್ಲಿ 50 ರನ್ ಗಳಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಂಡ್ರೀಸ್ ಗೌಸ್ 26 ಎಸೆತಗಳಲ್ಲಿ 35 ರನ್ ಗಳಿಸುವುದರೊಂದಿಗೆ ಅಗತ್ಯ ವೇಗವನ್ನು ಒದಗಿಸಿದರು. ಆ ಬಳಿಕ ಬಂದ ಆರೋನ್ ಜೋನ್ಸ್ ಕೇವಲ 26 ಎಸೆತಗಳಲ್ಲಿ ಅಜೇಯ 36 ರನ್ ಗಳಿಸಿ ಯುಎಸ್‌ಎ ತಂಡ 3 ವಿಕೆಟ್‌ಗೆ 159 ರನ್ ಗಳಿಸಿ ಟೈ ಮಾಡಲು ನೆರವಾದರು. ಉಳಿದಂತೆ ನಿತೀಶ್ ಕುಮಾರ್ 14 ರನ್ ಗಳಿಸಿ ಅಜೇಯರಾಗಿ ಉಳಿದರು. ಕೊನೆಯ ಎಸೆತದಲ್ಲಿ 5 ರನ್ ಬೇಕಿದ್ದಾಗ ನಿತೀಶ್ ಕುಮಾರ್ ಬೌಂಡರಿ ಸಿಡಿಸಿದ್ದರು. ಆ ಮೂಲಕ ಫಲಿತಾಂಶಕ್ಕೆ ಸೂಪರ್ ಓವರ್ ನೆರವು ಬೇಕಾಯಿತು.

ಪಾಕ್‌ನಿಂದ ಕಳಪೆ ಪ್ರದರ್ಶನ: ಯುಎಸ್‌ಎ ವಿರುದ್ಧ ಪಾಕಿಸ್ತಾನದ ಆಟಗಾರರು ಕಳಪೆ ಪ್ರದರ್ಶನ ನೀಡಿದ್ದು, ಬ್ಯಾಟಿಂಗ್ ವಿಭಾಗದಲ್ಲಿ ನಾಯಕ ಬಾಬರ್ ಆಝುಂ ನಿಧಾನಗತಿ ಆಟಕ್ಕೆ ಛೀಮಾರಿ ಸ್ವೀಕರಿಸಿದ್ದಾರೆ. ತಂಡದ ಸ್ಕೋರ್ ಇಲ್ಲದಿದ್ದಾಗ ಟೆಸ್ಟ್‌ನಂತೆ ಆಡಿದ ಅವರು, 43 ಎಸೆತಗಳನ್ನು ಎದುರಿಸಿ 44 ರನ್ ಗಳಿಸಿದರು. ಅದರಂತೆ ನಿವೃತ್ತರಗಿ ಮರಳಿ ಬಂದ ಮೊಹ್ಮದ್ ಆಮೀರ್ ಅವರು ಮೊದಲಿಗೆ ಉತ್ತಮ ಬೌಲಿಂಗ್ ಮಾಡಿದರೂ, ಸೂಪರ್ ಓವರ್‌ನಲ್ಲಿ 2 ವೈಡ್ ಹಾಕಿದರು. ಅಲ್ಲದೆ ಮೊದಲ ಎಸೆತದಲ್ಲೆ ಬೌಂಡರಿ ಬರಿಸಿಕೊಂಡಿದ್ದು, ಪಾಕ್ ಅಭಿಮಾನಿಗಳು ಆಕ್ರೋಶಗೊಂಡರು.

ರಣರೋಚಕ ಸೂಪರ್ ಓವರ್

ಪಂದ್ಯ ಟೈ ಆದ ಹಿನ್ನಲೆಯಲ್ಲಿ ಸೂಪರ್ ಓವರ್ ಆಡಿಸಲಾಗಿತ್ತು. ಸೂಪರ್ ಓವರ್‌ನಲ್ಲಿ ಯುಎಸ್‌ಎ ಮೊದಲು ಬ್ಯಾಟಿಂಗ್ ಮಾಡಿತು ಮತ್ತು ಆರೋನ್ ಜೋನ್ಸ್ ತನ್ನ ಉತ್ತಮ ಫಾರ್ಮ್ ಬ್ಯಾಟಿಂಗ್ ಅನ್ನು ಮುಂದುವರೆಸಿದರು. ಅವರ ಆಟದಿಂದ ಹಾಗೂ ಮೊಹಮ್ಮದ್ ಅಮೀರ್ ಅವರ ಕಳಪೆ ಬೌಲಿಂಗ್ ಪ್ರದರ್ಶನದಿಂದಾಗಿ ಸೂಪರ್ ಓವರ್‌ನಲ್ಲಿ ಅಮೆರಿಕ 18 ರನ್ ಗಳಿಸಿತು. ಅದನ್ನು ಬೆನ್ನಟ್ಟಿದ ಪಾಕಿಸ್ತಾನ ತಂಡಕ್ಕೆ ಯುಎಸ್‌ಎ ಪರ ಸೂಪರ್ ಓವರ್ ಬೌಲ್ ಮಾಡುವ ಜವಾಬ್ದಾರಿಯನ್ನು ನೇತ್ರಾವಲ್ಕರ್‌ಗೆ ವಹಿಸಲಾಗಿತ್ತು. ಪಾಕಿಸ್ತಾನದ ಡೈನಾಮಿಕ್ ಜೋಡಿ ಶಾದಾಬ್ ಖಾನ್ ಮತ್ತು ಇಫ್ತಿಕರ್ ಅಹ್ಮದ್ ಕ್ರೀಸ್‌ಗೆ ಬಂದರು. ಆದಾಗ್ಯೂ, ನೇತ್ರಾವಲ್ಕರ್ ತನ್ನ ಮಾರಕ ಬೌಲಿಂಗ್ ದಾಳಿ ನಡೆಸಿ, ಕೇವಲ 13 ರನ್‌ಗಳನ್ನು ಬಿಟ್ಟುಕೊಟ್ಟರು ಮತ್ತು ಯುಎಸ್‌ಎ ತಂಡಕ್ಕೆ ಐತಿಹಾಸಿಕ ಗೆಲುವು ತಂದುಕೊಟ್ಟರು.

ಸ್ಕೋರ್

ಪಾಕಿಸ್ತಾನ: 159/7 ಬಾಬರ್ ಆಝುಂ 44, ಶಾದಬ್ ಖಾನ್ 40, ನಶುತೋಷ್ 30/3
ಅಮೆರಿಕ: 159/3 ಮೋನಾಂಕ್ ಪಟೇಲ್ 520, ಜೋನ್ಸ್ 36, ಆಮೀರ್ 25/1
ಸೂಪರ್ ಓವರ್
ಅಮೆರಿಕ: 18
ಪಾಕಿಸ್ತಾನ: 13/1

ಡಾಕ್ರೆಲ್, ಮಾರ್ಕ್ ಹೋರಾಟ ವ್ಯರ್ಥ

ಐರ್ಲೆಂಡ್‌ಗೆ ಸತತ ಎರಡನೇ ಸೋಲು

ನ್ಯೂಯಾರ್ಕ್: ಕಿರ್ಟನ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಹಾಗೂ ಕೆನಡಾ ತಂಡದ ವೇಗಿಗಳ ಮಾರಕ ಬೌಲಿಂಗ್ ದಾಳಿಗೆ ಐರ್ಲೆಂಡ್ ತತ್ತರಿಸಿದ್ದು, ಸತತ ಎರಡನೇ ಸೋಲು ಅನುಭವಿಸಿದೆ. ಆ ಮೂಲಕ ಕೆನಡಾ ತಂಡ ಗೆಲುವು ಸಾಧಿಸಿದ್ದು, ಟೂರ್ನಿಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿದೆ. ಇಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ 7 ವಿಕೆಟ್ ಕಳೆದುಕೊಂಡು 137 ರಮ್ ಗಳಿಸಿತು. ಅದನ್ನು ಬೆನ್ನುಹತ್ತಿದ ಐರ್ಲೆಂಡ ಹೋರಾಟದ ನಡುವಯೂ 7 ವಿಕೆಟ್ ಕಳೆದುಕೊಂಡು 125 ರನ್ ಗಳಿಸಲಷ್ಟೆ ಸಾಧ್ಯವಾಯಿತು.

ಕಿರ್ಟೋನ್ ಸ್ಫೋಟಕ ಬ್ಯಾಟಿಂಗ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆನಡಾ ಉತ್ತಮ ಆರಂಭ ಪಡೆಯುವಲ್ಲಿ ಎಡವಿತು. ಶುರುವಿನಲ್ಲೇ ಆರಂಭಿಕ ಆರನ್ ಜಾನ್ಸನ್ವಿಕೆಟ್ 14, ನವನೀತ್ ಧಲಿವಾಲ್ 6 ಕೆನಡಾ ಪರ ವಿಕೆಟ್ ನೀಡಿದರು. ಬಳಿಕ ಬಂದ ಪರ್ಗತ್ ಸಿಂಗ್ ಕೇವಲ 18 ರನ್ ಗಳಿಸಿ ಔಟಾದರೆ, ದಿಲ್‌ಪ್ರೀತ್ ಬಾಜ್ವಾ 6 ರನ್‌ಗೆ ಆಟ ನಿಲ್ಲಿಸಿ ಪೆವಿಲಿಯನ್ ಕಡೆ ಹೆಜ್ಜೆ ಹಾಕಿದರು. ನಂತರ ಒಂದಾದ ನಿಕೋಲಸ್ ಕಿರ್ಟನ್ ಮತ್ತು ಶ್ರೇಯಸ್ ಮೊವ್ವಾ ಉತ್ತಮ ಜೊತೆಯಾಟವಾಡುವ ಮೂಲಕ ಕುಸಿದ ಕೆನಡಾ ತಂಡವನ್ನು ಮೇಲೆತ್ತಿದ್ದರು. ನಿಕೋಲಸ್ ಕಿರ್ಟನ್ ಅರ್ಧಶತಕ ಹೊಸ್ತಿಲಲ್ಲಿ ಔಟಾದರು. 35 ಎಸೆತಗಳಲ್ಲಿ ನಿಕೋಲಸ್ ಕಿರ್ಟನ್ 49 ರನ್ ಗಳಿಸಿದರು. ಶ್ರೇಯಸ್ 37 ರನ್ ಗಳಿಸಿ ರನೌಟ್‌ಗೆ ಬಲಿಯಾದರು.

ಮಾರ್ಕ್ ಹೋರಾಟ: ಅದನ್ನು ಬೆನ್ನು ಹತ್ತಿದ ಐರ್ಲೆಂಡ ತಂಡಕ್ಕೆ ಆರಂಭದಿಂದಲೂ ಆಘಾತ ಉಂಟಾಯಿತು. ಆರಂಭಿಕ ಬಾಲ್ಬಿರ್ನಿ 17 ರನ್ ಗಳಿಸಿ ವಿಕೆಟ್ ನೀಡಿದರು. ಸ್ಟಿರ್ಲಿಂಗ್ 9 ರನ್ ಗಳಿಸಿ ನೀಡಿದರೆ, ಟಕರ್ 7 ರನ್ ಗಳಿಸಿದರು. ಈ ವೇಳೆ ಕೈಹಿಡಿದ ಡಾಕ್ರೆಲ್ 30 ರನ್ ಗಳಿಸಿ ಹೋರಾಡಿದರು. ಇದೆ ವೇಳೆ ಮಾರ್ಕ್ 34 ರನ್ ಗಳಿಸಿ ಫೈಟ್ ನೀಡಿದರೂ, ಕೊನೆಗೆ ಸೋಲೊಪ್ಪಿಕೊಂಡಿತು.

ದೇಶಿ ಕ್ರಿಕೆಟ್ ವೇಳಾ ಪಟ್ಟಿ ಪ್ರಕಟ

ದೆಹಲಿ: 2024–25ನೇ ಋತುವಿನ ಪುರುಷರ ಹಾಗೂ ಮಹಿಳೆಯರ ದೇಶೀಯ ಕ್ರಿಕೆಟ್‌ನ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ರಣಜಿ ಟ್ರೋಫಿಯನ್ನು ಎರಡು ಹಂತಗಳಾಗಿ ವಿಭಜಿಸಿರುವುದು ಪ್ರಮುಖ ಬದಲಾವಣೆಯಾಗಿದ್ದು, ಮೊದಲ ಹಂತವು ಅಕ್ಟೋಬರ್‌ನಲ್ಲಿ ನಡೆದರೆ, ನಾಕೌಟ್ ಹಂತವು ಫೆಬ್ರವರಿಯಲ್ಲಿ ನಡೆಯಲಿದೆ. ವರ್ಷದ ಮೊದಲ ಸ್ಪರ್ಧಾವಳಿಯಾಗಿರುವ ದುಲೀಪ್ ಟ್ರೋಫಿಯು ಸೆಪ್ಟಂಬರ್ 5ರಿಂದ 22ರ ತನಕ ಆಂಧ್ರಪ್ರದೇಶದ ಅನಂತಪುರದಲ್ಲಿ ನಡೆಯಲಿದ್ದು, ಬಳಿಕ ಇರಾನಿ ಟ್ರೋಫಿಯು ಅಕ್ಟೋಬರ್ 1ರಿಂದ ಮುಂಬೈನಲ್ಲಿ ನಡೆಯಲಿದೆ. ದೇಶೀಯ ಪುರುಷರ ಟಿ20 ಪಂದ್ಯಾವಳಿ ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿಯು ನವೆಂಬರ್ 23ರಿಂದ ಡಿಸೆಂಬರ್ 15ರ ವರೆಗೆ ನಡೆಯಲಿದೆ. ಲಿಸ್ಟ್ ಎ ಟೂರ್ನಮೆಂಟ್ ವಿಜಯ್ ಹಝಾರೆ ಟ್ರೋಫಿಯು ಡಿಸೆಂಬರ್ 21ರಿಂದ ಜನವರಿ 18ರ ವರೆಗೂ ನಡೆಯಲಿದೆ. ರಣಜಿ ಟ್ರೋಫಿಯ ಲೀಗ್ ಹಂತವು ಅಕ್ಟೋಬರ್ 11ರಿಂದ ಆರಂಭವಾಗಲಿದ್ದು, ಫೆಬ್ರವರಿ 2ರ ತನಕ ನಡೆಯಲಿದೆ. ನಾಕೌಟ್ ಹಂತವು ಫೆಬ್ರವರಿ 8ರಿಂದ ಮಾರ್ಚ್ 2ರ ತನಕ ನಿಗದಿಯಾಗಿದೆ.

ಫೈನಲ್‌ಗೇರಿದ ಕಾರ್ಲೋಸ್ ಅಲ್ಕರಾಜ್



ಫ್ರೆಂಚ್: ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಶುಕ್ರವಾರ ನಡೆದ ಫ್ರೆಂಚ್ ಓಪನ್ ಸೆಮಿಫೈನಲ್ ಪಂದ್ಯದಲ್ಲಿ ಜಾನಿಕ್ ಸಿನ್ನೆರ್ ಅವರನ್ನು 2–6, 6–3, 3–6, 6–4, 6–3 ರೋಚಕ ಸೆಟ್‌ಗಳಿಂದ ಸೋಲಿಸಿದ್ದು, ಆ ಮೂಲಕ ಯುವ ಟೆನಿಸ್ ಆಟಗಾರ ಅಲ್ಕರಾಜ್ ದಾಖಲೆ ನಿರ್ಮಿಸಿದ್ದಾರೆ. ಎಲ್ಲ ಮೂರು ವಿಧದ ಕೋರ್ಟ್ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಲ್ಕರಾಜ್ 2022ರಲ್ಲಿ ಹಾರ್ಡ್ ಕೋರ್ಟ್‌ನಲ್ಲಿ ನಡೆದ ಯುಎಸ್ ಓಪನ್ ಗೆದ್ದಿದ್ದರು. ಆ ಬಳಿಕ 2023ರಲ್ಲಿ ಹುಲ್ಲಿನ ಮೇಲೆ ವಿಂಬಲ್ಡನ್ ಗೆದ್ದಿದ್ದರು. ಇದೀಗ ಫ್ರಾನ್ಸ್‌ನ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಕೆಂಪು ಜೇಡಿಮಣ್ಣಿನ ಕೋರ್ಟ್ ಮೇಲೆ ಫ್ರೆಂಚ್ ಓಪನ್ ಚಾಂಪಿಯನ್ ಆಗಲು ಅಂತಿಮ ಸುತ್ತಿಗೆ ಕಾಲಿಟ್ಟಿದ್ದಾರೆ. ಭಾನುವಾರ ನಡೆಯಲಿರುವ ಫ್ರೆಂಚ್ ಓಪನ್ ಫೈನಲ್ ಪಂದ್ಯದಲ್ಲಿ ವಿಶ್ವದ ಮೂರನೇ ಶ್ರೇಯಾಂಕಿತ ಅಲ್ಕರಾಜ್, 4ನೇ ಶ್ರೇಯಾಂಕದ ಅಲೆಕ್ಸಾಂಡರ್ ಝ್ವೆರೆವ್ ಅಥವಾ 7ನೇ ಶ್ರೇಯಾಂಕದ ಕ್ಯಾಸ್ಪರ್ ರುಡ್ ಅವರನ್ನು ಎದುರಿಸಲಿದ್ದಾರೆ.

ಕೇಜ್ರಿವಾಲ್‌ಗೆ ಇಡಿ ವಿರೋಧ

ದೆಹಲಿ: ಅಬಕಾರಿ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಜಾಮೀನು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಗೆ ಜಾರಿ ನಿರ್ದೇಶನಾಲಯ (ಇ.ಡಿ) ವಿರೋಧ ದಾಖಲಿಸಿದೆ. ಕೇಜ್ರಿವಾಲ್ ಅವರು ಗಂಭೀರ ಆರ್ಥಿಕ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಅದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು ತಮ್ಮ ಬಳಿ ಇವೆ. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ, ಈ ಹಗರಣಕ್ಕೆ ಸಂಬಂಧಿಸಿದ ತನಿಖೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ’ ಎಂದು ಇ.ಡಿ ದೆಹಲಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರಿಗೆ ತಿಳಿಸಿದೆ. ನ್ಯಾಯಾಧೀಶರು ಈ ಕುರಿತ ಅರ್ಜಿಯ ವಿಚಾರಣೆಯನ್ನು ಜೂನ್14ಕ್ಕೆ ಮುಂದೂಡಿದರು.

ಆರ್. ಪ್ರಜ್ಞಾನಂದಗೆ ಮತ್ತೊಂದು ಸೋಲು

ಸ್ಟಾವೆಂಜರ್: ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯ 9ನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಫ್ಯಾಬಿಯಾನೊ ಕರುವಾನಾ ಎದುರು ಸೋಲನು ಭವಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್ಸನ್ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರನ್ನು ಸೋಲಿಸಿದರು. ಈ ವೇಳೆ ಕಾರ್ಲ್ಸನ್ 16 ಪಾಯಿಂಟ್ಸ್ ಸಂಗ್ರಹಿಸಿದ್ದು, ಎರಡನೇ ಸ್ಥಾನದಲ್ಲಿರುವ ನಕಾಮುರಾ (14.5) ಅವರಿಗಿಂತ ಒಂದೂವರೆ ಪಾಯಿಂಟ್ಸ್ ಮುಂದೆಯಿದ್ದಾರೆ. ಟೂರ್ನಿಯಲ್ಲಿ ನಿರಾಶಾದಾಯಕ ಆಟವಾಡಿದ್ದ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ (ಚೀನಾ) ಅವರು ನಕಾಮುರಾ ಅವರಿಗೆ ಸೋಲಿನ ಆಘಾತ ನೀಡಿದರು. ಕರುವಾನಾ ಅವರಿಗೆ ’ಆರ್ಮ್‌ಗೆಡನ್‌ನಲ್ಲಿ ಸೋತರೂ, ಪ್ರಜ್ಞಾನಂದ (13) ಅವರ ಮೂರನೇ ಸ್ಥಾನಕ್ಕೆ ತೊಂದರೆಯಾಗಿಲ್ಲ. ಅಲಿರೇಝಾ (12), ಕರುವಾನಾ (10.5) ಮತ್ತು ಲಿರೆನ್ (6) ಕ್ರಮವಾಗಿ ನಾಲ್ಕರಿಂದ ಆರರವರೆಗಿನ ಸ್ಥಾನ ಪಡೆದಿದ್ದಾರೆ. ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಚೀನಾದ ಟಿಂಗ್ಜಿ ಲೀ ಎದುರು 28 ನಡೆಗಳಲ್ಲಿ ಸೋತಿದ್ದು, 4ನೇ ಸ್ಥಾನಕ್ಕೆ ಕುಸಿಯಬೇಕಾಯಿತು. ಭಾರತದ ಇನ್ನೊರ್ವ ಆಟಗಾರ್ತಿ ಕೋನೇರು ಹಂಪಿ ಅವರು ಅಗ್ರಸ್ಥಾನದಲ್ಲಿರುವ ಚೀನಾ ಆಟಗಾರ್ತಿ ಜು ವೆನ್ಜುನ್ ಅವರಿಗೆ ಮಣಿದರು.

ಮಿಂಚಿದ ನಾಯಕ ಬೆರಿಂಗ್‌ಟನ್ | ಎರಾಸ್ಮಸ್ ಏಕಾಂಗಿ ಹೋರಾಟ ವ್ಯರ್ಥ

ಸ್ಕಾಟ್ಲೆಂಡ್‌ಗೆ ಭರ್ಜರಿ ಗೆಲುವು

ಬ್ರಿಡ್ಜ್‌ಟೌನ್: ನಾಯಕ ಬರಿಂಗ್‌ಟಾನ್, ಮಿಚೆಲ್ ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ವ್ಹೀಲ್ ಅವರ ಮಾರಕ ಬೌಲಿಂಗ್ ದಾಳಿಯ ಪರಿಣಾಮವಾಗಿ ಸ್ಕಾಟ್ಲೆಂಡ್ ತಂಡವು ನಮಿಬಿಯಾ ವಿರುದ್ಧದ ಪಂದ್ಯದಲ್ಲಿ ರೋಚಕ ಗೆಲುವು ಸಾಧಿಸಿದೆ. ಆ ಮೂಲಕ ಸ್ಕಾಟ್ಲೆಂಡ್ ವಿಶ್ವಕಪ್‌ನಲ್ಲಿ ಗೆಲುವಿನ ಖಾತೆ ತೆರೆದಿದ್ದು, ಟೂರ್ನಿಯಲ್ಲಿ ಮೊದಲ ಸೋಲಿನ ನಂತರ ಪುಟಿದೆದ್ದಿದೆ. ಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನಮಿಬಿಯಾ ತಂಡವು 9 ವಿಕೆಟ್ ಕಳೆದುಕೊಂಡು 155 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಸ್ಕಾಟ್ಲೆಂಡ್ ನಾಯಕನ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ 5 ವಿಕೆಟ್ ಕಳೆದುಕೊಂಡು ಸರಳವಾಗಿ ಗುರಿ ತಲುಪಿತು. ಆ ಮೂಲಕ ಪಯಿಂಟ್ಸ್ ಹಾಗೂ ರನ್‌ರೇಟ್‌ನಲ್ಲಿ ವೃದ್ಧಿ ಕಂಡಿದ್ದು, ಅಂಕಪಟ್ಟಿಯಲ್ಲಿ ಚೇತರಿಸಿಕೊಂಡಿದೆ.

ಮಿಂಚಿದ ಎರಾಸ್ಮಸ್: ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನಮಿಬಿಯಾ ತಂಡಕ್ಕೆ ಆರಂಭಿಕ ಆಘಾತ ಉಂಟಾಯಿತು. ಆರಂಭಿಕ ಕೊಟ್ಜೆ ಶೂನ್ಯಕ್ಕೆ ಆಟ ನಿಲ್ಲಿಸಿದರು ಆ ಬಳಿಕ ಬಂದ ಜ್ಯಾನ್ 12 ರನ್ ಗಳಿಸಿ ವಿಕೆಟ್ ನೀಡಿದರು. ಬಳಿಕ ಜತೆಗೂಡಿದ ನಿಕೊ ಹಾಗೂ ಎರಸ್ಮಸ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆದರೆ ಈ ವೇಳೆ ನಿಕೊ 20 ರನ್ ಗಳಿಸಿ ವಿಕೆಟ್

ನೀಡಿದರು. ಈ ಬಳಿಕ ಮಲಾನ್ ಸಹ 2 ರನ್ ಗಳಿಸಿ ಆಟ ನಿಲ್ಲಿಸಿದರು. ಎರಾಸ್ಮಸ್ 31 ಎಸೆತದಲ್ಲಿ 52 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಗ್ರೀನ್ 28 ರನ್ ಗಳಿಸಿ ತಂಡದ ಮೊತ್ತ ಏರಿಸಿದರು. ವೈಸ್ 14 ರನ್ ಗಳಿಸಿದರೆ, ಉಳಿದಂತೆ ಟ್ರಂಪೆಲ್ಮನ್ 1 ಸ್ಮಿತ್ 11 ಬೆರ್ನಾಡ್ 6 ರನ್ ಗಳಿಸಿದರು. ಇನ್ನು ಸ್ಕಾಟ್ಲೆಂಡ್ ಪರ ವ್ಹೀಲ್ 33 ಕ್ಕೆ 3 ವಿಕೆಟ್ ಪಡೆದರೆ, ಬ್ರಾಡ್ಲೀ 16 ರನ್‌ಗೆ 2 ವಿಕೆಟ್ ಪಡೆದಿದ್ದಾರೆ.

ಸ್ಕೋರ್

ನಮಿಬಿಯಾ: 155/9 ಎರಾಸ್ಮಸ್ 52, ಗ್ರೀನ್ 28, ವ್ಹೀಲ್ 33/3
ಸ್ಕಾಟ್ಲೆಂಡ್: 157/5, ಬೆರಿಂಗ್‌ಟನ್ 47★, ಮಿಚೆಲ್ 35, ಎರಾಸ್ಮಸ್ 29/2

ಬೆರಿಂಗ್‌ಟನ್ ನಾಯಕನಾಟ: ಅದನ್ನು ಬೆನ್ನುಹತ್ತಿದ ಸ್ಕಾಟ್ಲೆಂಡ್ ತಂಡಕ್ಕೂ ಆರಂಭಿಕ ಆಘಾತ ಉಂಟಾಯಿತು. ಆರಂಭಿಕ ಮುನ್ಸಿ 7 ರನ್ ಗಳಿಸಿ ವಿಕೆಟ್ ನೀಡಿದರು. ಆದರೆ ಮತ್ತೊಬ್ಬ ಆರಂಭಿಕ ಜೋನ್ಸ್ 26 ರನ್ ಗಳಿಸಿ ಅಡಿಪಾಯ ಹಾಕಿಕೊಟ್ಟರು. ಆ ಬಳಿಕ ಬ್ರಾಂಡೆನ್ ಸಹ 19 ರನ್‌ಗಳ ಕೊಡುಗೆ ನೀಡಿ ಔಟದರು. ಆ ಬಳಿಕ ಮ್ಯಾಥೀವ್ 3 ರನ್ ಗಳಿಸಿ ವಿಕೆಟ್ ನೀಡಿದರು. ಈ ವೇಳೆ ಜತೆಗೂಡಿದ ನಾಯಕ ಬೆರಿಂಗ್‌ಟನ್ ಹಾಗೂ ಮಿಚೆಲ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪಂದ್ಯ ಮುಗಿಯುವ ವರೆಗೂ ಭಾರೀ ಪ್ರದರ್ಶನ ನೀಡಿದ ಈ ಇಬ್ಬರು ಪಂದ್ಯವನ್ನು ತಮ್ಮೆಡೆಗೆ ಕಸಿದುಕೊಂಡರು. ಮಿಚೆಲ್ 35 ರನ್ ಗಳಿಸಿ ವಿಕೆಟ್ ನೀಡಿದರೆ, ನಾಯಕ ಬೆರಿಂಗ್‌ಟನ್ 47 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಕ್ರಿಸ್ 4 ರನ್ ಗಳಿಸಿದರು.

ದಾಖಲೆ ಕುಸಿತದ ಬಳಿಕ ಭಾರಿ ಏರಿಕೆ ಕಂಡ ಸೆನ್ಸೆಕ್ಸ್, ನಿಫ್ಟಿ | ಹೂಡಿಕೆದಾರರು ಖುಷ್

ಸರಕಾರ ರಚನೆಗೆ ಸಿದ್ಧತೆ, ಷೇರುಪೇಟೆ ಚೇತರಿಕೆ

ದೆಹಲಿ: ಲೋಕಸಭಾ ಚುನಾವಣೆ ಫಲಿತಾಂಶದ ದಿನ ತೀವ್ರ ಕುಸಿತ ಕಂಡಿದ್ದ ಭಾರತೀಯ ಷೇರು ಮಾರುಕಟ್ಟೆ ಮತ್ತೆ ಚೇತರಿಕೆ ಕಂಡಿದ್ದು, ಸೆನ್ಸೆಕ್ಸ್, ನಿಫ್ಟಿ ಷೇರು ಬೆಲೆಗಳು ಗಗನಕ್ಕೇರಿವೆ. ಪರಿಣಾಮ ಕೋಟ್ಯಂತರ ರು. ನಷ್ಟ ಅನುಭವಿಸಿದ್ದ ಹೂಡಿಕೆದಾರರಿಗೆ ತಮ್ಮ ಹಣ ವಾಪಸ್ ಪಡೆದುಕೊಳ್ಳಲು ನೆರವಾಗಿದೆ.

ಷೇರು ಮಾರುಕಟ್ಟೆಯಲ್ಲಿ ಶುಕ್ರವಾರ ಗೂಳಿ ಓಟ ನಡೆಸಿದ್ದು, ಬಿಎಸ್‌ಇ ಸೆನ್ಸೆಕ್ಸ್ 1619 ಪಾಯಿಂಟ್ಸ್ ಅಥವಾ 2.16% ಏರಿಕೆಯೊಂದಿಗೆ ದಿನದ ವಹಿವಾಟಿನಲ್ಲಿ 76,693.36 ಅಂಕ ದಾಖಲಿಸಿದೆ. ಹಾಗೇ ನಿಫ್ಟಿಯೂ 468.80 ಅಂಕ ಅಥವಾ 2.05% ಏರಿಕೆಯೊಂದಿಗೆ ದಿನದ ವಹಿವಾಟಿನಲ್ಲಿ 23,290.20 ದಾಖಲಿಸಿದೆ. ಆಟೊಮೊಬೈಲ್, ಐಟಿ, ಪವರ್, ಟೆಲಿಕಾಂ, ಮೆಟಲ್ ಎಲ್ಲಾ ಸೆಕ್ಟರ್‌ಗಳೂ ಲಾಭದಾಯಕವಾಗಿ ಸ್ಪಂದಿಸಿದ್ದು, 2–3% ಏರಿಕೆ ಕಂಡಿದೆ. ಬಿಎಸ್‌ಇ ಪಟ್ಟಿಯಲ್ಲಿರುವ ಕಂಪನಿಗಳ ಮಾರುಕಟ್ಟೆ ಬಂಡವಾಳ 7.68 ಲಕ್ಷ ಕೋಟಿಗೆ ಏರಿಕೆಯಾಗಿದ್ದು ಒಟ್ಟೂ 423.57 ಲಕ್ಷ ಕೋಟಿಗೆ ತಲುಪಿದೆ.

38 ಲಕ್ಷ ಕೋಟಿ ನಷ್ಟ ಕಂಡಿದ್ದ ಹೂಡಿಕೆದಾರರಲ್ಲಿ ಹೊಸವಿಶ್ವಾಸ: ಸುಮಾರು 159 ಕಂಪನಿಗಳ ಷೇರುಗಳ ಬೆಲೆ ಶುಕ್ರವಾರ 52 ವಾರಗಳಲ್ಲೇ ಗರಿಷ್ಟ ಮಟ್ಟ ತಲುಪಿದ್ದು, ಬಿಎಸ್‌ಇ ಎಮ್ ಕ್ಯಾಪ್ ಪ್ರಕಾರ ಹೂಡಿಕೆದಾರರ ಸಂಪತ್ತು 7.54 ಲಕ್ಷ ಕೋಟಿಯಿಂದ 42.43 ಲಕ್ಷ ಕೋಟಿಗೆ ಏರಿಕೆಯಾಗಿದೆ. ಆದಿತ್ಯಾ ಬಿರ್ಲಾ ಫ್ಯಾಷನ್, ಏಜಿಸ್ ಲಾಜಿಸ್ಟಿಕ್ಸ, ಅವಂತಿ ಫೀಡ್ಸ್ ಬಿಕಾಜಿ ಫುಡ್ಸ್ ಸೇರಿ ಹಲವು ಕಂಪನಿಗಳ ಷೇರುಗಳ ಬೆಲೆ ಒಂದು ವರ್ಷದಲ್ಲೇ ದಾಖಲೆ ಏರಿಕೆ ಕಂಡಿದೆ. ಹಾಗೇ 29 ಕಂಪನಿಗಳು ವರ್ಷದಲ್ಲೇ ಅತಿ ಕಡಿಮೆ ಬೆಲೆಯನ್ನೂ ದಾಖಲಿಸಿದೆ. ಮೋದಿ ಸರಕಾರ ರಚನೆಗೆ ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ ಷೇರು ಮಾರುಕಟ್ಟೆ ಚೇತರಿಸಿಕೊಂಡಿದ್ದು, 38 ಲಕ್ಷ ಕೋಟಿ ನಷ್ಟ ಕಂಡಿದ್ದ ಹೂಡಿಕೆದಾರರಲ್ಲಿ ಹೊಸವಿಶ್ವಾಸ ಮೂಡಿದಂತಿದೆ.

ನಾರಾ ಭುವನೇಶ್ವರಿ ಆಸ್ತಿಯಲ್ಲಿ ಭಾರೀ ಏರಿಕೆ

ದೆಹಲಿ: ವಿಧಾನಸಭೆ, ಲೋಕಸಭೆ ಚುನಾವಣೆ ಗೆಲುವಿನ ಸಂಭ್ರಮದಲ್ಲಿರುವ ಚಂದ್ರಬಾಬು ನಾಯ್ಡು ಕುಟುಂಬ, ಐದು ದಿನದಲ್ಲಿ ಕೋಟಿ ಲಾಭ ಗಳಿಸಿದ್ದಾರೆ.

ಚಂದ್ರಬಾಬು ನಾಯ್ಡು ಸ್ಥಾಪನೆಯ ಹೆರಿಟೇಜ್ ಫುಡ್ ಷೇರುಗಳ ಬೆಲೆ ಭಾರಿ ಏರಿಕೆ ಕಂಡಿದ್ದು, ಕಂಪನಿಯ ಪ್ರಮೋಟರ್ ನಾಯ್ಡು ಪತ್ನಿ ನಾರಾ ಭುವನೇಶ್ವರಿ ಅವರ ಆಸ್ತಿ ಕಳೆದ ಐದು ದಿನಗಳಲ್ಲಿ 579 ಕೋಟಿ ರೂಗೆ ಏರಿಕೆಯಾಗಿದೆ.



ಜೂನ್ 3, ಫಲಿತಾಂಶ ಘೋಷಣೆಗೂ ಒಂದು ದಿನ ಮೊದಲು 424 ರುಪಾಯಿಗೆ ಮಾರಾಟವಾಗುತ್ತಿದ್ದ ಹೆರಿಟೇಜ್ ಫುಡ್ ಷೇರುಗಳ ಬೆಲೆ ಶುಕ್ರವಾರ 661.25 ರೂಗೆ ಏರಿಕೆಯಾಗಿದೆ. ಷೇರುಗಳ ಬೆಲೆಯಲ್ಲಿ ಸುಮಾರು 55 % ಏರಿಕೆ ಕಂಡಿದೆ. ಕಂಪನಿಯ ಅಗ್ರ ಷೇರುದಾರರಾದ ನಾರಾ ಭುವನೇಶ್ವರಿ ಬಿಎಸ್‌ಇ ಅಂಕಿ ಅಂಶಗಳ ಪ್ರಕಾರ 2,26,11,525 ಷೇರುಗಳನ್ನು ಹೊಂದಿದ್ದಾರೆ. ಚಂದ್ರಬಾಬು ನಾಯ್ಡು ಪುತ್ರ ನಾರಾ ಲೋಕೇಶ್ ಕಂಪನಿಯ 1,00,37,453 ಷೇರುಗಳನ್ನು ಹೊಂದಿದ್ದು, ಷೇರು ಬೆಲೆ ಏರಿಕೆ ಬಳಿಕ ನಿವ್ವಳ ಮೌಲ್ಯವು 237 ಕೋಟಿ ರೂಗೆ ಏರಿಕೆಯಾಗಿದೆ. 1992ರಲ್ಲಿ ಚಂದ್ರಬಾಬು ನಾಯ್ಡು ಸ್ಥಾಪಿಸಿದ ಹೆರಿಟೇಜ್ ಫುಡ್ಸ್ ಕಂಪನಿ ಅತಿ ವೇಗದಲ್ಲಿ ಬೆಳೆಯುತ್ತಿರುವ ಕಂಪನಿಗಳಲ್ಲಿ ಇದೂ ಒಂದಾಗಿದೆ. ಡೈರಿ ಉತ್ಪನ್ನಗಳು ಹಾಗೂ ನವೀಕರಿಸಬಹುದಾದ ಎನರ್ಜಿ ಎಂಬ ಎರಡು ವಿಭಾಗಗಳನ್ನು ಈ ಕಂಪನಿ ಹೊಂದಿದ್ದು ಹೆರಿಟೇಜ್ ಹಾಲು ಮತ್ತು ಡೈರಿ ಉತ್ಪನ್ನಗಳು, ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು, ದೆಹಲಿ, ರಾಜಸ್ಥಾನ, ಉತ್ತರಾಖಂಡ ಸೇರಿ ಹಲವೆಡೆ ಮಾರುಕಟ್ಟೆ ಹೊಂದಿದೆ.

ಇರ್ಫಾನ್ ಸಹೋದರ ರಿಜ್ವಾನ್‌ಗೆ ಕಠಿಣ ಶಿಕ್ಷೆ

ದೆಹಲಿ: ಮಹಿಳೆಯೊಬ್ಬರ ಮನೆಗೆ 2022ರಲ್ಲಿ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಶಾಸಕ ಇರ್ಫಾನ್ ಸೋಲಂಕಿ, ಅವರ ಸಹೋದರ ರಿಜ್ವಾನ್ ಸೋಲಂಕಿ ಮತ್ತು ಇತರ ಮೂವರಿಗೆ ಕಾನ್‌ಪುರ ನಗರದ ಶಾಸಕ–ಸಂಸದರ ನ್ಯಾಯಾಲಯವು ಏಳು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಅದರ ಪರಿಣಾಮವಾಗಿ, ಕಾನ್‌ಪುರ ಜಿಲ್ಲೆಯ ಸಿಸಮಾವುದಿಂದ ನಾಲ್ಕು ಬಾರಿ ಶಾಸಕರಾಗಿದ್ದ ಇರ್ಫಾನ್ ಸೋಲಂಕಿ ಉತ್ತರ ಪ್ರದೇಶ ವಿಧಾನಸಭೆಯಿಂದ ಅನರ್ಹ ಗೊಂಡಿದ್ದಾರೆ. ಪ್ರಸ್ತುತ ಮಹಾರಾಜ್‌ಗಂಜ್ ಜಿಲ್ಲಾ ಜೈಲಿನಲ್ಲಿರುವ ಸೋಲಂಕಿ ಅವರು 2022ರ ವಿಧಾನಸಭಾ ಚುನಾವಣೆಯಲ್ಲಿ ಎಸ್ಪಿ ಟಿಕೆಟ್‌ನಲ್ಲಿ ಗೆದ್ದಿದ್ದಾರೆ.

ಇರ್ಫಾನ್ ಸೋಲಂಕಿ, ಅವರ ಸಹೋದರ ರಿಜ್ವಾನ್ ಮತ್ತು ಇತರ ಮೂವರು – ಶೌಕತ್, ಷರೀಫ್ ಮತ್ತು ಇಸ್ರೇಲ್ ಅತ್ತಾವಾಲಾ ಅವರಿಗೆ ಜೂನ್ 3, ನವೆಂಬರ್ 2022 ರಲ್ಲಿ ಜಜ್ಮೌ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಶಿಕ್ಷೆಯಾಗಿದೆ.

ನ್ಯಾಯಾಧೀಶ ಸತ್ಯೇಂದ್ರ ನಾಥ್ ತ್ರಿಪಾಠಿ ಅವರು ಎಲ್ಲಾ ಆರೋಪಿಗಳಿಗೆ ಬೆಂಕಿ ಹಚ್ಚಿದ, ಸ್ವಯಂಪ್ರೇರಣೆಯಿಂದ ಗಾಯಗೊಳಿಸಿದ ಮತ್ತು ಇತರರನ್ನು ಪ್ರಚೋದಿಸಿದ ಆರೋಪದಲ್ಲಿ ತಪ್ಪಿತಸ್ಥರೆಂದು ತೀರ್ಪು ನೀಡಿದರು. ಅದಲ್ಲದೆ, ನ್ಯಾಯಾಲಯವು ಪ್ರತಿ ಅಪರಾಧಿಗೆ 30,500 ರು. ದಂಡ ಸಹ ವಿಧಿಸಿದೆ.

ಮಳೆಯಲ್ಲೇ ತಪಸ್ಸಿಗೆ ಕುಳಿತ ವೃದ್ಧ | ಜನಜೀವನ ಅಸ್ತವ್ಯಸ್ತ | ಬೆಳೆಗಳಿಗೆ ಹಾನಿ

ರಾಜ್ಯದಲ್ಲಿ ಮುಂದುವರಿದ ವರುಣನ ಅಬ್ಬರ

ಬೆಂಗಳೂರು: ರಾಜ್ಯದ ಹಲವೆಡೆ ಮಳೆಯು ಅಬ್ಬರಿಸುತ್ತಿದ್ದು, ಧಾರವಾಡದಲ್ಲಿ ವೃದ್ಧರೊಬ್ಬರು ಮಳೆಯಲ್ಲೇ ತಪಸ್ಸಿಗೆ ಕುಳಿತ ವಿಡಿಯೊವೊಂದು ವೈರಲ್ ಆಗಿದೆ. ಧಾರವಾಡ, ಬಳ್ಳಾರಿ, ದಾವಣಗೆರೆ, ಯಾದಗಿರಿ, ಬೀದರ್, ವಿಜಯಪುರ, ಮೈಸೂರು ಜಿಲ್ಲೆಗಳಲ್ಲಿ ಧಾರಕಾರ ಮಳೆ ಮುಂದುವರಿದಿದೆ.

ತಪಸ್ಸಿಗೆ ಕುಳಿತ ವೃದ್ಧ: ಹಿರಿಯ ಜೀವಿಯೊಬ್ಬರು ಮಳೆ ಬರುವಾಗಲೇ ತಪಸ್ಸಿಗೆ ಕುಳಿತ ಘಟನೆ ಧಾರವಾಡದ ಸಿಬಿಟಿ ಬಸ್ ನಿಲ್ದಾಣದ ಎದುರು ನಡೆದಿದೆ. ಜೋರಾಗಿ ಬರುತ್ತಿದ್ದ ಮಳೆಯಲ್ಲಿ ನಡು ರಸ್ತೆಯಲ್ಲಿಯೇ ಕಣ್ಣು ಮುಚ್ಚಿ ಕುಳಿತ ವೃದ್ಧ, ಒಂಚೂರು ಅಲುಗಾಡದೆ ತಪಸ್ಸು ಮಾಡಿದ್ದಾರೆ. ಇನ್ನೂ ಈ ದೃಶ್ಯವನ್ನು ಓರ್ವ ಯುವಕನ ಮೊಬೈಲ್‌ನಲ್ಲಿ ಸೆರೆಯಾಗಿದ್ದು, ಸದ್ಯ ಸಾಮಾಜಿಕ ಜಾಲತಾಣದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗುತ್ತಿದೆ.

ವಿಜಯಪುರದಲ್ಲೂ ಅವಾಂತರ ಸೃಷ್ಟಿಸಿದ ಮಳೆರಾಯ: ವಿಜಯಪುರ ನಗರದ ಮನಗೂಳಿ ಅಗಸಿ ಬಳಿ ಮಳೆ ನೀರಲ್ಲಿ ಬೈಕ್ ಕೊಚ್ಚಿ ಹೋದ ಘಟನೆ ನಡೆದಿದೆ. ಕೃಷ್ಣಾ ನದಿ ಉಗಮ ಸ್ಥಾನ ಮಹಾಬಲೇಶ್ವರದಲ್ಲಿಯೂ ಭಾರೀ ಮಳೆಯಾಗಿದ್ದು, ಕೃಷ್ಣಾ ನದಿಗೆ, ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ಈ ವರ್ಷದ ಮೊದಲ ಒಳಹರಿವು ಇದಾಗಿದ್ದು 1,768 ಕ್ಯೂಸೆಕ್ ದಾಖಲಾಗಿದೆ. ಮಳೆಯಿಂದ ಡೋಣಿ ನದಿಯೂ ಉಕ್ಕಿ ಹರಿಯಲಾರಂಭಿಸಿದೆ. ಪರಿಣಾಮ ಸಾರವಾಡ ಗ್ರಾಮದ ಬಳಿ ಜಮೀನಿಗೆ ನದಿ ನೀರು ನುಗ್ಗಿದೆ.

ಬೀದರ್‌ನಲ್ಲಿ ಧಾರಾಕಾರ ಮಳೆ: ಬೀದರ್ ನಗರ ಸೇರಿದಂತೆ ಸುತ್ತಮುತ್ತಲಿನ ಭಾಗಗಳಲ್ಲಿ ಶುಕ್ರವಾರ ಧಾರಾಕಾರ ಮಳೆಯಾಯಿತು. ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಗುಡುಗು ಸಹಿತ ಆರಂಭಗೊಂಡ ಮಳೆ 4.30ರ ವರೆಗೆ ಧಾರಾಕಾರವಾಗಿ ಸುರಿಯಿತು. ಆನಂತರ ತುಂತುರು ಹನಿಗಳು ಉದುರಿದವು. ಧಾರಾಕಾರ ಮಳೆಗೆ ನಗರದ ಪ್ರಮುಖ ರಸ್ತೆಗಳಲ್ಲಿ ನೀರು ಸಂಗ್ರಹಗೊಂಡಿದ್ದರಿಂದ ವಾಹನ ಸಂಚಾರ ನಿಧಾನಗೊಂಡಿತು. ಸತತ ಮೂರನೇ ದಿನವೂ ಮಳೆಯಾಗಿರುವುದರಿಂದ ವಾತಾವರಣ ಸಂಪೂರ್ಣ ತಂಪಾಗಿದೆ.

ದಾವಣಗೆರೆಯಲ್ಲಿ ಬಸ್ ನಿಲ್ದಾಣ ಜಲಾವೃತ: ದಾವಣಗೆರೆಯ ಹೊನ್ನಾಳಿಯಲ್ಲಿ ಸುರಿದ ಮಳೆಯಿಂದ ಶುಕ್ರವಾರ ಖಾಸಗಿ ಬಸ್ ನಿಲ್ದಾಣ ಜಲಾವೃತಗೊಂಡಿತ್ತು. ಕೆರೆಯಂತಾದ ನಿಲ್ದಾಣದಲ್ಲಿ ಮೊಣಕಾಲಿನ ವರೆಗೆ ನಿಂತ ನೀರು ಪ್ರಯಾಣಿಕರು ಪರದಾಡಬೇಕಾಯಿತು. ಮಳೆ ನೀರು ಸರಾಗವಾಗಿ ಹೋಗಲು ಸರಿಯಾದ ರೀತಿ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಈ ಅವ್ಯಸ್ಥೆ ಎಂದು ಕಿಡಿಕಾರಿದರು. ದಾವಣಗೆರೆ, ಮಾಯಕೊಂಡ, ದಾವಣಗೆರೆ ಕುವೆಂಪು ರಸ್ತೆ, ಕೆಬಿ ಬಡಾವಣೆ ರಸ್ತೆಗಳು ಸಂಪೂರ್ಣ ಜಲಾವೃತವಾಗಿದ್ದವು.

ಮನೆಗೆ ಕೊಳಚೆನೀರು ನುಗ್ಗಿ ಅವಾಂತರ: ಮೈಸೂರು ಜಿಲ್ಲೆಯ ಸುರಿದ ಧಾರಾಕಾರ ಮಳೆಯಿಂದಾಗಿ ನಂಜನಗೂಡು ನಗರದ ಅಶೋಕಪುರಂ ಬಡಾವಣೆಯ 27ನೇ ವಾರ್ಡ್‌ನಲ್ಲಿರುವ 20ಕ್ಕೂ ಹೆಚ್ಚು ಮನೆಗಳಿಗೆ ಚರಂಡಿಯ ಕೊಳಚೆನೀರು ನುಗ್ಗಿದೆ. ಮಳೆ ಸೃಷ್ಟಿಸಿದ ಅವಾಂತರಕ್ಕೆ ನಿವಾಸಿಗಳು ತೀವ್ರ ತೊಂದರೆ ಅನುಭವಿಸಿದರು. ಬಡಾವಣೆಯಲ್ಲಿ ಚರಂಡಿಯ ವ್ಯವಸ್ಥೆ ಸರಿಯಿಲ್ಲದ ಕಾರಣ ಮಳೆಯ ನೀರೆಲ್ಲ ಮನೆಗಳಿಗೆ ನುಗ್ಗಿದ್ದು, ಇದರಿಂದ ನಿವಾಸಿಗಳು ತುಂಬಾ ಪರದಾಡುವಂತಾಗಿದೆ.

ವಿಜಯಪುರ ಜಿಲ್ಲೆಯ ಸಾರವಾಡ ಗ್ರಾಮದ ಬಳಿ ಜಮೀನಿಗೆ ನುಗ್ಗಿರುವ ನೀರು.



ಹಿರಿಯ ಜೀವಿಯೊಬ್ಬರು ಮಳೆ ಬರುವಾಗಲೇ ತಪಸ್ಸಿಗೆ ಕುಳಿತ ಘಟನೆ ಧಾರವಾಡದ ಸಿಬಿಟಿ ಬಸ್ ನಿಲ್ದಾಣದ ಎದುರು ನಡೆದಿದೆ.

ಮನೆಗಳಿಗೆ ನುಗ್ಗಿದ ನೀರು

ವಿಜಯನಗರದಲ್ಲೂ ಧಾರಾಕಾರ ಮಳೆಯಾಗಿದೆ. ಮಳೆಯಿಂದಾಗಿ ಕೆಲ ಕಾಲ ವಾಹನ ಸವಾರರು ಪರದಾಟಬೇಕಾಯಿತು. ಧಾರವಾಡದ ನಗರದ ಕೆಎಂಎಫ್ ಬಳಿಯ ರಸ್ತೆಯ ಮೇಲೆ ಮೊಣಕಾಲುದ್ದ ನೀರು ಬಂದ ಪರಿಣಾಮ ಸವಾರರು ಬೈಕ್ ತಳ್ಳಿಕೊಂಡು ಹೋದರು. ಇತ್ತ ಗಣಿನಾಡು ಬಳ್ಳಾರಿಯಲ್ಲೂ ವರುಣನ ಆರ್ಭಟ ಜೋರಾಗಿತ್ತು. ಬಿಸಿಲಿನ ತಾಪದಿಂದ ಬೇಸೆತ್ತಿದ್ದ ಜನರಿಗೆ ಮಳೆಯು ಸಂತಸವನ್ನುಂಟು ಮಾಡಿತ್ತು. ಮುಂಗಾರು ಬಿತ್ತನೆಯ ನಿರೀಕ್ಷೆಯಲ್ಲಿರುವ ರೈತರ ಮೊಗದಲ್ಲಿ ಹರ್ಷ ತಂದಿತ್ತು. ಮಳೆಯಿಂದಾಗಿ ಬಳ್ಳಾರಿ ನಗರದ ಕೆಲ ರಸ್ತೆಗಳು ಜಲಾವೃತ್ತವಾಗಿದ್ದವು.

ಯಾದಗಿರಿಯಲ್ಲಿ ಜಮೀನಿಗೆ ನುಗ್ಗಿದ ನೀರು

ಶುಕ್ರವಾರ ಸಂಜೆ ಯಾದಗಿರಿ ಜಿಲ್ಲೆಯಲ್ಲಿ ಭಾರೀ ಮಳೆಯಾಗಿದೆ. ವಡಗೇರಾ ತಾಲೂಕಿನ ಭಾಗದಲ್ಲಿ ಬಿರುಗಾಳಿ ಸಹಿತ ಭಾರೀ ಮಳೆಗೆ ಯಕ್ಷಿಂತಿ ಗ್ರಾಮ ಜಮೀನಿಗೆ ನೀರು ನುಗ್ಗಿದೆ. ಜಮೀನಿಗೆ ತೆರಳುವ ರಸ್ತೆಯು ಸಂಪೂರ್ಣ ಜಲಾವೃತಗೊಂಡಿತ್ತು. ಇತ್ತ ಜಮೀನಿಗೆ ತೆರಳಿದ್ದ ಕಾರ್ಮಿಕರಿಗೆ ವಾಪಸ್ ಮನೆಗೆ ತೆರಳಲು ಸಂಕಷ್ಟ ಎದುರಿಸಬೇಕಾಯಿತು.

ಕರಾವಳಿಯಲ್ಲಿ ವರುಣಾರ್ಭಟ

ಉತ್ತರ ಕನ್ನಡದ ಕಾರವಾರ, ಅಂಕೋಲಾ, ಕುಮಟಾ ಸೇರಿ ಜಿಲ್ಲೆಯಾದ್ಯಂತ ಧಾರಾಕಾರ ಮಳೆಯಾಗಿದೆ. ಅಂಕೋಲಾದಲ್ಲಿ ಪಟ್ಟಣದ ರಸ್ತೆಯಲ್ಲಿ ಕಣ್ಣುಹಾರಿಯಿಸಿದರೆ ಬರೀ ನೀರೆ ಕಾಣಿಸುತ್ತಿತ್ತು. ಭಾರೀ ಮಳೆಯಿಂದಾಗಿ ರಸ್ತೆ ಬದಿ ವ್ಯಾಪಾರಸ್ಥರು ಪರದಾಡಬೇಕಾಯಿತು. ಶುಕ್ರವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆಗೆ ಅಂಕೋಲಾದ ಬೋಳೆ ನಾಡವ ರಕೇರಿ ಅಂಗನವಾಡಿ ಕೇಂದ್ರಕ್ಕೆ ನೀರು ನುಗ್ಗಿತ್ತು. ಕಾಲುವೆ ಸೇರಿದಂತೆ ಅಂಗನವಾಡಿ ಕೇಂದ್ರದ ಅಂಗಳ ದಲ್ಲಿ ನೀರು ಜಮಾವಣೆಯಾ ಗಿತ್ತು. ನೀರು ಹರಿಯ ದೇ ಅಂಗನವಾಡಿ ಕೇಂದ್ರದಲ್ಲಿ ತುಂಬಿಕೊಂಡಿತ್ತು. ಅದೃಷ್ಟವಶಾತ್ ಮಕ್ಕಳು ಮನೆಗೆ ಹೋಗಿದ್ದರಿಂದ ಅನಾಹುತ ತಪ್ಪಿತ್ತು. ಇತ್ತ ಅಂಗನವಾಡಿ ಕೇಂದ್ರಕ್ಕೆ ನೀರು ನುಗ್ಗಿದ ಪರಿಣಾಮ ಕಿರಾಣಿ ಸೇರಿ ವಸ್ತುಗಳನ್ನು ರಕ್ಷಿಸಿಕೊಳ್ಳಲು ಸಿಬ್ಬಂದಿ ಪರದಾಡಬೇಕಾಯಿತು.

ನಗರದಲ್ಲಿ ನಿಷೇಧದ ನಡುವೆಯೂ ಪ್ಲಾಸ್ಟಿಕ್ ಬಳಕೆ ಪ್ರಯಾಣ ಹೆಚ್ಚಳ

ಬೆಂಗಳೂರು: ನಗರದಲ್ಲಿ ನಿಷೇಧದ ನಡುವೆಯೂ ಪ್ಲಾಸ್ಟಿಕ್ ಕವರ್‌ಗಳ ಬಳಕೆ ಅವ್ಯಾಹತವಾಗಿ ನಡೆಯುತ್ತಿದ್ದು, ದಿನದಿಂದ ದಿನಕ್ಕೆ ದಿನಕ್ಕೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆ ಪ್ರಯಾಣ ಹೆಚ್ಚಾಗುತ್ತಿರುವುದು ಪರಿಸರ ವಾದಿಗಳ ವಿರೋಧಕ್ಕೆ ಕಾರಣವಾಗಿದೆ.

ಸರಕಾರವು ಯಾವುದೇ ರೀತಿಯ ಪ್ಲಾಸ್ಟಿಕ್ ಕವರ್‌ಗಳನ್ನು ಮಾರಾಟ ಮಾಡಬಾರದೆಂದು ಆದೇಶಿಸಿದ್ದು, ಈ ಆದೇಶವನ್ನು ಪಾಲಿಸಬೇಕಾದ ಪಾಲಿಕೆಯ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ. ನಗರದ ರಸ್ತೆಗಳು ಸೇರಿದಂತೆ ಖಾಲಿ ನಿವೇಶನಗಳಲ್ಲಿ ಪ್ಲಾಸ್ಟಿಕ್ ಕವರ್‌ಗಳನ್ನು ತಂದು ಸುರಿಯುವವರ ಸಂಖ್ಯೆ ಹೆಚ್ಚಾಗಿದ್ದು, ಕಂಡ ಕಂಡ ಕಡೆಯಲ್ಲಿ ಪ್ಲಾಸ್ಟಿಕ್‌ಗಳ ತ್ಯಾಜ್ಯವೇ ಕಂಡು ಬರುತ್ತಿದೆ.

ಪಾಲಿಕೆಯ ಅಧಿಕಾರಿಗಳು ಈ ಕುರಿತು ಮಾತನಾಡಿ, ಪ್ಲಾಸ್ಟಿಕ್ ನಿಷೇಧವನ್ನು ಯಾರು ಗಂಭೀರವಾಗಿ ಪರಿಗಣಿಸಿಲ್ಲ. ನಿಯಮವನ್ನು ಜಾರಿಗೊಳಿಸಬೇಕಿರುವ ಪಾಲಿಕೆಯೇ ಗಂಭೀರವಾಗಿ ಪರಿಗಣಿಸುತ್ತಿಲ್ಲ . ಪ್ಲಾಸ್ಟಿಕ್ ಉತ್ಪಾದನೆ ಮಾಡುತ್ತಿರುವ ಕಂಪನಿಗಳು ತಮ್ಮ ಉತ್ಪನ್ನಗಳಿಂದ ಉತ್ಪತ್ತಿಯಾಗುವ ತ್ಯಾಜ್ಯಕ್ಕೆ ತಾವೇ ಜವಾಬ್ದಾರರಾಗಿರಬೇಕು. ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಹೇಳಿದರು.

ಇದಲ್ಲದೆ, ಪ್ಲಾಸ್ಟಿಕ್ ಬಳಕೆ ತಮಗೆ ಮತ್ತು ಪರಿಸರಕ್ಕೆ ಹಾನಿಕಾರಕ ಎಂಬುದನ್ನು ಜನರೂ ಕೂಡ ಅರಿತುಕೊಳ್ಳಬೇಕು. ಪರಿಸರ ಸ್ನೇಹಿ ಪರ್ಯಾಯಗಳಿಗೆ ಬದಲಾಗಬೇಕು. ಆದರೆ ಜನರು ಶಾಪಿಂಗ್ ಮಾಡುವಾಗ ಪ್ಲಾಸ್ಟಿಕ್ ಚೀಲಗಳಿಗೆ ಬೇಡಿಕೆ ಇಡುವುದನ್ನು ನಾವು ನೋಡುತ್ತಿದ್ದೇವೆ ಎಂದು ತಿಳಿಸಿದರು.

ಮೊದಲ ಹಂತಕ್ಕೆ ಮರಳಿದೆ

ಸ್ವಚ್ಛ ಇಕೋ ಸೊಲ್ಯೂಷನ್ಸ್ ಸಹ ಸಂಸ್ಥಾಪಕ ರಾಜೇಶ್ ಮಾತನಾಡಿ, ಬೆಂಗಳೂರಿನಲ್ಲಿ ಪ್ಲಾಸ್ಟಿಕ್ ನಿಷೇಧ ಮೊದಲ ಹಂತಕ್ಕೆ ಮರಳಿದೆ. 2016 ರಲ್ಲಿ, ಬಿಬಿಎಂಪಿ ಪ್ಲಾಸ್ಟಿಕ್ ನಿಷೇಧಿಸಿತ್ತು. ಪ್ಲಾಸ್ಟಿಕ್ ಸಂಗ್ರಹಿಸುವ ಮತ್ತು ಮಾರಾಟ ಮಾಡುವ ವ್ಯಾಪಾರಿಗಳು ಮತ್ತು ವಾಣಿಜ್ಯ ಮತ್ತು ದೇಶೀಯ ಬಳಕೆದಾರರಿಗೆ ದಂಡ ವಿಧಿಸುತ್ತಿತ್ತು. ನಿಯಮ ಜಾರಿಗೊಳಿಸಲು ಮಾರ್ಷಲ್‌ಗಳನ್ನೂ ನೇಮಿಸಿತ್ತು. ಆದರೂ ಸಾಂಕ್ರಾಮಿಕ ರೋಗ ಸಮಯದಲ್ಲಿ ವೈರಸ್ ಹರಡುವುದನ್ನು ತಡೆಯಲು ಏಕ-ಬಳಕೆಯ ಪ್ಲಾಸ್ಟಿಕ್‌ಗಳ ಬಳಕೆಗೆ ಅನುಮತಿ ನೀಡಿತ್ತು. 2022 ರಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಏಕ-ಬಳಕೆಯ ಪ್ಲಾಸ್ಟಿಕ್‌ಗಳನ್ನು ನಿಷೇಧಿಸುವಂತೆ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಿತ್ತು. ಇದನ್ನು ಜಾರಿಗೊಳಿಸುವ ಮತ್ತು ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಳ್ಳುವುದು ಸೇರಿದಂತೆ ಕೈಗೊಂಡ ಕ್ರಮಗಳನ್ನು ಸಿಪಿಸಿಬಿ ಡ್ಯಾಶ್‌ಬೋರ್ಡ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಇದರ ಜವಾಬ್ದಾರಿ ಬಿಬಿಎಂಪಿ ಮೇಲಿದೆ. ಆದರೂ ಯಾವುದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದ ಹಿನ್ನೆಲೆ ನಿಷೇಧಿತ ಪ್ಲಾಸ್ಟಿಕ್‌ಗಳು ಎಲ್ಲೆಂದರಲ್ಲಿ ಲಭ್ಯವಿದ್ದು, ಜನರೂ ಕೂಡ ನಿಷೇಧವಿಲ್ಲ ಎಂಬಂತೆ ಬಳಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ತವ್ಯಲೋಪ: ಬಿಇಒಗೆ ದೂರು



ಬಂಟ್ವಾಳ: ದಡ್ಡಲಕಾಡು ಸರಕಾರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಶಿಕ್ಷಕರೊಬ್ಬರು ವಿದ್ಯಾರ್ಥಿಗಳಿಗೆ ದಂಡನೆ ಹಾಗೂ ಸಹಶಿಕ್ಷಕರಿಗೆ ಮಾನಸಿಕ ಕಿರುಕುಳ ನೀಡುವ ಮೂಲಕ ಕರ್ತವ್ಯಲೋಪ ಎಸಗಿದ್ದಾರೆ ಎಂದು ಆರೋಪಿಸಿ ಶಾಲಾ ಎಸ್ಡಿಎಂಸಿಯು ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿದೆ.

ಶಾಲೆಯಲ್ಲಿ ಕಳೆದ 2 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕ ರಮಾನಂದ ಅವರು ಹಲವಾರು ಸಂಘ ಸಂಸ್ಥೆಗಳಲ್ಲಿ ತೊಡಗಿಕೊಂಡು ಶಾಲೆಯಲ್ಲಿರುವ ಬದಲು ಅಲ್ಲೇ ಕಾರ್ಯಪ್ರವೃತ್ತರಾಗಿ ರುತ್ತಾರೆ. ಜತೆಗೆ ದಾಖಲೆಗಳನ್ನು ಸೃಷ್ಟಿಸಿ ಪ್ರಶಸ್ತಿಗಾಗಿ ಅದರ ಹಿಂದೆ ಕಾರ್ಯೋನ್ಮುಖ ರಾಗಿ ದ್ದಾರೆ. ವಿದ್ಯಾರ್ಥಿಗಳಿಗೆ ಕೆನ್ನೆಗೆ ಬಡಿಯುವುದು, ಅವಾಚ್ಯ ಶಬ್ದಗಳ ನಿಂದನೆ, ಜಾತಿ ನಿಂದನೆ, ಸಹಶಿಕ್ಷಕರಿಗೆ ತಪ್ಪು ಮಾಡದೇ ಇದ್ದರೂ ಆರೋಪ ಹೊರಿಸಿ ಕೀಳು ಮಟ್ಟದ ಶಬ್ದಗಳಿಂದ ಬೈಯ್ಯುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಅವರ ಕರ್ತವ್ಯಲೋಪದ ಕುರಿತು ಶಿಕ್ಷಕಿಯೊಬ್ಬರು ಶಾಲಾ ದತ್ತು ಸಂಸ್ಥೆ ಶ್ರೀದುರ್ಗಾ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷರಿಗೂ ದೂರು ನೀಡಿದ್ದು, ಕರ್ತವ್ಯಲೋಪ ಎಸಗಿದ ಶಿಕ್ಷಕರನ್ನು ವರ್ಗಾವಣೆ ಮಾಡುವಂತೆ ಬಿಇಒ ಅವರಲ್ಲಿ ಒತ್ತಾಯಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮಕ್ಕಳನ್ನು ಹರಿಯುವ ಹಳ್ಳ ದಾಟಿಸಿದ ಪೋಷಕರು

ಬೆಳಗಾವಿ: ರಾಮದುರ್ಗ ತಾಲೂಕಿನಲ್ಲಿ ತುಂಬಿ ಹರಿಯುತ್ತಿರುವ ಹಳ್ಳದಲ್ಲಿ ಪಾಲಕರು ಮಕ್ಕಳನ್ನು ಜೀವಭಯದಲ್ಲೇ ದಾಟಿಸಿದ ಘಟನೆ ನಡೆದಿದೆ.

ಗ್ರಾಮದಿಂದ ಮಕ್ಕಳು ಉಡಚಮ್ಮನಗರ ಸರಕಾರಿ ಶಾಲೆಗೆ ಹೋಗುತ್ತಾರೆ. ಹಳ್ಳದಲ್ಲಿ ಹರಿಯುವ ನೀರು ರಭಸವಾದರೆ, ಪೋಷಕರ ಜತೆಗೆ ಮಕ್ಕಳು ಕೊಚ್ಚಿಕೊಂಡು ಹೋಗುವ ಭೀತಿ ಇದೆ. ಲಕ್ಷ್ಮಿ ನಗರದಿಂದ ನಿತ್ಯ 24ಕ್ಕೂ ಅಧಿಕ ಮಕ್ಕಳು ಹಳ್ಳ ದಾಟಿಯೇ ಶಾಲೆಗೆ ಹೋಗಬೇಕಾದ ಅನಿವಾರ್ಯತೆ ಇದೆ. ಉಡಚಮ್ಮನಗರ ಹಾಗೂ ಲಕ್ಷ್ಮಿ ನಗರದ ಮಾರ್ಗ ಮಧ್ಯೆ ಸತ್ಯಮ್ಮನ ಹಳ್ಳ ಇದೆ. ಪ್ರತಿ ಮುಂಗಾರು ಸಮಯದಲ್ಲಿ ಕೃಷಿ ಚಟುವಟಿಕೆ ಬಿಟ್ಟು ಮಕ್ಕಳನ್ನು ದಾಟಿಸಲು ಪೋಷಕರು ಹರಸಾಹಸ ಪಡುವ ಸ್ಥಿತಿ ನಿರ್ಮಾಣವಾಗುತ್ತದೆ.

ಕೋಟ್ಯಂತರ ಮೌಲ್ಯದ ಚಿನ್ನ ಜಪ್ತಿ

ಬೆಂಗಳೂರು: ವಿದೇಶದಿಂದ ಅಕ್ರಮವಾಗಿ ಸಾಗಿಸು ತ್ತಿದ್ದ 4.77 ಕೋಟಿ ರು. ಮೌಲ್ಯದ ಚಿನ್ನವನ್ನು ದೇವನಹಳ್ಳಿ ಬಳಿ ಇರುವ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಜಪ್ತಿ ಮಾಡಿದ ಬೆನ್ನಲ್ಲೇ 6.29 ಕೋಟಿ ಮೌಲ್ಯದ ಚಿನ್ನವನ್ನು ಏರ್ಪೋರ್ಟ್ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಬ್ಯಾಂಕಾಕ್‌ನಿಂದ ಇಬ್ಬರು ಮಹಿಳೆಯರು ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. ಅದರಲ್ಲಿ ನಾಜಿ ಲಿಟಿ ಎಂಬುವವರಿಂದ 2 ಕೆಜಿ 181 ಗ್ರಾಂ ಚಿನ್ನ ಹಾಗೂ ಆರತಿ ಸೆಗಾಲ್ ಎಂಬುವವರಿಂದ 4 ಕೆಜಿ 61 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ಪರಿಶೀಲನೆ ನಡೆಸುವ ವೇಳೆ ಜಪ್ತಿ ಮಾಡಿದ್ದಾರೆ. ಅಷ್ಟೇ ಅಲ್ಲ, ವಿಮಾನ ನಿಲ್ದಾಣದ ಶೌಚಾಲಯ ದ ಲ್ಲೂ 2 ಕೆಜಿ 772 ಗ್ರಾಂ ಚಿನ್ನ ಪತ್ತೆಯಾಗಿದೆ. ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ಡಿಆರ್‌ಐ ಅಧಿಕಾರಿಗಳು ತನಿಖೆ ನಡೆಸುತ್ತಿದ್ದು, ಶೌಚಾಲ ಯದಲ್ಲಿ ಸಿಕ್ಕಿರುವ ಚಿನ್ನದ ಬಗ್ಗೆಯೂ ವಿಚಾರಣೆ ನಡೆದಿದೆ.

ಜಾನುವಾರು ಸಾಗಾಟ: ಬಂಧನ

ಕುಮಟಾ: ಗದಗ ಜಿಲ್ಲೆಯ ಲಕ್ಷ್ಮೇಶ್ವರದಿಂದ ಬೊಲೆರೋ ವಾಹನದಲ್ಲಿ ಹಿಂಸಾತ್ಮಾಕ ರೀತಿಯಲ್ಲಿ, ಅಕ್ರಮವಾಗಿ ಭಟ್ಕಳ ಕಡೆ ಸಾಗಿಸುತ್ತಿದ್ದ ಎರಡು ಎತ್ತುಗಳನ್ನು ತಾಲೂಕಿನ ಹೊಳೆಗದ್ದೆ ರಾಷ್ಟ್ರೀಯ ಹೆದ್ದಾರಿ ಟೋಲ್ ನಾಕಾ ಬಳಿ ಶುಕ್ರವಾರ ಕುಮಟಾ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆರೋಪಿ ಗಳಾದ ಲಕ್ಷ್ಮೇಶ್ವರ ತಾಲೂಕಿನ ಆಸಿಫ್ ಸಾಬ್ (27), ಬಸವರಾಜ ಶಿಳ್ಳೇಕ್ಯಾತ್ (20) ಎಂಬುವ ವರನ್ನು ಬಂಧಿಸಿದ್ದಾರೆ. ಇನ್ನೋರ್ವ ಆರೋಪಿ ಭಟ್ಕಳದ ಅಬ್ದುಲ್ ಸಲಾಂ ನಿಜಾಮುದ್ದೀನ್ನಾಗಿ ಪತ್ತೆ ಕಾರ್ಯ ನಡೆದಿದೆ. ಎರಡು ಎತ್ತುಗಳ ಮೌಲ್ಯ 80 ಸಾವಿರ ಎಂದು ಅಂದಾಜಿಸಲಾಗಿದ್ದು, ಅವುಗಳನ್ನು ಸಾಗಿಸಗುತ್ತಿದ್ದ ವಾಹನವನ್ನೂ ವಶಪಡಿಸಿಕೊಳ್ಳ ಲಾಗಿದೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಪಿಎಸ್‌ಐ ಮಂಜುನಾಥ ಗೌಡರ್ ತಿಳಿಸಿದ್ದಾರೆ.

ಹಾಸ್ಟೆಲ್‌ನಲ್ಲಿ ಶಾರ್ಟ್ ಸರ್ಕ್ಯೂಟ್

ತುಮಕೂರು: ನಗರದ ಬಿ .ಎಚ್ .ರಸ್ತೆಯಲ್ಲಿರುವ ಸಮಾಜಕಲ್ಯಾಣ ಇಲಾಖೆ ವಿದ್ಯಾರ್ಥಿನಿಯರ ವಸತಿ ನಿಲಯದಲ್ಲಿ ಉಂಟಾದ ಶಾರ್ಟ್ ಸರ್ಕ್ಯೂಟ್ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು. ಶಾರ್ಟ್ ಸರ್ಕ್ಯೂಟ್ ಉಂಟಾದ ತಕ್ಷಣ 300 ವಿದ್ಯಾರ್ಥಿ ನಿಯರು ಹೊರಕ್ಕೆ ಓಡಿಬಂದು ಪ್ರಾಣಪಾಯದಿಂದ ಪಾರಾಗಿದ್ದಾರೆ. ಈ ವೇಳೆ 6 ವಿದ್ಯಾರ್ಥಿನಿಯರಿಗೆ ಸಣ್ಣ ಪ್ರಮಾಣದ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಘಟನಾ ಸ್ಥಳಕ್ಕೆ ತುಮಕೂರು ಜಿಲ್ಲಾಧಿಕಾರಿ ಶುಭಕಲ್ಯಾಣ ಭೇಟಿ ನೀಡಿ ಹಾಸ್ಟೆಲ್ ವ್ಯವಸ್ಥೆ ಪರಿಶೀಲಿಸಿದರು. ಕೂಡಲೇ ಸಮಸ್ಯೆ ಬಗೆರಿಸುವಂತೆ ಅಧಿಕಾರಿಗಳಿಗೆ ಸೂಚಿ ಸಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇ ಶಕ ಕೃಷ್ಣಪ್ಪ, ವಿದ್ಯಾರ್ಥಿನಿಯರು ಹಾಸ್ಟೆಲ್ ನಲ್ಲಿ ಉಂಟಾದ ಸಮಸ್ಯೆಯನ್ನು ಕೂಡಲೇ ಬಗೆಹರಿಸಿದ್ದಾರೆ.

ಕಂದಕಕ್ಕೆ ಕಾರು: ಮೂವರು ಸಾವು

ಚಿಕ್ಕಬಳ್ಳಾಪುರ: ಜಿಲ್ಲೆಯ ಗೌರಿಬಿದನೂರು ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾರು ಕಂದಕಕ್ಕೆ ಬಿದ್ದ ಪರಿಣಾಮ ಸ್ಥಳದಲ್ಲೇ ಮೂವರು ಮೃತಪಟ್ಟು, ಓರ್ವ ಗಂಭೀರವಾಗಿ ಗಾಯಗೊಂಡಿದ್ದಾರೆ. ಗೌರಿಬಿದನೂರು ತಾಲೂಕಿನ ವಾಟದಹೊಸಹಳ್ಳಿ ಬೆಸ್ಕಾಂ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ಲೈನ್‌ಮ್ಯಾನ್‌ಗಳಾದ ಶ್ರೀಧರ, ವೇಣುಗೋಪಾಲ, ಮಂಜುನಾಥ, ಶಿವಕುಮಾರ್ ಗುರುವಾರ ರಾತ್ರಿ ವೇಣುಗೋಪಾಲ ಅವರ ಕಾರಿನಲ್ಲಿ ನಗರಗೆರೆ – ವಾಟದಹೊಸಹಳ್ಳಿ ರಸ್ತೆಯಲ್ಲಿ ಸಾಗುತ್ತಿದ್ದಾಗ ಕಾರು ಆಯತಪ್ಪಿ ಕಂದಕಕ್ಕೆ ಉರುಳಿ ಬಿದ್ದಿದೆ. ದುರ್ಘಟನೆಯಲ್ಲಿ ಶ್ರೀಧರ್ (28), ವೇಣುಗೋಪಾಲ (38), ಮಂಜುನಾಥ (37) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.312/2024

ಅರ್ಜಿದಾರರು: 1. ಶ್ರೀ. ಶ್ರೀನಿವಾಸ್ ರಾವುತ್ ಬಿನ್ ಲೇಟ್ ಕೆಂಚ ರಾವುತ್, ವಯಸ್ಸು 65 ವರ್ಷ, ವಾಸ: ಹೊಸದುರ್ಗ ಗ್ರಾಮ, ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 4ನೇ ಅರ್ಜಿದಾರರ ಮತ್ತು 3ನೇ ಎದುರುದಾರರ ತಾಯಿಯವರಾದ ಶ್ರೀಮತಿ ಗಂಗಮ್ಮ ಕೋಂ. ಲೇಟ್ ಕೆಂಚರಾವುತ್ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹೊಸದುರ್ಗ ಗ್ರಾಮದಲ್ಲಿ ದಿನಾಂಕ: 01.01.1968ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 12.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ಮೇ 30 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಕಿರಣ್ ಕುಮಾರ್ ಬಿ.ಎನ್.,
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.311/2024

ಅರ್ಜಿದಾರರು: 1. ಶ್ರೀ. ಶ್ರೀನಿವಾಸ್ ರಾವುತ್ ಬಿನ್ ಲೇಟ್ ಕೆಂಚ ರಾವುತ್, ವಯಸ್ಸು 65 ವರ್ಷ, ವಾಸ: ಹೊಸದುರ್ಗ ಗ್ರಾಮ, ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 4ನೇ ಅರ್ಜಿದಾರರ ಮತ್ತು 3ನೇ ಎದುರುದಾರರ ಅಜ್ಜಿಯವರಾದ ಶ್ರೀಮತಿ ಮಲ್ಲಮ್ಮ ಕೋಂ. ಲೇಟ್ ದೊಡ್ಡಲರಾವುತ್ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹೊಸದುರ್ಗ ಗ್ರಾಮದಲ್ಲಿ ದಿನಾಂಕ: 22.05.1956ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 12.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ಮೇ 30 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಕಿರಣ್ ಕುಮಾರ್ ಬಿ.ಎನ್.,
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ.310/2024

ಅರ್ಜಿದಾರರು: 1. ಶ್ರೀ. ಶ್ರೀನಿವಾಸ್ ರಾವುತ್ ಬಿನ್ ಲೇಟ್ ಕೆಂಚ ರಾವುತ್, ವಯಸ್ಸು 65 ವರ್ಷ, ವಾಸ: ಹೊಸದುರ್ಗ ಗ್ರಾಮ, ಹೊಸದುರ್ಗ ಅಂಚೆ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1) ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1 ರಿಂದ 4ನೇ ಅರ್ಜಿದಾರರ ಮತ್ತು 3ನೇ ಎದುರುದಾರರ ತಾತನವರಾದ ಶ್ರೀ. ದೊಡ್ಡಲರಾವುತ್ ಬಿನ್ ಲೇಟ್ ಕೆಂಚರಾವುತ್ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಹೊಸದುರ್ಗ ಗ್ರಾಮದಲ್ಲಿ ದಿನಾಂಕ: 10.10.1963ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 12.07.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2024ರ ಮೇ 30 ನೇ ತಾರಿಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಕಿರಣ್ ಕುಮಾರ್ ಬಿ.ಎನ್.,
ವಕೀಲರು, ಕನಕಪುರ
ಸ್ಥಳ: ಕನಕಪುರ

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ. 409/2024

ಅರ್ಜಿದಾರರು: 1. ಶ್ರೀಮತಿ ಚಿಕ್ಕತಾಯಮ್ಮ ಕೋಂ ಲೇಟ್ ಉರುಗೆಜ್ಜೆಗೌಡ ವಯಸ್ಸು 68 ವರ್ಷ ಎಲ್ಲರ ವಾಸ: ತಿಪ್ಪುರು ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಎದುರುದಾರರು: ತಹಶೀಲ್ದಾರ್ ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ಕನಕಪುರ ತಾಲ್ಲೂಕು, ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ ಅರ್ಜಿದಾರರ ಸಹ ಪತ್ನಿಯಾದ ನಿಂಗಮ್ಮ ಕೋಂ ಲೇಟ್ ಉರುಗೆಜ್ಜೆಗೌಡ ಇವರು ದಿನಾಂಕ: 03-05-2019ರಂದು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ತಿಪ್ಪುರು ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 10.07.2024ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 07/06/2024ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಕನಕಪುರ ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ರಾಮಚಂದ್ರ, ವಕೀಲರು, ಕನಕಪುರ ಟೌನ್,
ದಿನಾಂಕ: 07-06-2024
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್. ನಂ. 414/2024

ಅರ್ಜಿದಾರರು: 1. ಶ್ರೀಮತಿ ಮಾಯಮ್ಮ ಕೋಂ ಲೇಟ್ ಮಾಯಪ್ಪ ವಾಸ: ನಂ.1443, ಸೌತ್‌ಎಂಡ್, 9ನೇ ಬ್ಲಾಕ್, ಜಯನಗರ, ಬೆಂಗಳೂರು ದಕ್ಷಿಣ, ಬೆಂಗಳೂರು. 2. ಶ್ರೀಮತಿ. ಮಾಯಮ್ಮ ಬಿನ್ ಲೇಟ್ ಮಾಯಿಗೌಡ @ ಕೂರ್ಲೇಗೌಡ ಕೋಂ ವೀರಭದ್ರೇಗೌಡ, ವಾಸ: ಹೊನ್ನಯ್ಯನದೊಡ್ಡಿ ಗ್ರಾಮ, ಬನವಾಸಿ ದಾಖ್ಲೆ ಮತ್ತು ಅಂಚೆ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು 3. ಶ್ರೀ. ಮುದ್ದೇಗೌಡ ಬಿನ್ ಲೇಟ್ ಮಾಯಿಗೌಡ @ ಕೂರ್ಲೇಗೌಡ. 4. ಶ್ರೀಮತಿ. ಚಿಕ್ಕಮುದ್ದಮ್ಮ ಬಿನ್‌ಲೇಟ್ ಮಾಯಿಗೌಡ @ ಕೂರ್ಲೇಗೌಡ. 3 ಮತ್ತು 4ನೇ ಅರ್ಜಿದಾರರು ವಾಸ: ದೊಡ್ಡುರು ಗ್ರಾಮ, ತೇರುಬೀದಿ ಅಂಚೆ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. 5. ಶ್ರೀಮತಿ. ನಾಗಮ್ಮ.ಕೆ. ಬಿನ್ ಲೇಟ್ ಮಾಯಿಗೌಡ @ ಕೂರ್ಲೇಗೌಡ, ಕೋಂ ಕೆಂಡೇಗೌಡ, ವಾಸ: ಯಲಚವಾಡಿ ಗ್ರಾಮ ಮತ್ತು ಅಂಚೆ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ 2. ಗ್ರಾಮ ಲೆಕ್ಕಾಧಿಕಾರಿಗಳು ದೊಡ್ಡುರು ಗ್ರಾಮ, ತೇರುಬೀದಿ ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ 1ನೇ ಅರ್ಜಿದಾರರ ಮಾವ, 2 ರಿಂದ 5ನೇ ಅರ್ಜಿದಾರರ ತಂದೆ ಶ್ರೀ.ಮಾಯಿಗೌಡ @ ಕೂರ್ಲೇಗೌಡ ಬಿನ್ ಲೇಟ್ ಮುದ್ದೇಗೌಡ ದೊಡ್ಡುರು ಗ್ರಾಮ, ತೇರುಬೀದಿ ಅಂಚೆ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ ದಿನಾಂಕ:01.11.1989 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 10.07.2024ರ ಬೆಳಗ್ಗೆ ಸರಿಯಾಗಿ 10:45 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 04/06/2024ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಹೆಚ್.ಡಿ.ಲಿಂಗರಾಜು., ವಕಿಲರು, ಕನಕಪುರ ಟೌನ್,
ಸ್ಥಳ: ಕನಕಪುರ

PUBLIC NOTICE

We Smt. Vidya, Sri. Manoj and Sri. Dheeraj, are the executants in GPA Estamp Certificate No.IN-KA912683-155175748 and now we are revoking the said GPA executed to Dr. B.M. Balaraj, which was notarized on 29/07/2020 by Sri. H.R KARUNAKARA, Advocate, Reg. No. 12327 is hereby cancelled for the following reasons:

1. Now we are available to do the things on our own, hence cancellation.
2. The GPA given is herewith notified in two national paper and we wish to bring it to the notice of the GPA Holder Dr.B.M.BALARAJ,
3. We are hereby withdrawn all the powers with immediate effect

Sd/-

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ–110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ('ಇಂಡಿಯಾಬುಲ್ಸ್ ಎಆರ್‌ಸಿ') ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **15.05.2021**ರಂದು ಕರೆದು ಸಾಲಗಾರ **ಅಮಿತ್ ಕಿಶೋರ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 49,22,758/- (ರೂಪಾಯಿ ನಲ್ವತ್ತ ಒಂಬತ್ತು ಲಕ್ಷದ ಇಪ್ಪತ್ತ ಎರಡು ಸಾವಿರದ ಏಳು ನೂರ ಐವತ್ತ ಎಂಟು ಮಾತ್ರ)** ಲೋನ್ ಅಕೌಂಟ್ ನಂ. **A010OXVIII** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAG00312548**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **12.05.2021**ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ-XVIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.03.2021**ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ-XVIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 30.11.2021 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು ಎಸಿಆರ್‌ಇ ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **A010OXVIII** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **04.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ಬಾಕಿ ಇರುವ ಮೊತ್ತ ರೂ. 49,22,758/- (ರೂಪಾಯಿ ನಲ್ವತ್ತ ಒಂಬತ್ತು ಲಕ್ಷದ ಇಪ್ಪತ್ತ ಎರಡು ಸಾವಿರದ ಏಳು ನೂರ ಐವತ್ತ ಎಂಟು ಮಾತ್ರ) 12.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ.ಬಿ-1204, 12ನೇ ಮಹಡಿ, ಯುನಿಕಾನ್ ನಾರ್ಥ್ ಬ್ರೂಕ್ಸ್-46, ಸರ್ವೆ ನಂ.4/4, ವೀರ್‌ಸಾಗರ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು, ಉತ್ತರ ತಾಲೂಕು, ಬೆಂಗಳೂರು-560064, ಕರ್ನಾಟಕ

ಅಧಿಕಾರವಿರುವ ಅಧಿಕಾರಿ
ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.
(102-ಟ್ರಸ್ಟ್)
ದಿನಾಂಕ: 04.06.2024
ಸ್ಥಳ : ಬೆಂಗಳೂರು

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ–110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ('ಇಂಡಿಯಾಬುಲ್ಸ್ ಎಆರ್‌ಸಿ') ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **14.05.2021** ರಂದು ಕರೆದು ಸಾಲಗಾರ [illegible] ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 48,82,483/-** (ರೂಪಾಯಿ [illegible] ಮಾತ್ರ) ಲೋನ್ ಅಕೌಂಟ್ ನಂ. **S036OXVIII** ಮೇಲೆ (ಹಿಂದಿನ ಲೋನ್ ಅಕೌಂಟ್ ನಂ. ಐಎಚ್‌ಎಫ್‌ಎಲ್‌ನ **HHLBAG00379499**) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **07.05.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XVIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **31.03.2021**ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ- XVIII, ಟ್ರಸ್ಟ್‌ನ ಟ್ರಸ್ಟಿಯಾಗಿ** ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. **ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 30.11.2021 ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ.** ಇದರ ಹೆಸರಿಗೆ ಅಸೈನ್ ಮಾಡಿದೆ ಮತ್ತು ಎಸಿಆರ್‌ಇ ಪುಸ್ತಕಗಳಲ್ಲಿ ಸಾಲ ಖಾತೆಯನ್ನು ಸಾಲ ಖಾತೆ ನಂ. **S036OXVIII** ಎಂದು ಪುನರ್ ನಂಬರ್ ಹಾಕಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **04.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ಬಾಕಿ ಇರುವ ಮೊತ್ತ ರೂ. 48,82,483/-** ([illegible]) **07.05.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲ್ಯಾಟ್ ನಂ.ಎ-903, 9ನೇ ಮಹಡಿ, ಯುನಿಕಾನ್ ನಾರ್ಥ್ ಬ್ರೂಕ್ಸ್-46, ಸರ್ವೆ ನಂ.4/4, ಯಲಹಂಕ ಹೋಬಳಿ, ವೀರ್‌ಸಾಗರ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು, ಉತ್ತರ ಬೆಂಗಳೂರು-560064, ಕರ್ನಾಟಕ

ಅಧಿಕಾರವಿರುವ ಅಧಿಕಾರಿ
ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.
(102-ಟ್ರಸ್ಟ್)
ದಿನಾಂಕ: 04.06.2024
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಪೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಪೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.01.2024** ರಂದು ಕರೆದು ಸಾಲಗಾರ **ರಾಘವೇಂದ್ರ ಪೂಜಾರಿ ಮತ್ತು ಸುಮಂಗಲ ದೇವಾಡಿಗ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 5,50,798.77 (ಐದು ಲಕ್ಷ ಐವತ್ತು ಸಾವಿರದ ಏಳುನೂರಾ ತೊಂಬತ್ತೆಂಟು ರೂಪಾಯಿ ಮತ್ತು ಎಪ್ಪತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMAL00285451** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **23.01.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **05.06.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ** ಬಾಕಿ ಇರುವ ಮೊತ್ತ **ರೂ. 5,50,798.77 (ಐದು ಲಕ್ಷ ಐವತ್ತು ಸಾವಿರದ ಏಳುನೂರಾ ತೊಂಬತ್ತೆಂಟು ರೂಪಾಯಿ ಮತ್ತು ಎಪ್ಪತ್ತೇಳು ಪೈಸೆ ಮಾತ್ರ) 23.01.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಈ ಮುಂದಿನ ಸಂಪೂರ್ಣ ಪ್ರಾಪರ್ಟಿ: ಸೈಟ್ ನಂ. 126, ವಿಸ್ತೀರ್ಣ 1200 ಚ. ಅಡಿ (ಅಂದರೆ 111.48 ಚ.ಮೀಟರ್), ಖಾತೆ ನಂ. 669/126. ಪಿಐಡಿ ನಂ. 150200202201220417. ಈ ಮುಂದಿನ ಸರ್ವೇ ನಂಬರ್‌ಗಳಿಂದ ಪಡೆದು ಪರಿವರ್ತಿಸಲಾಗಿದೆ: 83/1ಎ, 83/1ಬಿ, 86/2, 86/10, 87, 88/1, 88/2, 88/3, 89/1 ಮತ್ತು 89/2. ಇದರ ವಿಳಾಸ: ಹುಲ್ಲೇಗೌಡನಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು -562162, ಕರ್ನಾಟಕ

ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30 ಅಡಿ. ಇದರ ಗಡಿಗಳು ಹೀಗಿವೆ:

ಪೂರ್ವದಲ್ಲಿ ಇದರಿಂದ : ಸೈಟ್ ನಂ. 97
ಪಶ್ಚಿಮದಲ್ಲಿ ಇದರಿಂದ : ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ. 125
ದಕ್ಷಿಣದಲ್ಲಿ ಇದರಿಂದ : ಸೈಟ್ ನಂ. 127

ದಿನಾಂಕ : 05.06.2024
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ದಿನ ದರ್ಶಿಕೆ

ವೈಶಾಖ ಮಾಸ, ನಕ್ಷತ್ರ ಆರ್ದ್ರಾ, ಯೋಗ ಗಂಡ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ವಸಂತ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಕತ್ತರಿಸಿದ ಅರ್ಧ ಈರುಳ್ಳಿ, ನಾಲ್ಕು ಬೆಳ್ಳುಳ್ಳಿ ಎಸಳು, ಎರಡು ಚಮಚ ನಿಂಬೆ ರಸವನ್ನು, ಕುದಿಸಿದ ಎರಡು ಗ್ಲಾಸ್ ನೀರಿಗೆ ಸೇರಿಸಿ, ಸೇರಿಸಿ ಸ್ವಲ್ಪ ಹೊತ್ತು ಬಿಸಿ ಮಾಡಿ. ಬೆಳಗ್ಗೆ ಉಪಹಾರದ ನಂತರ ಮತ್ತು ರಾತ್ರಿ ಊಟದ ನಂತರ ಈ ದ್ರಾವಣವನ್ನು ಸೇವಿಸಿ. ಇದರಿಂದ ಜ್ವರ ಮತ್ತು ನೆಗಡಿ ತಕ್ಷಣ ಕಡಿಮೆಯಾಗುತ್ತದೆ.

ಸೌಂದರ್ಯ ಸೂತ್ರ

ಹಿಮ್ಮಡಿ ಒಡೆದಿದ್ದರೆ, ಮಾಗಿದ ಸ್ಟ್ರಾಬೆರಿ ಹಣ್ಣುಗಳನ್ನು ತೆಗೆದುಕೊಂಡು ಅದಕ್ಕೆ ಸಕ್ಕರೆ ಹರಳುಗಳನ್ನು ಸೇರಿಸಿ. ಇದನ್ನು ಪಾದ ಮತ್ತು ಹಿಮ್ಮಡಿಗಳ ಮೇಲೆ 15 ನಿಮಿಷ ನಯವಾಗಿ ಉಜ್ಜಿ, ಆನಂತರ ಉಗುರು ಬೆಚ್ಚಗಿನ ನೀರಿನಲ್ಲಿ ಪಾದ, ಹಿಮ್ಮಡಿ ತೊಳೆದುಕೊಂಡು, ಮಾಯಿಶ್ಚರೈಸರ್ ಹಚ್ಚಿ. ಇದರಿಂದ ಹಿಮ್ಮಡಿಗಳು ಮೃದು ಆಗುತ್ತವೆ.

ದಿನ ಭವಿಷ್ಯ

ಮೇಷ: ಧರ್ಮಕಾರ್ಯಗಳಲ್ಲಿ ವಿಘ್ನ ಕಂಡು ಬಂದೀತು. ವ್ಯವಹಾರದಲ್ಲಿ ಮೋಸ, ವಂಚನೆ ಇದ್ದೀತು. ಹೊಸ ಉದ್ಯೋಗ ಪ್ರಾಪ್ತಿಯ ಸಂಭವವಿದೆ.

ವೃಷಭ: ವಿದ್ಯಾರ್ಥಿಗಳು ಅಧ್ಯಯನದ ಬಗ್ಗೆ ಹೆಚ್ಚು ಗಮನ ಹರಿಸುವ ಅಗತ್ಯತೆ ಇದೆ. ಅನವರತ ಅನುಗ್ರಹ ದಿಂದ ಅಂತಿಮವಾಗಿ ಪರಿ ಶ್ರಮ ಸಫಲತೆ ಪಡೆಯಲಿದೆ.

ಮಿಥುನ: ಅವಿವಾಹಿತರಿಗೆ ಮದುವೆ ಪ್ರಸ್ತಾಪ ಬಂದೀತು. ಸ್ವಾಭಿಮಾನಿಗಳಾದ ನಿಮಗೆ ಈ ದಿನ ಶುಭಕರ.

ಕಟಕ: ಉತ್ತಮ ಧನಾರ್ಜನೆ ಇದ್ದರೂ ಲಾಭಕ್ಕೆ ಕೊರತೆ ಆಗದಂತೆ ಎಚ್ಚರ ವಹಿಸಿ. ಸಣ್ಣ ಪ್ರಯಾಣಕ್ಕೆ ಧನ ವ್ಯಯ. ಗುರುಹಿರಿಯರ ಆರೋಗ್ಯದ ಬಗ್ಗೆ ಗಮನಹರಿಸಿ.

ಸಿಂಹ: ದೇವತಾ ಸ್ಥಳ ಸಂದರ್ಶನ ದಿಂದ ಮಾನಸಿಕ ತೃಪ್ತಿ. ಆಳವಾದ ಅಧ್ಯಯನ ನಡೆಸುವವರಿಗೆ ಉತ್ತಮ ದಿನ. ದಾಂಪತ್ಯ ಸುಖ ವೃದ್ಧಿ.

ಕನ್ಯಾ: ದೈಹಿಕ ಮಾನಸಿಕ ಆರೋಗ್ಯದ ಬಗ್ಗೆ ಒತ್ತು ನೀಡಿ. ಉದ್ಯೋಗ ವ್ಯವಹಾರದಲ್ಲಿ ಸೂಕ್ಷ್ಮತೆ ವಹಿಸುವುದರಿಂದ ನಿರೀಕ್ಷಿತ ಫಲಿತಾಂಶ.

ತುಲಾ: ಬಂಧುಮಿತ್ರರೊಂದಿಗೆ ವೈಮನಸ್ಸಿಗೆ ಅವಕಾಶ ನೀಡದಿರಿ. ದೂರ ಪ್ರಯಾಣದಲ್ಲಿ ಅಡಚಣೆ ತೋರೀತು. ಗುರುಹಿರಿಯರ ಆರೋಗ್ಯದ ಕಡೆಗೆ ಗಮನಹರಿಸಿ.

ವೃಶ್ಚಿಕ: ಉದ್ಯೋಗ ವ್ಯವಹಾರದಲ್ಲಿ ಉತ್ತಮ ಬದಲಾವಣೆಯಿಂದ ಮಾನಸಿಕ ಸಂತೋಷ. ಧಾರ್ಮಿಕ ವಿಚಾರದಲ್ಲಿ ಹೆಚ್ಚಿನ ಭಕ್ತಿ ಶ್ರದ್ಧೆಗೆ ಆದ್ಯತೆ.

ಧನು: ಆರೋಗ್ಯದ ಕಡೆಗೆ ಹೆಚ್ಚಿನ ಮುತುವರ್ಜಿ ವಹಿಸಬೇಕಾದೀತು. ಬಂಧುಮಿತ್ರರೊಂದಿಗೆ ಸಮಯ ಕಳೆಯುವುದರಿಂದ ಮಾನಸಿಕ ಸ್ಥೈರ್ಯ ವೃದ್ಧಿ.

ಮಕರ: ಆರ್ಥಿಕ ವಿಚಾರದಲ್ಲಿ ಘರ್ಷಣೆ ಮೋಸ ಹೋಗದಂತೆ ಎಚ್ಚರ ವಹಿಸಿ. ಆತುರದ ನಿರ್ಧಾರ ಕೈಗೊಳ್ಳದಿರಿ. ಸರಿ ಯಾದ ಪತ್ರವ್ಯವಹಾರ ವಿರಲಿ.

ಕುಂಭ: ಧಾರ್ಮಿಕ ಕಾರ್ಯದಿಂದ ಸುಖ ತೃಪ್ತಿ. ಆರ್ಥಿಕ ವಾಗಿ ಕಂಗಾಲಾಗಿದ್ದ ನಿಮಗೆ ಈಗ ವೆಚ್ಚಗಿಂತ ಆದಾಯವು ಹೆಚ್ಚಾಗಿದ್ದು ಸಮಾಧಾನ ತರಲಿದೆ.

ಮೀನ: ಅರ್ಧಕ್ಕೆ ನಿಂತುಹೋದ ಕೆಲಸ ಪುನಾರಂಭವಾಗಲಿದೆ. ಬಹಳ ಸಮಯದಿಂದ ಕಾಡುತ್ತಿದ್ದ ಆರೋಗ್ಯದ ಸಮಸ್ಯೆಗೆ ಪರಿಹಾರ ಸಿಗಲಿದೆ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- 1915– ಕನ್ನಡದ ಖ್ಯಾತ ಕವಿ, ಸಾಹಿತಿ ನಾಡೋಜ ಕಯ್ಯಾರ ಕಿಂಞಣ್ಣ ರೈ ಜನನ
- 1975 – ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಜನನ
- 1957 – ಹಿಂದಿ ಚಿತ್ರರಂಗದ ನಟ ಡಿಂಪಲ್ ಕಪಾಡಿಯಾ ಜನನ
- ವಿಶ್ವ ಬ್ರೈನ್ ಟ್ಯೂಮರ್ ಡೇ

ಚಿತ್ರಸ್ಫೂರ್ತಿ

ಭಾರತೀಯ ವನ್ಯ ಜೀವಿ ಸಂರಕ್ಷಣಾ ಕಾಯಿದೆಯಿಂದ ರಕ್ಷಿಸಲ್ಪಟ್ಟ ಪ್ರಾಣಿ ಕೃಷ್ಣಮೃಗ. ಈ ಕೃಷ್ಣಮೃಗಗಳು ಬಯಲು ಪ್ರದೇಶದ ಹುಲ್ಲುಗಾವಲು ಮತ್ತು ಕುರುಚಲು ಕಾಡುಗಳಲ್ಲಿ ಜೀವಿಸುತ್ತವೆ. ರಾಜಸ್ಥಾನದಿಂದ ತಮಿಳುನಾಡಿನವರೆಗೆ ಇವುಗಳನ್ನು ಕಾಣಬಹುದು. ಬಹುಪಾಲು ದಕ್ಷಿಣ ಪ್ರಸ್ಥಭೂಮಿಯಲ್ಲಿ ಎಲ್ಲಾ ಕಡೆಯೂ ಕಾಣಸಿಗಬೇಕಾದವು. ಆದರೆ ಅರಣ್ಯ ಇಲಾಖೆಯ ಅವೈಜ್ಞಾನಿಕ ನಡೆಯಿಂದ ಹುಲ್ಲುಗಾವಲುಗಳು ಮರ ನೆಡುವ ತೋಪುಗಳಾಗಿ ಮಾರ್ಪಾಡಾಗುತ್ತಿರುವ ಕಾರಣ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಜಿಗಿಯುತ್ತಿರುವ ಗಂಡು ಕೃಷ್ಣಮೃಗವನ್ನು ಛಾಯಾಚಿತ್ರ ತೆಗೆದದ್ದು ಬಿಜಾಪುರದ ಬಳಿಯ ಹುಲ್ಲುಗಾವಲಿನಲ್ಲಿ.

ಚಿತ್ರ, ಬರಹ: ಹರೀಶ ಎ.ಎಸ್, ತಿರುಪತಿ

ಆಸೆ ಹೆಚ್ಚಾದಷ್ಟೂ, ಅತೃಪ್ತಿ ಕೂಡ ಹೆಚ್ಚುತ್ತದೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದು ಹಳ್ಳಿಯಲ್ಲಿ ಒಂದಷ್ಟು ಕುಟುಂಬಗಳಿದ್ದವು. ಊರು ಅಂದಮೇಲೆ ಊರಲ್ಲಿ ಶಿವಾಲಯವಿತ್ತು. ದೂರದಿಂದ ಬಂದ ಒಬ್ಬ ಸಾಧು ದೇವಾಲಯದ ಜಗುಲಿಯನ್ನೇ ವಾಸ್ತವ್ಯ ಮಾಡಿಕೊಂಡು ಜ್ಞಾನದ ಸಾಧನೆಯಲ್ಲಿ ತೊಡಗಿದ್ದನು. ಜೀವನೋಪಾಯಕ್ಕೆ ನಾಲ್ಕಾರು ಮನೆಗಳಿಗೆ ಹೋಗಿ ಬೇಡಿ ತಂದ ಭಿಕ್ಷೆ ಅವನ ಆಹಾರ. ಬಯಕೆಗಳೇ ಇಲ್ಲದ ಸರಳವಾದ ಬದುಕು ಅವನದಾಗಿತ್ತು.

ಒಮ್ಮೆ ಆ ಊರವರಿಗೆ ದೇವಾಲಯದಿಂದ ಅಶರೀರವಾಣಿ ಕೇಳಿ ಬಂದಿತು. 'ಭಕ್ತರೇ ಕೇಳಿ ನಿಮ್ಮ ನಿಮ್ಮ ಮನಸ್ಸಿನಲ್ಲಿ ಏನೇನು ಆಸೆಗಳು ಇವೆಯೋ ಅದನ್ನು ಒಂದು ಚೀಟಿಯಲ್ಲಿ ಬರೆದು ದೇವಸ್ಥಾನದ ಗರ್ಭಗುಡಿಯೊಳಗೆ ಹಾಕಿ ಬೆಳಗಾಗುವ ಹೊತ್ತಿಗೆ ನೀವು ಕೇಳಿದ ವಸ್ತುಗಳು ನಿಮಗೆ ಸಿಗುತ್ತದೆ' ಎಂದಿತು. ಆಕಾಶವಾಣಿ ತಿಳಿಸಿದಂತೆ ಒಂದು ಚೀಟಿಯಲ್ಲಿ ತಮಗೆ ಏನೇನು ಬೇಕೋ ಅದನ್ನು ಬರೆದು ಗರ್ಭಗುಡಿ ಒಳಗೆ ಹಾಕಿ ಮನೆಗೆ ಹೋದರು.

ಆ ದಿನ ರಾತ್ರಿ ಎಂದೂ ಇಲ್ಲದ ಬಾರಿ ಮಳೆ ಸುರಿಯಿತು. ಜನರೆಲ್ಲ ಗಾಢ ನಿದ್ರೆಯಲ್ಲಿದ್ದರು. ಬೆಳಗಾಯಿತು ಮಳೆ ನಿಂತಿತ್ತು. ಆಕಾಶವಾಣಿಯಂತೆ ಹಿಂದಿನ ದಿನ ತಮಗೆ ಬೇಕಾದನ್ನು ಬರೆದು ಗರ್ಭಗುಡಿಯೊಳಗೆ ಹಾಕಿ ಬಂದಿದ್ದು ನೆನಪಾಯಿತು. ಮನೆಯ ಬಾಗಿಲು ತೆಗೆದು ನೋಡುತ್ತಾರೆ. ಅವರೆಲ್ಲ ಏನೇನು ಬಯಸಿ ಬರೆದು ಹಾಕಿದ್ದರೋ ಆ ವಸ್ತುಗಳೆಲ್ಲ ಮನೆ ಬಾಗಿಲ ಮುಂದೆ ಬಂದಿತ್ತು. ನೋಡಿ ಎಲ್ಲರಿಗೂ ಖುಷಿಯಾಯಿತು. ಮಂತ್ರಕ್ಕೆ ಮಾವಿನ ಕಾಯಿ ಉದುರಿದಂತೆ ಬಯಸಿದ್ದು ಮನೆ ಮುಂದೆ ಬಂದಿದ್ದು ನೋಡಿ ಎಲ್ಲರ ಮುಖದಲ್ಲಿ ನಗು ಮೂಡಿತು. ಬಿಟ್ಟಿ ಭಾಗ್ಯ ಯಾರಿಗೆ ಬೇಡ?

ಈ ಸಂತೋಷ ಬಹಳ ಕಾಲ ಉಳಿಯಲಿಲ್ಲ. ಏಕೆಂದರೆ ಅವರು ಬಯಸಿದ್ದ ವಸ್ತುಗಳು ಬಂದಿತ್ತು ನಿಜ. ಆದರೆ, ಅಕ್ಕ ಪಕ್ಕದ ಮನೆಯವರಿಗೆ ಏನು ಬಂದಿದೆ ಎಂದು ತಿಳಿದು, ಅವರ ವಸ್ತುಗಳನ್ನೆಲ್ಲ ನೋಡಿ ಬೇಜಾರಾಯಿತು. ಏಕೆಂದರೆ ಅವರೆಲ್ಲ ಇವರ ಮನೆಗಿಂತ ಹೆಚ್ಚು ಗುಣಮಟ್ಟದ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಬರೆದು ಪಡೆದಿದ್ದರು. ಅವರವರ ಮನೆಗಳಲ್ಲೇ ಮಾತುಕತೆಯಾಗಿ ಜಗಳವಾಯಿತು.

ಬೆಳಗಾಯಿತು ನಿತ್ಯದಂತೆ ಆ ಸಾಧು ಎಲ್ಲರ ಮನೆಗೆ ಭಿಕ್ಷಕ್ಕೆ ಬಂದನು. ಅವನನ್ನು 'ನಿನಗೆ ಆಕಾಶವಾಣಿ ಕೇಳಿಸಲಿಲ್ಲವೇ? ನೀವ್ಯಾಕೆ ಏನು ಕೇಳಿಕೊಳ್ಳಲಿಲ್ಲ?' ಎಂದು ಕೇಳಿದರು. ಅದಕ್ಕೆ ಸಾಧು 'ಅಶರೀರವಾಣಿ ಹೇಳಿದ್ದನ್ನು ನಾನು ಕೇಳಿದೆ. ಆದರೆ ನನಗೋಸ್ಕರ ನಾನು ಏನು ಕೇಳಿಕೊಳ್ಳಲಿ? ನನಗೆ ಬೇಕಾದ್ದನ್ನು ಬರೆದು ಗರ್ಭಗುಡಿಯೊಳಗೆ ಹಾಕಬಹುದಿತ್ತು. ಹಾಕಿದರೂ ಹಾಕದಿದ್ದರೂ ವ್ಯತ್ಯಾಸವೇನು ಇಲ್ಲ. ನಿಮ್ಮನ್ನ ನೋಡಿ ನೀವು ಬಯಸಿದ್ದೆಲ್ಲ ಬಂದಿದೆ. ಆದರೂ ನೀವು ದುಃಖಿಗಳಾಗಿದ್ದೀರಿ. ನನಗೆ ಹಾಗಲ್ಲ, ಇಲ್ಲದಿದ್ದಾಗಲೂ ಖುಷಿ ಯಾಗಿದ್ದೆ. ಈಗಲೂ ಖುಷಿಯಾಗಿ ಇದ್ದೇನೆ. ನನಗೆ ಬೇಕು ಅನ್ನುವ ಬಯಕೆಯೇ ಇಲ್ಲ ಆದ್ದರಿಂದ ನಾನು ಯಾವಾಗಲೂ ಸುಖವಾಗಿ ಇರುವೆ' ಎಂದನು.

ನಿಜವಲ್ಲವೇ ನಮಗೆಷ್ಟು ಅನುಕೂಲಗಳು ಹೆಚ್ಚಾಗುತ್ತಾ ಹೋಗುತ್ತವೆಯೋ, ಅಷ್ಟು ನಮ್ಮ ಆಸೆಗಳು ಕೂಡ ಹೆಚ್ಚುತ್ತಾ ಹೋಗುತ್ತವೆ. ಆಸೆಗಳು ಹೆಚ್ಚಾದಂತೆ ಅತೃಪ್ತಿ ಹೆಚ್ಚಾಗುತ್ತಾ ಹೋಗುತ್ತದೆ. ಇದೆಲ್ಲದರ ಜತೆಗೆ ಜೀವನದ ನಿಜವಾದ ಅರ್ಥವನ್ನೇ ಮರೆತು ನಾವೆಲ್ಲರೂ ಕ್ಷಣಿಕ ಸುಖಕ್ಕೆ ಮನಸೋತು ಪ್ರಾಪಂಚಿಕ ವಸ್ತುಗಳಿಗಾಗಿ ನೆಮ್ಮದಿ ಕಳೆದುಕೊಳ್ಳುತ್ತೇವೆ. ಒಮ್ಮೆ ಯೋಚಿಸಿ ನೋಡಿ ಹತ್ತಿಪ್ಪತ್ತು ವರ್ಷಗಳ ಕೆಳಗೆ ಒಂದೇ ಕೋಣೆಯ ಮನೆಯಲ್ಲಿ, ಐದರಿಂದ ಹತ್ತು ಜನ ನೆಮ್ಮದಿಯಾಗಿ ಸಂತೃಪ್ತಿಯಿಂದ ಹಾಲ್‌ನಲ್ಲಿ ಹಾಸಿಗೆ ಹಾಕಿಕೊಂಡು ಮಲಗುತ್ತಿದ್ದೆವು. ಆದರೆ ಇಂದು ಇರುವ ನಾಲ್ಕು ಜನರಿಗೆ ಒಂದೊಂದು ಕೋಣೆ ಇದೆ. ಆದರೆ ಆ ಕೋಣೆಯೊಳಗೆ ನೆಮ್ಮದಿಯ ನಿದ್ದೆ ಇದೆಯಾ?

ಬದುಕನ್ನು ಆದಷ್ಟು ಸರಳವಾಗಿಸಿ ಕೊಳ್ಳೋಣ. ವಸ್ತುಗಳ ವ್ಯಾಮೋಹಕ್ಕೆ ಬೀಳದೆ ಮನುಷ್ಯರಿಗೆ ಬೆಲೆ ಕೊಡುತ್ತಾ, ನಮ್ಮ ಸಂಬಂಧಗಳನ್ನ ಮತ್ತಷ್ಟು ಗಟ್ಟಿಯಾಗಿಸಿಕೊಳ್ಳೋಣ.

ಪದಬಂಧ



ಎಡದಿಂದ ಬಲಕ್ಕೆ:
1. ವೈದ್ಯರು ನೀಡಿದ ಮದ್ದು (3)
4. ಮಗಳ ಗಂಡ (3)
6. ಮುಡಿಪಾಗಿಟ್ಟದ್ದು (3)
7. ಮದುವೆಯ ಗಂಡೂ ಇರುವ ಮಗ (3)
9. ಯುದ್ಧದಲ್ಲಿ ಏಟು ಬೀಳುವುದನ್ನು ತಪ್ಪಿಸಿಕೊಳ್ಳಲು ಬಳಸಿದ ಸಾಧನ (3)
11. ಕೈ ಹಿಡಿದು ಬಂದ ಕೆಂಪು ಕಣಗಿಲೆ (4)
13. ನಮ್ಮ ಸುತ್ತಮುತ್ತಲಿನ ಜಾಗ (4)
15. ಹತ್ತಿಯಿಂದ ನೂಲು ತೆಗೆಯುವ ಯಂತ್ರ (3)
17. ಅಧಿಕಾರ ಅಥವಾ ಅಂತಸ್ತು (3)
19. ಸುವಾಸನೆಯುಳ್ಳ ಒಂದು ಬೇರು (3)
20. ಪ್ರವಾಹವೂ ಆಗಬಲ್ಲ ಹರಿಯುವಿಕೆ (3)
21. ಬೆಲೆಬಾಳುವ ವಸ್ತುಗಳನ್ನಿಡುವ ಕಬ್ಬಿಣದ ಪೆಟ್ಟಿಗೆ (3)

ಎಡದಿಂದ ಬಲಕ್ಕೆ:
1. ವಾಡಿಕೆಯ ಎಂದರ್ಥ (5)
2. ಅಧಿಕವಾದ ಸೊಕ್ಕು (3)
3. ಸರದ ಮಧ್ಯೆ ಸಿಲುಕಿತೇ ಗಾಳಿ (3)
4. ಅಲ್ಲಾಡು (3)
5. ಇಂದ್ರಜಾಲದ ವಿದ್ಯೆ (3)
8. ಸಣ್ಣ ಸಣ್ಣ ಮನೆಗಳಿರುವ ಪ್ರದೇಶ (3)
10. ಗುರು ಹಿರಿಯರಿಂದ ತರುವ ಪತ್ರ (3)
12. ಕಾಪಾಡುವವನು (3)
13. ಪದದ ನಡುವೆ ಸಿಲುಕಿದ ಮೋಡ (3)
14. ಬೆಳ್ಳಿಯ ಪರ್ವತವೇ (5)
15. ವಿಧ, ಪ್ರಕಾರ (3)
16. ಮತ್ತೊಂದು ಹರಾಜು (3)
17. ಜೀರ್ಣವಾಗುವಿಕೆ (3)
18. ಅರುವತ್ತು ಸಂವತ್ಸರಗಳಲ್ಲಿ ಒಂದಾದ ಇದು ಕುರೂಪವೂ ಹೌದು (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪ್ರಾದೇಶಿಕ 3. ಅಂಗಾರಕಾ 5. ಪಾವತಿ 6. ಲತಾಂಗಿ 9. ಖಜಾನೆ 10. ರಾಜಶೇಖರ 11. ಕಟಕಿ 12. ನಿರ್ಯಾತ 16. ರಾವಣ 17. ಸುಭಾಷಿತ 18. ತೆಗಳಿಕೆ

ಮೇಲಿನಿಂದ ಕೆಳಕ್ಕೆ: 1. ಪ್ರಾತಃಕಾಲ 2. ಕಪಾಟು 3. ಅಂತಿಮ 4. ಕಾರಖಾನೆ 7. ಗಿರಾಕಿ 8. ಕಶೇರು 9. ಖರನಿ 11. ಕಬಳಿಸು 13. ತಯಾರಿಕೆ 14. ವರಾತ 15. ಹಣತೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಹಿಂದಕ್ಕೆ ಹರಿಯುವ ನದಿ

ಮೆಕ್ಸಿಕೋದಲ್ಲಿರುವ ಚಿಕಾಗೋ ನದಿ, ವಿರುದ್ಧ ದಿಕ್ಕಿನಲ್ಲಿ ಹರಿಯುವ ವಿಶ್ವದ ಏಕೈಕ ನದಿಯೆಂದು ಹೆಸರಾಗಿದೆ. ಚಿಕಾಗೋ ಡೌನ್ಟೌನ್ ಮೂಲಕ

ಹರಿಯುವ ಚಿಕಾಗೋ ನದಿಯು ಹಲವಾರು ಕಾಲುವೆಗಳ ಮೂಲಕ ಹರಿಯುತ್ತದೆ ಮಾತ್ರವಲ್ಲದೆ, ಪ್ರಪಂಚದಲ್ಲೇ ಹಿಂದಕ್ಕೆ ಹರಿಯುವ ಏಕೈಕ ನದಿಯಾಗಿದೆ. ಮಿಚಿಗನ್ ಸರೋವರದ ನೀರು ಸರಬರಾಜಿನಿಂದ ಕೊಳಚೆ ನೀರನ್ನು ಬೇರೆಡೆಗೆ ತಿರುಗಿಸಲು, ನೈರ್ಮಲ್ಯದ ಕಾರಣಗಳಿಗಾಗಿ ಇಲ್ಲಿ ರಿವರ್ಸಲ್ ತಂತ್ರವನ್ನು ಅಳವಡಿಸಲಾಗಿದೆ. ಈ ವಿಶಿಷ್ಟ ತಂತ್ರಜ್ಞಾನ ಗಮನಾರ್ಹ ಎಂಜಿನಿಯರಿಂಗ್ ಸಾಧನೆ ಎಂದು ಗುರುತಿಸಲ್ಪಟ್ಟಿದೆ.

ಪುಸ್ತಕ ಲೋಕ

ಎಲ್ಲಾ ಓಕೆ ಟೆನ್ಷನ್ ಯಾಕೆ?



ಲೇಖಕ ಸುಂದರ್ ಬಾಬು ಪುಸ್ತಕ ಎಲ್ಲಾ ಓಕೆ ಟೆನ್ಷನ್ ಯಾಕೆ? ಜಗತ್ತಿನಲ್ಲಿ ಟೆನ್ಷನ್‌ಗೆ ಗುರಿಯಾಗದ ಮನುಷ್ಯ ಇರುವುದಿಲ್ಲ ಎಂದರೆ ಅದು ಅತಿಶಯೋಕ್ತಿ ಆಗಲಾರದು. ಪ್ರತಿಯೊಬ್ಬರೂ ಒಂದಲ್ಲ ಒಂದು ಬಾರಿ ಮಾನಸಿಕ ಉದ್ವೇಗಕ್ಕೆ ಒಳಗಾಗುತ್ತಾನೆ/ಳೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ಈ ಟೆನ್ಷನ್ನಿಂದ ಶರೀರ ಹಾಗೂ ಮನಸ್ಸಿನ ಮೇಲೆ ಆಗುವ ಪರಿಣಾಮ ಅಷ್ಟಿಷ್ಟಲ್ಲ. ಹಾಗಿದ್ದರೂ ನೆಮ್ಮದಿಯಾಗಿ ಬಾಳಲು ಸಾಕಷ್ಟು ಅವಕಾಶಗಳಿವೆ. ತಮಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮಾಡದೇ ಒತ್ತಡಕ್ಕೆ ಒಳಗಾಗುವವರು ಕೆಲವರಾದರೆ, ಯಾವುದೇ ಸಣ್ಣಪುಟ್ಟ ಸಮಸ್ಯೆಗಳಿಗೆ ಅಲ್ಲಲ್ಲೇ ಪರಿಹಾರ ಕಂಡುಕೊಂಡು ನಿರಾಳವಾಗುವವರು ಕೆಲವರು. ಟೆನ್ಷನ್‌ನಿಂದ ಮುಕ್ತಿ ಪಡೆಯುವುದು ಹೇಗೆ? – ಈ ಕೃತಿಯಲ್ಲಿ ಈ ಪ್ರಶ್ನೆಗೆ ಉತ್ತರಗಳಿವೆ.

ಟ್ವೀಟ್‌ಮೆಂಟ್

ದೀಪು ಗೌಡ್ರು: ಮೆದುಳಿನ ಪ್ರತಿಯೊಂದು ನ್ಯೂರಾನ್ ಗಳಿಗೂ ತುಂಬಬೇಕು. ಆಗ ಒಂಚೂರು ಬದಲಾವಣೆ ಕಾಣಬಹುದು. ಇದರ ಜೊತೆಗೆ ಸಂವಿಧಾನದ ಪ್ರಸ್ತಾವನೆಯನ್ನು ಬರೆದಿದ್ದು ಒನ್ ಅಂಡ್ ಒನ್ಲಿ ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಅಂತ ಪ್ರತಿದಿನ ಮಕ್ಕಳಿಗೆ ತಿಳಿಸಬೇಕು. -ಹೂವಯ್ಯ

ಹರೀಶ್: ಮೊದಲು ರಾಜಕಾರಿಣಿಗಳು ಹಾಗೂ ಅವರ ಮಕ್ಕಳು ಓದಲಿ. ಆಮೇಲೆ ಬೇರೆ ಮಕ್ಕಳಿಗೆ ದಿನ ಓದಿಸುವಿರಂತೆ ರಾಜಕೀಯ ಸೇವೆ ಅಧಿಕಾರ ಅಲ್ಲ, ಐಷಾರಾಮಿ ಜೀವನ ಅಲ್ಲ. ಮಕ್ಕಳ, ಮಕ್ಕಳ, ಮಕ್ಕಳಿಗೆ ಆಗುವಷ್ಟು ಸಂಪಾದನೆ ಮಾಡು ವ್ಯಾಪಾರ ಅಲ್ಲ ಅಂತ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ರಾಷ್ಟ್ರಪತಿ ದ್ರೌಪದಿ ಮುರ್ಮು ಇತ್ತೀಚೆಗೆ ಯಾರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿದರು?

- ಎ. ಸುಧಾ ಮೂರ್ತಿ.
- ಬಿ. ರಾಜವರ್ಧನ್ ಸಿಂಗ್ ರಾಠೋಡ್.
- ಸಿ. ಉದಯ್ ಕೋಟಕ್.
- ಡಿ. ಮಹೇಂದ್ರ ಸಿಂಗ್ ಧೋನಿ.



ಉತ್ತರ: ಎ. ಸುಧಾ ಮೂರ್ತಿ

ಮಾಹಿತಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲೇಖಕಿ, ಕಾರ್ಪೊರೇಟ್ ದಿಗ್ಗಜೆ, ಸಮಾಜ ಸೇವಕಿ ಸುಧಾ ಮೂರ್ತಿ ಅವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಿದ್ದಾರೆ. 73 ವರ್ಷ ವಯಸ್ಸಿನ ಮೂರ್ತಿ ಅವರಿಗೆ 2006ರಲ್ಲಿ ಪದ್ಮಶ್ರೀ ಮತ್ತು 2023ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಯಿತು. ಜನವರಿಯಲ್ಲಿ ರಾಷ್ಟ್ರಪತಿಗಳು ಸತ್ನಾಮ್ ಸಿಂಗ್ ಸಂಧು ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದ್ದರು. ರಾಷ್ಟ್ರಪತಿಗಳು ಮೇಲ್ಮನೆಗೆ 12 ಸದಸ್ಯರನ್ನು ನಾಮ ನಿರ್ದೇಶನ ಮಾಡಬಹುದು.

ಅದ್ಭುತ ಏಕವರ್ಣದ ಬೆಳಕು ಲೇಸರ್!

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಇತ್ತೀಚೆಗೆ ಮನರಂಜನಾ ಕ್ಷೇತ್ರದಲ್ಲಿ ಬೆಳಕಿನ ಹೊಸ ತಾರೆಯೊಂದು ಉದಯಿಸಿದೆ. ಅದೇ ಲೇಸರ್ ಬೆಳಕು. ಇದು ಇಂದು ಲೇಸರ್ ಷೋ ಎಂದೇ ಹೆಸರು ಗಳಿಸಿದೆ. ಈ ಬಣ್ಣ ಬಣ್ಣದ ಬೆಳಕಿನ ಷೋ ಎಲ್ಲರನ್ನೂ ಬಹು ಆಕರ್ಷಣೆಯಿಂದ ಸೆಳೆಯುತ್ತಿದೆ. ಅಲ್ಲದೆ ಬಹು ವೈಭವದ ಮನರಂಜನಾ ಕಾರ್ಯಕ್ರಮಗಳಲ್ಲಿ ಈ ಲೇಸರ್ ಬೆಳಕಿನ ಚೆಲ್ಲಾಟಗಳು ಸರ್ವೇ ಸಾಮಾನ್ಯವಾಗಿವೆ. ಇಂದು ಪ್ರತಿಯೊಬ್ಬ ಚಿಕ್ಕ ಮಕ್ಕಳ ಕೈಯಲ್ಲೂ ಲೇಸರ್

ಬೆಳಕಿನ ಟಾರ್ಚ್ ರಾರಾಜಿಸುತ್ತಿದೆ. ಈ ಲೇಸರ್ ಇಂದು ಕೇವಲ ಆಟಿಕೆ ಅಥವಾ ಮನರಂಜನಾ ಸಾಧನವಾಗಿ ಮಾತ್ರ ಉಳಿದಿಲ್ಲ. ಇದರ ವ್ಯಾಪಕ ಉಪಯೋಗಗಳು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಬಳಸಲ್ಪಡುತ್ತಿವೆ

ಲೇಸರ್‌ನ ವಿಸ್ತೃತ ರೂಪ, ಲೈಟ್ ಆಂಪ್ಲಿಫಿಕೇಷನ್ ಬೈ ಸ್ಟಿಮ್ಯುಲೇಟೆಡ್ ಎಮಿಷನ್ ಆಫ್ ರೇಡಿಯೇಷನ್. ಲೇಸರ್ ಎನ್ನುವುದು ಒಂದು ವಿಶಿಷ್ಟ ಬೆಳಕು. ನಮಗೆಲ್ಲಾ ಸೂರ್ಯನ ಬೆಳಕು ಬಹು ಚಿರಪರಿತವೇ: ಇದು ಏಳು ಬಣ್ಣಗಳಿಂದ ಮಾಡಲ್ಪಟ್ಟಿದೆ ಎಂಬ ವಿಷಯ ಒಂದು ಪುಟ್ಟ ಮಗುವಿಗೂ ಗೊತ್ತು. ಅಂದರೆ ಸೂರ್ಯನ ಬೆಳಕು ಬಹುವರ್ಣೀಯ ಬೆಳಕು. ಇದರಲ್ಲಿರುವ ಏಳು ಬಣ್ಣಗಳಿಗೂ ತಮ್ಮದೇ ಆದ ತರಂಗದ ವ್ಯಾಪ್ತಿಯಿದೆ. ಆದರೆ ಈ ಲೇಸರ್ ಬೆಳಕು ಏಕವರ್ಣೀಯ, ಅಂದರೆ ಇದು ಕೇವಲ ಒಂದೇ ಬೆಳಕಿನಿಂದ ಮಾಡಲ್ಪಟ್ಟಿದೆ.

ಲೇಸರ್‌ನ ಉತ್ಪಾದನೆ: ಗಾಜು, ಹರಳಿನಂತಹ ವಸ್ತುಗಳಿಗೆ ಹೊರಗಿನಿಂದ ವಿದ್ಯುತ್ ಅಥವಾ ಬೆಳಕಿನ ಶಕ್ತಿಯನ್ನು ಪೂರೈಸಿದಾಗ. ಅವುಗಳಲ್ಲಿರುವ ಪರಮಾಣುಗಳಿಗೆ ಈ ಶಕ್ತಿ ಪೂರೈಕೆಯಾಗುತ್ತದೆ. ಆಗ ಇದರಲ್ಲಿರುವ ಎಲೆಕ್ಟ್ರಾನುಗಳು ಉದ್ರಿಕ್ತಗೊಂಡು ಮೇಲಿನ ಕಕ್ಷೆಗಳಿಗೆ ಹಾರಿಬಿಡುತ್ತವೆ. ಹೀಗೆ ಮೇಲಿನ ಕಕ್ಷೆಗೆ ಹಾರಿದ ಎಲೆಕ್ಟ್ರಾನುಗಳು ಪುನಃ ತಮ್ಮ ಹಿಂದಿನ ಕಕ್ಷೆಗೇ ಮರಳಿದಾಗ ಒಂದೇ ತರಂಗಾಂತರಗಳುಳ್ಳ ಬೆಳಕಿನ ಫೋಟಾನ್‌ಗಳನ್ನು ಹೊರಹಾಕುತ್ತವೆ. ಈ ಏಕವರ್ಣೀಯ ಬೆಳಕೇ ಲೇಸರ್. ಇದರ ಬಣ್ಣ ನಾವು ಬಳಸಿದ ವಸ್ತುವನ್ನು ಅವಲಂಬಿಸಿದೆ. ಈ ಲೇಸರ್ ಬೆಳಕು ಸಮಾನಾಂತರವಾಗಿ ಬಹು ದೂರ ಚಲಿಸಬಲ್ಲದು.

ಉಪಯೋಗಗಳು ಏನೇನು?

- **ಸಂಪರ್ಕ ಮಾಧ್ಯಮವಾಗಿ:** ಈ ಲೇಸರ್‌ನ್ನು ಸಂಪರ್ಕ ಮಾಧ್ಯಮಗಳಲ್ಲಿ ಅದರಲ್ಲೂ ಆಪ್ಟಿಕ್ ಸಂಪರ್ಕಗಳಲ್ಲಿ, ವಾತಾವರಣದಲ್ಲಿ, ವ್ಯೂಮದಲ್ಲಿ, ನಿರ್ವಾತದಲ್ಲಿ ಸಂಪರ್ಕ ಸಾಧನವಾಗಿ ಬಳಸುತ್ತಾರೆ
- **ವೈದ್ಯಕೀಯದಲ್ಲಿ:** ಇಂದು ಲೇಸರ್ ಸರ್ಜರಿ ಬಹಳ ಪ್ರಸಿದ್ಧಿಯಾಗಿದೆ. ಕಣ್ಣಿನ ಚಿಕಿತ್ಸೆಯಲ್ಲಿ, ಕಿಡ್ನಿ ಸ್ಟೋನ್ ಕರಗಿಸುವಿಕೆಯಲ್ಲಿ, ಚರ್ಮ ಚಿಕಿತ್ಸೆಯಲ್ಲಿ, ಬಳಸುತ್ತಾರೆ. ಕ್ಯಾನ್ಸರ್ ಚಿಕಿತ್ಸೆಯಲ್ಲಿ ಇಂದು ಲೇಸರ್‌ನ ಪಾತ್ರ ಬಹು ದೊಡ್ಡದು.
- **ಕೈಗಾರಿಕೆಗಳಲ್ಲಿ:** ಲೋಹಗಳನ್ನು ಕತ್ತರಿಸಲು, ಬೆಸೆಯಲು, ಕರಗಿಸಲು, 3ಡಿ ಪ್ರಿಂಟಿಂಗ್ ನಲ್ಲಿ, ಸ್ಕ್ಯಾನಿಂಗ್‌ನಲ್ಲಿ ಬಹೂಪಯೋಗಿಯಾಗಿದೆ ಈ ಲೇಸರ್.
- **ಮಿಲಿಟರಿಯಲ್ಲಿ:** ಇವುಗಳನ್ನು ಯುದ್ಧಾಸ್ತ್ರಗಳ ತಯಾರಿಕೆ, ಮಿಸೈಲ್ ತಡೆ ಅಸ್ತ್ರಗಳ ತಯಾರಿಕೆಗಳಲ್ಲಿ ಬಳಸುತ್ತಾರೆ. ಮುಂದೆ ಲೇಸರ್ ಗನ್‌ಗಳೂ ಸೇರ್ಪಡೆಯಾಗುವುದರಲ್ಲಿ ಅನುಮಾನವಿಲ್ಲ.
- **ಸಂಶೋಧನೆಯಲ್ಲಿ:** ಸ್ಪೆಕ್ಟ್ರೋಸ್ಕೊಪಿ, ಫ್ಲೋರೋಸೆನ್ಸ್ ಮೈಕ್ರೋಸ್ಕೊಪಿ, ಅಳತೆ ಶಾಸ್ತ್ರಗಳಲ್ಲಿ ಬಳಸುತ್ತಾರೆ
- **ವಾಣಿಜ್ಯ ಉತ್ಪನ್ನಗಳಲ್ಲಿ:** ಲೇಸರ್ ಪ್ರಿಂಟರ್, ಬಾರ್ ಕೋಡ್ ಸ್ಕ್ಯಾನರ್, ಥರ್ಮಾಮೀಟರ್, ಹೋಲೋಗ್ರಾಂ, ಗಾಜನ್ನು ಕೊರೆಯಲು, ಕತ್ತರಿಸಲು ಬಳಸುತ್ತಾರೆ.
- **ಮನರಂಜನಾ ಕ್ಷೇತ್ರದಲ್ಲಿ:** ಆಪ್ಟಿಕಲ್ ಡಿಸ್ಕ್‌ಗಳಲ್ಲಿ, ಲೇಸರ್ ಲೈಟ್ ಷೋಗಳಲ್ಲಿ, ಶಬ್ದ ಮತ್ತು ಬೆಳಕಿನ ಪುನರುತ್ಪಾದನೆಗಳಲ್ಲಿ ಬಳಸುತ್ತಾರೆ.

ಗೋಲ್ಡನ್ ಮಿಲ್ಕ್

ಕ್ಷೇಮ ಸಮಾಚಾರ

ಹಾಲು ಅನೇಕ ಪೋಷಕಾಂಶಗಳನ್ನು ಹೊಂದಿದ್ದು, ಆರೋಗ್ಯಕ್ಕೆ ತುಂಬಾ ಪ್ರಯೋಜನಗಳಿದೆ. ಅದರಲ್ಲೂ ಹಾಲಿಗೆ ಅರಶಿಣ ಸೇರಿಸಿ ಕುಡಿಯುವುದರಿಂದ ಬಹಳಷ್ಟು ಪ್ರಯೋಜನಗಳಿವೆ. ಇದನ್ನು ಗೋಲ್ಡನ್ ಮಿಲ್ಕ್ ಎಂದೂ ಕರೆಯುತ್ತಾರೆ. ಭಾರತದ ಪ್ರತಿ ಮನೆಮನೆಗಳಲ್ಲೂ ಅರಶಿಣ ಹಾಕಿದ ಹಾಲನ್ನು ಬಳಸುತ್ತಾರೆ. ಹಾಲನ್ನು ಅರಿಶಿಣ ಮತ್ತು ದಾಲ್ಚಿನ್ನಿ, ಲವಂಗ, ಏಲಕ್ಕಿ, ಕರಿಮೆಣಸು ಮತ್ತು ಶುಂಠಿಯಂತಹ ಇತರ ಮಸಾಲೆಗಳೊಂದಿಗೆ ಕುದಿಸಿ ಸೇವಿಸಿದಾಗ, ಆರೋಗ್ಯ ಪ್ರಯೋಜನ ದುಪ್ಪಟ್ಟಾಗುವುದು.

ಅರಿಶಿಣದಲ್ಲಿ 'ಕರ್ಕ್ಯುಮಿನ್' ಎಂಬ ಅಂಶವಿದ್ದು, ಇದು ನಮ್ಮ ದೇಹಕ್ಕೆ ಆಂಟಿ - ಇನ್ಫ್ಲಾಮೇಟರಿ, ಆಂಟಿ - ಆಕ್ಸಿಡೆಂಟ್ ಗುಣ ಲಕ್ಷಣಗಳನ್ನು ಒದಗಿಸಿ ನಮ್ಮ ದೇಹವನ್ನು ಪುನಶ್ಚೇತನಗೊಳಿಸುತ್ತದೆ. ಹಾಗಾಗಿ ನಮ್ಮ ದೇಹಕ್ಕೆ ಅರಶಿಣದ ಪ್ರಯೋಜನಗಳು ಲಭ್ಯವಾಗಬೇಕಾದರೆ ಅದನ್ನು ಸರಿಯಾದ ಪ್ರಮಾಣದಲ್ಲಿ ಹಾಲಿಗೆ ಮಿಶ್ರಣ ಮಾಡಿ ಕುಡಿಯುವ ಅಭ್ಯಾಸ ನಾವು ರೂಢಿ ಮಾಡಿಕೊಳ್ಳಬೇಕು.

ಆರೋಗ್ಯ ಪ್ರಯೋಜನ

- **ರೋಗನಿರೋಧಕ ಶಕ್ತಿಯ ವೃದ್ಧಿ:** ಸೋಂಕುಗಳು ಮತ್ತು ಅನಾರೋಗ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.
- **ಸುಧಾರಿತ ಜೀರ್ಣಕ್ರಿಯೆ:** ಜೀರ್ಣಕ್ರಿಯೆಗೆ ಸಹಕಾರಿಯಾಗಿದ್ದು, ಅನಿಲ ಮತ್ತು ಅಜೀರ್ಣದಂತಹ ಸಮಸ್ಯೆಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.
- **ಉತ್ತಮ ನಿದ್ರೆಗೆ ಸಹಕಾರಿ:** ಅರಿಶಿನ ಹಾಲು ವಿಶ್ರಾಂತಿಯನ್ನು ಉತ್ತೇಜಿಸುತ್ತದೆ. ನಿದ್ರೆಯ ಗುಣಮಟ್ಟವನ್ನು ಸುಧಾರಿಸುತ್ತದೆ.
- **ಕ್ಯಾನ್ಸರ್ ನಿವಾರಕ:** ಅಧ್ಯಯನಗಳ ಪ್ರಕಾರ, ಕರ್ಕ್ಯುಮಿನ್ ಕ್ಯಾನ್ಸರ್ ವಿರೋಧಿ ಗುಣಲಕ್ಷಣಗಳಿಂದಾಗಿ ಕೆಲವು ರೀತಿಯ ಕ್ಯಾನ್ಸರ್ ತಡೆಯಲು ಸಹಾಯ ಮಾಡುತ್ತದೆ.
- **ಮೆದುಳಿನ ಆರೋಗ್ಯ:** ಕರ್ಕ್ಯುಮಿನ್ ಮೆದುಳಿನ ಕಾರ್ಯವನ್ನು ಬೆಂಬಲಿಸುವ ಮತ್ತು ಆಲ್ಝೈಮರ್ ನಂತಹ ಮಿದುಳಿನ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ.
- **ಚರ್ಮಕ್ಕೆ ಒಳ್ಳೆಯದು:** ಅರಿಶಿಣವು ಮೊಡವೆಗಳನ್ನು ಕಡಿಮೆ ಮಾಡಲು, ಮೈಬಣ್ಣವನ್ನು ಉತ್ತೇಜಿಸಲು ಮತ್ತು ವಯಸ್ಸಾದ ಪ್ರಕ್ರಿಯೆಯನ್ನು ನಿಧಾನಗೊಳಿಸಲು ಸಹಕಾರಿಯಾಗಿದೆ.
- **ಹೃದ್ರೋಗವನ್ನು ತಡೆಗಟ್ಟುವುದು;** ನಿತ್ಯವೂ ಅರಶಿಣದ ಬಳಕೆಯಿಂದ ಹೃದ್ರೋಗ ತೊಂದರೆ ನಿವಾರಣೆಯಾಗುವುದು.
- **ಉರಿಯೂತ ಮತ್ತು ಕೀಲು ನೋವಿನ ನಿವಾರಣೆ;** ಉರಿಯೂತ ಮತ್ತು ಕೀಲುನೋವಿನಂತಹ ತೊಂದರೆಗೆ ಇದು ಪರಿಣಾಮಕಾರಿ.

ಒಂದು ವೇಳೆ ನಿಮಗೆ ಡೈರಿಯ ಯಾವುದೇ ಉತ್ಪನ್ನಗಳು ಇಷ್ಟವಾಗದಿದ್ದರೆ, ಸಂಜೆ ಸುಮಾರು ನಾಲ್ಕರಿಂದ ಐದು ಗಂಟೆಯ ಸಮಯದಲ್ಲಿ ಕೊಬ್ಬರಿ ಹಾಗು ಬೆಲ್ಲದ ಜತೆ ಸ್ವಲ್ಪ ಅರಿಶಿಣವನ್ನು ಮಿಶ್ರಣ ಮಾಡಿ ಸೇವನೆ ಮಾಡಬಹುದು. ಈ ಮಿಶ್ರಣ ಸಹ ಅರಿಶಿಣ ಮಿಶ್ರಿತ ಹಾಲಿಗೆ ಸಮ ಎಂದು ಹೇಳುತ್ತಾರೆ.

ತಯಾರಿಸುವ ವಿಧಾನ

ಮೊದಲಿಗೆ ಒಂದು ಕಪ್ ಹಾಲನ್ನು ಒಲೆಯ ಮೇಲಿಟ್ಟು ಕುದಿಸಿ ಇದಕ್ಕೆ ಸ್ವಲ್ಪ ಅಂದರೆ ಒಂದು ಚಿಟಿಕೆಯಷ್ಟು ಅರಿಶಿಣದ ಜೊತೆಗೆ ಸ್ವಲ್ಪ ಸಕ್ಕರೆ ಅಥವಾ ಬೆಲ್ಲವನ್ನು ನಿಮ್ಮ ರುಚಿಗೆ ಅನುಗುಣವಾಗಿ ಹಾಕಿ ಮಿಶ್ರಣ ಮಾಡಿ. ಸಾಧ್ಯವಾದಷ್ಟು ಉಗುರು ಬೆಚ್ಚಗಿರುವ ಹಾಲನ್ನು ನೀವು ಮಲಗಿಕೊಳ್ಳುವ ಮುಂಚೆ ರಾತ್ರಿಯ ಸಮಯದಲ್ಲಿ ಕುಡಿದು ಮಲಗಿ.

ಆಸೆ ಹೆಚ್ಚಾದಷ್ಟೂ, ಅತೃಪ್ತಿ ಕೂಡ ಹೆಚ್ಚುತ್ತದೆ
ಪುಟ 11

ವಿಶ್ವವಾಣಿ ಆರಾಮ

@vishwavaninews
ಬೆಂಗಳೂರು
ಶನಿವಾರ
08 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ


ಅದ್ಭುತ ಏಕವರ್ಣದ ಬೆಳಕು 'ಲೇಸರ್'!
ಪುಟ 11

ಬಿ ಪಾಸಿಟಿವ್

ಅಟ್ಟ ಹತ್ತದವನು ಬೆಟ್ಟ ಹತ್ತಿಯಾನೇ?

ನಾವು ಜೀವನದಲ್ಲಿ ಏನೇ ಕೆಲಸ ಮಾಡಬೇಕಾದರೂ ಮೊದಲು ಒಂದು ತಯಾರಿರಬೇಕು. ಹುಟ್ಟಿದ ತಕ್ಷಣ ಯಾವ ಮಗುವೂ ನಡೆದಾಡಲಾರದು. ಮೊದಲು ಮಗ್ಗುಲಾಗಲು ಕಲಿತು, ನೆಲದಲ್ಲಿ ಈಜಿ, ಅಂಬೆಗಾಲಿಟ್ಟು, ನಂತರ ಏನನ್ನಾದರೂ ಹಿಡಿದು ನಡೆಯಲು ಕಲಿತ ಮೇಲೂ ತಪ್ಪು ಹೆಜ್ಜೆಯಿಡುತ್ತಾ ನಿಧಾನವಾಗಿ ಸರಿಯಾಗಿ ನಡೆಯಲು ಕಲಿಯುತ್ತದೆ. ಹೀಗಿರುವಾಗ ನಾವೂ ಕೂಡ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಾದರೆ ಅದಕ್ಕೆ ಪೂರ್ವ ತಯಾರಿ ಮಾಡಿಕೊಳ್ಳಬೇಕಾಗುತ್ತದೆ. ನಾನಿಂದು ನಾಲ್ಕು ಕಿ.ಮೀ ನಡೆಯುವೆ ಎಂದುಕೊಂಡರೆ ಅದಕ್ಕೆ ಪ್ರಪ್ರಥಮವಾಗಿ ಮೊದಲ ಹಜ್ಜೆ ಇಡಬೇಕು. ಅನಂತರ ಮುಂದಿನ ಹೆಜ್ಜೆ ಇಡಬಹುದು. ಅಂದರೆ ಯಾವುದೇ ಕೆಲಸ ಮಾಡುವಾಗಲೂ ದೃಢ ಸಂಕಲ್ಪ ಮುಖ್ಯವಾಗುತ್ತದೆ. ಯಾವುದೇ ಕೆಲಸ ಮಾಡಲು ಪರಿಶ್ರಮ ಮುಖ್ಯ. ನಾವು ಕೆಲಸಕ್ಕಾಗಿ ತೊಡಗಿಸಿದ ಶ್ರಮ ಎಂದೂ ವ್ಯರ್ಥವಲ್ಲ.ಯಾರಿಗಾದರೂ ತಾನು ದೊಡ್ಡ ಚಿತ್ರ ಕಲಾವಿದನಾಗಬೇಕು ಎಂಬ ಆಸೆಯಿದ್ದರೆ, ಮೊದಲು ಅವನು ಒಂದು ಕಾಗದ ಮೇಲೆ ಪೆನ್ಸಿಲ್ ಬಳಸಿ ಚಿತ್ರ ಬರೆಯುವುದನ್ನು ಅಭ್ಯಾಸ ಮಾಡಬೇಕು, ಅದರಲ್ಲಿ ಅವನು ಚೆನ್ನಾಗಿ ಪಳಗಿದ ನಂತರ, ಚಿತ್ರ ಕಲಾವಿದನಿಗೆ ಬೇಕಾದಂತಹ ಪರಿಕರಗಳನ್ನು ಕೊಂಡು ತರಬೇಕು ಅದು ಬುದ್ಧಿವಂತಿಕೆ. ಅದನ್ನು ಬಿಟ್ಟು ಚಿತ್ರವನ್ನೇ ಬರೆಯಲು ಬಾರದವನು ಅವುಗಳನ್ನೆಲ್ಲಾ ತಂದಿಟ್ಟುಕೊಂಡರೆ ಈ ಗಾದೆ ನೆನಪಾಗದೇ ಇರದು. ಜೀವನದಲ್ಲಿ ನಾವು ಅದೆಷ್ಟೊ ಆಸೆ, ಕನಸುಗಳನ್ನು ಕಟ್ಟಿಕೊಳ್ಳುತ್ತೇವೆ. ಅದು ಸಾಕಾರವಾಗಬೇಕಾದರೆ ಅದಕ್ಕೆ ತಕ್ಕ ಪರಿಶ್ರಮ ಬೇಡುತ್ತದೆ. ಅಂದರೆ ಒಂದು ಕಟ್ಟಡ ಕಟ್ಟಲು ಹೇಗೆ ಭದ್ರ ಬುನಾದಿ ಅವಶ್ಯವೋ, ಹಾಗೆಯೇ ಯಾವುದೇ ಕೆಲಸ ಮಾಡಲು ತಳಪಾಯವನ್ನು ನಾವು ಗಟ್ಟಿಯಾಗಿ ಹಾಕಬೇಕು.

• ಶ್ರೀ ವಲ್ಲಿ ಮಂಜುನಾಥ

ಲವ್ ಎವೆರಿ ಬಾಡಿ

ಮನುಷ್ಯನ ಸಮಸ್ತ ಆರೋಗ್ಯವೂ ನಿಂತಿರುವುದು ಆತನ ಉಸಿರಾಟದ ಗತಿಯ ಮೇಲೆಯೇ. ಉಸಿರಾಟ ದೀರ್ಘವಾದಷ್ಟೂ ಆಯುಷ್ಯವೂ ದೀರ್ಘವಾಗಿರುತ್ತದೆಯಂತೆ. ಉಚ್ಛ್ವಾಸ ಮತ್ತು ನಿಶ್ವಾಸ ಪ್ರಕ್ರಿಯೆ ನಿಧಾನವಾಗಿ ನಡೆದಷ್ಟೂ ದೇಹದ ಆರೋಗ್ಯವೂ ಚೆನ್ನಾಗಿರುತ್ತದೆ. ಅದಕ್ಕೆಂದೇ ಪ್ರಾಣಾಯಾಮದಲ್ಲಿ ಸಾಧನೆ ಮಾಡಿದ ಯೋಗಿಗಳು ದೀರ್ಘಾಯುಷ್ಯಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುತ್ತಾರೆ. ಉಸಿರಿನ ಕ್ರಮಬದ್ಧತೆಯಿಂದಲೇ ಹಲವು ಕಾಯಿಲೆಗಳನ್ನು ವಾಸಿ ಮಾಡಬಹುದು ಎಂಬುದು ತಜ್ಞರ ಅಭಿಪ್ರಾಯ. ಕೆಲವರಿಗೆ ತಲೆನೋವು ಸಹ ಉಸಿರಾಟದ ಸಮಸ್ಯೆಯಿಂದ ಬರಬಹುದು. ಬೆಳಗ್ಗೆ ಎದ್ದೊಡನೆ ಮತ್ತು ಸಂಜೆಯ ಸಮಯದಲ್ಲಿ ಪ್ರಾಣಾಯಾಮ ಮಾಡುವುದರಿಂದ , ಉಸಿರಾಟದ ಗತಿಯಲ್ಲಿ ಬದಲಾವಣೆ ಆಗಿ, ದೇಹದ ಆರೋಗ್ಯ ವೃದ್ಧಿಸುವುದಲ್ಲದೆ ಹೆಚ್ಚು ಚಟುವಟಿಕೆಯಿಂದಿರಲು ಸಹಕಾರಿಯಾಗುತ್ತದೆ.

• ದೇಹಾಭಿಮಾಣಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್

ಬಿಗ್ ಬಾಸ್ ಖ್ಯಾತಿಯ ಪ್ರಥಮ್ ನಿರ್ದೇಶನದ ಬ್ಲ್ಯಾಕ್ ಮ್ಯಾಜಿಕ್ ಆಧಾರಿತ ಕರ್ನಾಟಕದ ಅಳಿಯ ಚಿತ್ರ ರಿಲೀಸ್‌ಗೂ ಮುನ್ನವೇ ವಿಶ್ವಮಟ್ಟದಲ್ಲಿ ಗಮನ ಸೆಳೆದಿದೆ. ವಿಶ್ವೇಶ್ವರ ಭಟ್ ಸಾರಥ್ಯದ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಪಡೆಯುವ ಮೂಲಕ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ.

ಕರ್ನಾಟಕದ ಅಳಿಯನಿಗೆ ವಿಶ್ವಮಟ್ಟದ ಗೌರವ!

• ಪೂರ್ಣ ವಿ-ರಾಮ

ಬಿಗ್ ಬಾಸ್ ಖ್ಯಾತಿಯ ಪ್ರಥಮ್ ಈಗ ನಿರ್ದೇಶನಕ್ಕೆ ಕೈ ಹಾಕಿದ್ದಾರೆ. ಖುದ್ದು ನಟನೆಯ ಜತೆಗೆ ನಿರ್ದೇಶನವನ್ನೂ ಮಾಡಿರುವ ಇವರ ಕರ್ನಾಟಕದ ಅಳಿಯ ಚಿತ್ರದ ಕತೆಯನ್ನು ಕೊನೆಯದಾಗಿ ಕೇಳಿದ್ದು ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್. ರಾಘವೇಂದ್ರ ರಾಜ್ ಕುಮಾರ್ ಈ ಚಿತ್ರದಲ್ಲಿ ಒಂದು ಪಾತ್ರ ಮಾಡಬೇಕು ಎಂದು ಪ್ರಥಮ್ ಕಳಕಳಿಯಿಂದ ಕೇಳಿಕೊಂಡಾಗ ರಾಘಣ್ಣ ಅಪ್ಪು ಅವರಿಗೆ ಕತೆ



ಹೇಳಿಸಿದ್ದರು. ಪ್ರಥಮ್ ಕಡೆಯಿಂದ ಇಡೀ ಕರ್ನಾಟಕದ ಅಳಿಯ ಚಿತ್ರದ ಕಥಾಸಾರಾಂಶದ ಜತೆಗೆ ಇಂಟರೆಸ್ಟಿಂಗ್ ವಿಷಯಗಳನ್ನ ಗಹನವಾಗಿ ಚರ್ಚಿಸಿದ್ದರು. ಕತೆಯಲ್ಲಿ ಬರುವ ತಿರುವುಗಳ ಬಗ್ಗೆ ತಿರುತಿರುಗಿ ಕೇಳಿ ಸಂಭ್ರಮಿಸಿದ್ದರು. ಈ ಚಿತ್ರ ತುಂಬಾ ಚೆನ್ನಾಗಿ ಆಗುತ್ತದೆ. ರಾಘಣ್ಣನ ಪಾತ್ರಕ್ಕೆ ಒಳ್ಳೇ ಹೆಸರು ಬರುತ್ತದೆ ಎಂದು ಬೆನ್ನುತಟ್ಟಿದ್ದರು ಕರುನಾಡ ಯುವರತ್ನ.

ಕರ್ನಾಟಕದ ಅಳಿಯ ಚಿತ್ರ ಅತೀ ಹೆಚ್ಚು ಪ್ರೀತಿ ಅಂದರೆ ಅದು ರಾಘವೇಂದ್ರ ರಾಜ್ ಕುಮಾರ್ ಅವರಿಗೆ. ಈ ಚಿತ್ರದ ಪಾತ್ರವನ್ನು ಹೃದಯದಿಂದ ಇಷ್ಟಪಟ್ಟು ಪ್ರಥಮ್ ಕನಸಿಗೆ ನೀರೆರೆದಿದ್ದು ಹೃದಯವಂತ ರಾಘಣ್ಣ. ಚಿತ್ರದಲ್ಲಿ ವಿಶೇಷ ಹಾಗೂ ಗಮನ ಸೆಳೆಯುವ ಪಾತ್ರ ಮಾಡಿರುವ ರಾಘಣ್ಣ, ಈ ಚಿತ್ರವನ್ನು ಜನಕ್ಕೆ ತಲುಪಿಸಲು ಯಾವುದೇ ತರದ ಪಬ್ಲಿಸಿಟಿಗೆ ಬರುವುದಾಗಿಯೂ, ಈ ಚಿತ್ರವನ್ನು ವಿಭಿನ್ನ ರೀತಿಯಲ್ಲಿ ಜನರಿಗೆ ತಲುಪಿಸುವ ಕೆಲಸಕ್ಕೆ ಕೈ ಜೋಡಿಸುವುದಾಗಿ ಪ್ರಥಮ್ ಅವರಿಗೆ ಮಾತುಕೊಟ್ಟಿದ್ದಾರಂತೆ. ತಾನು ಅತ್ಯಂತ ಕಾಳಜಿ ವಹಿಸಿ ಈ ಪಾತ್ರ ಮಾಡಿದ್ದೇನೆ ಎಂದು ಹೆಚ್ಚಿನ ಕಡೆ ಹೇಳಿಕೊಂಡಿದ್ದಾರಂತೆ ರಾಘವೇಂದ್ರ ರಾಜ್‌ಕುಮಾರ್.

ಸ್ಪರ್ಶ ರೇಖಾ ವಿಶೇಷ ಪಾತ್ರದಲ್ಲಿ!

ಕರ್ನಾಟಕದ ಅಳಿಯ ಚಿತ್ರದ ಇನ್ನೊಂದು ಪ್ರಮುಖ ಆಕರ್ಷಣೆ, ಸುದೀಪ್ ಜತೆ ಸ್ಪರ್ಶ ಚಿತ್ರದಲ್ಲಿ ನಟಿಸಿ ಕರುನಾಡಿಗರ ಮನಗೆದ್ದ ಸ್ಪರ್ಶ ರೇಖಾ. ಬಿಗ್ ಬಾಸ್ ಕಾರ್ಯಕ್ರಮದಲ್ಲಿ ಮತ್ತೊಮ್ಮೆ ಕನ್ನಡಿಗರನ್ನು ಅಚ್ಚರಿಗೊಳಿಸಿದ ರೇಖಾ ಕರ್ನಾಟಕದ ಅಳಿಯ ಚಿತ್ರದಲ್ಲಿ ಮಾಟಗಾರ್ತಿಯ ರೂಪದಲ್ಲಿ ಜಗಮಗಿಸಿದ್ದಾರೆ. ಅಚ್ಚರಿ ಮೂಡಿಸುವ ರೀತಿಯಲ್ಲಿ ನಟಿಸಿದ್ದಾರೆ. ಈ ಚಿತ್ರ ಬಿಡುಗಡೆಯಾದ ನಂತರ



ರೇಖಾ ಅವರು ಖಂಡಿತ ನಟನೆಯಲ್ಲಿ ಬ್ಯುಸಿ ಆಗುತ್ತಾರೆ ಎನ್ನುತ್ತಾರೆ ನಿರ್ದೇಶನ ಪ್ರಥಮ್. ಮೈ ಜುಂ ಎನಿಸುವ ರೀತಿಯಲ್ಲಿ ನಟನೆ ಮಾಡಿರುವ ಸ್ಪರ್ಶ ರೇಖಾ ಅವರು ಈ ಚಿತ್ರ ಯಾವಾಗ ತೆರೆಗೆ ಬರುತ್ತದೆ ಎನ್ನುವ ಕಾತುರದಲ್ಲಿದ್ದಾರಂತೆ!

ಚಂದ್ರಚಕೋರಿ ಈಸ್ ಬ್ಯಾಕ್

ಕರ್ನಾಟಕದ ಅಳಿಯ ಚಿತ್ರದ ಇನ್ನೊಂದು ಮಹೋನ್ನತ ಹೈಲೈಟ್ ಎಂದರೆ, ಈ ಚಿತ್ರದ ಮೂಲಕ ಹತ್ತೊಂಬತ್ತು ವರ್ಷಗಳ ನಂತರ ಚಂದ್ರಚಕೋರಿ ಖ್ಯಾತಿಯ ಪ್ರಿಯಾ ಅವರು ಮತ್ತೆ ಬೆಳ್ಳಿತೆರೆಗೆ ಮರಳಿದ್ದಾರೆ. ವಿಶೇಷ ವೈಬ್ರೇಷನ್ ಇರುವ ಪಾತ್ರದಲ್ಲಿ ಕಾಣಿಸಿಕೊಂಡಿರುವ ಪ್ರಿಯಾ ಅವರು ಪ್ರಥಮ್ ಅವರ ಪ್ರೀತಿಪೂರ್ವಕ ಕರೆಗೆ ಓಗೊಟ್ಟು ಸಿನೆಮಾ ಫೀಲ್ಡಿಗೆ ವಾಪಸಾಗಿದ್ದಾರೆ. ಗಮನ ಸೆಳೆಯುವ ಪಾತ್ರದಲ್ಲಿ ಮಿಂಚಿದ್ದಾರೆ. ಇಷ್ಟು ವರ್ಷದ ನಂತರ ಮತ್ತೆ ಮರಳಿ ಬರಲು ಕಾರಣ ಪ್ರಥಮ್ ಅವರು ಹೇಳಿದ ಥ್ರಿಲ್ಲಿಂಗ್ ಕಥೆ ಮತ್ತು ಅವರು ಸಿನೆಮಾದ ಮೇಲೆ ಇಟ್ಟಿರುವ ಪ್ಯಾಷನ್ ಎನ್ನುವುದು ಪ್ರಿಯಾ ಅವರ ಮನದಾಳದ ಮಾತಾಗಿದೆ. ಚಂದ್ರಚಕೋರಿಯ ಚೆಲುವೆ ಮತ್ತೆ ಬಣ್ಣದ ಲೋಕಕ್ಕೆ ಬಂದಿದ್ದು ನಿಜಕ್ಕೂ ಪ್ರೇಕ್ಷಕರಿಗೆ ಅಚ್ಚರಿ ನೀಡಲಿದ್ದು, ಅವರ ಪಾತ್ರಕ್ಕೆ ಅದರದೇ ಆದ ಘನತೆ ಇದೆ ಎನ್ನುತ್ತಾರೆ ಕರ್ನಾಟಕದ ಅಳಿಯ ಚಿತ್ರದ ಕ್ಯಾಪ್ಟನ್-ಬಿಗ್ ಬಾಸ್ ಪ್ರಥಮ್!

ಕರ್ನಾಟಕದ ಅಳಿಯನಿಗೆ ವಿವಿ ಗ್ಲೋಬಲ್ ಪ್ರಶಸ್ತಿ!

ಇಷ್ಟೆಲ್ಲಾ ವಿಶೇಷತೆಗಳುಳ್ಳ ಕರ್ನಾಟಕದ ಅಳಿಯ ಚಿತ್ರ ಬಿಡುಗಡೆಗೂ ಮುನ್ನ ವಿಶ್ವವಾಣಿಯ ವಿಶೇಷ ಪ್ರಶಸ್ತಿ ಗಳಿಸುವ ಮೂಲಕ ದೊಡ್ಡ ಸುದ್ದಿಯಾಗಿದೆ. ಇತ್ತೀಚೆಗಷ್ಟೇ ಜ್ವಲಂತ ದ್ವೀಪ ಮಾರೀಷಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಥಮ್ ಅವರಿಗೆ ಈ ವಿಶೇಷ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ವಿಶ್ವೇಶ್ವರ ಭಟ್ ನೇತೃತ್ವದಲ್ಲಿ ನಡೆದ ಈ ಸಮಾರಂಭದಲ್ಲಿ ಇಡೀ ತಂಡದ ಜೊತೆ ಜರ್ನಿ ಮಾಡುವುದೇ ಒಂದು ಗುರುತರ ಸಂಭ್ರಮ ಎನ್ನುತ್ತಾರೆ ಒಳ್ಳೇ ಹುಡುಗ ಪ್ರಥಮ್. ನಮ್ಮಂಥ ಯುವಕರನ್ನು ಬೆಳೆಸುವ ಭಟ್ ಸರ್ ಅವರ ಗುಣಕ್ಕೆ ಹ್ಯಾಟ್ಸಾಫ್ ಹೇಳುತ್ತಾರೆ ಅದೇ ಬಿಗ್‌ಬಾಸ್ ಪ್ರಥಮ್!

ಸುದೀಪ್ ಫೂಂಕ್ ನಂತರ ಮತ್ತೊಂದು ಮೋಡಿ

ಬ್ಲ್ಯಾಕ್ ಮ್ಯಾಜಿಕ್ ಚಿತ್ರಗಳು ಕನ್ನಡದಲ್ಲಿ ಕಡಿಮೆ. ತುಳಸಿದಳ ರೀತಿಯ ಚಿತ್ರಗಳು ಒಂದು ಕಾಲದಲ್ಲಿ ಅಚ್ಚರಿ ಮೂಡಿಸಿದ್ದು ಈಗ ಇತಿಹಾಸ. ಅದೇ ಮಾದರಿಯಲ್ಲಿ ಕಿಚ್ಚ ಸುದೀಪ್ ನಟನೆಯ ಫೂಂಕ್ ಚಿತ್ರ ಬಂದಿತ್ತು. ರಾಮ್ ಗೋಪಾಲ್ ವರ್ಮಾ ವಿರಚಿತ ಆ ಚಿತ್ರ ಇಂಡಿಯಾ ತುಂಬೆಲ್ಲಾ ಸದ್ದು ಮಾಡಿತ್ತು. ಅದೇ ಮಾದರಿಯ ಚಿತ್ರ ಪ್ರಥಮ್ ಸಾರಥ್ಯದ ಕರ್ನಾಟಕದ ಅಳಿಯ ಚಿತ್ರ. ಇಡೀ ಸಿನೆಮಾ ಮಾಟ-ಮಂತ್ರ-ತಂತ್ರದ ಸುತ್ತ ಗಿರುಕಿ ಹೊಡೆಯುತ್ತದೆ. ಎಸ್ಟೇಟ್ ಒಂದರಲ್ಲಿ ನಡೆಯುವ ಈ ಚಿತ್ರದ ಕಥೆ ಎಷ್ಟೆಷ್ಟೋ ತಿರುವುಗಳ ಜೊತೆ ಸಾಗುವ ಈ ಚಿತ್ರ ಪ್ರೇಕ್ಷಕರನ್ನು ಕುರ್ಚಿಯ ತುದಿಗೆ ತಂದು ಕೂರಿಸುವುದು ನಿಶ್ಚಿತ ಎನ್ನುವುದು ನಿರ್ದೇಶಕರ ಮಾತೂ ಹೌದು, ಒಂಥರಾ ಚಾಲೆಂಜೂ ಹೌದು!

ಅಶ್ವಿನಿ ಪುನೀತ್ ಬೆನ್ನೆಲುಬು!

ಕರ್ನಾಟಕದ ಅಳಿಯ ಚಿತ್ರದ ಹಿಂದೆ ಅಶ್ವಿನಿ ಪುನೀತ್ ರಾಜ್ ಕುಮಾರ್ ಇದ್ದಾರೆ. ಚಿತ್ರದ ಆರಂಭದಿಂದ ಹಿಡಿದು ಈ ತನಕವೂ ಅವರು ಪ್ರಥಮ್ ಅವರ ಕೆಲಸಕ್ಕೆ ಶಹಬ್ಬಾಶ್‌ಗಿರಿ ಕೊಡುತ್ತಲೇ ಬಂದಿದ್ದಾರೆ. ಪ್ರಥಮ್ ಅವರ ತಂಡದ ಜತೆ ಬೆನ್ನೆಲುಬಾಗಿ ನಿಂತಿದ್ದಾರೆ. ಕನ್ನಡ ಚಿತ್ರರಂಗದ ಅದೃಷ್ಟ ದೇವತೆ ನಮ್ಮ ಜತೆ ಇರುವುದು ನಮ್ಮೆಲ್ಲರ ಸೌಭಾಗ್ಯ ಎನ್ನುವ ಪ್ರಥಮ್, ಇಡೀ ಸಿನೆಮಾಗೆ ಅಶ್ವಿನಿ ಅವರು ನಿರಪೇಕ್ಷಿತವಾಗಿ ಸಪೋರ್ಟ್ ಮಾಡಿದ್ದಾರೆ. ಅವರ ಪ್ರೀತಿಗೆ, ಅವರ ಕಾಳಜಿಗೆ ಏನೆಂದು ಹೆಸರಿಡಲಿ ಎನ್ನುವಾಗ ಪ್ರಥಮ್ ನಿಜಕ್ಕೂ ಭಾವುಕರಾಗುತ್ತಾರೆ. ಅಶ್ವಿನಿ ಅವರು ನಮ್ಮ ಮೇಲೆ ಇಷ್ಟು ಕಾಳಜಿ ತೋರಿಸುತ್ತಿರುವುದಕ್ಕೆ ಇನ್ನೊಂದು ಕಾರಣವಿದೆ. ಅದು ನಾನು ರಾಜ್ ಕುಟುಂಬದ ಮೇಲೆ ಇಟ್ಟಿರುವ ವಿಶೇಷ ಗೌರವ ಮತ್ತು ಭಕ್ತಿ ಎನ್ನುವುದು ಪ್ರಥಮ್ ಅವರ ಮನದ ಮಾತು.

ವಿಜಯೇಂದ್ರ ಒಡೆಯರ್ ನಿರ್ಮಾಣ!

ಕರ್ನಾಟಕದ ಅಳಿಯ ಚಿತ್ರಕ್ಕೆ ವಿಜಯೇಂದ್ರ ಒಡೆಯರ್ ಅವರ ಹೆಮ್ಮೆಯ ನಿರ್ಮಾಣವಿದ್ದು, ಚಿತ್ರಕ್ಕೆ ಹೂಡಿಕೆ ಮಾಡಿರುವ ಭಂಡವಾಳದ ಬಗ್ಗೆ ಹೆಚ್ಚಿನ ಕಡೆ ಚರ್ಚೆಯಾಗುತ್ತಿದೆ. ಗ್ರಾಫಿಕಲೀ ಇದೊಂದು ದಿ ಬೆಸ್ಟ್ ಚಿತ್ರವಾಗಲಿದೆ. ತಾಂತ್ರಿಕವಾಗಿ ಹೆಚ್ಚನ ಗುಣಮಟ್ಟದ ಕೆಲಸಗಳು ನಡೆದಿದೆ. ಅದಕ್ಕೆ ದೊಡ್ಡ ಮಟ್ಟದ ವೆಚ್ಚವೇ ಆಗಿದೆ. ಇವತ್ತಿನ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡಲು ಬೇಕಾದ ಎಲ್ಲಾ ರೀತಿಯ ವಿಶುವಲ್ ಟ್ರೀಟ್ ಅನ್ನು ಚಿತ್ರಕ್ಕೆ ನೀಡಿದ್ದಾರೆ ನಿರ್ದೇಶಕ ಭಯಂಕರ ಪ್ರಥಮ್. ಚಿತ್ರದ ಗ್ರಾಫಿಕ್ಸ್ ಕೆಲಸಕ್ಕೇ ಐವತ್ತಕ್ಕೂ ಹೆಚ್ಚು ಲಕ್ಷ ಖರ್ಚಾಗಿದ್ದು, ಸಿನೆಮಾ ನೋಡಿದಾಗ ಪ್ರೇಕ್ಷಕರಿಗೆ ಒಂದು ಗುಣಮಟ್ಟದ ಅನುಭವ ಆಗಲಿದೆಯಂತೆ. ಅದೇ ಕಾರಣಕ್ಕೆ ಕರ್ನಾಟಕದ ಅಳಿಯ ಚಿತ್ರ ವಿಶ್ವವಾಣಿಯ ಮತ್ತು ವಿಶ್ವಮಟ್ಟದ ಗಮನ ಸೆಳೆದಿದೆ ಎನ್ನುವುದು ಪ್ರಥಮ್ ಅವರ ಮತ್ತೊಂದು ಮಾತು

ಕರ್ನಾಟಕದ ಅಳಿಯದಲ್ಲಿ ತಾರೆಯರ ದಂಡು

ಹಿರಿಯ ಹಾಗೂ ಮನೋಜ್ಞ ನಟ ರಾಮಕೃಷ್ಣ ಅವರು ಈ ಚಿತ್ರದಲ್ಲಿ ಗಮನಾರ್ಹ ಪಾತ್ರ ಮಾಡಿದ್ದಾರೆ. ಸದ್ಯ ಉತ್ತರ ಕನ್ನಡದ ತವರೂರಲ್ಲಿ ನೆಲೆಸಿರುವ ಅವರು ಪ್ರಥಮ್ ಆಹ್ವಾನಕ್ಕೆ ಮತ್ತು ಅವರ ಸಿನೆಮಾ ಮೇಲಿನ ಕಾಳಜಿಗೆ ಮನಸೋತು ಈ ಚಿತ್ರದಲ್ಲಿ ಪಾತ್ರ ಮಾಡಲು ಒಪ್ಪಿಕೊಂಡಿದ್ದಾರೆ. ಚಿತ್ರದ ಪಾತ್ರವನ್ನು ಮನಸಾರೇ ಅಪ್ಪಿಕೊಂಡಿದ್ದಾರೆ. ಅವರ ಜತೆಗೆ ಕರಿಸುಬ್ಬು, ತರಂಗ ವಿಶ್ವ, ಹೆಸರಾಂತ ನಿರ್ದೇಶಕ ಓಂಪ್ರಕಾಶ್ ರಾವ್ ಸೇರಿದಂತೇ ಸಾಕಷ್ಟು ಕಲಾವಿದರು ಈ ಚಿತ್ರದಲ್ಲಿ ಮಿಂಚಿದ್ದಾರೆ. ಹೊನ್ನವಳ್ಳಿ ಕೃಷ್ಣ ಅವರು ಸಹ ವಿಭಿನ್ನ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಯುವಕರ ಕಣ್ಮಣಿ ಪ್ರಥಮ್

ಪ್ರಥಮ್ ಸದ್ಯಕ್ಕಂತೂ ಸಾಕಷ್ಟು ಬಿಜಿ ಇದ್ದಾರೆ. ಒಂದಷ್ಟು ಕಿರುತೆರೆ ಕಾರ್ಯಕ್ರಮಗಳಿಗೆ ಗೆಸ್ಟ್ ಆಗಿ ಹೋಗುತ್ತಾರೆ. ರಾಜ್ಯಾದ್ಯಂತ ನಡೆಯುವ ಕಾಲೇಜ್ ಫೆಸ್ಟ್‌ಗಳಿಗೆ ಪ್ರಥಮ್ ಅವರೇ ಬೇಕು ಎನ್ನುವಷ್ಟು ಡಿಮ್ಯಾಂಡ್ ಅವರಿಗಿದೆ. ನೋ ಕೊಕೈನ್ ಎನ್ನುವ ಹೊಸ ಚಿತ್ರ ಸದ್ಯದಲ್ಲೇ ಸೆಟ್ಟೇರಲಿದೆ. ಕೌರವ ವೆಂಕಟೇಶ್ ಅವರು ಈ ಚಿತ್ರದ ಸಾರಥ್ಯ ವಹಿಸಿದ್ದಾರೆ. ಸಾವಿರಾರು ಸಿನೆಮಾಗಳಿಗೆ ಫೈಟ್ ಮಾಸ್ಟರ್ ಆಗಿರುವ ವೆಂಕಟೇಶ್ ಅವರಿಗೆ ಪ್ರಥಮ್ ಅವರಿಗೆ ಪ್ರಥಮ್ ಅವರಿಗೆ ಇರುವ ಕ್ರೇಜ್ ಮೇಲೆ ಮಹಾ ನಂಬಿಕೆ. ಜತೆಗೆ ಟಿವಿ-ಸ್ಯಾಟಲೈಟ್ ಬಿಜಿನೆಸ್ ವಿಷಯದಲ್ಲೂ ಪ್ರಥಮ್ ಈ ಹಿಂದಿನ ಚಿತ್ರಗಳು ಎಲ್ಲಿಯೂ ಸೋತಿಲ್ಲ. ಲಕ್ಷಗಟ್ಟಲೇ ವ್ಯಾಪಾರವಾಗಿದೆ. ಈ ಎಲ್ಲದರ ಮಧ್ಯೆ ಪ್ರಥಮ್ ಅವರ ಜತೆ ಕೆಲಸ ಮಾಡಲು ಕೌರವ ವೆಂಕಟೇಶ್ ಅವರಿಗೆ ಅತೀವ ಒಲವಿದೆ. ಮುಂದೊಂದು ದಿನ ಈ ಚಿತ್ರಕ್ಕೆ ದೊಡ್ಡ ಗೆಲುವಿದೆ ಎನ್ನುವುದು ವೆಂಕಟೇಶ್ ಅವರಿಗೂ ಗೊತ್ತಿದೆ!



ಮೊದಲು ಹಲ್ಲು ಉದುರಿಸಿಬಿಡಿ..

• ಅನುಪಮಾ ರಂಗನಾಥ್

ಕೆಲಸದ ಒತ್ತಡದಿಂದ ಮಗನ ಕಿತ್ತುಟ್ಟಿದ್ದ ಹಲ್ಲನ್ನು ಗಮನಿಸಿಯೇ ಇರಲಿಲ್ಲ. ಮುದ್ದು ಮಾಡಲು ಬಂದ ಮಗನ ಬಾಯಲ್ಲಿ ಒಂದರ ಮೇಲೊಂದು ಹುಟ್ಟಿದ್ದ ಹಲ್ಲುಗಳು ನನ್ನನ್ನೆ ನೋಡಿ ನಕ್ಕಂತಾಯಿತು. ಅವನಿಗೆ ಎಂಟು ವರ್ಷ ತುಂಬಿದಾಗ ಅಂದರೆ 2ನೇ ತರಗತಿಗೆ ಹಲ್ಲು ಅಲ್ಲಾಡುತಿತ್ತು. ನಾನೂ ಕೀಳಲೂ ಪ್ರಯತ್ನಿಸಿದ್ದೆ. ಆದರೆ ಅವನು ಕೈಗೆ ಸಿಗದೆ ಹೋಗಮ್ಮ ಎಂದು ತಪ್ಪಿಸಿಕೊಂಡಿದ್ದ. ಆದಾದ ಮೇಲೆ ಈಗಲೇ ನೋಡಿದ್ದು. ಅವನಿಗೆ ಮೊದಲ ಹಾಲು ಹಲ್ಲು ಬಂದದ್ದು ತಡವಾಗಿಯೇ. ಸಾಮಾನ್ಯವಾಗಿ ಏಳನೆ ತಿಂಗಳಿನಿಂದಲೇ ಹುಟ್ಟಿದ ಮಕ್ಕಳಿಗೆ ಹಲ್ಲು ಬರಲು ಪ್ರಾರಂಭವಾಗುತ್ತದೆ. ನನ್ನ ಮಗನಿಗೆ ಒಂದೂವರೆ ವರ್ಷಕ್ಕೆ ಬಂದಿತ್ತು. ಗಟ್ಟಿ ನೆತ್ತಿ ಅವನಿಗೆ ಉದುರುವುದು ತಡ ಎಂದಿದ್ದರು ಅಮ್ಮ. ಸಾಮಾನ್ಯವಾಗಿ ಆರರಿಂದ ಏಳನೇ ವಯಸ್ಸಿಗೆ ಹಲ್ಲು ಬೀಳಲು ಪ್ರಾರಂಭವಾಗುತ್ತದೆ.

ಬೊಚ್ಚಬಾಯಿಯ ಫೋಟೋ ಸೆಷನ್ಸ್ ಅಮ್ಮಂದಿರ ಅಚ್ಚುಮೆಚ್ಚು. ಹಾಗೆ ಬಿದ್ದ ಮೊದಲ ಹಲ್ಲಿನದೂ ಅಷ್ಟೆ, ಅದು ಲೂಸ್ ಆಗಿ ಅಲ್ಲಾಡಲು ಪ್ರಾರಂಭವಾದಾಗಿನಿಂದ ಬೀಳೋವರೆಗೂ ಮನೆಗಳಲ್ಲಿ ಪ್ರಹಸನಗಳು ಇದ್ದದ್ದೆ. ನಾವೆಲ್ಲ ಸಣ್ಣವರಿದ್ದಾಗ ಹಲ್ಲು ಬಿದ್ದರೆ ಹಸುವಿನ ಸಗಣಿ ಜತೆ ಹಲ್ಲನ್ನು ಇಟ್ಟು ಉಂಡೆ ಮಾಡಿ, ಗರ್ಭಿಣಿಯರು ಇರುವ ಹೆಂಚಿನ ಮನೆಗಳ ಮೇಲೆ ಎಸೆದು, 'ನಿಮ್ಮ ಮಗು ಹುಟ್ಟುವುದು ಮೊದಲೋ, ಇಲ್ಲ ನನ್ನ ಹಲ್ಲು ಬರುವುದು ಮೊದಲೋ?'ಎಂದು ಹೇಳಿ ಬರುತ್ತಿದ್ದೆವು. ಈಗ ಅದನ್ನೆಲ್ಲಾ ಯೋಚಿಸಿದಾಗ ತಮಾಷೆ ಅನ್ನಿಸುತ್ತದೆ.

ಹೊಸ ಹಲ್ಲುಗಳನ್ನು ಹೀಗೆ ಸ್ವಾಗತಿಸಿ!

ಆಗೆಲ್ಲಾ ಕೂಡು ಕುಟುಂಬಗಳು. ಅಲ್ಲಾಡೋ ಹಲ್ಲಿನ ನಿಗಾ ಅತ್ತೆಯೋ, ದೊಡ್ಡಮ್ಮನೋ, ಅಜ್ಜಿಯೋ ಇಲ್ಲ ಪುರುಸೊತ್ತಾಗಿದ್ದ ಯಾರೋ ನೋಡೋರು. ಎಲ್ಲಿ ನೋಡ್ತೀನಿ ಎಂದು ನೋಡ ನೋಡುತ್ತಲೇ ಕೈಗೆ ಹಲ್ಲು ಕಿತ್ತುಕೊಟ್ಟು, ಇಷ್ಟೇ ಎನ್ನುವವರು. ಆನಂತರ ಹಲ್ಲು ಬರದೇ ಇದ್ದರೆ ವಸಡಿಗೆ ಸರಿಯಾದ ಜಾಗ ನೋಡಿ, ಭತ್ತದ ಮೊನೆಯಿಂದ ಗೀಚಿ ಹಲ್ಲು ಬರಲು ಜಾಗ ಮಾಡುತ್ತಿದ್ದರು. ನಮಗೆಲ್ಲಾ ಒಳ್ಳೆ ಮುತ್ತು ಜೋಡಿಸಿದಂತೆ ಹಲ್ಲುಗಳು. ಈಗಿನಂತೆ ಡೊಂಕು ಉಬ್ಬು ಇರುತ್ತಿರಲಿಲ್ಲ. ಇದೆಲ್ಲಾ ಒಮ್ಮೆ ಕಣ್ಣ ಮುಂದೆ ಬಂದವು. ನಾನೂ ಹೇಗಾದರೂ ಮಾಡಿ ಸಡಿಲ ಆಗಿದ್ದ ಹಲ್ಲನ್ನು ಉದುರಿಸಿದ್ದರೆ ನನ್ನ ಮಗನಿಗೂ ಹಲ್ಲು ಸರಿಯಾಗಿ ಬರುತ್ತಿತ್ತು ಎನ್ನೋ ಅಪರಾಧಿ ಪ್ರಜ್ಞೆ ಕಾಡುತ್ತಿರಲಿಲ್ಲ. ನಾನೂ ನೋಡಿದಾಗ ತಡವಾಗಿತ್ತು. ಸಡಿಲವಾಗಿ ಅಲ್ಲಾಡುತ್ತಿದ್ದ ಹಲ್ಲು ಹಾಗೇ ಇತ್ತು. ಅದರ ಹಿಂದೆ ವಕ್ರ ವಕ್ರವಾಗಿ ಇನ್ನೊಂದು ಹಲ್ಲು ಜಾಗವಿಲ್ಲದೆ ಹೇಗೇಗೋ ಬೆಳೆದುಕೊಂಡಿತ್ತು.

ಈಗ ನಾನು ಮುಂದೆ ಯಾವ ಅಲ್ಲಾಡುವುದೋ ಎಂದು ಕಾಯುತ್ತಿರವೆ. ಉದುರಿದ ನಂತರ ಬರುವ ಹೊಸ ಹಲ್ಲುಗಳ ಸ್ವಾಗತಕ್ಕೆ ನೀವೂ ಹಾಗೇ ಮಾಡಿ ಪೋಷಕರೇ!

ವೈದ್ಯರನ್ನು ಕಾಣುವುದು ಸೂಕ್ತ

ಬಾಚಿ ಹಲ್ಲು, ಕೋರೆ ಹಲ್ಲು, ದವಡೆ ಹಲ್ಲುಗಳು ಬೆಳೆಯಲು ಕಾಯುತ್ತಿರುತ್ತವೆ, ಹಾಗೇ ಬೀಳಲೂ ಕೂಡ. ಹಲ್ಲಿನ ಸ್ವಚ್ಛತೆ ಬಹಳ ಮುಖ್ಯ. ಹಾಲು ಹಲ್ಲಿಗೆ ಹುಳುಕಾದರೆ ಸಾಮಾನ್ಯ. ಬಿದ್ದು ಮತ್ತೆ ಬೆಳೆಯುವುದರಿಂದ ಯಾವುದೇ ಚಿಕಿತ್ಸೆ ನೀಡಲಾಗುವುದಿಲ್ಲ. ನೋವು ನಿವಾರಕ ಮತ್ತು ಮೌತ್ ವಾಶ್‌ಗಳನ್ನು ನೀಡುತ್ತಾರೆ. ದಿನಕ್ಕೆರೆಡು ಬಾರಿ ಹಲ್ಲುಜ್ಜಿಸುವುದು ಸರಿಯಾದ ಕ್ರಮ. ಕೆಲವೊಮ್ಮೆ ವಸುಡು ಚಿಕ್ಕದ್ದಾಗಿದ್ದು ಹಲ್ಲುಗಳು ಗಾತ್ರದಲ್ಲಿ ದೊಡ್ಡದಾಗಿದ್ದರೆ ಪ್ರಾರಂಭದಲ್ಲಿಯೇ ವೈದ್ಯರನ್ನು ಕಂಡರೆ ಸೂಕ್ತವಾದ ಸ್ಥಳಾವಕಾಶ ಮಾಡಿಕೊಟ್ಟಾರು. ಎಲ್ಲ ಬೆಳೆದು ನಿಂತಮೇಲೆ ಹೋದ್ರೂ ಕೂಡ ಕ್ಲಿಪ್‌ಹಾಕಿ ಬೇಡದೇ ಇರೋ ಹೆಚ್ಚುವರಿ ಹಲ್ಲುಗಳನ್ನು ತೆಗೆದು ಒಂದು ಮಟ್ಟಕ್ಕೆ ಸರಿಪಡಿಸಿಕೊಟ್ಟಾರು.

ಮುಖದ ಸೌಂದರ್ಯಕ್ಕೆ ಹಲ್ಲೇ ಮುಖ್ಯ, ನಗುವಾಗ ಮುಖದಲ್ಲಿ ಅದರ ಅಂದ ಕೆಡದಿರಲಿ ಏನಂತೀರಾ? ನಮ್ಮ ಮಕ್ಕಳು ನಮ್ಮ ಅವಲಂಬಿಗಳು. ಅವರ ಹಲ್ಲಿನ ಬೆಳವಣಿಗೆಯ ಅತೀ ಮುಖ್ಯವಾದ ಅಂಶವನ್ನು ಮರೆಯುವುದು ಮತ್ತು ನಿರ್ಲಕ್ಷಿಸುವುದು ಬೇಡ.